ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಮಂಗಳವಾರ, 14 ಏಪ್ರಿಲ್ 2026

ಸಂಪುಟ 48, ಸಂಚಿಕೆ 26 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ಶತಮಾನದ ನಿರ್ಧಾರ

ಮಹಿಳಾ ಮೀಸಲು ಅನುಷ್ಠಾನದಿಂದ ಹಿಂದಿನ ದೃಷ್ಟಿಕೋನ ಸಾಕಾರ, ಭವಿಷ್ಯದ ನಿರ್ಣಯ ಈಡೇರಿಕೆ: ಮೋದಿ

• ಪುಟ ೩

ಕಿರುಸುದ್ದಿ

ನಾಳೆ ಪುತ್ತೂರಿನ ಜಿ.ಎಲ್. ವನ್ ಮಾಲ್‌ನಲ್ಲಿ ಬಿಸು ಹೊಸ ವರ್ಷಾಚರಣೆ

ಪುತ್ತೂರು: ತುಳುಕೂಟ ಪುತ್ತೂರು ವತಿಯಿಂದ ಪೊಪ್ಯುಲರ್ ಸೆಲೆಬ್ರೇಷನ್ ಮತ್ತು ಜಿ.ಎಲ್. ವನ್ ಮಾಲ್ ಸಹಯೋಗದಲ್ಲಿ ತುಳುವರ ಹೊಸ ವರ್ಷ ಬಿಸು ಆಚರಣೆಯು ಏ.15ರಂದು ಬೆಳಗ್ಗೆ 10 ಗಂಟೆಯಿಂದ ಜಿ.ಎಲ್. ವನ್ ಮಾಲ್‌ನ ಎರಡನೆಯ ಮಹಡಿಯಲ್ಲಿ ಭಾರತ್ ಸಿನಿಮಾಸ್ ಎದುರು ಜರಗಲಿದೆ. ಯಕ್ಷಗಾನ ಅರ್ಥಧಾರಿ ಹಾಗೂ ಸಾಹಿತಿ ರಾಧಾಕೃಷ್ಣ ಕಲ್ಚಾರ್ ಅವರು ಬಿಸು ಹೊಸವರ್ಷದ ಸಂದೇಶ ನೀಡಲಿದ್ದಾರೆ. ವುಡ್‌ವೆಕರ್ ಸಂಸ್ಥೆಯ ಏರಿಯಾ ಮ್ಯಾನೇಜರ್ ರಾಧಾಕೃಷ್ಣ ನಾಯ್ಕ ಅಮ್ಮೆತಿಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಜಿ. ಎಲ್. ಬಲರಾಮ ಆಚಾರ್ಯ ಹಾಗೂ ಪೊಪ್ಯುಲರ್ ಸಂಸ್ಥೆಯ ನರೇಂದ್ರ ಕಾಮತ್ ಉಪಸ್ಥಿತರಿರಲಿದ್ದಾರೆ. ತುಳುವರ ಆಚಾರ ವಿಚಾರಗಳ ವಿಷಯದಲ್ಲಿ ರಸಪ್ರಶ್ನೆ ಇರಲಿದ್ದು ಆಸಕ್ತರು ಮುಕ್ತವಾಗಿ ಭಾಗವಹಿಸಬಹುದು ಎಂದು ತುಳುಕೂಟದ ಅಧ್ಯಕ್ಷ ಪ್ಯಾಟ್ರಿಕ್ ಸಿಪ್ರಿಯನ್ ಮಸ್ಕರೇನಸ್ ಹಾಗೂ ಕಾರ್ಯದರ್ಶಿ ಡಾ. ರಾಜೇಶ್ ಬೆಜ್ಜಂಗಳ ಪ್ರಕಟಿಸಿದ್ದಾರೆ.

ನಿತ್ಯಶ್ರೀ ಬಿ.ವಿ.ಗೆ ಪಿಎಚ್ ಡಿ ಪದವಿ

ಮಂಗಳೂರು: ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ಯೆನೆಪೋಯ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ನಿತ್ಯಶ್ರೀ ಬಿ.ವಿ. ಇವರು ಮಂಗಳೂರಿನ ಆಯ್ದ ಶಾಲೆಗಳ ಹದಿಹರೆಯದ ಬಾಲಕಿಯರಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಉದ್ದೇಶದಿಂದ ಅರಿವು, ದೃಢವಾದ ನಡವಳಿಕೆ ಮತ್ತು ಸ್ವಾಭಿಮಾನವನ್ನು ಹೆಚ್ಚಿಸುವ ಸಾಮರ್ಥ್ಯ ವರ್ಧನಾ ಕಾರ್ಯಕ್ರಮದ ಪರಿಣಾಮ



ಕಾರಿತ್ವದ ಕುರಿತು ನಡೆಸಿದ ಸಂಶೋಧನಾ ಪ್ರಬಂಧಕ್ಕೆ ಯೆನೆಪೋಯ ಪರಿಗಣಿತ ವಿ.ವಿ. ಪಿಎಚ್ ಡಿ ಪದವಿ ನೀಡಿದೆ. ಯೆನೆಪೋಯ ನರ್ಸಿಂಗ್ ಕಾಲೇಜಿನ ಡೀನ್ ಡಾ.ಲೀನಾ ಕೆ.ಸಿ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಪೂರೈಸಿದ್ದರು. ಯೆನೆಪೋಯ ಪರಿಗಣಿತ ವಿ.ವಿ.ಯ ಯೂತ್ ರೆಡ್‌ಕ್ರಾಸ್ ನೋಡಲ್ ಅಧಿಕಾರಿಯಾಗಿರುವ ನಿತ್ಯಶ್ರೀ ಬಿ.ವಿ. ಇವರು ಸುಳ್ಯದ ನಿವೃತ್ತ ಸರ್ವೆ ಮೇಲ್ವಿಚಾರಕ ವಿಠಲ ಬಿ.ಕೆ. ಮತ್ತು ರುಕ್ಮಿಣಿ ಬಿ.ವಿ. ದಂಪತಿ ಪುತ್ರಿ .ಗಣೇಶ್ ಮಾಣಿಬೆಟ್ಟು ಅವರ ಪತ್ನಿ.

ಮಂಥನ್ ಪ್ರಸಾದ್‌ಗೆ ಶೇ.98 ಅಂಕ


ಮಂಗಳೂರು: ಇಲ್ಲಿನ ಶಾರದಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಮಂಥನ್ ಪ್ರಸಾದ್ ರೈ ಅವರು ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜೀವಶಾಸ್ತ್ರದಲ್ಲಿ 100 ಅಂಕಗಳ ಸಾಧನೆಯೊಂದಿಗೆ ಶೇ.98 ಅಂಕಗಳನ್ನು ಪಡೆದಿದ್ದಾರೆ. ಸಂಸ್ಕೃತದಲ್ಲಿ 100, ಭೌತಶಾಸ್ತ್ರ 99, ಗಣಿತ 98,



ರಸಾಯನ ಶಾಸ್ತ್ರ 96 ಹಾಗೂ ಇಂಗ್ಲಿಷ್ ನಲ್ಲಿ 95 ಅಂಕಗಳನ್ನುಗಳಿಸಿದ್ದು, ಮುಂದೆ ವೈದ್ಯನಾಗುವ ಕನಸು ಹೊಂದಿದ್ದಾರೆ.

ಕುಕ್ಕೆ: ಇಸ್ರೋದ ಯುವಿಕಕ್ಕೆ ಆಯ್ಕೆ

ಸುಬ್ರಹ್ಮಣ್ಯ: ಪ್ರತಿಷ್ಠಿತ ಇಸ್ರೋ ಸಂಸ್ಥೆ ಆಯೋಜಿಸಿದ ಯುವ ವಿಜ್ಞಾನಿ ಕಾರ್ಯಕ್ರಮ ಯುವಿಕಾಕ್ಕೆ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯದ ವಿದ್ಯಾರ್ಥಿ ಎ.ಜಿ. ಪಿಯೂಷ್ ಲಾಲ್ ಆಯ್ಕೆಯಾಗಿದ್ದಾರೆ. ಯುವಿಕವು ಮೇ 11ರಿಂದ 22ರ ತನಕ ಬೆಂಗಳೂರಿನಲ್ಲಿ ನಡೆಯಲಿದೆ. ಪಿಯೂಷ್



ಅವರು ಕಿದು ಸಿಪಿಸಿಆರ್ ಐನ ಹಿರಿಯ ತಾಂತ್ರಿಕ ಅಧಿಕಾರಿ ಗೋಪಾಲಕೃಷ್ಣ ಮತ್ತು ಭಾಗ್ಯಲಕ್ಷ್ಮಿ ದಂಪತಿಯ ಪುತ್ರ.

ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಶ್ರೀದೇವರ ಬಲಿ ಉತ್ಸವ ಸಂಪನ್ನ

ಅನ್ನಸಂತರ್ಪಣೆಯಿಂದ ಸಾನಿಧ್ಯ ವೃದ್ಧಿ

ಪುತ್ತೂರು: ಹನುಮಗಿರಿ ಶ್ರೀಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಪ್ರತಿಷ್ಠೆ ಬ್ರಹ್ಮಕಲಶದ ಬಳಿಕ ಭಾನುವಾರ ರಾತ್ರಿ ಶ್ರೀದೇವರ ಬಲಿ ಉತ್ಸವ, ಬಟ್ಟಲು ಕಾಣಿಕೆ ಸಂಪನ್ನಗೊಂಡಿತು.

ಭಾನುವಾರ ಸಂಜೆ ಕೋದಂಡ ರಾಮ ದೇವರಿಗೆ ರಂಗ ಪೂಜೆ, ಮಹಾ ಪೂಜೆ ಪ್ರಸಾದ ವಿತರಣೆ ನಡೆಯಿತು. ಶ್ರೀ ಪಂಚ ಮುಖಿ ಆಂಜನೇಯ ಕ್ಷೇತ್ರದಲ್ಲಿ ದೇವರ ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆಯ ಬಳಿಕ ಪ್ರಸಾದ ವಿತರಣೆ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡರು.

ಕ್ಷೇತ್ರ ತಂತ್ರಿಯವರಾದ ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿ ಅವರು ನಿತ್ಯ ನಿಮಿತ್ತಗಳ ನಿರ್ಣಯ ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕ್ಷೇತ್ರಕ್ಕೆ ಬರುವುದರಿಂದ ಮತ್ತು ಅನ್ನ ಸಂತರ್ಪಣೆ ಮಾಡುವುದರಿಂದ ಸಾನಿಧ್ಯ ವೃದ್ಧಿಯಾಗಿದೆ. ಈ ಕಾರ್ಯಗಳು ನಿತ್ಯ ನಿರಂತರಗಾಗಿ ನಡೆಯಲಿ ಎಂದು ಹೇಳಿದರು. ಶ್ರೀ ಕ್ಷೇತ್ರ ಪ್ರಧಾನ ಅರ್ಚಕ ರಾಜೇಶ್ ಗಾಂಭೀರ ಪ್ರಾರ್ಥನೆ ಸಲ್ಲಿಸಿ ಭಕ್ತರಿಗೆ ಪ್ರಸಾದ ನೀಡಿದರು.

ಬ್ರಹ್ಮಕಲಶದಲ್ಲಿ ವಿವಿಧ ವಿಶೇಷತೆ

4 ದಿನಗಳ ಬ್ರಹ್ಮಕಲಶ ಉತ್ಸವವು ವಿವಿಧ ವಿಶೇಷತೆಗಳೊಂದಿಗೆ ಸಂಪನ್ನಗೊಂಡಿತು. ಶ್ರೀರಾಮ ಜನ್ಮಭೂಮಿ ಅಯೋಧ್ಯೆ ಶ್ರೀರಾಮ



ಮಂದಿರದಿಂದ ಮತ್ತು ಅಂಜನಾದ್ರಿಯ ಜ್ಯೋತಿ ಜೊತೆ ರಾಮ ಹನುಮ ಜ್ಯೋತಿ' ರಥಯಾತ್ರೆಯು ಗ್ರಾಮದಿಂದ ಗ್ರಾಮಕ್ಕೆ ವಿವಿಧ ಧಾರ್ಮಿಕ ಕೇಂದ್ರಗಳಿಂದ ಪ್ರತಿ ಮನೆಯಲ್ಲಿ ರಾಮ ಹನುಮ ಜ್ಯೋತಿ ಬೆಳಗಿ ಹನುಮಗಿರಿಯನ್ನು ಪ್ರಜ್ವಲಿಸಿತ್ತು.

ಲೋಕ ಕಲ್ಯಾಣ, ಸುಖ ಶಾಂತಿಗಾಗಿ ಕೋಟಿ ರಾಮ ತಾರಕ ಮಂತ್ರದ ಮೂಲಕ ಪ್ರತಿ ಮನೆಯಲ್ಲಿ ರಾಮ ತಾರಕ ಮಂತ್ರ ಪಠಿಸಲಾಯಿತು. ಮಹಾಯಜ್ಞ ಕ್ಷೇತ್ರದಲ್ಲಿ ನಡೆಯಿತು.

ಲಕ್ಷೋತ್ತರ ನಾರಿ ಕೇಳ ಸಮರ್ಪಣಾ ಯಜ್ಞದ ಮೂಲಕ ಪ್ರತಿ ಹಿಂದೂ ಮನೆಯಿಂದ ಹನುಮ ಮತ್ತು ರಾಮನಿಗೆ ಪ್ರತಿ ಮನೆಯಿಂದ ತೆಂಗಿನಕಾಯಿ ಭಕ್ತರು ಸಮರ್ಪಣೆ ಮಾಡಿ ಪುನೀತರಾದರು. ಭಗವಂತನಿಗೆ ಭಕ್ತನ್ನು ಸುಲಭವಾಗಿ ಬೆಸೆಯುವ ಸಲುವಾಗಿ ಭಜನಾ ಸಂಕೀರ್ತನೆಗಳು ನಡೆಸಲಾಯಿತು. ನಿರೀಕ್ಷೆ ಮೀರಿದ ಭಜಕರು ಭಜನಾ ತಂಡಗಳೊಂದಿಗೆ ಆಗಮಿಸಿದ್ದರು. ಕುಣಿತ ಭಜನೆಗಳು ಭಕ್ತರ ಭಕ್ತಿ ಇಮ್ಮಡಿಗೊಳಿಸಿತ್ತು. ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಮನಸೂರೆಗೊಳಿಸಿತ್ತು.

ಇಂದು ಹನುಮಗರಿಯಲ್ಲಿ ಧನ್ಯೋತ್ಸವ ಕಾರ್ಯಕ್ರಮ

ಹನುಮಗಿರಿಯ ಬ್ರಹ್ಮಕಲಶೋತ್ಸವದ ನಾಲ್ಕು ದಿನಗಳ ವೈಭವದ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದ್ದು, ಏ.14ರಂದು ಪೂರ್ವಾಹ್ನ 11 ಗಂಟೆಗೆ ಕ್ಷೇತ್ರದ ವೈದೇಹಿ ಸಭಾಭವನದಲ್ಲಿ ಧನ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಮಹತ್ಕಾರ್ಯದ ಬೆನ್ನೆಲುಬಾಗಿ ನಿಂತವರು ಹನುಮ ಸೇವಕರು. ಶಿಸ್ತು, ಭಕ್ತಿ ಮತ್ತು ನಿಸ್ವಾರ್ಥ ಮನೋಭಾವದಿಂದ ನೀಡಿದ ಸೇವೆ ರಾಮಹನುಮರಿಗೆ ಅರ್ಪಿತವಾದ ಶ್ರೇಷ್ಠ ಪುಷ್ಪದಂತಿದೆ. ಕ್ಷೇತ್ರಕ್ಕೆ ಬಂದ ಸಾವಿರಾರು ಭಕ್ತರಿಗೆ ನೀಡಿದ ಸಹಕಾರ ಮತ್ತು ಸೇವೆಯನ್ನು ಶಬ್ದಗಳಲ್ಲಿ ವರ್ಣಿಸಲು ಅಸಾಧ್ಯ. ಈ ಹಿನ್ನೆಲೆಯಲ್ಲಿ ಎಲ್ಲರೂ ಮತ್ತೊಮ್ಮೆ ಒಟ್ಟಾಗಿ ಸೇರಲು ಕ್ಷೇತ್ರದ ವತಿಯಿಂದ 'ಧನ್ಯೋತ್ಸವ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಪರಮಪೂಜ್ಯ ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ, ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು, ವಿವಿಧ ಮಠಗಳ ಸ್ವಾಮೀಜಿಯವರು ಆಗಮಿಸಿ ಸಂದೇಶ ನೀಡಿದರು.

ರಾಜಕೀಯ ನಾಯಕರು, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಪದಾಧಿಕಾರಿಗಳು, ಸಹಸ್ರಾರು ಸಂಖ್ಯೆಯ ಭಕ್ತರು ಆಗಮಿಸಿ ಪ್ರಾರ್ಥನೆ ಸಲ್ಲಿಸಿದರು.

ನಾಲ್ಕು ದಿನ ನಡೆದ ಉಪಾಹಾರ, ಅನ್ನ ಸಂತರ್ಪಣೆಯಲ್ಲಿ ಸಹಸ್ರ ಸಂಖ್ಯೆಯ ಭಕ್ತರು ಅನ್ನ ಪ್ರಸಾದ ಸ್ವೀಕರಿಸಿದರು. ವಿವಿಧ ತಿಂಡಿ ತಿನಿಸುಗಳ ಉಪಹಾರ ನಿರಂತರವಾಗಿತ್ತು. ಉಗ್ರಾಣದಲ್ಲಿ ಭಕ್ತರಿಗೆ ಅಕ್ಕಿ ಸಮರ್ಪಣೆ ಸೇವೆ ಕೂಡ ನಡೆಯಿತು. ಈ ಅಕ್ಕಿಯನ್ನು ಅನ್ನಸಂತರ್ಪಣೆಗೆ ಬಳಸಲಾಯಿತು. ಊರ ಪರವೂರ ಭಕ್ತರು ಹಸುರುವಾಣಿ ಸಲ್ಲಿಸಿದರು. ಶಿಸ್ತು ಬದ್ಧ ಕಾರ್ಯಕ್ರಮಗಳು, ಸ್ವಚ್ಛತ ಕಾರ್ಯಗಳಿಗೆ ಹೆಚ್ಚು ಒತ್ತು ನೀಡಲಾಯಿತು. ಒಟ್ಟಾಗಿ ರಾಮ ಹನುಮರ ಪ್ರತಿಷ್ಠೆ, ಬ್ರಹ್ಮಕಲಶವು ವಿವಿಧ ವಿಶೇಷಗಳೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿದೆ.

ಹುಬ್ಬಳ್ಳಿಯ ಫಿಟ್ನೆಸ್ ಕಿಮ್‌ನಲ್ಲಿ ಲವ್‌ಜಿಹಾದ್ ಪ್ರಕರಣ

ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಬಂಟ್ವಾಳ : ಹುಬ್ಬಳ್ಳಿಯ ಫಿಟ್ನೆಸ್ ಜಿಮ್‌ನಲ್ಲಿ ನಡೆದಿರುವ ಸಂಘಟಿತ ಲೈಂಗಿಕ ಶೋಷಣೆ ಮತ್ತು ಲವ್ ಜಿಹಾದ್ ಪ್ರಕರಣವು ರಾಜ್ಯದಾದ್ಯಂತ ಆತಂಕಕ್ಕೆ ಕಾರಣವಾಗಿದ್ದು, ಈ ಪ್ರಕರಣವನ್ನು ಸರಕಾರ ಗಂಭೀರವಾಗಿ ಪರಿಗಣಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಂಟ್ವಾಳ ತಹಶೀಲ್ದಾರರ ಮೂಲಕ ಕರ್ನಾಟಕ ಸರಕಾರಕ್ಕೆ ಮನವಿ ಸಲ್ಲಿಸಿತು.



ಹಿಂದೂ ಜನಜಾಗೃತಿ ಸಮಿತಿ ಮತ್ತು ರಣರಾಗಿಣಿ ಶಾಖೆಯ ಪದಾಧಿಕಾರಿಗಳ ನಿಯೋಗ ಸೋಮವಾರ ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿ ಪ್ರಕರಣ ಆರೋಪಿಗಳಾದ ಸಮೀರ್ ಮುಲ್ಲಾ ಮತ್ತು ಅವನ ಸಹೋದರಿ ತೈಸೀಮ್ ಮುಲ್ಲಾ ಅವರ ವಿರುದ್ಧ ಕಠಿಣವಾದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತು.

ಈ ಪ್ರಕರಣದ ತನಿಖೆಗೆ ವಿಶೇಷ ದಳವನ್ನು ರಚಿಸಬೇಕು, ಕೋಕಾ, ಪೋಕ್ಸೋ , ಅತ್ಯಾಚಾರ, ವಸೂಲಿ, ಐಟಿ ಕಾಯ್ದೆ ಮತ್ತು ಕರ್ನಾಟಕದ ಮತಾಂತರ ವಿರೋಧಿ ಕಾಯ್ದೆಗಳಡಿ ಕೇಸು ದಾಖಲಿಸಬೇಕಲ್ಲದೆ ಫಾಸ್ಟ್ ಟ್ರ್ಯಾಕ್ ಕೋರ್ಟನಲ್ಲಿ ಆರೋಪಿಗಳ ವಿಚಾರಣೆ ನಡೆಸಬೇಕು. ಸಂಬಂಧಿತ ಜಿಮ್ ಅನ್ನು ಸೀಲ್ ಮಾಡಬೇಕು, ಹುಬ್ಬಳ್ಳಿ-ಧಾರವಾಡ ಸೇರಿದಂತೆ ರಾಜ್ಯದ ಎಲ್ಲಾ ಜಿಮ್‌ಗಳಲ್ಲಿ ಟ್ರೈನರ್‌ಗಳ ಪರಿಶೀಲನೆ, ಸಿಸಿಟಿವಿ ವ್ಯವಸ್ಥೆ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ವ್ಯವಸ್ಥೆಗಳಿರುವುದನ್ನು ಖಚಿತ ಪಡಿಸಬೇಕು. ಎಲ್ಲಾ ಜಿಮ್ ಸಿಬ್ಬಂದಿಗೆ ಪೊಲೀಸ್ ವೆರಿಫಿಕೇಶನ್ ಕಡ್ಡಾಯಗೊಳಿಸಿ, ಮಹಿಳಾ ವಿಭಾಗಗಳಿಗೆ ಮಹಿಳಾ ತರಬೇತುದಾರರನ್ನು ನೇಮಕ ಮಾಡಬೇಕು ಹಾಗೂ ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ನಡೆಸಬೇಕು. ರಾಜ್ಯ ಮಹಿಳಾ ಆಯೋಗವು ಕೂಡಲೇ ಮಧ್ಯಪ್ರವೇಶಿಸಿ, ಪ್ರಕರಣದ ತನಿಖೆ ಮಾಡಬೇಕು. ಉತ್ತರ ಪ್ರದೇಶದಲ್ಲಿ ಕೈಗೊಂಡಿರುವಂತೆ (ಜಿರೋ ಟಾಲರೆನ್ಸ್) ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಹಾಗೂ ಸಂತ್ರಸ್ತ ಮಹಿಳೆಯ ಗೌಪ್ಯತೆ ಕಾಪಾಡಿ, ಆಕೆಗೆ ಸರಕ್ಷತೆಯನ್ನು ನೀಡಬೇಕು. ಆಕೆಗೆ ಸಂಬಂಧಿಸಿದ ವಿಡಿಯೋ ಎಲ್ಲಿಯೂ ಬಿಡುಗಡೆ ಆಗದಂತೆ ನೋಡಿಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಅಲ್ಲಿಪಾದೆ ದುಗಲಾಯಿ ಮಹಿಳಾ ಮಂಡಳಿ ಅಧ್ಯಕ್ಷೆ ಅನುಷಾ, ಗೀತಾ ಪದ್ಮನಾಭ, ಯಜ್ಞಶ್ರೀ, ವಿನೋದ, ನಾಗವೇಣಿ, ಕುಮಾರಿ ಅಂಕಿತ, ಗೀತಾ ಯೋಗೀಶ್, ಮಮತಾ, ಸುನೀತಾ ಹರೀಶ್, ಸೋಮನಾಥ್ ಸಾಲ್ಯಾನ್, ಹಿಂದೂ ಮುಖಂಡರಾದ ಚಂದ್ರಹಾಸ ಮೆಂಡನ್ ಪುನೀತ್ ಕಲ್ಲಡ್ಕ, ನಾರಾಯಣ, ರಾಧಾಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 100 % ಫಲಿತಾಂಶ

ವಿವೇಕಾನಂದ ವಸತಿನಿಲಯದ ವಿದ್ಯಾರ್ಥಿಗಳ ಶ್ರೇಷ್ಠ ಸಾಧನೆ

ಪುತ್ತೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ 2025-26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ 1ರಲ್ಲಿ ವಿವೇಕಾನಂದ ವಸತಿನಿಲಯದಲ್ಲಿ ವಾಸ್ತವ್ಯ ಹೊಂದಿ, ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಯನ ನಡೆಸಿದ ವಸತಿ ನಿಲಯದ 102 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಅದೇ ರೀತಿ 73 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದ್ದಾರೆ. ವಸತಿನಿಲಯದ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು 100% ಫಲಿತಾಂಶವನ್ನು ನೀಡಿದ್ದಾರೆ. ಈ ಪೈಕಿ 590 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಮನ್ವಿತಾ – ವಾಣಿಜ್ಯ ವಿಭಾಗ (596 – 99%), ಬಿಂದು ಎಚ್. ಆರ್. – ವಾಣಿಜ್ಯ ವಿಭಾಗ (596 – 99%), ತೀರ್ಥಾ ಶೆಟ್ಟಿ – ವಿಜ್ಞಾನ ವಿಭಾಗ (595 – 99%), ಪ್ರಾಪ್ತಿ ಆಳ್ವ – ವಿಜ್ಞಾನ ವಿಭಾಗ (593 – 98%), ಗೌರವ್ ಎಂ. ಕಶ್ಯಪ್ – ವಾಣಿಜ್ಯ ವಿಭಾಗ (590 – 98%), ಅದಿತಿ ಯು.– ವಿಜ್ಞಾನ ವಿಭಾಗ



(590 – 98%), ಅಪೂರ್ವ ಎ. ಆರ್. – ವಾಣಿಜ್ಯ ವಿಭಾಗ (590 – 98%) ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿವೇಕಾನಂದವಿದ್ಯಾವರ್ಧಕಸಂಘದ ಆಶ್ರಯದಲ್ಲಿ ಆರಂಭವಾದ ವಿವೇಕಾನಂದ ವಸತಿನಿಲಯಗಳು ವಿದ್ಯಾರ್ಥಿಗಳಲ್ಲಿ ಕಲಿಕಾ ಉತ್ಸಾಹವನ್ನು ತುಂಬಿ ಸಮಾಜಮುಖಿ ಜೀವನ ಪದ್ಧತಿಯನ್ನು ತುಂಬುವ ಧ್ಯೇಯವನ್ನು ಹೊಂದಿದೆ. ಪ್ರೌಢ ಶಿಕ್ಷಣದಿಂದ ಇಂಜಿನಿಯರಿಂಗ್ ಅಥವಾ ವೃತ್ತಿಪರ ಶಿಕ್ಷಣ ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ 5 ವಿವಿಧ ವಸತಿನಿಲಯಗಳಿವೆ. ವಸತಿನಿಲಯದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶಾಲವಾದ ಕೊಠಡಿಗಳು, ಸಭಾಂಗಣ, ಶುಚಿ-ರುಚಿಯಾದ ಊಟೋಪಚಾರ ಮತ್ತು ಭೋಜನದ ವ್ಯವಸ್ಥೆ ಜೊತೆಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಹೊಂದಿವೆ. 2026-27ನೇ ಸಾಲಿನ ದಾಖಲಾತಿ ಈಗಾಗಲೇ ಪ್ರಾರಂಭಗೊಂಡಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಮಾಡಿಕೊಳ್ಳಬಹುದು.

ಅಭಿನಂದನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಹೆತ್ತವರು, ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು, ಪ್ರಾಂಶುಪಾಲರು, ಉಪನ್ಯಾಸಕರು, ವಸತಿ ನಿಲಯದ ಆಡಳಿತಾಧಿಕಾರಿ, ಮುಖ್ಯ ನಿಲಯ ಪಾಲಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಾಸರಗೋಡು ವಿಧಾನಸಭಾಕ್ಷೇತ್ರದ ಕಾರ್ಯಕರ್ತರಿಗೆ ಕೃತಜ್ಞತೆ

ಅವಿರತ ಶ್ರಮಕ್ಕೆ 'ಜಯ'ದ ಪ್ರತಿಫಲ ಸಿಗಲಿ



ಕಾಸರಗೋಡು: ಕೇರಳ ವಿಧಾನ ಸಭಾ ಚುನಾವಣೆಯ ಪ್ರಯುಕ್ತ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯ ಗೆಲುವಿಗಾಗಿ ಪ್ರಸ್ತುತ ಕ್ಷೇತ್ರದಲ್ಲಿ ಹಗಲಿರುಳೆನ್ನದೆ ಅವಿಶ್ರಾಂತವಾಗಿ ದುಡಿದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುವ ಪ್ರಯುಕ್ತ ಸೋಮವಾರ ಹೊಸ ಬಸ್ ನಿಲ್ದಾಣ ಸಮೀಪದ ಆರ್. ಕೆ.ಮಾಲ್‌ನಲ್ಲಿ ಕೃತಜ್ಞತಾ ಸಮರ್ಪಣಾ ಸಭೆ ಜರಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿ ಮಂಡಲದ ವಿಶೇಷ ಆಹ್ವಾನಿತರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತನಾಡಿ, ಕಾರ್ಯಕ್ರಮವು ಯಾವುದೇ ಇರಲಿ ಅದು ಯಶಸ್ವಿಗೊಳ್ಳಬೇಕಾದರೆ ಅದರ ಹಿಂದೆ ಎಲ್ಲರ ಅವಿರತ ಪ್ರಯತ್ನ ಅತ್ಯಗತ್ಯ ಎಂದರು.

ಪರಿಶ್ರಮವಿಲ್ಲದಿದ್ದರೆ ಯಾವುದೇ ಕಾರ್ಯಕ್ರಮವು ಯಶಸ್ವಿಗೊಳ್ಳದು. ಅದರಂತೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಹಗಲಿರುಳೆನ್ನದೆ ಅವಿರತ ಪರಿಶ್ರಮ ನಡೆಸಿದ್ದಾರೆ. ಇದರಿಂದ ಇದಕ್ಕೆ ಪ್ರತಿಫಲವಾಗಿ ಈ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿಯವರು ಈ ಕ್ಷೇತ್ರದಿಂದ ಗೆಲುವು ಸಾಧಿಸುವುದು ಖಚಿತ. ಈ ಬಗ್ಗೆ ಯಾರೂ ನಿರಾಶರಾಗುವುದು ಬೇಡ ಎಂದು ಕಜಂಪಾಡಿಯವರು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ, ರಾಜ್ಯ ಸಮಿತಿ ಸದಸ್ಯರಾದ ಸವಿತಾ ಟೀಚರ್, ರಾಮಪ್ಪ ಮಂಜೇಶ್ವರ, ಕೋಳಾರು ಸತೀಶ್ಚಂದ್ರ ಭಂಡಾರಿ, ವಿವಿಧ ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರಾದ ಡಿ.ಶಂಕರ, ಎಂ.ಜನನಿ, ಸುಜ್ಞಾನಿ ಶ್ಯಾನುಭೋಗ್, ಬಿಡಿಜೆಎಸ್ ಜಿಲ್ಲಾಧ್ಯಕ್ಷ ಗಣೇಶ್ ಪಾರೆಕಟ್ಟೆ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳಾದ ಪುಷ್ಪಾ ಗೋಪಾಲನ್, ಪ್ರಮೀಳಾ ಮಜಲ್, ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಕೆ.ಎಂ.ಅಶ್ವಿನಿ ಭಟ್, ಬದಿಯಡ್ಕ ಮಂಡಲಾಧ್ಯಕ್ಷ ಎಂ.ಗೋಪಾಲಕೃಷ್ಣ , ವಕೀಲ ಕೆ.ಕರುಣಾಕರನ್ ನಂಬ್ಯಾರ್ ಮೊದಲಾದವರು ಉಪಸ್ಥಿತರಿದ್ದರು.

7ನೇ ತರಗತಿಯ ವಿದ್ಯಾರ್ಥಿನಿ ಶ್ರಾವ್ಯ ಕೆ.ಎಸ್. ಸಾಧನೆ

ಕಣ್ಣಿಗೆ ಬಟ್ಟೆ ಕಟ್ಟಿ ಸೈಕಲ್ ಓಡಿಸಿ ವಿಶ್ವ ದಾಖಲೆ

ಬದಿಯಡ್ಕ: ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಸೈಕಲ್ ಓಡಿಸಿದ ವಿದ್ಯಾರ್ಥಿನಿ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾಳೆ. ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜು ಹೈಯರ್ ಸೆಕೆಂಡರಿ ಶಾಲೆಯ 7ನೇ ತರಗತಿಯ ವಿದ್ಯಾರ್ಥಿನಿ ಶ್ರಾವ್ಯ ಕೆ.ಎಸ್. ಈ ಸಾಧನೆಯನ್ನು ಮಾಡಿರುತ್ತಾಳೆ. 2026 ಮಾರ್ಚ್ 19ರಂದು ಕಣ್ಣಿಗೆ ಬಟ್ಟೆಕಟ್ಟಿಕೊಂಡು 5 ನಿಮಿಷ 8 ಸೆಕೆಂಡುಗಳಲ್ಲಿ 500 ಮೀಟರ್ ದೂರದ ತನಕ ಶ್ರಾವ್ಯ ಸೈಕಲ್ ಓಡಿಸಿ ನೂತನ ವಿಶ್ವದಾಖಲೆಗೆ ಪಾತ್ರಳಾಗಿದ್ದಾಳೆ. ದೃಢ ಸಂಕಲ್ಪವಿದ್ದರೆ ಕಣ್ಣಿಲ್ಲದೆಯೂ ನಾವು ಗುರಿಯನ್ನು ತಲುಪಬಹುದು ಎಂಬುದನ್ನು ಶ್ರಾವ್ಯ ಅವರು ಸಾಬೀತುಪಡಿಸಿದ್ದಾರೆ.



ಕಣ್ಣಿಗೆ ಬಟ್ಟೆ ಕಟ್ಟಿ ಸೈಕಲ್ ಓಡಿಸುವುದು ಬರಿ ದೈಹಿಕ ಶ್ರಮವಲ್ಲ, ಅದಕ್ಕೆ ಅಪಾರವಾದ ಮಾನಸಿಕ ಶಕ್ತಿ ಮತ್ತು ಏಕಾಗ್ರತೆಬೇಕು. ಅದೇ ರೀತಿ 2025 ಮಾರ್ಚ್ 9ರಂದು ಈಕೆ ಇನ್ನೊಂದು ವಿಶ್ವ ದಾಖಲೆಯನ್ನು ನಿರ್ಮಿಸಿದ್ದಳು. 62 ಪದಗಳನ್ನು ಮತ್ತು ಅರ್ಥಪೂರ್ಣವಾದ ವಾಕ್ಯಗಳನ್ನು ಕಣ್ಣಿಗೆ ಬಟ್ಟೆಕಟ್ಟಿಕೊಂಡು ಕೇವಲ ಒಂದು ನಿಮಿಷ 58 ಸೆಕೆಂಡುಗಳಲ್ಲಿ ಓದಿದ ಸಾಧನೆ ಈಕೆಯದು. ಸುಮಾರು 25ರಿಂದ 30ರಷ್ಟು ವಿವಿಧ ಚಟುವಟಿಕೆಗಳನ್ನು ಈಕೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಾಡುತ್ತಾಳೆ. ಪ್ರತಿಭಾನ್ವಿತಳಾದ ಈಕೆ ನೀರ್ಚಾಲು ಕುಂಜಾರು ನಿವಾಸಿ ಶ್ಯಾಮಪ್ರಸಾದ ಕೆ.ವಿ. ಮತ್ತು ಶೋಭಾ ದಂಪತಿಯರ ಪುತ್ರಿ.

ಗುಡ್ಡ ಪ್ರದೇಶ ಮರೋಳಿಯಲ್ಲಿ ನೀರು ಬರುತ್ತಿಲ್ಲ | ಕೆಲವೆಡೆ ಮೂರು ತಿಂಗಳಿನಿಂದ ನೀರಿಲ್ಲದೆ ಹೈರಾಣ

ಪ್ರೆಶರ್ ಸಮಸ್ಯೆಯಿಂದ ಎತ್ತರದ ಸ್ಥಳಗಳಿಗೆ ನೀರಿಲ್ಲ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಸುತ್ತಲಿನ ಮೂರು ಕಡೆ ರಾಷ್ಟ್ರೀಯ ಹೆದ್ದಾರಿ ಹಂಚಿಕೊಂಡಿರುವ ಮರೋಳಿ ವಾರ್ಡ್‌ನ ಅಲ್ಲಲ್ಲಿ ಗುಡ್ಡ ನಡುವೆ ಇಳಿ ಜಾರು ಪ್ರದೇಶವಿದೆ. ಇವೆರಡರ ನಡುವೆ ಸಮತಟ್ಟು ಪರಿಸರ ಹೊಂದಿರುವ ಮರೋಳಿ ವಾರ್ಡ್‌ನ ಬಹುತೇಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಭಾರಿ ಪ್ರಮಾಣದಲ್ಲಿದೆ.

ರಾ.ಹೆ. 66ರ ನಂತೂರಿನ ಶಾಂತಿಕಿರಣ, ಸೈಮನ್ ಲೇನ್, ರಾಮನಗರ ಕ್ರಾಸ್, ನಾಗುರಿ ಆಂಜಲೋರ್ ಚರ್ಚ್, ಮರಿಯಪ್ರೇಮ ಗುಡ್ಡ, ತಾತಾವು, ರಾ.ಹೆ.73ರ ಬಿಕರ್ನಕಟ್ಟೆ ಸೋಜಾ ಚಿಕನ್ ಹಿಂಭಾಗ, ಬಿಕರ್ನಕಟ್ಟೆ ಬಾಲಯೇಸು ಚರ್ಚ್ ಹಿಂಭಾಗದ ಪ್ರದೇಶವಾಗಿ ಬಜ್ಜೋಡಿ. ಪಂಪ್ ವೆಲ್‌ನ ಕರ್ಣಾಟಕ ಬ್ಯಾಂಕ್ ಬಳಿಯ ಕೋರ್ದಬ್ಬು ದೈವಸ್ಥಾನ ಸೇರಿ ವಾರ್ಡ್ ವ್ಯಾಪ್ತಿ ಇದೆ. ಪಂಪ್ ವೆಲ್‌ನಲ್ಲಿ ಬಸ್ ನಿಲ್ದಾಣಕ್ಕೆ ನಿಗದಿಪಡಿಸಿರುವ ಜಾಗವೂ ಮರೋಳಿ ವ್ಯಾಪ್ತಿಗೆ ಸೇರುತ್ತದೆ.

ಮರೋಳಿ ವಾರ್ಡ್‌ನ ತಾತಾವು, ಮರಿಯ ಪ್ರೇಮ ಗುಡ್ಡ, ಶಾಂತಿ ಗುರಿ ಪ್ರದೇಶಗಳಿಗೆ ಶಕ್ತಿನಗರ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಇಲ್ಲಿಗೆ ಪ್ರತಿದಿನ ಎರಡು ಗಂಟೆಗಳ ಕಾಲ ನೀರು ಒದಗಿಸಲಾಗುತ್ತಿದೆ. ಪಡೀಲ್- ಬಿಕರ್ನಕಟ್ಟೆ ಟ್ಯಾಂಕ್‌ನಿಂದ ಅಡುಮರೋಳಿ, ಪಂಪ್‌ವೆಲ್, ಜಯಶ್ರೀಗೇಟ್, ಬಜ್ಜೋಡಿ ಪ್ರದೇಶಗಳಿಗೆ ನೀರು ಸರಬರಾಜು ಆಗುತ್ತಿದೆ. ಇಲ್ಲಿಗೆ ಎರಡು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಮರೋಳಿ ವಾರ್ಡ್‌ಗೆ ನೀರು ಬಂದರೂ ಪ್ರೆಶರ್ ಇಲ್ಲ. ಇದರಿಂದಾಗಿ ಅವಶ್ಯಕತೆ ಇರುವಷ್ಟು ನೀರು ಬರುತ್ತಿಲ್ಲ.

ಎತ್ತರ ತಗ್ಗು ಪರಿಸರ ಹೊಂದಿರುವ ಕಾರಣ ಮರೋಳಿ ವಾರ್ಡ್‌ನ ಎತ್ತರದ ಎಲ್ಲ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ಪಂಪ್‌ವೆಲ್, ಮರೋಳಿ ಸೂರ್ಯನಾರಾಯಣ ದೇವಸ್ಥಾನ ಸುತ್ತಲಿನ ಪ್ರದೇಶ, ಮರಿಯ ಪ್ರೇಮ ಗುಡ್ಡ ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಅಧಿಕವಿದೆ. ಸೂರ್ಯನಾರಾಯಣ ದೇವಸ್ಥಾನಕ್ಕೆ ನೀರು ಪೂರೈಸುವ ಪಂಪ್ ಹಾಳಾಗಿದ್ದು, ಕಳೆದ ಶನಿವಾರದಿಂದ ಇಲ್ಲಿಗೆ ನೀರು ಬರುತ್ತಿಲ್ಲ. ಪಂಪ್ ವೆಲ್‌ನಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿರುವ ಕಾರಣ ಪೈಪ್‌ಲೈನ್‌ಗೆ ಹಾನಿ ಉಂಟಾಗಿ ನೀರು ಬರುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.



ತಾತಾವು ಬಳಿ ಪ್ರಕೃತಿದತ್ತವಾದ ನೀರಿನ ಸೆಲೆಯಿಂದ ವರ್ಷದ 365 ದಿನವೂ ನೀರು ಬರುತ್ತಿದೆ.

ಸ್ವಚ್ಛ ನೀರಿನ ಸೆಲೆ ಸಂರಕ್ಷಿಸಿ

ಮರೋಳಿ ವಾರ್ಡ್‌ನ ತಾತಾವು ಬಳಿ ಪ್ರಕೃತಿದತ್ತವಾದ ನೀರಿನ ಸೆಲೆಯಿದ್ದು, ವರ್ಷದ 365 ದಿನವೂ ಇಲ್ಲಿ ನೀರು ಬರುತ್ತಿದೆ. ಬಂಡೆಕಲ್ಲುಗಳ ಮಧ್ಯದಿಂದ ಶುದ್ಧವಾದ ನೀರು ಹರಿದುಬರುತ್ತಿದ್ದು, ಈ ಹಿಂದೆ ಸ್ಥಳೀಯರು ಈ ನೀರನ್ನು ಕುಡಿಯಲು ಬಳಸುತ್ತಿದ್ದರು. ಈಗ ಬಳಕೆ ಕಡಿಮೆಯಾಗಿದೆ. ನಗರದಲ್ಲಿ ದೊರೆಯುತ್ತಿರುವ ಈ ನೀರಿನ ಒಸರನ್ನು ಸಂರಕ್ಷಣೆ ಮಾಡಬೇಕಿದೆ. ಈ ಪ್ರದೇಶದಲ್ಲಿ ಹೊಸ ಮನೆಗಳು ನಿರ್ಮಾಣವಾಗುತ್ತಿದ್ದು, ಇಲ್ಲಿನ ನೀರಿನ ಮೂಲವನ್ನು ಸಂರಕ್ಷಣೆ ಮಾಡಬೇಕು. ಮಂಗಳೂರು ಮಹಾನಗರ ಪಾಲಿಕೆ ಈ ಬಗ್ಗೆ ಮುತುವರ್ಜಿ ವಹಿಸಬೇಕು ಎಂಬುದು ಸ್ಥಳೀಯರಾದ ದೀಪಕ್ ಮರೋಳಿ ಅವರ ಒತ್ತಾಯ.

ಮರೋಳಿ ವಾರ್ಡ್ ಎತ್ತರದ ಪ್ರದೇಶಗಳನ್ನು ಒಳಗೊಂಡಿರುವ ಕಾರಣ ಇಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುವುದೂ ಸಾಧ್ಯವಾಗುತ್ತಿಲ್ಲ. ಬಜ್ಜೋಡಿ, ಅಡುಮರೋಳಿ, ಮರಿಯ ಪ್ರೇಮನಗರ, ರಾಮನಗರ ಎತ್ತರದ ಪ್ರದೇಶಗಳಾಗಿದ್ದು, ಇಲ್ಲಿಗೆ ನೀರು ಟ್ಯಾಂಕರ್ ಬರುತ್ತಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳೂ ಇಲ್ಲ. ಈ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ.75ರಷ್ಟು ಪೂರ್ಣಗೊಂಡಿದೆ. ಆದರೆ, ಟ್ಯಾಂಕ್ ಆಗಿಲ್ಲ.

ಡ್ರೈನೇಜ್ ಸಮಸ್ಯೆ

ಮರೋಳಿ ವಾರ್ಡ್‌ನ ಎತ್ತರದ ಸ್ಥಳಗಳಿಗೆ ಡ್ರೈನೇಜ್ ಸಂಪರ್ಕವೂ ಆಗಿಲ್ಲ. ಬಜ್ಜೋಡಿ, ತಾರೆತೋಟ, ಪ್ರೇಮನಗರ ಪ್ರದೇಶಗಳಲ್ಲಿ ಒಳಚರಂಡಿ ಲೈನ್ ಆಗಿಲ್ಲ. ಈ ವಾರ್ಡ್‌ನ ಸೂರ್ಯನಾರಾಯಣ ದೇವಸ್ಥಾನದಿಂದ ಪಂಪ್‌ವೆಲ್ ಕಡೆಗೆ ಹಾಗೂ ಬಿಕರ್ನಕಟ್ಟೆ-ತಾರೆತೋಟ- ಪಂಪ್‌ವೆಲ್‌ಗೆ ತೋಡು ಇದ್ದು, ಮಳೆಗಾಲದಲ್ಲಿ ಪಂಪ್‌ವೆಲ್‌ನಲ್ಲಿ ನೀರು ಬ್ಲಾಕ್ ಆದಾಗ ಜನತೆ ತೊಂದರೆ ಅನುಭವಿಸುತ್ತಾರೆ.

ಮರೋಳಿ ವಾರ್ಡ್‌ನ ಹಲವೆಡೆ ನೀರಿನ ಸಮಸ್ಯೆ ಇದೆ. ತಾರೆತೋಟ, ಲಾಲ್ ಬಹದ್ದೂರು ಶಾಸ್ತ್ರಿ ಬಡಾವಣೆಯಲ್ಲಿ ಕೊಳವೆಬಾವಿ ನಿರ್ಮಿಸುವಂತೆ ಮಂಗಳೂರು ಮಹಾನಗರ ಪಾಲಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯ ಇರುವ ಕಡೆಗೆ ಮನಪಾ ಟ್ಯಾಂಕರ್ ಮೂಲಕ ನೀರು ಪೂರೈಕೆ ಆಗುತ್ತಿದೆ. ಆದರೆ, ವಾರ್ಡ್‌ನ ಬಹುತೇಕ ಪ್ರದೇಶ ಎತ್ತರದ ಸ್ಥಳ ಹಾಗೂ ಓಣಿಗಳಿಂದ ಕೂಡಿದ್ದು, ಟ್ಯಾಂಕರ್ ತೆರಳಲು ಸಾಧ್ಯವಾಗುತ್ತಿಲ್ಲ. ಜಲಸಿರಿ ಯೋಜನೆಯಡಿ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಮೂರು ಸ್ಥಳ ಗುರುತಿಸಲಾಗಿತ್ತು. ಆದರೆ, ಸ್ಥಳೀಯರ ವಿರೋಧ 'ದಿಂದ ಟ್ಯಾಂಕ್ ನಿರ್ಮಾಣ ಆಗಿಲ್ಲ. ಟ್ಯಾಂಕ್ ನಿರ್ಮಾಣವಾಗಿ ಉತ್ತಮ ಪ್ರೆಶರ್‌ನೊಂದಿಗೆ ನೀರು ಸರಬರಾಜು ಮಾಡಿದರೆ ಇಲ್ಲಿನ ನೀರಿನ ಸಮಸ್ಯೆ ಬಗೆಹರಿಸಬಹುದು.



■ ಕೇಶವ ಮರೋಳಿ,
ಮರೋಳಿ ವಾರ್ಡ್
ನಿಕಟಪೂರ್ವ ಕಾರ್ಪೋರೇಟರ್

ಮರೋಳಿ ಪಾದೆ ಪ್ರದೇಶಕ್ಕೆ ಕಳೆದ ಮೂರು ತಿಂಗಳಿನಿಂದ ನೀರು ಬರುತ್ತಿಲ್ಲ. ಇದರಿಂದಾಗಿ ಸುತ್ತಲಿನ 20 ಮನೆಗಳ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದೇವೆ. ಪಂಪ್ ವೆಲ್‌ನಲ್ಲಿ ಸರ್ವಿಸ್ ರಸ್ತೆ ಕಾಮಗಾರಿಯಿಂದ ನೀರಿನ ಪೈಪ್‌ಗೆ ಹಾನಿ ಉಂಟಾಗಿದೆ ಎಂದು ಹೇಳಲಾಗುತ್ತಿದೆ. ನಮ್ಮದು ಓಣಿ ಪ್ರದೇಶವಾದ ಕಾರಣ ನೀರಿನ ಟ್ಯಾಂಕರ್ ಕೂಡಾ ಬರುತ್ತಿಲ್ಲ. ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ನಮಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಬೇಕು.



■ ರವೀಂದ್ರ ಅಮೀನ್,
ಮರೋಳಿ ವಾರ್ಡ್ ನಿವಾಸಿ

ಮುಂದಿನ ವಾರ್ಡ್ -38 ಬೆಂದೂರ್ ಪರಿಸರದ ಸ್ಥಿತಿಗತಿ

ಮಂಗಳೂರು

ರಾಷ್ಟ್ರ ಜಾಗೃತಿಯ ದೈನಿಕ

ಮಂಗಳವಾರ, 14 ಏಪ್ರಿಲ್ 2026

ಸಂಪುಟ 48, ಸಂಚಿಕೆ 26 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ಬಿಜೆಪಿ ಸಿಎಂ ಆಯ್ಕೆ? | ೦೭

ಈ ಬಾರಿ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ | ೦೭

ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ: ಶಾ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ನಿರಪೇಕ್ಷ ಭಾವನೆಯಿಂದ ಚಿಕಿತ್ಸೆ ನೀಡುವವನೇ ನಿಜವಾದ ವೈದ್ಯ.

▲ಭರತ



ಅಂಬೇಡ್ಕರ್ ರಾಜಕೀಯ ಚಿಂತನೆಗಳ ಸತ್ಯ

• ವಿಶೇಷ ಪುಟ ೧೦

ಯುದ್ಧಮಧ್ಯಸ್ಥಿಕೆಯ ದೊಂಬರಾಟದಲ್ಲಿ ಸಿಲುಕಿರುವ ಪಾಕ್

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಸಂಗೀತ ದಂತಕಥೆ ಆಶಾ ಭೋಸ್ಲೆಗೆ ವಿದಾಯ



• **ಮುಂಬೈ:** ಬಹು ಅಂಗಾಂಗ ವೈಫಲ್ಯದಿಂದಾಗಿ 92ನೇ ವಯಸ್ಸಿನಲ್ಲಿ ನಿಧನರಾದ ಸುಪ್ರಸಿದ್ಧ ಗಾಯಕಿ ಆಶಾ ಭೋಸ್ಲೆಯವರ ಅಂತ್ಯಕ್ರಿಯೆ ಸೋಮವಾರ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

• ಪುಟ ೭

ಪ್ರಧಾನಿಯಿಂದ ಭೈರವೈಕ್ಯ ಮಂದಿರ ಲೋಕಾರ್ಪಣೆ ನಾಳೆ

• ಪುಟ ೫

ಟಿಸಿಎಸ್ ನಾಸಿಕ್ ಘಟನೆ ತನಿಖೆಗೆ ಟಾಟಾ ಆದೇಶ

• ಪುಟ ೭

ನಮ್ಮ ರಕ್ಷಣೆಗೆ ಭಾರತದ ಆಧ್ಯಾತ್ಮಿಕ ಜ್ಞಾನ ನೆರವು

• ಪುಟ ೭

ನೋಯ್ಡಾ: ಹಿಂಸೆಗೆ ತಿರುಗಿದ ಪ್ರತಿಭಟನೆ

• ಪುಟ ೭

ಪಿಯುಸಿ ವಿದ್ಯಾರ್ಥಿಗಳಿಗೂ ಇನ್ನು ಪಠ್ಯಪುಸ್ತಕ ಉಚಿತ

• ಪುಟ ೫

ಪೊಲೀಸ್ ಠಾಣೆ ಮೇಲೆ ದಾಳಿಗೆ ಐಎಸ್‌ಐ ನಂಟು

• ಪುಟ ೭

ಮಹಿಳಾ ಮೀಸಲು ಅನುಷ್ಠಾನದಿಂದ ಹಿಂದಿನ ದೃಷ್ಟಿಕೋನ ಸಾಕಾರ, ಭವಿಷ್ಯದ ನಿರ್ಣಯ ಈಡೇರಿಕೆ: ಪ್ರಧಾನಿ ಮೋದಿ

ಶತಮಾನದ ನಿರ್ಧಾರ



• **ಹೊಸದಿಲ್ಲಿ:** ಭಾರತದ ಸಂಸತ್ತು 2029ರಲ್ಲಿ ಅನುಷ್ಠಾನಕ್ಕೆ ಬರುವ ಮಹತ್ವದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ದಶಕಗಳ ಕಾಯುವಿಕೆಗೆ ಅಂತ್ಯಹಾಡಲಿದ್ದು, ಇದರೊಂದಿಗೆ ಭಾರತವು 21ನೇ ಶತಮಾನದ ಅತ್ಯಂತ ಮಹತ್ವದ ನಿರ್ಧಾರಗಳಲ್ಲೊಂದನ್ನು ತೆಗೆದುಕೊಳ್ಳುವ ಅಂಚಿನಲ್ಲಿ ನಿಂತಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ತಿಳಿಸಿದ್ದಾರೆ.

ಏ.16ರಂದು ಸಂಸತ್ತಿನ ಮೂರು ದಿನಗಳ ವಿಶೇಷ ಅಧಿವೇಶನ ನಡೆಯಲಿದ್ದು, ಇದಕ್ಕೂ ಮುನ್ನ ಇಲ್ಲಿ ಮಹಿಳಾ ಸಮ್ಮೇಳನವೊಂದನ್ನು ಉದ್ದೇಶಿಸಿ ಅವರು ಮಾತನಾಡಿದರು. 'ನಾರೀ ಶಕ್ತಿ ವಂದನ್ ಅಧಿನಿಯಮ'ಕ್ಕೆ ತಿದ್ದುಪಡಿ ತರುವ ಮೂಲಕ ಹಿಂದಿನ ದೃಷ್ಟಿಕೋನಗಳನ್ನು ಸಾಕಾರಗೊಳಿಸಲಿದೆ ಮತ್ತು ಭವಿಷ್ಯದ ನಿರ್ಣಯಗಳನ್ನು ಈಡೇರಿಸಲಿದೆ. ಆಡಳಿತದಲ್ಲಿ ಮಹಿಳೆಯರ ಕೊಡುಗೆಗಳನ್ನು ಶ್ಲಾಘಿಸಿದ ಅವರು, ಅನೇಕ ಮಹಿಳೆಯರು ದೊಡ್ಡ ಪಾತ್ರಗಳನ್ನು ನಿರ್ವಹಿಸಲು ಸಜ್ಜಾಗಿ ಉತ್ಸಾಹದಿಂದ ಎದುರು ನೋಡುತ್ತಿದ್ದಾರೆ ಎಂದರು.



ನಮ್ಮ ದೇಶದ ಸಂಸತ್ತು ಹೊಸ ಇತಿಹಾಸ ಸೃಷ್ಟಿಸುವ ಸನಿಹದಲ್ಲಿದೆ. ಸಮಾನತಾ ನೆಲೆಗಟ್ಟಿನ ಭಾರತವೊಂದಕ್ಕಾಗಿ ಹಿಂದಿನ ದೃಷ್ಟಿಕೋನಗಳು ನನಸಾಗಲಿದ್ದು, ಭವಿಷ್ಯದ ನಿರ್ಣಯಗಳು ಕೂಡ ಪೂರ್ಣವಾಗಲಿವೆ. ಇಲ್ಲಿ ಸಾಮಾಜಿಕ ನ್ಯಾಯ ಕೇವಲ ಘೋಷಣೆಯಾಗಿರದೆ, ನಮ್ಮ ಕಾರ್ಯಸಂಸ್ಕೃ ತಿ ಮತ್ತು ನಮ್ಮ ನೀತಿ ನಿರೂಪಣಾ ಪ್ರಕ್ರಿಯೆಯ ಸಹಜ ಭಾಗವಾಗಿದೆ ಎಂಬುದನ್ನು ಎತ್ತಿಹಿಡಿಯಲಿದೆ ಎಂದರು.

2023ರಲ್ಲಿ ಮಹಿಳಾ ಮೀಸಲು ಶಾಸನವನ್ನು ಮಂಡಿಸಿದಾಗ ಎಲ್ಲ ಪಕ್ಷಗಳೂ ಸರ್ವಾನುಮತದಿಂದ ಇದನ್ನು ಅಂಗೀಕರಿಸಿದ್ದು, 2029ರೊಳಗೆ ಇದರ ಅನುಷ್ಠಾನವಾಗಬೇಕೆಂಬುದು ವಿಶೇಷವಾಗಿ ವಿಪಕ್ಷಗಳಿಂದ ಸೇರಿದಂತೆ ಇದೊಂದು ಸಾಮೂಹಿಕ ಬೇಡಿಕೆಯಾಗಿತ್ತು ಎಂದರು.ರಾಜ್ಯ ವಿಧಾನಸಭೆಗಳಿಂದ ಹಿಡಿದು ದೇಶದ ಸಂಸತ್ತಿನವರೆಗೆ ದಶಕಗಳಿಂದ ಇದ್ದ ಕಾಯುವಿಕೆಗೆ ಏ.16,17,18ರ ವಿಶೇಷ ಅಧಿವೇಶನ ಅಂತ್ಯ ಹಾಡಲಿದೆ. ಬಜೆಟ್ ಅಧಿವೇಶನವನ್ನು ಈ ಮಹಿಳಾ ಮೀಸಲು ತಿದ್ದುಪಡಿಗಳನ್ನು ಪರಿಗಣಿಸಿ ಅಂಗೀಕರಿಸುವುದಕ್ಕಾಗಿ ವಿಸ್ತರಿಸಲಾಗಿದೆ. ➡ಪುಟ ೪

ಸಂಸದರ ಭೇಟಿ ಮಾಡಿ ನಿರೀಕ್ಷೆ, ಅಪೇಕ್ಷೆ ಹಂಚಿಕೊಳ್ಳಲು ಮನವಿ

ನಮ್ಮ ಪ್ರಯತ್ನ ಮತ್ತು ಆದ್ಯತೆಯೆಂದರೆ, ಈ ಕೆಲಸವನ್ನು ನಾವು ಸಂವಾದ, ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಮೂಲಕ ಪೂರ್ಣಗೊಳಿಸಬೇಕು. ಇದರಿಂದ ಸಂಸತ್ತಿನ ಘನತೆ ಹೆಚ್ಚಾಗುತ್ತದೆ . ಈ ವಿಷಯದಲ್ಲಿ ಮಹಿಳೆಯರಲ್ಲಿನ ಉತ್ಸಾಹ ಸ್ವಾಗತಾರ್ಹ. ದೇಶಾದ್ಯಂತ ಮಹಿಳೆಯರು ವಿಧಾನಸಭೆ ಮತ್ತು ಲೋಕಸಭೆಯನ್ನು ತಲುಪುವ ಮೂಲಕ ತಮ್ಮ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಅವರ ಕನಸುಗಳಿಗೆ ಹೊಸ ರೆಕ್ಕೆಗಳು ಮೂಡಿವೆ. ಇದು ದೇಶದಲ್ಲಿ ಧನಾತ್ಮಕ ವಾತಾವರಣವೊಂದನ್ನು ಸೃಷ್ಟಿಸಿದೆ. ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ತಮ್ಮ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ತಮ್ಮ ಸಂಸದರನ್ನು ಭೇಟಿ ಮಾಡಿ ತಮ್ಮ ದೃಷ್ಟಿಕೋನ ಮತ್ತು ನಿರೀಕ್ಷೆಗಳನ್ನು ಹಂಚಿಕೊಳ್ಳಬೇಕೆಂದು ಮೋದಿಯವರು ಮಹಿಳೆಯರಲ್ಲಿ ಮೋದಿ ಮನವಿ ಮಾಡಿಕೊಂಡರು.

ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷ ಮಹಿಳೆಯರು

ಮಹಿಳಾ ನಾಯಕತ್ವಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಪಂಚಾಯತ್ ರಾಜ್ ಸಂಸ್ಥೆಗಳಾಗಿದ್ದು, ದೇಶದ ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷಕ್ಕೂ ಅಧಿಕ ಮಹಿಳೆಯರು ಇಂದು ಯಶಸ್ವಿಯಾಗಿ ಸಾಧನೆಗೈಯ್ಯುತ್ತಿದ್ದಾರೆ. ಸುಮಾರು 21 ರಾಜ್ಯಗಳಲ್ಲಿನ ಪಂಚಾಯತ್‌ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಸುಮಾರು ಶೇ.50ನ್ನು ಸಮೀಪಿಸಿದೆ. ಲಕ್ಷಾಂತರ ಮಹಿಳೆಯರು ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಿಯಾಶೀಲ ಪಾತ್ರ ವಹಿಸುತ್ತಿರುವುದು ವಿಶ್ವದ ಪ್ರಮುಖ ನಾಯಕರು ಮತ್ತು ರಾಜಕೀಯ ತಜ್ಞರಲ್ಲಿ ಕೂಡ ಅಚ್ಚರಿಯುಂಟು ಮಾಡಿದೆ. ಇದು ಭಾರತದ ಹೆಮ್ಮೆಯನ್ನು ವೃದ್ಧಿಸಿದೆ ಎಂದರು. ಇಂದು ನೀತಿ ನಿರೂಪಣಾ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿದ್ದು, ಇದು ವ್ಯವಸ್ಥೆಗಳನ್ನು ಸಂವೇದನಾಶೀಲಗೊಳಿಸಿದೆ. ➡ಪುಟ ೪

ಇರಾನ್ ನೌಕಾ ನಿರ್ಬಂಧಕ್ಕೆ ಯುಎಸ್ ಸಜ್ಜು ಕೊಲ್ಲಿ, ಒಮಾನ್‌ಗೆ ಭಯ ಹೆಚ್ಚಿಸಿದ ಇರಾನ್

ಅಮೆರಿಕ ಬೆದರಿಕೆ ಇರಾನ್ ಎಚ್ಚರಿಕೆ

• **ಕೈರೋ:** ಅಮೆರಿಕದ ಸೇನೆ ಸೋಮವಾರದಿಂದ ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ನೌಕಾ ನಿರ್ಬಂಧ ಹೇರಲು ಸಿದ್ಧವಾಗಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಮೇಲೆ ಒತ್ತಡ ಹೆಚ್ಚಿಸಲು ಈ ಕ್ರಮ ಕೈಗೊಂಡಿದ್ದು, ಇದರಿಂದ ತೈಲದ ಬೆಲೆಗಳು ಏರಿಕೆಯಾಗುವ ಮತ್ತು ಯುದ್ಧ ಮತ್ತೊಮ್ಮೆ ತೀವ್ರಗೊಳ್ಳುವ ಅಪಾಯ ಉಂಟಾಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಸಮುದ್ರದ ಎಲ್ಲಾ ಬಂದರುಗಳಿಗೆ ಬೆದರಿಕೆ ಹಾಕಿದೆ.



ಇರಾನ್ ಸರ್ಕಾರದ ಮಾಧ್ಯಮಗಳ ವರದಿಯಂತೆ, ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಸಮುದ್ರದಲ್ಲಿ ಭದ್ರತೆ ಎಲ್ಲರಿಗೂ ಅಥವಾ ಯಾರಿಗೂ ಇಲ್ಲ. ಇರಾನ್ ಸೇನೆ ಮತ್ತು ರೆವಲ್ಯೂಶನರಿ ಗಾರ್ಡ್ ಪ್ರಕಟಿಸಿದ ಹೇಳಿಕೆಯಲ್ಲಿ, ಈ ಪ್ರದೇಶದ ಯಾವುದೇ ಬಂದರು ಸುರಕ್ಷಿತವಾಗಿರುವುದಿಲ್ಲ ಎಂದು ಎಚ್ಚರಿಸಲಾಗಿದೆ.

ಅಮೆರಿಕ ನೌಕಾ ನಿರ್ಬಂಧ: ಅಮೆರಿಕದ ಸೆಂಟ್ರಲ್ ಕಮಾಂಡ್ (CENTCOM) ಪ್ರಕಟಿಸಿದಂತೆ, ಭಾರತೀಯ ಕಾಲಮಾನ ಸೋಮವಾರ ಸಂಜೆ 6:30ರಿಂದ ಇರಾನ್ ಬಂದರುಗಳಿಗೆ ಪ್ರವೇಶಿಸುವ ಅಥವಾ ಹೊರಡುವ ಎಲ್ಲಾ ರಾಷ್ಟ್ರಗಳ ಹಡಗುಗಳ ಮೇಲೆ ನಿರ್ಬಂಧ ಜಾರಿಯಾಗುತ್ತದೆ. ➡ಪುಟ ೪

ಅನಿಶ್ಚಿತತೆ ಮುಂದುವರಿಕೆ

ಏಪ್ರಿಲ್ 22ಕ್ಕೆ ಯುದ್ಧ ವಿರಾಮ ಅವಧಿ ಮುಗಿಯಲಿದ್ದು, ಆದರ ನಂತರ ಏನಾಗುತ್ತದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಪಾಕಿಸ್ತಾನ ಮತ್ತು ಟರ್ಕಿ ದೇಶಗಳು ಮತ್ತೆ ಮಾತುಕತೆ ಆರಂಭಿಸಲು ಯತ್ನಿಸುತ್ತಿವೆ. ಪರಿಸ್ಥಿತಿ ಸುಧಾರಿಸಿದರೆ ಯುದ್ಧ ವಿರಾಮವನ್ನು ಇನ್ನಷ್ಟು ವಿಸ್ತರಿಸುವ ಸಾಧ್ಯತೆಯೂ ಇದೆ.



ಪರಮಾಣು ಕಾರ್ಯಕ್ರಮವೇ ಮೂಲ ಸಮಸ್ಯೆ

ಇರಾನ್‌ನ ಪರಮಾಣು ಕಾರ್ಯಕ್ರಮ ಈ ಸಂಘರ್ಷದ ಕೇಂದ್ರಬಿಂದು. ಇರಾನ್ ಶಾಂತಿಯುತ ಅಣುಶಕ್ತಿ ಅಭಿವೃದ್ಧಿ ಮಾಡುತ್ತಿರುವುದಾಗಿ ಹೇಳುತ್ತಿದ್ದರೂ, ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ಅದನ್ನು ಅನುಮಾನದಿಂದ ನೋಡುತ್ತಿವೆ. ಈ ಯುದ್ಧದಲ್ಲಿ ಸಾವಿರಾರು ಮಂದಿ ಮೃತಪಟ್ಟಿದ್ದು, ಹಲವಾರು ದೇಶಗಳ ಮೂಲಸೌಕರ್ಯ ಹಾನಿಗೊಳಗಾಗಿದೆ. ಒಟ್ಟಾರೆ, ಈ ಪರಿಸ್ಥಿತಿ ಜಾಗತಿಕ ಆರ್ಥಿಕತೆ ಮತ್ತು ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ.

ಅನಗತ್ಯ ಹೇಳಿಕೆ ನೀಡಿದರೆ ಶಿಸ್ತು ಕ್ರಮ: ಡಿ.ಕೆ.ಶಿವಕುಮಾರ್

ಶಾಸಕರಿಂದ ವರಿಷ್ಠರ ಭೇಟಿ ತಪ್ಪಲ್ಲ

• **ಬೆಂಗಳೂರು:** ಪಕ್ಷದ ಶಾಸಕರು ಹೈಕಮಾಂಡ್ ವರಿಷ್ಠರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿಲ್ಲ. ಅನವಶ್ಯಕವಾಗಿ ಏನೇನೋ ಹೇಳಿಕೆ ನೀಡಿದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.



ಅಗತ್ಯ ಬಿದ್ದರೆ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆಗೂ ಸಿದ್ಧ. ಹಿರಿಯ ಸಚಿವರು ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ತೀರ್ಮಾನ ತೆಗೆದುಕೊಂಡು ಬದಲಾವಣೆ ಮಾಡಬೇಕಾದರೆ ಅದನ್ನು ಪ್ರಶ್ನಿಸದೇ ಒಪ್ಪಿಕೊಳ್ಳಲೇಬೇಕಾಗುತ್ತದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಇದೇ ವೇಳೆ ಹೇಳಿದ್ದಾರೆ.

ಸೋಮವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದ ಬಳಿ ಮಾತನಾಡಿದ ಡಿಕೆ ಶಿವಕುಮಾರ್, ಪಕ್ಷದ ಶಿಸ್ತನ್ನು ಎಲ್ಲಾ ಶಾಸಕರು ಕಾಪಾಡಬೇಕು. ➡ಪುಟ ೪

ಅಗತ್ಯವಾದರೆ ಸಚಿವ ಸ್ಥಾನಕ್ಕೆ ರಾಜೀನಾಮೆ: ಪರಮೇಶ್ವರ್

• **ಬೆಂಗಳೂರು:** ಹಿರಿಯ ಸಚಿವರು ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ತೀರ್ಮಾನ ತೆಗೆದುಕೊಂಡು ಬದಲಾವಣೆ ಮಾಡಬೇಕಾದರೆ ಅದನ್ನು ಪ್ರಶ್ನಿಸದೇ ಒಪ್ಪಿಕೊಳ್ಳಲೇ ಬೇಕಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಸೋಮವಾರ ಮಾತನಾಡಿದ ಅವರು, ಹಿರಿಯ ಶಾಸಕರು ಸಚಿವ ಸ್ಥಾನ ಕೇಳಿರುವುದರಲ್ಲಿ ತಪ್ಪಿಲ್ಲ. ಆದರೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಬೇಕು ಎಂದರು. ➡ಪುಟ ೪



ತಮ್ಮದೇ ಹೆಸರಿನ ಸೇತುವೆ ಉದ್ಘಾಟಿಸಿದ ಸಿಎಂ ಸಿದ್ಧರಾಮಯ್ಯ

ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಉತ್ತಮ

• **ಚಿಕ್ಕಮಗಳೂರು:** ಕರ್ನಾಟಕದ ಆರ್ಥಿಕ ಪರಿಸ್ಥಿತಿಯು ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿಗಿಂತ ಉತ್ತಮವಾಗಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರತಿಪಾದಿಸಿದರು.

ನರಸಿಂಹರಾಜಪುರದಿಂದ ಹಂದೂರು ಗ್ರಾಮಕ್ಕೆ ಭದ್ರಾ ಹಿನ್ನೀರಿನಲ್ಲಿ ಸುಮಾರು 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸೇತುವೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಹಾಗೂ ವಿವಿಧ ಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಟೀಕಿಸುವವರಿಗೆ ತಮ್ಮ ಸಾಧನೆಯೇ ಉತ್ತರವಾಗಿದೆ. ಕೇಂದ್ರದ ಜಿಡಿಪಿ ಬೆಳವಣಿಗೆ 7.14 ಆಗಿದ್ದರೆ, ರಾಜ್ಯದ ಜಿಡಿಪಿ ಬೆಳವಣಿಗೆ 8.01 ಆಗಿದೆ ಎಂದರು. ಸಿದ್ದರಾಮಯ್ಯ ಬಂದು ಕರ್ನಾಟಕವನ್ನು ಸಾಲಗಾರ ರಾಜ್ಯವನ್ನಾಗಿ ಮಾಡಿದ್ದಾರೆ ಎಂದು ದೂರುತ್ತಾರೆ. ➡ಪುಟ ೪





ನುಡಿದಂತೆ ನಡೆದ ಸರ್ಕಾರ

ಕೇಂದ್ರ ಸರ್ಕಾರ ನಮ್ಮ ಜತೆ ಸಹಕರಿಸುತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಕೊಡುತ್ತೇವೆ ಎಂದು 2023-24ರ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಣೆ ಮಾಡಿದ್ದರು. ➡ಪುಟ ೪

ಪಟ್ಟಿಯಲ್ಲಿಲ್ಲದಿದ್ದರೆ ಮತ ಹಕ್ಕಿಲ್ಲ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ವೇಳೆ ಮತದಾರರ ಪಟ್ಟಿಯಿಂದ ಹೆಸರು ಡಿಲೀಟ್ ಆದವರಿಗೆ ಮತ್ತು ಮೇಲ್ಮನವಿ ನ್ಯಾಯ ಮಂಡಳಿಗಳ ಮುಂದೆ ಇನ್ನೂ ವಿಚಾರಣೆ ಬಾಕಿ ಇರುವವರಿಗೆ, ಮಧ್ಯಂತರ ಮತದಾನದ ಹಕ್ಕು ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಏಪ್ರಿಲ್ 23 ಮತ್ತು 29ರಂದು ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ನಡೆದ ವಿಶೇಷ ತೀವ್ರ ಪರಿಷ್ಕರಣೆ ನಂತರ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾದವರ ಅರ್ಜಿಯನ್ನು ಭಾರತದ ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆಗೆ ಸ್ವೀಕರಿಸಲು ನಿರಾಕರಿಸಿದೆ. ಮುಖ್ಯ ನ್ಯಾ. ಸೂರ್ಯಕಾಂತ್ ನೇತೃತ್ವದ, ನ್ಯಾ.ಜೋಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ಪೀಠ, ಮೇಲ್ಮನವಿ ನ್ಯಾಯಮಂಡಳಿಗಳನ್ನೇ ಸಂಪರ್ಕಿಸಲು ಅತೃಪ್ತರಿಗೆ ಸೂಚಿಸಿದೆ. ➡ಪುಟ ೪

ಎಸ್‌ಐಆರ್: ಮೇಲ್ಮನವಿ ನ್ಯಾಯಮಂಡಳಿ ಸಂಪರ್ಕಿಸಲು ಸುಪ್ರೀಂ ಸೂಚನೆ

ಆಯುಷ್ಮಾನ್ ಭಾರತ್‌ನಲ್ಲಿ ಹೆಚ್ಚು ಮಂದಿಗೆ ಚಿಕಿತ್ಸೆ

ಜಯದೇವ, ಕಿದ್ವಾಯಿಗೆ ಸ್ಥಾನ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉತ್ತಮ ಸೇವೆ ಮತ್ತು ಹೆಚ್ಚಿನ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಿದ ಆಸ್ಪತ್ರೆಗಳ ಪೈಕಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮುಂಚೂಣಿಯಲ್ಲಿದೆ.

ಹೃದಯ ಸಂಬಂಧಿತ ಕಾಯಿಲೆಗಳಿಗೆ ಉತ್ತಮ ಚಿಕಿತ್ಸೆ ನೀಡುವ ಜಯದೇವ ಹೃದ್ರೋಗ ಆಸ್ಪತ್ರೆಯು ಹಲವು ಹೆಗ್ಗಳಿಕೆಗೆ ಪಾತ್ರವಾಗಿದೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉತ್ತಮ ಚಿಕಿತ್ಸೆ ನೀಡುತ್ತಿದೆ. ಜತೆಗೆ ಇತ್ತೀಚೆಗೆ ದೇಶದಲ್ಲೇ ಅತ್ಯುತ್ತಮ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವಾಗಿ ಹೊರ ಹೊಮ್ಮಿದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಚಿಕಿತ್ಸೆಗೆ ಬರುವವರಲ್ಲಿ ಬಹುತೇಕರು ಬಡ-ಮಧ್ಯಮ ವರ್ಗದವರಾಗಿದ್ದು, ಸರ್ಕಾರಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಸೇರಿದಂತೆ ಪ್ರತಿ ಯೋಜನೆಗೆ ಸಂಸ್ಥೆಯಲ್ಲಿ ಪ್ರತ್ಯೇಕ ವಿಭಾಗ ನಿರ್ಮಾಣ ಮಾಡಲಾಗಿದೆ. ➡ಪುಟ ೪



ದೇಶದ ಅತ್ಯುನ್ನತ ಆಸ್ಪತ್ರೆ ಕಿದ್ವಾಯಿ

ಬಡರೋಗಿಗಳ ಆಶಾಕಿರಣ ಹಾಗೂ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದಿರುವ ರಾಜ್ಯದ ಪ್ರತಿಷ್ಠಿತ ಕ್ಯಾನ್ಸರ್ ಆಸ್ಪತ್ರೆಯಾದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕರ್ನಾಟಕದ ಆಸ್ಪತ್ರೆಗಳ ಪೈಕಿ ಪ್ರಥಮ ಸ್ಥಾನ ಪಡೆದಿದೆ. 2025ರಲ್ಲಿ ದ ವೀಕ್ ಹನ್ಸಾ ಸಂಶೋಧನಾ ಸಮೀಕ್ಷೆ ಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಭಾರತದಲ್ಲಿ 5ನೇ ಸ್ಥಾನ ಪಡೆದಿದೆ. ➡ಪುಟ ೪

ಶಿಕ್ಷಕರ ವರ್ಗಾವಣೆ ಭಾರೀ ಬದಲಾವಣೆ

ಪುಟ್ಟ ಮಗುವಿನ ತಾಯಿ, ಗರ್ಭಿಣಿ ಶಿಕ್ಷಕಿಯರು ಕೇಳಿದ ಕಡೆ ವರ್ಗ

• **ಬೆಂಗಳೂರು:** ಗರ್ಭಿಣಿ ಅಥವಾ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿರುವ ಶಿಕ್ಷಕಿಯರು ಬಯಸಿದ ಸ್ಥಳ ಆಯ್ಕೆಗೆ ಆದ್ಯತೆ ನೀಡುವ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರ ಹಿತ ಕಾಯುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ-2026ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಕಳೆದ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಿದ್ದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ-2026 ವನ್ನು ಸಹಿಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ➡ಪುಟ ೪

ವಿಧೇಯಕಕ್ಕೆ ಗವರ್ನರ್ ಅಂಕಿತ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,45,000**(2,49,000) ಅಪರಂಜಿ ಚಿನ್ನ: **15,110**(15,150) ಆಭರಣ ಚಿನ್ನ: **13,975**(14,010) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,847**(702↓) ಎನ್‌ಎಸ್‌ಇ **23,842**(207↓)

$1 = ₹92.74

ನಾರೀಶಕ್ತಿಗೆ ಕೈ ಅಪಮಾನ: ಬಿವೈವಿ

• **ಬೆಂಗಳೂರು** : ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ಸಿನವರು ಮಹಿಳಾ ಮೀಸಲಾತಿ ಒಂದು ರಾಜಕೀಯ ಗಿಮಿಕ್ ಎಂದಿದ್ದಾರೆ. ಈ ಹೇಳಿಕೆಯ ಮೂಲಕ ದೇಶದ ನಾರೀಶಕ್ತಿಗೆ ಅಪಮಾನ ಮಾಡುವ ಕೆಲಸವನ್ನು ಕಾಂಗ್ರೆಸ್ ಪಕ್ಷದವರು ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳಾ ಮೀಸಲಾತಿಯು ನರೇಂದ್ರ ಮೋದಿ ಅವರು ತೆಗೆದುಕೊಂಡ ಐತಿಹಾಸಿಕ ನಿರ್ಣಯ. ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡಬೇಕೆಂಬ ತೀರ್ಮಾನವು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಮಹತ್ವದ ಕ್ಷಣ ಎಂದು ತಿಳಿಸಿದರು.

ಉಪ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ: ಬಾಗಲಕೋಟೆ, ದಾವಣಗೆರೆ ದಕ್ಷಿಣವನ್ನು ಕಾಂಗ್ರೆಸ್ ಪಕ್ಷದಿಂದ ಕಿತ್ತುಕೊಳ್ಳುವಲ್ಲಿ ಯಶಸ್ವಿ ಆಗುತ್ತೇವೆ. ಎರಡೂ ಕಡೆ ಗೆಲ್ಲುವ ಸಂಪೂರ್ಣ ವಿಶ್ವಾಸ ನಮಗಿದೆ. ಆದರೆ, ಉಪ ಚುನಾವಣೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ವಿಧಾನಸೌಧ ಮತ್ತು ಆಡಳಿತವನ್ನು ಸಂಪೂರ್ಣ ಮರೆತು ಬಾಗಲಕೋಟೆಯಲ್ಲಿ 8-9 ದಿನಗಳ ಕಾಲ ತಮ್ಮ ತಂಡದ ಜೊತೆ ಸೂಟ್‌ಕೇಸ್ ಜೊತೆ ಅಲ್ಲೇ ಇದ್ದುದನ್ನು ನೋಡಿದ್ದೀರಿ. ದಾವಣಗೆರೆ ಬಗ್ಗೆ ಮುಖ್ಯಮಂತ್ರಿಗಳು ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ. ಮುಖ್ಯಮಂತ್ರಿಗಳು ಸಂಪೂರ್ಣ ಹತಾಶರಾಗಿದ್ದರು ಎಂದು ತಿಳಿಸಿದರು. ದಾವಣಗೆರೆ ಸೋಲಿನ ಮುನ್ಸೂಚನೆ ಲಭಿಸಿದ್ದರಿಂದ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರ ರಾಜೀನಾಮೆ ಪಡೆಯುವಂತೆ ಸೂಚನೆ ನೀಡಿದೆ. ಸಚಿವಸಂಪುಟದ ವಿಸ್ತರಣೆಗೆ ಆಗ್ರಹಿಸಿ 38ಕ್ಕೂ ಹೆಚ್ಚು ಶಾಸಕರು ಈಗಾಗಲೇ ದಿಲ್ಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಬೆಂಬಲಿಗರು ಸಹ ದಿಲ್ಲಿ ಯಾತ್ರೆ ಪ್ರಾರಂಭ ಮಾಡಿದ್ದನ್ನು ಗಮನಿಸಿದರೆ, ಉಪ ಚುನಾವಣೆ ಫಲಿತಾಂಶದ ನಂತರ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲಕಲ್ಲೋಲ ಆಗಲಿದೆ ಎಂದು ತಿಳಿಸಿದರು.

ಹೊಸಬರಿಗೆ ಅವಕಾಶ ಬೇಕು ಎಂಬುದೂ ಸರಿ: ಜಿ.ಪರಮೇಶ್ವರ

ಸಂಪುಟ ಪುನರ್‌ರಚನೆ ಹೈಕಮಾಂಡ್‌ಗೆ ಬಿಟ್ಟದ್ದು

• **ಬೆಂಗಳೂರು:** ಸಂಪುಟದಲ್ಲಿ ಅವಕಾಶ ಕಲ್ಪಿಸಲು ಹೈಕಮಾಂಡ್, ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರು ಒಟ್ಟಾಗಿ ಕುಳಿತು ತೀರ್ಮಾನ ತೆಗೆದುಕೊಳ್ಳಬೇಕು. ಹಿಂದಿನಿಂದಲೂ ಇದೇ ಪದ್ಧತಿ ನಡೆದು ಬರುತ್ತಿದೆ. ಈಗಲೂ ಅದನ್ನೇ ಅನುಸರಿಸುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ, ಹಿರಿಯ ಶಾಸಕರ ದೆಹಲಿ ಪ್ರವಾಸವನ್ನು ಗ್ಯಾಂಬ್ಲಿಂಗ್ ಎಂದು ಕರೆಯುವುದು ಸರಿಯಲ್ಲ. ಕೆಲವರು ಬಹಿರಂಗವಾಗಿ ಸಚಿವ ಸ್ಥಾನಕ್ಕಾಗಿ ಈ ಬೇಡಿಕೆ ಸಲ್ಲಿಸುತ್ತಿರಬಹುದು. ಅರ್ಹತೆ ಇದೆ ಎಂದು ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ. ಅವಕಾಶ ಸಿಕ್ಕವರಿಗೆ ಮತ್ತೆ ಸಿಗುತ್ತಿದೆ. ಹೊಸಬರಿಗೆ ಅವಕಾಶ ಬೇಕು ಎಂಬುದೂ ಕೂಡ ಸರಿ ಎಂದು ಪರಮೇಶ್ವರ್ ತಿಳಿಸಿದರು.

ಪ್ರತಿ ಬಾರಿ ಸಂಪುಟ ಪುನರ್ ರಚನೆ ಮಾಡುವಾಗಲೂ ಕೆಲವು ಹಿರಿಯರನ್ನು ಉಳಿಸಿಕೊಂಡು ಕಿರಿಯರಿಗೆ ಅವಕಾಶ ಕಲ್ಪಿಸುವುದು ಸಾಮಾನ್ಯ ಎಂದರು. ಕೆಪಿಸಿಸಿ ಅಧ್ಯಕ್ಷರು ಹಾಗೂ ಸರ್ಕಾರದ ನಾಯಕತ್ವ ಬದಲಾವಣೆಯಂತಹ ಮಹತ್ವದ ನಿರ್ಧಾರಗಳು ಹೈಕಮಾಂಡ್ ಮಟ್ಟದಲ್ಲೇ ತೆಗೆದುಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ಯಾರೂ ಏನೇ ಹೇಳಿಕೆ ನೀಡಿದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಹೈಕಮಾಂಡ್ ನಾಯಕರು ಎಲ್ಲವನ್ನೂ ಗಮನಿಸುತ್ತಿರುತ್ತದೆ. ಹೈಕಮಾಂಡ್ ಮೌನವಾಗಿಲ್ಲ. ಸೂಕ್ತ ಸಮಯದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದರು.



ಕೆಪಿಸಿಸಿ ಅಧ್ಯಕ್ಷರಾಗುವ ಚರ್ಚೆ ನಡೆದಿಲ್ಲ: ತಮ್ಮನ್ನು ಮತ್ತೊಂದು ಅವಧಿಗೆ ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡುವ ಯಾವುದೇ ಚರ್ಚೆಗಳು ನಡೆಯುತ್ತಿಲ್ಲ. ಶಾಸಕರು ದೆಹಲಿಗೆ ಹೋಗಿರುವುದು ಸಂಪುಟ ಪುನರ್ ರಚನೆಗೆ ಒತ್ತಡ ಹೇರುವ ಸಲುವಾಗಿ, ಈ ಸಂದರ್ಭದಲ್ಲಿ ಪರಮೇಶ್ವರ್ ಅನುಭವಿ ಇದ್ದಾರೆ. ಅವರಿಗೆ ಮತ್ತೊಮ್ಮೆ ಅಧ್ಯಕ್ಷ ಸ್ಥಾನ ವಹಿಸಬೇಕು ಎಂಬ ಯಾವ ಪ್ರಸ್ತಾವ ಇಲ್ಲ. ಯಾರಿಂದ ಯಾವ ಮಾಹಿತಿಯನ್ನು ತೆಗೆದುಕೊಳ್ಳಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಅಬ್ದುಲ್ ಜಬ್ಬಾರ್ ಟಿಕೆಟ್ ಕೇಳಿದ್ದರು, ಅವರಿಗೆ ಸಿಗಲಿಲ್ಲ. ಹೀಗಾಗಿ ಅವರು ಚುನಾವಣಾ ಪ್ರಚಾರದಲ್ಲಿ ಹೆಚ್ಚು ಭಾಗವಹಿಸಲಿಲ್ಲ. ನಂತರದ ಬೆಳವಣಿಗೆಯಲ್ಲಿ ಕೆಪಿಸಿಸಿಯ ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. ಮುಸ್ಲಿಂ ಮುಖಂಡರ ನಡುವೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚರ್ಚೆಗಳಾಗುತ್ತಿವೆ. ಕೆಪಿಸಿಸಿ ಅಧ್ಯಕ್ಷರು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು.

ಬೆಂಗಳೂರಿಂದ ಮುಂಬೈಗೆ ವಂದೇ ಭಾರತ್ ಸ್ಲೀಪರ್ ರೈಲು

• **ಹೊಸದಿಲ್ಲಿ:** ಐಟಿ ಸಿಟಿ ಬೆಂಗಳೂರಿನಿಂದ ವಾಣಿಜ್ಯ ನಗರಿ ಮುಂಬೈಗೆ ನೂತನ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಕೇಂದ್ರ ಸರ್ಕಾರ ಅಸ್ತು ಎಂದಿದೆ.

ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಕಲ್ಯಾಣ ಕರ್ನಾಟಕ ಸಂಪರ್ಕಕ್ಕೆ ಅನುಕೂಲವಾಗುವಂತೆ ನೂತನ ವಂದೇ ಭಾರತ್ ರೈಲು ಆರಂಭಿಸಲು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಮನವಿ ಸಲ್ಲಿಸಿ ಗಮನ ಸೆಳೆದಿದ್ದರು. ಇದೀಗ ಕೇಂದ್ರ ಸರ್ಕಾರ, ಸಚಿವ ಜೋಶಿ ಅವರ ಮನವಿಗೆ ಸ್ಪಂದಿಸಿದ್ದು, ಕಲ್ಯಾಣ ಕರ್ನಾಟಕದ ಮಾರ್ಗವಾಗಿ ಬೆಂಗಳೂರು-ಮುಂಬೈ ಮಧ್ಯೆ ಹೊಸ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಅನುಮೋದನೆ ನೀಡಿದೆ. ಬೆಂಗಳೂರಿನಿಂದ ಕರ್ನಾಟಕದ ಮಧ್ಯಭಾಗವಾದ ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮಾರ್ಗದ ಮೂಲಕ ವಾಣಿಜ್ಯ ನಗರಿ ಮುಂಬೈಗೆ ಬೆಂಗಳೂರು-ಮುಂಬೈ ಸೂಪರ್ ಫಾಸ್ಟ್ ರೈಲು ಕಲ್ಪಿಸುವಂತೆ ಸಚಿವ ಪ್ರಲ್ಹಾದ ಜೋಶಿ ಕೇಂದ್ರದ ಗಮನ ಸೆಳೆದಿದ್ದರು.

ಶೀಘ್ರವೇ ಈ ಸೂಪರ್ ಫಾಸ್ಟ್ ರೈಲು ಸಂಚಾರ ಪ್ರಾರಂಭಿಸಿ, ನಂತರದ ದಿನಗಳಲ್ಲಿ ಅದನ್ನು ವಂದೇ ಭಾರತ್ ಸ್ಲೀಪರ್ ರೈಲು ಆಗಿ ಬದಲಾಯಿಸುವ ಜೋಶಿ ಅವರ ಪ್ರಸ್ತಾವನೆಗೆ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಮನ್ನಣೆ ನೀಡಿದ್ದಾರೆ.

ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ: ರಾಜ್ಯದ ಅಭಿವೃದ್ಧಿ ಜತೆ ಕಲ್ಯಾಣ ಕರ್ನಾಟಕ ಭಾಗಕ್ಕೂ ಕೇಂದ್ರ ಸರ್ಕಾರ ಆದ್ಯತೆ ನೀಡುತ್ತಿದ್ದು, ಇದರಿಂದ ರಾಜ್ಯದಲ್ಲಿನ ವಾಣಿಜ್ಯ ಚಟುವಟಿಕೆಗಳ ಜೊತೆಗೆ ಉತ್ತಮ ಸಂಚಾರ ಸೌಲಭ್ಯವನ್ನೂ ಈ ನೂತನ ವಂದೇ ಭಾರತ್ ರೈಲು ಬಲವರ್ಧಿಸಲಿದೆ ಎಂದಿರುವ ಸಚಿವ ಪ್ರಲ್ಹಾದ ಜೋಶಿ, ಪ್ರಧಾನಿ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇರಾನ್ ಅಮೇರಿಕಾ ಸಂಧಾನ ವಿಫಲ
– ಪ್ರಮುಖ ವರದಿ

-ಅಂತೂ ಎಂದಿನಂತೆ ಈ ಬಾರಿಯೂ ಪಾಕಿಸ್ತಾನದವರು ವಿಫಲರಾಗುವುದರಲ್ಲಿ ಸಫಲರಾದರು!

ದಿನ ಭವಿಷ್ಯ

ಮೇಷ ಕಚೇರಿಯಲ್ಲಿ ಹೆಚ್ಚು ಹೊಣೆ. ಇಂದಿನ ಬೆಳವಣಿಗೆ ಒತ್ತಡ ಹೆಚ್ಚಿಸಲಿದೆ. ಆತ್ಮೀಯರ ಜತೆ ಒಡನಾಟದಿಂದ ತುಸು ನೆಮ್ಮದಿ.

ವೃಷಭ ಗಮನವಿಟ್ಟು ಕೆಲಸ ಮಾಡಿದರೆ ಮಾತ್ರ ಗುರಿ ಸಾಧಿಸಬಹುದು. ಇದನ್ನು ಅರಿಯಿರಿ. ಬೇಕಾಬಿಟ್ಟಿ ಧೋರಣೆ ತ್ಯಜಿಸಿ. ಕೆಲ ಅಭ್ಯಾಸ ಬಿಟ್ಟುಬಿಡಿ.

ಮಿಥುನ ದೇಹಾರೋಗ್ಯ ಕಾಪಾಡಲು ಆದ್ಯತೆ ಕೊಡಿ. ದಂಪತಿ ಮಧ್ಯೆ ವಾಗ್ವಾದ ಸಂಭವ. ಒಬ್ಬರು ಮೌನ ತಾಳುವುದು ಉತ್ತಮ. ಆರ್ಥಿಕ ಒತ್ತಡ.

ಕಟಕ ನಿಮ್ಮ ಸುತ್ತಲಿನ ಪರಿಸ್ಥಿತಿ, ವ್ಯಕ್ತಿಗಳ ಜತೆ ಹೊಂದಿಕೊಳ್ಳಲು ಕಷ್ಟ ಪಡುವಿರಿ. ಮನೆಯವರ ಮಾತನ್ನು ವಿರೋಧಿಸಲು ಹೋಗಬೇಡಿ.

ಸಿಂಹ ಬದಲಾವಣೆಗೆ ಅಂಜಬೇಡಿ. ಅದುವೇ ನಿಮ್ಮ ಪ್ರಗತಿಗೆ ದಾರಿ. ಸುಮ್ಮನೇ ಕೂರುವುದು ಫಲ ನೀಡದು. ಮನೆ ಮಂದಿಯ ಸಹಕಾರ.

ಕನ್ಯಾ ಪ್ರಭಾವಿ ವ್ಯಕ್ತಿಗಳ ಸಂಪರ್ಕ. ಬಯಸಿದ ಕಾರ್ಯ ಸಂಪನ್ನ. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಲು ಹೋಗಬೇಡಿ.

ತುಲಾ ಆತ್ಮೀಯರಿಂದ ಅಚ್ಚರಿಯ ಕೊಡುಗೆ. ಆರ್ಥಿಕವಾಗಿ ತುಸು ಹಿನ್ನಡೆ. ಒತ್ತಡದ ಕಾರ್ಯದಿಂದ ದೂರವಿರಿ. ಆರೋಗ್ಯ ಸುಸ್ಥಿರ.

ವೃಶ್ಚಿಕ ಉದ್ಯೋಗ ಅರಸುವವರಿಗೆ ಶುಭ ಸುದ್ದಿ. ವಿವಾಹ ಭಾಗ್ಯ ಕೂಡಿಬರಬಹುದು. ಆರ್ಥಿಕವಾಗಿ ಹಿನ್ನಡೆ ಕಾಣುವಿರಿ.

ಧನು ಆಹಾರ ಸೇವನೆ ಹಿತಮಿತವಾಗಿರಲಿ. ಆರೋಗ್ಯಕ್ಕೆ ಅದು ಅವಶ್ಯ. ಮನೆಯ ಬಿಕ್ಕಟ್ಟು ಬೇಗ ಪರಿಹಾರ ಕಾಣಲಿದೆ. ಹಠದ ಧೋರಣೆ ಬಿಡಿ.

ಮಕರ ವೃತ್ತಿ ಒತ್ತಡವು ಮನಶ್ಶಾಂತಿ ಕೆಡಿಸೀತು. ಧ್ಯಾನ ಸಹಕಾರಿ. ಹೊಸ ವ್ಯವಹಾರದಲ್ಲಿ ಈಗಲೇ ಹೂಡಿಕೆ ಮಾಡದಿರಿ. ಸ್ವಲ್ಪ ಕಾಲ ಕಾದುನೋಡಿ.

ಕುಂಭ ಬಾಕಿ ಇರುವ ಕಾರ್ಯ ಪೂರೈಸಲು ಇಂದು ಗಮನ ಕೊಡಿ. ಆದಾಯ ಹೆಚ್ಚಳದ ಸಂಕೇತ. ಆಪ್ತರ ಜತೆ ವಾಗ್ವಾದ ನಡೆದೀತು.

ಮೀನ ಮನೆಯವರ ಆರೋಗ್ಯ ಸಮಸ್ಯೆ ಚಿಂತೆಗೆ ಕಾರಣವಾದೀತು. ಕೆಲವು ವಿಚಾರದಲ್ಲಿ ಅತಿ ಭಾವುಕತೆ ತೋರುವಿರಿ. ದೃಢ ಮನಸ್ಸಿರಲಿ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 5,9,3,1

ಚಂದ್ರದ್ರೋಣ ಪರ್ವತದಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ, ಸೆಕ್ಯೂರಿಟಿ ಸಿಬ್ಬಂದಿ ಅಗತ್ಯ

ಸುರಕ್ಷತೆಗೆ ಆದ್ಯತೆ ನೀಡಲಿ

▸ ಸುರೇಶ್, ಚಿಕ್ಕಮಗಳೂರು

• **ಚಿಕ್ಕಮಗಳೂರು:** ಚಂದ್ರದ್ರೋಣ ಪರ್ವತ ತಪ್ಪಲಿನ ಮಾಣಿಕ್ಯಧಾರದ ಬಳಿ ನಡೆದ ಕೇರಳ ಮೂಲದ ಬಾಲಕಿ ಶ್ರೀನಂದಾ ನಾಪತ್ತೆ ಮತ್ತು ಸಾವಿನ ಪ್ರಕರಣವು ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಇಲಾಖೆ, ಜಿಲ್ಲಾಡಳಿತಕ್ಕೆ ಪಾಠವಾಗಬೇಕಿದೆ.



ಪ್ರವಾಸಿ ತಾಣಗಳಲ್ಲಿ ಇಂತಹ ಆಕಸ್ಮಿಕ ಅವಘಡಗಳು ಸಾಮಾನ್ಯ ಎಂದು ತಳ್ಳಿಹಾಕುವುದು ಸುಲಭ. ಆದರೆ ಶ್ರೀನಂದಾ ಪ್ರಕರಣದಲ್ಲಿ ಹಲವು ರೀತಿಯ ಮುನ್ನೆಚ್ಚರಿಕೆಯ ವಿಫಲತೆಗಳು ಎದ್ದು ಕಾಣುತ್ತವೆ. ಈ ಕಾರಣಕ್ಕೆ ಈ ಪ್ರಕರಣ ಇನ್ನೂ ನಿಗೂಢವಾಗಿಯೇ ಉಳಿದಿದೆ. ಘಟನೆ ನಡೆದ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಸೇರಿದಂತೆ ಸುತ್ತಲ ಪ್ರದೇಶದ ಮೇಲೆ ಕಣ್ಣಿಡಲು ಒಂದಷ್ಟು ಖಾಸಗಿ ಸೆಕ್ಯೂರಿಟಿಗಳು ಅಥವಾ ಸರ್ಕಾರಿ ಸಿಬ್ಬಂದಿಗಳನ್ನು ನೇಮಿಸಿದ್ದರೆ ಬಾಲಕಿ ಸಾವನ್ನು ತಡೆಯುವ ಸಾಧ್ಯವಿತ್ತೇನೋ? ಅಥವಾ ಪ್ರಕರಣವನ್ನು ಬೇಗನೇ ಪತ್ತೆ ಹಚ್ಚಲು ಸಾಧ್ಯವಿತ್ತು ಎನ್ನುವ ಅಭಿಪ್ರಾಯಗಳು ಈಗ ಪ್ರವಾಸಿಗರು ಹಾಗೂ ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿದೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ದೇಶ, ವಿದೇಶದ ಗಮನ ಸೆಳೆದಿರುವ ಚಂದ್ರದ್ರೋಣ ಪರ್ವತ ಸಾಲಿನ ತಾಣಗಳಿಗೆ ಪ್ರತಿದಿನ ಸಹಸ್ರಾರು ಮಂದಿ ಭೇಟಿ ನೀಡುತ್ತಿದ್ದಾರೆ. ಇದರಿಂದ ಪ್ರವಾಸೋದ್ಯಮ ಹಾಗೂ ಆರ್ಥಿಕ ಚಟುವಟಿಕೆಗೆ ಉತ್ತೇಜನ ಸಿಕ್ಕಿದೆ. ಉದ್ಯೋಗ ಸೃಷ್ಟಿಯೂ ಆಗಿದೆ. ಹೀಗಿರುವಾಗ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ, ಕಾನೂನು ಪ್ರಕ್ರಿಯೆಗಳಿಗೆ ಸಹಕಾರಿ ಆಗುವಂತಹ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಳ್ಳಲೇ ಬೇಕಿದೆ.

ಪ್ರಮುಖವಾಗಿ ಹೆಚ್ಚು ಪ್ರವಾಸಿಗರ ದಟ್ಟಣೆ ಇರುವ ತಾಣಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವುದು, ಸೆಕ್ಯೂರಿಟಿ ಸಿಬ್ಬಂದಿಗಳನ್ನು ನೇಮಿಸುವುದು, ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿರುವ ಕುರಿತು ಹಾಗೂ ಅಪಾಯಕಾರಿ ಸ್ಥಳಗಳ ಕುರಿತು ಎಚ್ಚರಿಕೆ ಫಲಕಗಳನ್ನು ಅಳವಡಿಸುವುದು ಅಗತ್ಯವಿದೆ. ಇಂತಹ ಕ್ರಮದಿಂದ ಹೊರಗಿನಿಂದ ಬರುವ ಪ್ರವಾಸಿಗರಲ್ಲಿ ಸುರಕ್ಷಾ ಭಾವನೆ ಮೂಡಿಸಲು ಅನುಕೂಲವಾಗುತ್ತದೆ.

ದತ್ತಪೀಠದಲ್ಲಿ ಅಳವಡಿಸಿರುವಂತೆಯೇ ಮಾಣಿಕ್ಯಧಾರದ ವಾಹನ ನಿಲುಗಡೆ ಸ್ಥಳ, ವೀಕ್ಷಣಾ ಗೋಪುರ, ಸ್ನಾನಘಟ್ಟಗಳ ಬಳಿ ಕಡ್ಡಾಯವಾಗಿ ಸಿಸಿ ಕ್ಯಾಮರಾಗಳು ಹಾಗೂ ಸಿಬ್ಬಂದಿಗಳನ್ನು ನೇಮಿಸಬೇಕಿದೆ.

ಹೊನ್ನಮ್ಮನ ಹಳ್ಳದಲ್ಲಿ ಬೇಸಿಗೆ ದಿನಗಳಲ್ಲಿ ಭಾರೀ ಪ್ರಮಾಣದ ಹೂಳು ತುಂಬಿರುತ್ತದೆ. ನೀರಿನಲ್ಲಿ ಮಿಂದು ಮೈಮರೆಯುವ ಪ್ರವಾಸಿಗರು ಹಳ್ಳದಲ್ಲಿ ಕಾಲಿಟ್ಟರೆ ಸೆಳೆತಕ್ಕೊಳಗಾಗಿ ಸಾವು ಸಂಭವಿಸುವುದು ನಿಶ್ಚಿತ. ಈ ಕಾರಣಕ್ಕೆ ಇಲ್ಲಿ ಸಿಸಿ ಕ್ಯಾಮೆರಾಗಳ ಜೊತೆಗೆ ರೈಲಿಂಗ್ ಅಳವಡಿಸಬೇಕಿದೆ. ಹೊನ್ನಮ್ಮನಹಳ್ಳ ಮೇಲ್ಭಾಗದಲ್ಲಿರುವ ಶೋಲಾ ಅರಣ್ಯಕ್ಕೆ ಪ್ರವಾಸಿಗರು ಪ್ರವೇಶಿಸುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕಿದೆ.

ಜಟಿಲ ಸಮಸ್ಯೆ

ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿದ ಶ್ರೀನಂದಾ ಸಾವಿನ ಘಟನೆ ಕೇವಲ ಒಂದು ಆತ್ಮಹತ್ಯೆಯೋ, ಅಸಹಜ ಸಾವಿನ ಪ್ರಕರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಆಕೆ ನಾಪತ್ತೆಯಾದಾಗಿನಿಂದ ಶವವಾಗಿ ಪತ್ತೆಯಾಗುವವರೆಗೆ ನಾಲ್ಕು ದಿನಗಳ ಕಾಲ ಕುಟುಂಬ ಅನುಭವಿಸಿದ ಯಾತನೆ, ಪೊಲೀಸ್ ಇಲಾಖೆ, ಜಿಲ್ಲಾಡಳಿತ, ಶೋಧ ಕಾರ್ಯದಲ್ಲಿ ತೊಡಗಿಸಿಕೊಂಡ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ, ಸ್ವಯಂ ಸೇವಕರ ಪರಿಶ್ರಮ ಎಲ್ಲವನ್ನೂ ಹತ್ತಿರದಿಂದ ಕಂಡವರಿಗೆ ಪ್ರಕರಣದ ಗಂಭೀರತೆ, ಕಾನೂನು ಪ್ರಕ್ರಿಯೆಗಳನ್ನು ಪೂರೈಸುವ ಸವಾಲುಗಳು ಎಷ್ಟು ಜಟಿಲ ಎನ್ನುವುದು ಅರಿವಿಗೆ ಬರಲು ಸಾಧ್ಯ.

❝ ಗಿರಿ ಭಾಗದ ಪ್ರಮುಖ ತಾಣಗಳಲ್ಲಿ ಸಿಸಿ ಕ್ಯಾಮೆರ ಅಳವಡಿಸುವುದು, ಶೌಚಾಲಯ, ಸ್ವಚ್ಛತೆ ನಿರ್ವಹಣೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ವಿಚಾರ ಇಲಾಖೆ ಮುಂದಿದೆ. ಪಿಪಿಪಿ ಮಾದರಿಯಲ್ಲಿ ಇದನ್ನು ಅನುಷ್ಠಾನಕ್ಕೆ ತರುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ಸಿಕ್ಕಲ್ಲಿ ಕಾರ್ಯಗತಗೊಳಿಸುತ್ತೇವೆ.

■ **ಲೋಹಿತ್, ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ**

❝ ಪ್ರವಾಸಿಗರು ಹೆಚ್ಚು ಭೇಟಿ ನೀಡುವ ಗಿರಿ ಭಾಗದ ಪ್ರದೇಶಗಳನ್ನು ಡಾರ್ಕ್ ಸ್ಪಾಟ್‌ಗಳೆಂದು ಗುರುತಿಸಿ ಅಗತ್ಯವಿರುವ ಎಲ್ಲಾ ಸುರಕ್ಷಾ ಕ್ರಮ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕಿದೆ.

■ **ಕೆ.ಎಸ್.ಗುರುವೇಶ್, ಸಂಚಾಲಕರು, ಚಂದ್ರದ್ರೋಣ ಪರ್ವತ ತಪ್ಪಲು ಅಭಿವೃದ್ಧಿ ಸಮಿತಿ**

ಶತಮಾನದ ನಿರ್ಧಾರ

ಪುಟ ೧➡ '2023ರಲ್ಲಿ, ಹೊಸ ಸಂಸತ್ತಿನಲ್ಲಿ, ನಾವು ನಾರೀ ಶಕ್ತಿ ವಂದನ ಕಾಯ್ದೆಯ ರೂಪದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದೇವೆ... ನಮ್ಮ ರಾಷ್ಟ್ರದ ಅಭಿವೃದ್ಧಿ ಪ್ರಯಾಣದಲ್ಲಿ ಈ ನಿರ್ಣಾಯಕ ಮೈಲಿಗಲ್ಲುಗಳ ಮಧ್ಯೆ, ಭಾರತವು 21 ನೇ ಶತಮಾನದ ಅತ್ಯಂತ ಮಹತ್ವದ ನಿರ್ಧಾರಗಳಲ್ಲಿ ಒಂದಾದ 'ನಾರೀ ಶಕ್ತಿ'ಗೆ ಮೀಸಲಾದ ನಿರ್ಧಾರವನ್ನು ತೆಗೆದುಕೊಳ್ಳುವ ಅಂಚಿನಲ್ಲಿದೆ.' ಈ ನಿರ್ಧಾರವು ನಮ್ಮ ಕಾಲದ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಒಂದಾಗಿರುತ್ತದೆ ಎಂದು ನಾನು ಬಹಳ ಜವಾಬ್ದಾರಿಯಿಂದ ಹೇಳಬಲ್ಲೆ. ಇದು ಮಹಿಳೆಯರ ಸಬಲೀಕರಣಕ್ಕೆ ಮೀಸಲಾದ ನಿರ್ಧಾರ, ಸ್ತ್ರೀತ್ವದ ಶಕ್ತಿ ಮತ್ತು ಪೂಜ್ಯತೆಗೆ ನಿಜವಾದ ಗೌರವವಾಗಿರಲಿದೆ ಎಂದು ಅವರು 'ನಾರೀ ಶಕ್ತಿ ವಂದನ ಸಮ್ಮೇಳನ'ದಲ್ಲಿ ನುಡಿದರು.

2023ರ ಸೆಪ್ಟೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ 'ನಾರೀ ಶಕ್ತಿ ವಂದನ್ ಅಧಿನಿಯಮ' ಮಹಿಳಾ ಮೀಸಲು ಕಾಯ್ದೆಯೆಂದೇ ಕರೆಯಲ್ಪಟ್ಟಿದ್ದು, ಇದರಂತೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು (ಶೇ.33)ಸ್ಥಾನಗಳನ್ನು ಮೀಸಲಿರಿಸಲಾಗುವುದು. ಈ ಹೊಸ ಮಸೂದೆ ಮಂಡನೆಯಾಗದೆ ಇರುತ್ತಿದ್ದಲ್ಲಿ, ಈಗ ಇರುವ ಕಾನೂನಿನಂತೆ ಮಹಿಳಾ ಮೀಸಲು ಮಸೂದೆ 2034ರೊಳಗೆ ಅನುಷ್ಠಾನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ 2027ರ ಜನಗಣತಿಯ ಬಳಿಕ ಕ್ಷೇತ್ರ ವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಾದುದರಿಂದ ಈ ವಿಳಂಬ ಕಾಣಬೇಕಾಗಿ ಬರುತ್ತಿತ್ತು. ಆದ್ದರಿಂದ 2029ರ ಲೋಕಸಭಾ ಚುನಾವಣೆಯಲ್ಲೇ ಇದು ಜಾರಿಗೆ ಬರಬೇಕಾಗಿದ್ದಲ್ಲಿ ಈ ಶಾಸನಕ್ಕೆ ತಿದ್ದುಪಡಿಗಳನ್ನು ತರಬೇಕಾದ ಅಗತ್ಯವಿದ್ದು, ಇದಕ್ಕಾಗಿ ಕೇಂದ್ರದ ನರೇಂದ್ರ ಮೋದಿ ಸರಕಾರ ವಿಶೇಷ ಅಧಿವೇಶನ ಕರೆದಿದೆ. ಈ ತಿದ್ದುಪಡಿಗಳು ಅಂಗೀಕಾರವಾದಲ್ಲಿ, ಲೋಕಸಭಾ ಸ್ಥಾನಗಳ ಸಂಖ್ಯೆ 816ಕ್ಕೇರಲಿದ್ದು, ಮಹಿಳೆಯರಿಗೆ 273 ಸ್ಥಾನಗಳ ಮೀಸಲು ಲಭಿಸಲಿದೆ. ಈ ಮೂಲಕ ಮಹಿಳೆಯರ ಪಾಲ್ಗೊಳ್ಳುವಿಕೆಯು ದೇಶದ ಪ್ರಜಾತಂತ್ರವನ್ನು ಬಲಗೊಳಿಸಲಿದೆ ಎಂದು ಮೋದಿಯವರು ತಿಳಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷ ಮಹಿಳೆಯರು

ಪುಟ ೧➡ ಇದರಿಂದ ಜಲ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆಯಂತಹ ವಿಷಯಗಳಲ್ಲಿ ಹೆಚ್ಚು ಸಮರ್ಪಣಾ ಕಾರ್ಯಗಳಿಗೆ ಕಾರಣವಾಗಿದೆ. ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಜಲಜೀವನ್ ಮಿಷನ್‌ನ ಯಶಸ್ಸು ಸಾಕ್ಷಿಯಾಗಿದ್ದು, ಪಂಚಾಯತ್ ಮಟ್ಟದಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಪಂಚಾಯತ್ ಮಟ್ಟದಲ್ಲಿನ ಅವರ ವರ್ಷಗಳ ಅನುಭವ ಅವರನ್ನು ಇನ್ನಷ್ಟು ದೊಡ್ಡ ಪಾತ್ರಗಳಿಗೆ ಸನ್ನದ್ಧರಾಗುವಂತೆ ಮಾಡಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗೆ ಬೇಟಿ ಬಚಾವೋ –ಬೇಟಿ ಪಢಾವೋ ಅಭಿಯಾನ, ಗರ್ಭಿಣಿಯರಿಗೆ ಸೂಕ್ತ ಪೌಷ್ಟಿಕತೆ ಕಲ್ಪಿಸಲು ಮಾತೃವಂದನ್ ಯೋಜನೆಯಡಿ 5000 ರೂ.ಗಳ ಹಣಕಾಸು ನೆರವು, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಲ ನೀಡಲು ಹೆಚ್ಚಿನ ಬಡ್ಡಿಯನ್ನು ಒದಗಿಸುವ ಸುಕನ್ಯಾ ಸಮೃದ್ಧಿ ಯೋಜನೆ ಸೇರಿದಂತೆ ಹುಟ್ಟಿನಿಂದ ಕೊನೆಯವರೆಗೆ ವಿವಿಧಯೋಜನೆಗಳ ಮೂಲಕ ಸಹೋದರಿಯರು ಮತ್ತು ಪುತ್ರಿಯರ ಸೇವೆಗೆ ತಮ್ಮ ಸರಕಾರ ಸಿದ್ಧವಿರುವುದನ್ನು ಮೋದಿಯವರು ಎತ್ತಿತೋರಿದರು.

ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಉತ್ತಮ

ಪುಟ ೧➡ ಕಳೆದ ವರ್ಷ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ 72,300 ಕೋಟಿ ರೂ. ಈ ವರ್ಷ 84 ಸಾವಿರ ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇವೆ. ಇಷ್ಟಾದರೂ ಬಿಜೆಪಿಯವರು ಸುಳ್ಳು ಹೇಳುತ್ತಾರೆ. ಸುಳ್ಳೇ ಅವರ ಮನೆ ದೇವರು ಎಂದು ದೂರಿದರು.

ಕೇಂದ್ರ ಸರ್ಕಾರ 2014 ಮಾರ್ಚ್‌ವರೆಗೆ ಇದ್ದ ಸಾಲ ಒಟ್ಟು 53,11,000 ಕೋಟಿ ರೂ. ಆದರೆ ಈಗ ಅದು 218 ಲಕ್ಷ 18 ಸಾವಿರ ಕೋಟಿ ರೂ.ಗೆ ಏರಿಕೆ ಆಗಿದೆ. ನರೇಂದ್ರ ಮೋದಿ ಅವರು ಬಂದ ಮೇಲೆ 165 ಲಕ್ಷ 65 ಸಾವಿರ ಕೋಟಿ ರೂ.ಸಾಲ ಮಾಡಿದ್ದಾರೆ ಎಂದರು. ಫಿಸಿಕಲ್ ಡಿಫಿಸಿಟ್ ಜಿಡಿಪಿಯ ಶೇ.3ರ ಒಳಗೆ ಇರಬೇಕು. ನಮ್ಮದು ಶೇ.2.95ರಷ್ಟಿದೆ. ಸಾಲ ಜಿಡಿಪಿಯ ಶೇ.25 ರೊಳಗಿರಬೇಕು. ನಮ್ಮದು ಶೇ.24.95 ಇದೆ. ನಮ್ಮ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ ಎಂದರು.

ಕೇಂದ್ರದ ಫಿಸಿಕಲ್ ಡಿಫಿಸಿಟ್ ಶೇ.4.3 ಆಗಿದೆ. ಅವರಿಗಿಂತ ನಾವು ಆರ್ಥಿವಾಗಿ ಉತ್ತಮವಾಗಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಮೇಲೆ ಕರ್ನಾಟಕ ಸರ್ಕಾರ ಆರ್ಥಿಕ ದಿವಾಳಿ ಆಗಿದೆ ಎಂದರೆ ಅದು ಸುಳ್ಳಲ್ಲವೇ ಎಂದು ಪ್ರಶ್ನಿಸಿದರು.

ವಿಜಯೇಂದ್ರ ಎಂಬುವರಿದ್ದಾರೆ. ಬಿಜೆಪಿ ಅಧ್ಯಕ್ಷರು ಅವರು. ಶ್ವೇತಪತ್ರ ಮಂಡಿಸಿ ಅಂತಾನೆ. ಬಜೆಟ್ಟನ್ನು ಓದುವುದಿಲ್ಲ, ಬಜೆಟ್ ಮೇಲೆ ಚರ್ಚೆ ಮಾಡುವುದಿಲ್ಲ. ಇದೆಲ್ಲ ಪ್ರಚಾರಕ್ಕಾಗಿ ಆಡುವ ಮಾತು ಎಂದು ವಾಗ್ದಾಳಿ ನಡೆಸಿದರು.

15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ 5,495 ಕೋಟಿ ರೂ. ಅನುದಾನವನ್ನು ಕೇಂದ್ರ ಕರ್ನಾಟಕಕ್ಕೆ ಕೊಟ್ಟಿಲ್ಲ. ಬೆಂಗಳೂರು ಕೆರೆಗಳ ಅಭಿವೃದ್ಧಿಗೆ 3000 ಕೋಟಿ, ಬೆಂಗಳೂರು ವರ್ತುಲ ರಸ್ತೆಗೆ 3000 ಕೋಟಿ ರೂ. ಸೇರಿ 11,495 ಕೋಟಿ ರೂ. ಕೇಂದ್ರದಿಂದ ಕೊಡಬೇಕಾಗಿತ್ತು. ಆದರೆ ಒಂದು ರೂಪಾಯಿ ಕೊಡಲಿಲ್ಲ. ಇದು ಕನ್ನಡಿಗರಿಗೆ ಬಗೆದ ದ್ರೋಹ ಎಂದರು.

ಕೇಂದ್ರದವರು ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀವಿ ಎಂದರು ಕೊಟ್ಟಿಲ್ಲ, ಕೇಂದ್ರದ ಕಪ್ಪುಹಣವನ್ನೆಲ್ಲ ತಂದು ಪ್ರತಿ ಕುಟುಂಬಕ್ಕೆ 15 ಲಕ್ಷ ಖಾತೆಗೆ ಹಾಕ್ತೀವಿ ಎಂದರು, ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ ಅಂದರು, ಅಚ್ಛೇದಿನ್ ಬರುತ್ತದೆ ಎಂದರು ಬಂದಿದೆಯಾ ಎಂದು ಪ್ರಶ್ನಿಸಿದರು.

ಶಾಸಕ ಟಿ.ಡಿ.ರಾಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್, ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಬಾಲಕೃಷ್ಣ ಕೆಎಸ್‌ಟಿಡಿಸಿ ಅಧ್ಯಕ್ಷ ಸರೋವರ ಶ್ರೀನಿವಾಸ್, ಶಾಸಕರುಗಳಾದ ಕೆ.ಎಸ್.ಆನಂದ್, ಕೆ.ಎಚ್. ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ ಭದ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಂಶುಮಂತ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಜಿಲ್ಲಾಧಿಕಾರಿ ಎನ್.ಎಂ. ನಾಗರಾಜು, ಜಿ.ಪಂ. ಸಿಇಒ ಎಚ್.ಎಸ್.ಕೀರ್ತನಾ, ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಇತರರು ಇದ್ದರು.

ನುಡಿದಂತೆ ನಡೆದ ಸರ್ಕಾರ

ಪುಟ ೧➡ ಇದಾದ ನಂತರ 4 ಬಜೆಟ್ ಮಂಡಿಸಿದರು. ಆದರೆ ಇಂದಿನ ವರೆಗೆ ನಯಾಪೈಸೆ ಕೊಡಲಿಲ್ಲ. ಇದು ನ್ಯಾಯವೇ. ಕೊಟ್ಟ ಮಾತಿನಂತೆ ನಡೆದುಕೊಂಡಿರುವ ಪಕ್ಷ ಅಥವಾ ಸರ್ಕಾರ ಯಾವುದಾದರೂ ಇದ್ದರೆ ಕಾಂಗ್ರೆಸ್ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶಿಕ್ಷಕರ ವರ್ಗಾವಣೆ ಭಾರೀ ಬದಲಾವಣೆ

ಪುಟ ೧➡ ಆದರಂತೆ ಕರ್ನಾಟಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುವ ವಿವಿಧ ವರ್ಗದ ಶಿಕ್ಷಕರ ವರ್ಗಾವಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ.

ಶಿಕ್ಷಣ ಇಲಾಖೆಯು ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂಶ್ರೀ ಎಂದು ಶಾಲೆಗಳಲ್ಲಿ ಮೂರು ವರ್ಗಗಳನ್ನಾಗಿ ವಿಂಗಡಿಸಿದೆ. ಇಲ್ಲಿರುವ ಶಿಕ್ಷಕರು ಕನಿಷ್ಠ 12 ವರ್ಷ ಒಂದೇ ಕಡೆ ಕರ್ತವ್ಯ ನಿರ್ವಹಿಸಿರಬೇಕು. ಬಳಿಕ ಅವರಿಗೆ ಕೌನ್ಸೆಲಿಂಗ್ ನಡೆಸುವ ಮೂಲಕ ವರ್ಗಾವಣೆಗೆ ಅವಕಾಶ ದೊರೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನೇಮಕಕ್ಕೆ ನಿರ್ಬಂಧ ವಿಧಿಸಿದೆ. ತುರ್ತು ಸೇವಾ ಗುಂಪು ಎಂದು ಪರಿಗಣಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಮಾಹಿತಿ ನೀಡಿ ರಾಜ್ಯ ಪತ್ರ ಹೊರಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರವು ಇತ್ತೀಚೆಗೆ ವಿಧಾನಸಭೆಯಲ್ಲಿ ನಡೆದ ಅಧಿವೇಶನ ವೇಳೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ– 2026ರ ಮಸೂದೆ ಮಂಡಿಸಿತ್ತು. ಅದಕ್ಕೆ ರಾಜ್ಯಪಾಲರ ಅಂತಿಮ ಅಂಕಿತ ಬಾಕಿ ಇತ್ತು. ಅದೀಗ ನೆರವೇರಿದ್ದು, ವಿಧೇಯಕ ಜಾರಿಗೊಳಿಸಲಾಗಿದೆ.

ಅಮೆರಿಕ ಬೆದರಿಕೆ ಇರಾನ್ ಎಚ್ಚರಿಕೆ

ಪುಟ ೧➡ ಆದರೆ, ಇರಾನ್ ಹೊರತುಪಡಿಸಿ ಇತರ ದೇಶಗಳ ಬಂದರುಗಳ ನಡುವೆ ಸಂಚರಿಸುವ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸಂಚಾರಕ್ಕೆ ಅವಕಾಶ ಇರುತ್ತದೆ. ಇದು ಟ್ರಂಪ್ ಮೊದಲು ನೀಡಿದ್ದ ಸಂಪೂರ್ಣ ನಿರ್ಬಂಧದ ಬೆದರಿಕೆಗೆ ಹೋಲಿಸಿದರೆ ಸ್ವಲ್ಪ ಸಡಿಲ ಕ್ರಮವಾಗಿದೆ.

ಹಡಗು ಸಂಚಾರ ಕುಂಠಿತ: ಈ ನಿರ್ಬಂಧದ ಘೋಷಣೆಯ ನಂತರ ಹಡಗು ಸಂಚಾರ ಕಡಿಮೆಯಾಗಿದೆ. ಯುದ್ಧ ವಿರಾಮದ ನಂತರ ಮತ್ತೆ ಆರಂಭವಾದ ಸೀಮಿತ ಸಂಚಾರವೂ ಈಗ ಸ್ಥಗಿತಗೊಂಡಿದೆ. ತೈಲ ಬೆಲೆಗಳ ಮೇಲೆ ಇದರ ಪರಿಣಾಮ ತಕ್ಷಣವೇ ಗೋಚರಿಸಿದೆ. ಅಮೆರಿಕ ಕಚ್ಚಾ ತೈಲದ ಬೆಲೆ ಶೇ.8 ಏರಿಕೆಯಾಗಿದ್ದು, ಬ್ರೆಂಟ್ ಕಚ್ಚಾ ತೈಲ 7% ಏರಿಕೆಯಾಗಿದೆ.

ಚರ್ಚೆ ವಿಫಲ, ಉದ್ವಿಗ್ನತೆ ಹೆಚ್ಚಳ: ಪಾಕಿಸ್ತಾನದಲ್ಲಿ ನಡೆದ ಅಮೆರಿಕ-ಇರಾನ್ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡವು. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಹೇಳುವಂತೆ, ಇರಾನ್ ಅಣ್ವಸ್ತ್ರ ಅಭಿವೃದ್ಧಿಯನ್ನು ನಿಲ್ಲಿಸಲು ಒಪ್ಪದ ಕಾರಣ ಮಾತುಕತೆ ಸ್ಥಗಿತಗೊಂಡಿತು. ಇರಾನ್ ತನ್ನ ಮೇಲೆ ನಡೆದ ದಾಳಿಗಳ ನಷ್ಟ ಪರಿಹಾರ ಮತ್ತು ಸ್ಥಗಿತಗೊಂಡ ಆಸ್ತಿಗಳ ಬಿಡುಗಡೆ ಬೇಡಿಕೆ ಇಟ್ಟಿದೆ. ಇರಾನ್‌ನ ಹಿರಿಯ ಅಧಿಕಾರಿಗಳು ಕಠಿಣ ಪ್ರತಿಕ್ರಿಯೆ ನೀಡಿದ್ದಾರೆ. ನೀವು ಯುದ್ಧ ಮಾಡಿದರೆ ನಾವು ಕೂಡ ಯುದ್ಧ ಮಾಡುತ್ತೇವೆ ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಎಚ್ಚರಿಸಿದ್ದಾರೆ.

ಶಾಸಕರಿಂದ ವರಿಷ್ಠರ ಭೇಟಿ ತಪ್ಪಲ್ಲ

ಪುಟ ೧➡ ಪಕ್ಷಕ್ಕೆ ಗೌರವ ನೀಡಬೇಕು. ಮಾಧ್ಯಮಗಳ ಮುಂದೆ ಪಕ್ಷದ ಗೌರವವನ್ನು ಹಾಳು ಮಾಡಬಾರದು. ಮುಖ್ಯಮಂತ್ರಿಗಳೂ ಈಗಾಗಲೇ ಈ ವಿಚಾರದ ಬಗ್ಗೆ ಹೇಳಿದ್ದಾರೆ. ಮುಂದೆ ಎಲ್ಲರ ಭವಿಷ್ಯ ಪಕ್ಷದಲ್ಲಿದೆಯೇ ಹೊರತು ಮಾಧ್ಯಮಗಳಲ್ಲಿ ಅಲ್ಲ ಎಂದರು.

ಶಾಸಕರು ದೆಹಲಿಗೆ ತೆರಳುವ ಮುಂಚೆ ಒಂದಷ್ಟು ಜನ ನನ್ನ ಜತೆ ಮಾತನಾಡಿದ್ದಾರೆ. ಹೈಕಮಾಂಡ್ ಬಳಿ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ ಹಾಗೂ ಎರಡನೇ ಬಾರಿ ಗೆದ್ದಿರುವವರೂ ಮಂತ್ರಿಗಳಾಗಬಹುದು. ಈ ಹಿಂದೆ ಈ ರೀತಿ ನಡೆದಿದೆ. ಆದರೆ ಇದು ಸಮಯವಲ್ಲ. ಇನ್ನೂ ಚುನಾವಣೆಗಳು ನಡೆಯುತ್ತಿವೆ. ಒಂದಷ್ಟು ಜನ ತಮಿಳುನಾಡಿಗೆ ತೆರಳಿದ್ದಾರೆ. ಮೊದಲು ಚುನಾವಣೆ ಆಗಲಿ, ನಂತರ ಇದರ ಬಗ್ಗೆ ಯೋಚಿಸೋಣ ಎಂದು ಶಿವಕುಮಾರ್ ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ಪಕ್ಷದಿಂದ ತಮಿಳುನಾಡಿಗೆ ತೆರಳುವಂತೆ ಸೂಚನೆ ನೀಡಿದ್ದರು. ಅಲ್ಲಿಗೆ ಹೋಗಿ ಬಂದಿದ್ದೇನೆ. ಮತ್ತೆ ತೆರಳಬೇಕಾಗಿದೆ. ಆ ಬಗ್ಗೆ ಎಐಸಿಸಿ ಅಧ್ಯಕ್ಷರಿಗೆ ವರದಿ ನೀಡಬೇಕಿತ್ತು. ಭೇಟಿ ಮಾಡಿ ವರದಿ ನೀಡಿದ್ದೇನೆ ಎಂದು ತಿಳಿಸಿದರು.

ಸಚಿವರ ಕಾರ್ಯವೈಖರಿ ಬಗ್ಗೆ ವರದಿ ಕೇಳಿದ್ದೇವೆ: ಸಚಿವ ಸಂಪುಟ ಸದಸ್ಯರ ಕಾರ್ಯವೈಖರಿ ಬಗ್ಗೆ ಅವರ ಇಲಾಖೆಗಳ ಸಾಧನೆಗಳ ಬಗ್ಗೆ ವಿಸ್ತೃತವಾದ ವರದಿಯನ್ನು ಕೇಳಿದ್ದೇವೆ. ಮೊದಲು ಆ ವರದಿ ಬರಲಿ, ಬಳಿಕ ಸಚಿವ ಸಂಪುಟ ಪುನರ್ ರಚನೆ ಆಗಬೇಕೆ? ಬೇಡವೆ ಎಂಬುದರ ಬಗ್ಗೆ ಚರ್ಚಿಸೋಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅಗತ್ಯವಾದರೆ ಸಚಿವ ಸ್ಥಾನಕ್ಕೆ ರಾಜೀನಾಮೆ: ಪರಮೇಶ್ವರ್

ಪುಟ ೧➡ ಹೊಸಬರಿಗೆ ಅವಕಾಶ ಮಾಡಿಕೊಡಲು ಸಂಪುಟದಲ್ಲಿರುವ ಹಿರಿಯರೂ ಕೂಡ ರಾಜೀನಾಮೆ ನೀಡಬೇಕೆಂದಾದರೆ, ನಾನಾಗಲೀ, ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಎಚ್. ಕೆ.ಪಾಟೀಲ್ ಸೇರಿದಂತೆ ಹಿರಿಯ ಸಚಿವರು ಹೈಕಮಾಂಡ್ ನಿರ್ಧಾರವನ್ನು ಒಪ್ಪದೇ ಪ್ರಶ್ನೆ ಮಾಡಲು ಅವಕಾಶ ಇಲ್ಲ ಎಂದು ಪರಮೇಶ್ವರ್ ಹೇಳಿದರು. ರಾಜಕೀಯ ಒತ್ತಡಕ್ಕೆ ಮಣಿದು ಸಚಿವ ಸ್ಥಾನದಿಂದ ನಮ್ಮನ್ನು ಬದಲಾವಣೆ ಮಾಡಿದರೆ, ಅದನ್ನು ಬೇಡ ಎನ್ನಲು ಸಾಧ್ಯವಿಲ್ಲ. ಅನನುಭವಿಗಳಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ ಎಂಬುದು ನಮಗೆ ಸಂಬಂಧಪಡದ ವಿಚಾರ. ಎರಡು, ಮೂರು ಬಾರಿ ಶಾಸಕರಾಗಿರುವವರಿಗೆ ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಇರುತ್ತದೆ. ಯಾವುದೇ ಖಾತೆಯನ್ನಾಗಲಿ ನಿಭಾಯಿಸುವ ಅನುಭವ ಸಹಜವಾಗಿರುತ್ತದೆ ಎಂದರು.

ಜಯದೇವ, ಕಿದ್ವಾಯಿಗೆ ಸ್ಥಾನ

ಪುಟ ೧➡ ಆಯಾ ಹೊರರೋಗಿಗಳ ವಿಭಾಗಗಳಲ್ಲಿ (ಒಪಿಡಿ) ಚಿಕಿತ್ಸೆ ಪಡೆಯಲು ಅನುಮೋದನೆ ಪ್ರಕ್ರಿಯೆ ನಡೆಯುತ್ತಿದೆ.

ಜಯದೇವ, ಕಿದ್ವಾಯಿ ಚಿಕಿತ್ಸೆಯಲ್ಲಿ ಮುಂಚೂಣಿ: 2025-26ನೇ ಸಾಲಿನಲ್ಲಿ ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ ಯೋಜನೆ ಅಡಿ ದ್ವಿತೀಯ, ತೃತೀಯ ಹಾಗೂ ತುರ್ತು ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಅಧಿಕ ಮಂದಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ ಆಸ್ಪತ್ರೆಗಳ ಪಟ್ಟಿಯನ್ನು ವಿವಿಧ ವಿಭಾಗಗಳಲ್ಲಿ ಆರೋಗ್ಯ ಇಲಾಖೆ ಸಿದ್ಧಪಡಿಸಿದೆ. ಅಗ್ರ 12 ಆಸ್ಪತ್ರೆಗಳ ಪೈಕಿ ಜಯದೇವ ಆಸ್ಪತ್ರೆ 18,374, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ 16,936 ರೋಗಿಗಳಿಗೆ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಚಿಕಿತ್ಸೆ ನೀಡಿ ಮುಂಚೂಣಿಯಲ್ಲಿದೆ.

ದೇಶದ ಅತ್ಯುನ್ನತ ಆಸ್ಪತ್ರೆ ಕಿದ್ವಾಯಿ

ಪುಟ ೧➡ ದೇಶದಲ್ಲಿ ಕ್ಯಾನ್ಸರ್ ಆರೈಕೆಯಲ್ಲಿ ಸರ್ಕಾರಿ ಆಸ್ಪತ್ರೆಗಳ ಪೈಕಿ ಕಿದ್ವಾಯಿ ಮೂರನೇ ಸ್ಥಾನ ಪಡೆದಿದೆ. ಖಾಸಗಿ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದರೆ ಕಿದ್ವಾಯಿ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ ಅತ್ಯುತ್ತಮ ಎಂದು ಸಾಬೀತಾಗಿದೆ.

❝ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರೋಗಿಗಳಿಗೆ ಶೀಘ್ರಗತಿಯಲ್ಲಿ ಚಿಕಿತ್ಸೆ ದೊರೆಯಲು ರಾಜ್ಯಾದ್ಯಂತ ಕಿದ್ವಾಯಿ ಫೆರಿಫೆರೆಲ್ ಕ್ಯಾನ್ಸರ್ ಘಟಕಗಳನ್ನು ತೆರೆಯಲಾಗುತ್ತಿದೆ.

■ **ಡಾ.ಟಿ.ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ**

ಪಟ್ಟಿಯಲ್ಲಿಲ್ಲದಿದ್ದರೆ ಮತ ಹಕ್ಕಿಲ್ಲ

ಪುಟ ೧➡ ಈ ಅರ್ಜಿಯನ್ನು ಪೀಠ ಅಕಾಲಿಕ ಎಂದು ಪರಿಗಣಿಸಿದೆ.ಪೀಠ ತನ್ನ ಆದೇಶದಲ್ಲಿ, 'ಅರ್ಜಿದಾರರು ಈಗಾಗಲೇ ಅಪೀಲಿ ನ್ಯಾಯಮಂಡಳಿಗಳ ಮೊರೆ ಹೋಗಿರುವುದರಿಂದ, ಅವರ ಆತಂಕಗಳು ಈ ಹಂತದಲ್ಲಿ ಅಕಾಲಿಕವಾಗಿವೆ. ಈ ಅರ್ಜಿಯನ್ನು ನಾವು ಸ್ವೀಕರಿಸಿದರೆ ಅನಾವಶ್ಯಕ ಪರಿಣಾಮಗಳು ಉಂಟಾಗಬಹುದು ಎಂದು ಹೇಳಿ, ಪ್ರಕರಣದ ತಾತ್ವಿಕ ಅಂಶಗಳ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಸ್ಪಷ್ಟಪಡಿಸಿದೆ.

ಎಸ್‌ಐಆರ್ ಪ್ರಕ್ರಿಯೆಯ ನಂತರ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದ ಸುಮಾರು 90 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂದು ವರದಿಯಾಗಿದೆ. ಇದರಲ್ಲಿ ಸುಮಾರು 30 ರಿಂದ 34 ಲಕ್ಷ ಅರ್ಜಿಗಳು ವಿವಿಧ ಮೇಲ್ಮನವಿ ನ್ಯಾಯಮಂಡಳಿಗಳ ಮುಂದೆ ಬಾಕಿ ಇವೆ. ಈ ಪ್ರಕರಣಗಳನ್ನು ಪರಿಶೀಲಿಸಲು ಕಲ್ಕತ್ತಾ ಹೈಕೋರ್ಟ್ ನೇತೃತ್ವದಲ್ಲಿ ನಿವೃತ್ತ ನ್ಯಾಯಮೂರ್ತಿಗಳಿಂದ 19 ನ್ಯಾಯಮಂಡಳಿಗಳನ್ನು ರಚಿಸಲಾಗಿದೆ.ಮತದಾರರ ಪರವಾಗಿ ಸಲ್ಲಿಸಲಾದ ಅರ್ಜಿಯಲ್ಲಿ, ಭಾರತದ ಚುನಾವಣಾ ಆಯೋಗ ಕಾನೂನುಬದ್ಧ ಕ್ರಮಗಳನ್ನು ಪಾಲಿಸದೆ ತುರ್ತುವಾಗಿ ಹೆಸರುಗಳನ್ನು ಅಳಿಸುತ್ತಿದೆ ಮತ್ತು ಸಲ್ಲಿಸಲಾದ ಮನವಿಗಳನ್ನು ಸಮಯಕ್ಕೆ ಸರಿಯಾಗಿ ವಿಚಾರಣೆ ಮಾಡುತ್ತಿಲ್ಲ ಎಂದು ಆರೋಪಿಸಲಾಗಿದೆ. ಚುನಾವಣಾ ಆಯೋಗದ ಪರ ವಕೀಲರು, ಪ್ರತಿ ನ್ಯಾಯಮಂಡಳಿಯೂ ಲಕ್ಷಾಂತರ ಮೇಲ್ಮನವಿ ಅರ್ಜಿಗಳನ್ನು ಎದುರಿಸುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಅರ್ಜಿದಾರರ ವಕೀಲರು, ಅಗತ್ಯ ದಾಖಲೆಗಳನ್ನು ಸಲ್ಲಿಸುವಲ್ಲಿ ಆಯೋಗ ವಿಫಲವಾಗಿದೆ ಮತ್ತು ಮತದಾರರ ಪಟ್ಟಿಯ ಫ್ರೀಜಿಂಗ್ ದಿನಾಂಕವನ್ನು ವಿಸ್ತರಿಸಬೇಕೆಂದು ವಾದಿಸಿದರು.

ವಿಚಾರಣೆಯ ವೇಳೆ ನ್ಯಾಯಮೂರ್ತಿ ಬಾಗ್ಚಿ, ಮತದಾನದ ಹಕ್ಕು ಕೇವಲ ಕಾನೂನುಬದ್ಧ ಹಕ್ಕು ಮಾತ್ರವಲ್ಲ, ಅದು ಪ್ರಜಾಪ್ರಭುತ್ವದ ಭಾವನಾತ್ಮಕ ಅಸ್ತಿತ್ವದ ಭಾಗವೂ ಆಗಿದೆ ಎಂದು ಹೇಳಿದರು. ಆದರೆ ನ್ಯಾಯಮಂಡಳಿಗಳ ಮೇಲೆ ಕಟ್ಟುನಿಟ್ಟಿನ ಸಮಯದ ಒತ್ತಡ ಹೇರಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಲ್ಲದೆ, ನ್ಯಾಯಾಂಗದ ಹಸ್ತಕ್ಷೇಪದ ಉದ್ದೇಶ ಚುನಾವಣೆಯನ್ನು ಮುಂದುವರಿಸುವುದೇ ಹೊರತು ತಡೆಯುವುದಲ್ಲ ಎಂದು ಪೀಠ ಹೇಳಿತು. ಅರ್ಜಿದಾರರು ಮೊದಲು ಲಭ್ಯವಿರುವ ಎಲ್ಲಾ ಮೇಲ್ಮನವಿ ಮಾರ್ಗಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಎಂದು ಕೋರ್ಟ್ ಸೂಚಿಸಿತು.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಳು ಏಪ್ರಿಲ್ 23 ಮತ್ತು 29ರಂದು ನಡೆಯಲಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ಪ್ರಧಾನಿ ಅವರಿಂದ ಭೈರವೈಕ್ಯ ಮಂದಿರ ಲೋಕಾರ್ಪಣೆ ನಾಳೆ

ಮಂಡ್ಯ: ಆದಿಚುಂಚನಗಿರಿಯಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ಭೈರವೈಕ್ಯ ಮಂದಿರ ಕೇವಲ ಕಲ್ಲು-ಮಣ್ಣಿನ ಕಟ್ಟಡವಲ್ಲ. ಅದೊಂದು ಜೀವಂತ ಆಧ್ಯಾತ್ಮ ಧಾಮ. ದ್ರಾವಿಡ ವಾಸ್ತು ಶಿಲ್ಪ ಶೈಲಿಯಲ್ಲಿ ಮಂದಿರ ನಿರ್ಮಾಣಗೊಂಡು ಬುಧವಾರ (ಏ.15) ಪ್ರಧಾನ ನರೇಂದ್ರಮೋದಿ ಅವರಿಂದ ಲೋಕಾರ್ಪಣೆಗೊಳ್ಳಲಿದೆ ಎಂದು ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.ಶ್ರೀ ಕ್ಷೇತ್ರದ ಶ್ರೀ ಗುರು ಭೈರವೈಕ್ಯ ಮಂದಿರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನೂರು ಕೋಟಿ ರು.ಗೂ ಹೆಚ್ಚು ವೆಚ್ಚದಲ್ಲಿ ಮಂದಿರ ಒರಿಸ್ಸಾದ ಸೂರ್ಯದೇಗುಲದ ಕಲೆಯನ್ನು ಒಳಗೊಂಡು ಸುಂದರವಾಗಿ ರೂಪುಗೊಂಡಿದೆ. ಹೊಯ್ಸಳ, ಚೋಳ, ಚಾಲುಕ್ಯ ಹಾಗೂ ಗಂಗ ವಾಸ್ತು ಶಿಲ್ಪದ ಸಮ್ಮಿಶ್ರಣವನ್ನು ಕಾಣಬಹುದಾಗಿದೆ ಎಂದು ತಿಳಿಸಿದರು. ದ್ರಾವಿಡ ವಾಸ್ತು ಶಿಲ್ಪ ಶೈಲಿ ಸಹಸ್ರಾರು ವರ್ಷಗಳಿಂದ ದೈವಿಕ ಶಕ್ತಿಯ ದೃಶ್ಯಭಾಷೆ ಎಂದೇ ಪ್ರಸಿದ್ಧಿ ಪಡೆದಿದೆ. ಆಗಸಕ್ಕೆ ಚಾಚಿದ ಗೋಪುರಗಳು, ಶಿಲ್ಪಕಲೆಯ ಅದ್ಭುತ ಕೆತ್ತನೆಗಳು, ಬ್ರಹ್ಮಾಂಡ ನಿಯಮಗಳಿಗೆ ಅನುಸಾರವಾದ ವಿನ್ಯಾಸ. ಇವೆಲ್ಲವೂ ಕೇವಲ ಕಟ್ಟಡ ನಿರ್ಮಾಣವಲ್ಲ. ಅದೊಂದು ದೇವರ ಭಾಷೆಯನ್ನು ಕಲ್ಲಿನಲ್ಲಿ ಬರೆದ ಮಹಾಕಾವ್ಯ ಎಂದು ವರ್ಣಿಸಿದರು.

ಪ್ರಧಾನಿ ಮೋದಿಗೆ ಮೈಸೂರು ಪೇಟ

ಮೈಸೂರು: ಮಂಡ್ಯ ಜಿಲ್ಲೆಯ ನಾಗಮಂಗಲದ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಲಿರುವ ಪ್ರಧಾನಿ ಮೋದಿಯವರಿಗೆಂದು ಮಹಾರಾಜರ ಪೇಟವೊಂದು ಸಿದ್ಧವಾಗಿದೆ. ಅಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೈಸೂರು ಮಹಾರಾಜರ ಮಾದರಿ ಪೇಟವನ್ನು ಹಾಕಲಾಗುತ್ತದೆ. ಇದಕ್ಕಾಗಿ ವಸ್ತ್ರ ವಿನ್ಯಾಸಕ, ಕಲಾವಿದ ನಂದನ್ ಅವರ ಕೈಚಳಕದಲ್ಲಿ ಪೇಟ ಸಿದ್ಧಗೊಂಡಿದೆ.



ಮಂಡ್ಯಜಿಲ್ಲೆಯ ಆದಿಚುಂಚನಗಿರಿಯಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ಭೈರವೈಕ್ಯ ಮಂದಿರವನ್ನು ನಾಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಉದ್ಘಾಟಿಸಲಿರುವ ಹಿನ್ನೆಲೆಯಲ್ಲಿ ಸೋಮವಾರ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ದೇಶಿಕೇಂದ್ರ ಸ್ವಾಮಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಿಯುಸಿ ವಿದ್ಯಾರ್ಥಿಗಳಿಗೂ ಇನ್ನು ಪಠ್ಯಪುಸ್ತಕ ಉಚಿತ

ಬೆಂಗಳೂರು: ಈವರೆಗೂ 1 ರಿಂದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಮಾತ್ರ ಇದ್ದ ಪಠ್ಯ ಪುಸ್ತಕ ಉಚಿತ ವಿತರಣೆ ಯೋಜನೆಯನ್ನು 2026-27ನೇ ಸಾಲಿನಿಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ಈ ಹೊಸ ಯೋಜನೆ ಇದೇ ಸಾಲಿನಿಂದಲೇ ಜಾರಿಗೆ ಬರಲಿದೆ.

ರಾಜ್ಯ ಸರ್ಕಾರವು ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದು, ಇನ್ನು ಮುಂದೆ ಎಲ್ಲ ಸರ್ಕಾರಿ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಪಠ್ಯಪುಸ್ತಕಗಳನ್ನು ಉಚಿತವಾಗಿ ಪಡೆಯಲಿದ್ದಾರೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ.

ರಾಜ್ಯಾದ್ಯಂತ ಸರ್ಕಾರಿ ಪಿಯು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ಲಕ್ಷಾಂತರ ವಿದ್ಯಾರ್ಥಿಗಳು ಇದರ ಲಾಭ ಪಡೆಯಲಿದ್ದಾರೆ. ಈ ಮಹತ್ವದ ನಿರ್ಧಾರದಿಂದ ಗ್ರಾಮೀಣ ಭಾಗದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಹೆಚ್ಚಿನ ಅನುಕೂಲವಾಗಲಿದ್ದು, ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1 ರಿಂದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಉಚಿತ, ಅಭ್ಯಾಸ ಪುಸ್ತಕ ಹಾಗೂ 1 ರಿಂದ ದ್ವಿತೀಯ ಪಿಯುವರೆಗೆ ದಿನಚರಿ ಪುಸ್ತಕ ವಿತರಣೆ ಸಂಬಂಧ ಶಿಕ್ಷಣ ಇಲಾಖೆಯು, ಸುಮಾರು 30.83 ಕೋಟಿ ರೂ.ಗಿಂತ ಹೆಚ್ಚು ಹಣದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿತ್ತು. ಶಿಕ್ಷಣ ಇಲಾಖೆ ಸಲ್ಲಿಸಿದ ಪ್ರಸಾವನೆಗೆ ಸರ್ಕಾರ ಸಹ ಒಪ್ಪಿಗೆ ಸೂಚಿಸಿದೆ. ಇನ್ನು 1 ರಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಸರ್ಕಾರದ ಕಡೆಯಿಂದಲೇ ಪಠ್ಯ ಪುಸ್ತಕ ಹಾಗೂ ನೋಟ್ ಬುಕ್ ಉಚಿತವಾಗಿ ನೀಡುವುದರಿಂದ ಪೋಷಕರ ಹೊರೆ ತಪ್ಪಲಿದೆ.

ಕಿರುಸುದ್ದಿ

ಸರ್ಕಾರಿ ನೌಕರರ ವರ್ಗಕ್ಕೆ ಹೊಸ ಮಾರ್ಗಸೂಚಿ

ಬೆಂಗಳೂರು: ರಾಜ್ಯ ಸರ್ಕಾರವು 2026-27ನೇ ಸಾಲಿನ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಈ ಬಾರಿಯ ವರ್ಗಾವಣೆ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಸರ್ಕಾರ ನಿರ್ಧರಿಸಿದೆ. ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ನೌಕರರು ತಮ್ಮ ಸೇವಾ ದಾಖಲೆಗಳನ್ನು ನಿಖರವಾಗಿ ಒದಗಿಸುವುದು ಕಡ್ಡಾಯವಾಗಿದೆ. ಕೇವಲ ವೈಯಕ್ತಿಕ ಬೇಡಿಕೆಗಳಲ್ಲದೆ, ಇಲಾಖೆಯ ಆಡಳಿತಾತ್ಮಕ ಅಗತ್ಯತೆಗಳನ್ನು ಪ್ರಮುಖ ಮಾನದಂಡವಾಗಿ ಪರಿಗಣಿಸಿ ವರ್ಗಾವಣೆ ಆದೇಶ ಹೊರಡಿಸಲಾಗುತ್ತದೆ. ಕೆಲವು ವಿಶೇಷ ಪ್ರಕರಣಗಳಲ್ಲಿ ಮಾನವೀಯ ನೆಲೆಯ ಮೇಲೆ ಆದ್ಯತೆ ನೀಡಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆಸಕ್ತ ಮತ್ತು ಅರ್ಹ ನೌಕರರು ಅರ್ಜಿಗಳನ್ನು ಮೇ 31ರೊಳಗೆ ಸಲ್ಲಿಸಬೇಕೆಂದು ಸರ್ಕಾರ ತಿಳಿಸಿದೆ.

ಸಿಇಟಿ ಫಲಿತಾಂಶಕ್ಕೆ ಅತ್ಯಧಿಕ ಅಂಕಗಳ ಪರಿಗಣನೆ

ಬೆಂಗಳೂರು: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಪರೀಕ್ಷೆ- 1 ಮತ್ತು ಪರೀಕ್ಷೆ-2 ರಲ್ಲಿ ಪಡೆದ ಅಂಕಗಳ ಪೈಕಿ ಅತ್ಯಧಿಕ ಅಂಕಗಳನ್ನೇ ಸಿಇಟಿ ಫಲಿತಾಂಶಕ್ಕೆ ಪರಿಗಣಿಸಲಾಗುವುದು. ಈ ವಿಷಯದಲ್ಲಿ ಗೊಂದಲ ಬೇಡ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸ್ಪಷ್ಟಪಡಿಸಿದ್ದಾರೆ. ಕೆಲ ಅಭ್ಯರ್ಥಿಗಳು ಪರೀಕ್ಷೆ-1ರಲ್ಲಿ ಪಡೆದ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಎರಡನೇ ಪರೀಕ್ಷೆ ಕೂಡ ತೆಗೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ಕಳೆದ ವರ್ಷದಂತೆ ಎರಡೂ ಪರೀಕ್ಷೆಗಳಲ್ಲಿ ಪಡೆದ ಅತ್ಯಧಿಕ ಅಂಕಗಳನ್ನು ಸಿಇಟಿ ರ‍್ಯಾಂಕ್‌ಗೆ ಪರಿಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ದ್ವಿತೀಯ ಪಿಯುಸಿಯ ಎರಡೂ ಪರೀಕ್ಷೆಗಳ ಫಲಿತಾಂಶ ಬಂದ ನಂತರವೇ ಸಿಇಟಿ ಫಲಿತಾಂಶ ಪ್ರಕಟಿಸುವುದು. ಹೀಗಾಗಿ ಎರಡನೇ ಪರೀಕ್ಷೆಯ ಅಂಕಗಳನ್ನು ಪರಿಗಣಿಸುವುದಿಲ್ಲ ಎನ್ನುವುದು ಸುಳ್ಳು ಎಂದು ಹೇಳಿದ್ದಾರೆ.

ಕೊಲೆ ಆರೋಪಿಗಳ ಬಂಧನ

ಧಾರವಾಡ: ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣದ 9 ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹು-ಧಾ ಪೊಲೀಸ್ ಆಯುಕ್ತ ಶಶಿಕುಮಾರ್ ಹೇಳಿದರು.ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮೊಹ್ಮದ್ ಷಾ, ಸೈಯದಗೌಸ್ ಜಾನಿಷಾ, ಫರವೇಜ್ ಆಲಂ ಮಹಲ್ದಾರ್, ಸಮ್ಮೀರ್ ಅಹ್ಮದ್ ಮಕಾಂದಾರ, ಸದ್ದಾಹುಸೇನ್ ನವಲಗುಂದ, ಶೈಫ್ ರೆಹಮಾನ್, ಅರ್ಬಾಜ್ ಹಂಚಿನಾಳ, ಸೋಹಿಲಖಾನ್ ಹಾಲಭಾವಿ, ಮಕ್ತುಂ ಸೊಗಲದ ಎಂಬವರನ್ನು ಬಂಧಿಸಲಾಗಿದೆ ಎಂದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸುಮತಿ ವಾಸು ಶೆಟ್ಟಿ, 'ವಸುಮತಿ', ಶಿವದುರ್ಗಾ ಕಂಪೌಂಡು, ಉಲ್ಲಂಜೆ, ಕಟೀಲು.
2. ಶಂಕರ ಬಂಗೇರ, 'ಭವಾನಿ ನಿವಾಸ', ಸುಕ್ತಿರಿಪೇಟೆ ವಯಾ ಮುಂಡ್ಕೂರು.
3. ಆದಿತ್ಯ ಜೋಶಿ, 'ಶ್ರೀ ವಿನಾಯಕ ಕೃಪಾ', ಕೈತ್ರೋಡಿ ಹೌಸ್, ಮುಂಡಾಜೆ, ಬೆಳ್ತಂಗಡಿ (ತಾ).
4. ರಘು ಎಲ್. ಶೆಟ್ಟಿ, ಬೆಳ್ಳೂರು ದೇವಸ್ಯ ಶ್ರೀ ಮಾಡ್ಲಾಯ ದೈವಸ್ಥಾನದ ಬಳಿ, ಬಡಗಬೆಳ್ಳೂರು, ಬಂಟ್ವಾಳ (ತಾ).
5. ಶ್ರೀ ಕೃಷ್ಣ ಭಜನಾ ಮಂದಿರ, 'ಗೋವರ್ಧನ ಗಿರಿ', ನೂಜಿ, ಮಂಚಿ, ಬಂಟ್ವಾಳ (ತಾ).
6. ಬಂಟರ ಸಂಘ, ಎಂ. ಸುಂದರ ರಾಮ್ ಶೆಟ್ಟಿ ಸ್ಮಾರಕ ಭವನ, ಕೊಂಬೆಟ್ಟು, ಪುತ್ತೂರು.
7. ಶಶಿಧರ ಶೆಟ್ಟಿ, ವಿಷ್ಣುಮೂರ್ತಿ ನಗರ, ಬೇಳ, ವಯಾ ನೀರ್ಚಾಲು, ಕಾಸರಗೋಡು.

ಶ್ರೀ ಧರ್ಮಸ್ಥಳ ಮೇಳ

ಮುಕ್ಕಾದಲ್ಲಿ
ಶ್ರೀಮತಿ ಮತ್ತು ಶ್ರೀ ಪಿ. ಗಣೇಶ್ ಬಿಹಾಲ್ ಮತ್ತು ಮಕ್ಕಳು, ಪಳನೀರು ಮನೆ

ಶ್ರೀ ಸಾಲಿಗ್ರಾಮ ಮೇಳ

ಮಾವಳ್ಳಿ ಮಂಡಗದ್ದೆಯಲ್ಲಿ - ಸಂಪೂರ್ಣ ನಾಗಶ್ರೀ

ಶ್ರೀ ಪೆರ್ಡೂರು ಮೇಳ

ಹಡ್ಸೆಯಲ್ಲಿ - ಚದುರಂಗ

ಶ್ರೀ ಹನುಮಗಿರಿ ಮೇಳ

ಕಾವೂರಿನಲ್ಲಿ

ಶ್ರೀ ಪಾವಂಜೆ ಮೇಳ

ಶ್ರೀ ವಿಶ್ವನಾಥ ದೇವಸ್ಥಾನ, ಕೃಷ್ಣಾಪುರ, ಕಾಟಿಪಳ್ಳ, ಸುರತ್ಕಲ್
ಛಾಯಾನಂದನ

ಸೂಕ್ತ ಸ್ಥಳ ಗುರುತಿಸಲು ಅಧಿಕಾರಿಗಳಿಗೆ ಎಂ.ಬಿ.ಪಾಟೀಲ್ ಸೂಚನೆ

ಮಂಡ್ಯಕ್ಕೆ ಕೈಗಾರಿಕಾ ಹಬ್

ಬೆಂಗಳೂರು: ಕೇಂದ್ರ ಸರಕಾರ, ಮಂಡ್ಯ ಜಿಲ್ಲೆಯಲ್ಲಿ ಎಆರ್‌ಎಐ (ಆಟೋಮೋಟೋವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ) ಕೇಂದ್ರ ಸ್ಥಾಪನೆಗೆ ಆಸಕ್ತಿ ತೋರಿದ್ದು ಅದಕ್ಕೆ ನಿಗದಿಪಡಿಸಿರುವ 100 ಎಕರೆಗಿಂತ ಪರ್ಯಾಯವಾಗಿ ಕನಿಷ್ಠ 500 ಎಕರೆಯಲ್ಲಿ ಪೂರಕ ಕೈಗಾರಿಕಾಭಿವೃದ್ಧಿ ಪಾರ್ಕ್ ಸ್ಥಾಪನೆ ಬಗ್ಗೆ ಸೂಕ್ತ ಸ್ಥಳ ಹುಡುಕಲು ಸಚಿವ ಎಂ.ಬಿ.ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ವಿಧಾನಸೌಧದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರಿಗಳ ಜತೆ ಈ ಬಗ್ಗೆ ವಿಸ್ತೃತ ಮಾತುಕತೆ ನಡೆಸಿದರು. ಕೇವಲ 100 ಎಕರೆಯಲ್ಲಿ ಎಆರ್‌ಎಐ ಕೇಂದ್ರ ಸ್ಥಾಪಿಸಿದರೆ ಅದು ಕೇವಲ ಒಂದು ಕೇಂದ್ರವಾಗಿ ಇರುತ್ತದೆ. ಅದರ ಬದಲು ಪೂರಕ ಆಟೋಮೊಬೈಲ್ ಕ್ಷೇತ್ರದ ಅಭಿವೃದ್ಧಿಗೆ ಬೇಕಾಗುವಂತೆ ಕನಿಷ್ಠ 500 ಎಕರೆಯಲ್ಲಿ ಆ ಕೇಂದ್ರವೂ ಸೇರಿದಂತೆ ಕೈಗಾರಿಕಾ ಹಬ್ ಅಭಿವೃದ್ಧಿಪಡಿಸುವುದು ಸೂಕ್ತ. ಇದನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಕೂಡ ಒಪ್ಪಿದ್ದಾರೆ. ಈ ಉದ್ದೇಶಕ್ಕಾಗಿ ಮಂಡ್ಯ ಜಿಲ್ಲೆಯಲ್ಲಿ ಇರುವ ಸರಕಾರಿ/ಖಾಸಗಿ ಜಮೀನನ್ನು ಗುರುತಿಸುವಂತೆ ವಿಶೇಷ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ ಎಂದು ಸಚಿವ ಪಾಟೀಲ ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಹಬ್ ಅಭಿವೃದ್ಧಿಪಡಿಸುವ ಚಿಂತನೆ ನಡೆದಿದ್ದು, ಪರ್ಯಾಯ ಜಾಗ ಹುಡುಕಲು ಸಲಹೆ ನೀಡಲಾಗಿದೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಅಂಟಿಕೊಂಡಿರುವ ಬೆಳ್ಳೂರಿನ ಬಳಿ 2021ರಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ 425 ಎಕರೆ ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಅದಕ್ಕೆ ಪರಿಹಾರ ವಿತರಣೆ ಮಾತ್ರ ಬಾಕಿ ಇದೆ. ಈ ಜಾಗವನ್ನೂ ಪರಿಶೀಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಸಚಿವ ಪಾಟೀಲ್ ತಿಳಿಸಿದರು.

ಇದಲ್ಲದೆ, ಮಂಡ್ಯ ಸಮೀಪದ ತೂಬಿನಕೆರೆ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಪಾಂಡವಪುರ ಹಾಗೂ ಮಂಡ್ಯ ತಾಲೂಕುಗಳ ಅಂಚಿನಲ್ಲಿಯೂ ಕೈಗಾರಿಕಾ ಹಬ್ ಸ್ಥಾಪಿಸಬಹುದು ಎಂದು ಸಭೆಯಲ್ಲಿ ಹಾಜರಿದ್ದ ಕೆಲವರು ಸಲಹೆ ನೀಡಿದರು. ಅಧಿಕಾರಿಗಳ ವರದಿ ಬಳಿಕ ಮತ್ತೊಂದು ಸುತ್ತು ಸಭೆ ಸೇರಲು ಸಭೆಯಲ್ಲಿ ತೀರ್ಮಾನಿಸಲಾಯಿತು.



> ಮಂಡ್ಯ ಸೇರಿದಂತೆ ರಾಜ್ಯದ ಹಲವು ಕಡೆ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ. ಕೈಗಾರಿಕೆ ಸ್ಥಾಪನೆಗೆ ಅಗತ್ಯ ಭೂಮಿ ಹಾಗೂ ಮೂಲಸೌಕರ್ಯ ಒದಗಿಸುವ ಬಗ್ಗೆಯೂ ಚರ್ಚೆ ನಡೆಸಿದ್ದೇವೆ.
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ತಾವು ವಿಧಾನಸೌಧಕ್ಕೆ ಬರುವುದು ದೈವೇಚ್ಛೆ

ಬೆಂಗಳೂರು: ತಾವು ಮರಳಿ ವಿಧಾನಸೌಧ ಪ್ರವೇಶ ಮಾಡುವ ಬಗ್ಗೆ ಜನರ ಆಶೀರ್ವಾದ ಹಾಗೂ ಭಗವಂತನ ಇಚ್ಛೆ ನಿರ್ಧರಿಸುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸೋಮವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಎರಡು ವರ್ಷಗಳ ಬಳಿಕ ವಿಧಾನಸೌಧಕ್ಕೆ ಬಂದಿದ್ದೇನೆ. ಭಗವಂತ ಎಲ್ಲವನ್ನೂ ನಿಗದಿ ಮಾಡುತ್ತಾನೆ ಅವನ ಇಚ್ಛೆ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯಾಗಿದ್ದು ಇಬ್ಬರೂ ಜತೆಗೂಡಿ ಮತ್ತೆ ವಿಧಾನಸೌಧಕ್ಕೆ ಬರಲು ಪ್ರಯತ್ನಿಸುತ್ತೇವೆ ಎಂದರು.

18,430 ಕೋಟಿ ರೂ. ಬಂಡವಾಳ ಹೂಡಿಕೆ

15,032 ಜನರಿಗೆ ಉದ್ಯೋಗ: ಸಿಎಂ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯಲ್ಲಿ ಒಟ್ಟು 18,430.44 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಸುಮಾರು 15,032 ಜನರಿಗೆ ಉದ್ಯೋಗ ಲಭ್ಯವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗಳ ಕಚೇರಿಯಿಂದ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, 11 ಹೊಸ ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ಹಾಗೂ 6 ಹೆಚ್ಚುವರಿ ಬಂಡವಾಳ/ ವಿಸ್ತರಣಾ ಹೂಡಿಕೆ ಪ್ರಸ್ತಾವನೆಗಳು ಸೇರಿದಂತೆ ಒಟ್ಟು 17 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

11 ಹೊಸ ಪ್ರಸ್ತಾವನೆಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 14,906.9 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 13,050 ಉದ್ಯೋಗ ಸೃಷ್ಟಿಯಾಗಲಿದೆ. 6 ಹೆಚ್ಚುವರಿ ಬಂಡವಾಳ ಪ್ರಸ್ತಾವನೆಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ಒಟ್ಟು 3,523.54 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 1,982 ಉದ್ಯೋಗ ಸೃಷ್ಟಿಯಾಗುತ್ತಿರುವುದಾಗಿ ತಿಳಿಸಿದೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಚಲುವರಾಯಸ್ವಾಮಿ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೇರಿದಂತೆ ಇತರರಿದ್ದರು.

ವಚನಾನಂದ ಸ್ವಾಮೀಜಿ ಪೀಠದಿಂದ ಪದಚ್ಯುತಿ

ದಾವಣಗೆರೆ: ಜಿಲ್ಲೆಯ ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಸೋಮವಾರ ನಡೆದ ಧರ್ಮದರ್ಶಿಗಳ ಸಭೆಯಲ್ಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿಯನ್ನು ಪೀಠದಿಂದ ಪದಚ್ಯುತಿಗೊಳಿಸಲಾಗಿದೆ. ಮಠದೊಳಗೆ ಧರ್ಮದರ್ಶಿಗಳ ಸಭೆ ನಡೆಯುತ್ತಿದ್ದ ವೇಳೆಯೇ ಮಠದ ಹೊರಗೆ ಲೆಕ್ಕ ಕೊಡುವಂತೆ ಧರ್ಮದರ್ಶಿಗಳಿಗೆ ಆಗ್ರಹಿಸಿ ಭಕ್ತರು ಪ್ರತಿಭಟನೆ ಕೈಗೊಂಡಿದ್ದರಿಂದ ಮಠದ ಸುತ್ತಮುತ್ತ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಟ್ರಸ್ಟ್ ಕಾರ್ಯದರ್ಶಿ ಕೆ.ಎಂ.ಜ್ಯೋತಿಪ್ರಕಾಶ್ ಸೇರಿದಂತೆ 12 ಮಂದಿ ಧರ್ಮದರ್ಶಿಗಳು ಪಾಲ್ಗೊಂಡಿದ್ದರು. ಒಟ್ಟು 15 ಮಂದಿ ಧರ್ಮದರ್ಶಿಗಳಲ್ಲಿ ಸ್ವಾಮೀಜಿ ಸಹಿತ ಮೂವರು ಧರ್ಮದರ್ಶಿಗಳು ಸಭೆಗೆ ಗೈರಾಗಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಧರ್ಮದರ್ಶಿಗಳು ಹಾಗೂ ಪಂಚಮಸಾಲಿ ಸಮಾಜದ ರಾಜ್ಯ ಸಮಿತಿಯ ಆಹ್ವಾನಿತರು ಸೇರಿ ಸರ್ವಾನುಮತದಿಂದ ವಚನಾನಂದ ಸ್ವಾಮೀಜಿಯನ್ನು ಪೀಠದಿಂದ ಉಚ್ಚಾಟಿಸುವ ತೀರ್ಮಾನ ತೆಗೆದುಕೊಂಡಿದ್ದಾರೆ.

> ನನಗೆಸಭೆಯ ನೋಟಿಸ್ ಕೊಡದೆ ಧರ್ಮದರ್ಶಿಗಳು ಏಕಪಕ್ಷೀಯವಾಗಿ ನನ್ನನ್ನು ಪದಚ್ಯುತಿಗೊಳಿಸಿರುವುದು ಹಾಸ್ಯಾಸ್ಪದ. ಮೊದಲು ಪೀಠ ಆಗಿದೆ, ಆಮೇಲೆ ಟ್ರಸ್ಟ್ ರಚನೆಯಾಗಿದೆ. ತೀರ್ಮಾನವನ್ನು ಭಕ್ತರಿಗೇ ಬಿಡುತ್ತೇನೆ. ಟ್ರಸ್ಟ್ ಸುಪ್ರೀಂ ಅಲ್ಲ, ಭಕ್ತರೇ ಸುಪ್ರೀಂ. ಭಕ್ತರೊಂದಿಗೆ ಚರ್ಚಿಸಿ ಮುನ್ನಡೆಯುತ್ತೇನೆ.
> ■ ವಚನಾನಂದ ಶ್ರೀ

ಮಹಿಳೆಯರಿಗೆ ಶೇ.33 ಮೀಸಲಾತಿ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ವಾಗತ

ದೇಶ ನಿರ್ಮಾಣಕ್ಕಾಗಿ ನಾರಿಗೆ ಜವಾಬ್ದಾರಿ

ಬೆಂಗಳೂರು: ನಾರಿ ಶಕ್ತಿ ವಂದನಾ ಅಧಿನಿಯಮ ಕೇವಲ ನಮ್ಮನ್ನು ಕುರ್ಚಿಯಲ್ಲಿ ಕೂರಿಸಲು ಅಲ್ಲ. ದೇಶ ನಿರ್ಮಾಣಕ್ಕಾಗಿ ಜವಾಬ್ದಾರಿಯನ್ನು ನಮ್ಮೆಲ್ಲರಿಗೂ ಪ್ರಧಾನಿಯವರು ನೀಡುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಾರಿ ಶಕ್ತಿ ಫೋರಂ ವತಿಯಿಂದ ನಾರಿ ಶಕ್ತಿ ವಂದನೆ ಅಧಿನಿಯಮ 2026 (ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಮಸೂದೆ) ಕುರಿತು ನಗರದ ಪುರಭವನದಲ್ಲಿ ಸೋಮವಾರ ಆಯೋಜಿಸಿದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳಾ ಮೀಸಲಾತಿಯು ಒಂದು ಚರಿತ್ರಾರ್ಹ ತೀರ್ಮಾನ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದು, ಇದರಿಂದ ಮಹಿಳೆಯರ ಜವಾಬ್ದಾರಿ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಗ್ರಾಮ ಪಂಚಾಯತ್‌ಗಳಲ್ಲಿ ಮೀಸಲಾತಿ ನೀಡಿದ್ದನ್ನೂ ತಿಳಿಸಿದರು.

ಐತಿಹಾಸಿಕ ಕ್ಷಣಕ್ಕಾಗಿ ಕಾತರ: ವಿಜಯೇಂದ್ರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಬಹುದಶಕಗಳ ಕನಸು ಇದೀಗ ಈಡೇರಲಿದೆ. ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಶೇ. 33 ಮೀಸಲಾತಿ ಕೊಡುವ ಐತಿಹಾಸಿಕ ಕ್ಷಣಕ್ಕೆ ನಾವೆಲ್ಲರೂ ಕಾತರದಿಂದ ಎದುರು ನೋಡುತ್ತಿದ್ದೇವೆ. ಭಾರತವು 2047ಕ್ಕೆ ಅಭಿವೃದ್ಧಿಶೀಲ ರಾಷ್ಟ್ರವಾಗಿ ಪರಿವರ್ತನೆಯಾಗಲು ದೇಶದಲ್ಲಿ ಶೇ. 50ಕ್ಕಿಂತ ಹೆಚ್ಚಿರುವ ಮಹಿಳೆಯರಿಗೂ ಸಾಮಾಜಿಕ ನ್ಯಾಯ ಕೊಡಬೇಕು. ದೇಶದ ಮಹಿಳೆಯರಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂಬ ಸದುದ್ದೇಶದೊಂದಿಗೆ ಮೀಸಲಾತಿ ನೀಡಲು ಮೋದಿ ಅವರು ಮುಂದಾಗಿದ್ದಾರೆ ಎಂದು ವಿಶ್ಲೇಷಿಸಿದರು.



ದಿಲ್ಲಿಯ ಇಂದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರ ಭಾಷಣ ಆಲಿಸಿದಾಗ ಮಹಿಳೆಯರ ಕುರಿತು ಅವರು ಇಟ್ಟಿರುವ ವಿಶ್ವಾಸ ವ್ಯಕ್ತವಾಗಿದೆ. ದೇಶದ ಮಹಿಳೆಯರು ದೇಶ ಮುನ್ನಡೆಸುವ ಕೆಲಸದಲ್ಲೂ ಭಾಗವಹಿಸಬೇಕೆಂದು ಮೋದಿಯವರು ಆಶಿಸಿದ್ದಾರೆ ಎಂದು ತಿಳಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸಾಧನೆಯನ್ನೂ ಮೆಚ್ಚಿಕೊಂಡರು.


ಗ್ರಾಮೀಣ ಕ್ಷೇತ್ರದಲ್ಲಿ ಹೆಣ್ಣು ಮಗುವನ್ನು ಶಾಪ ಎಂಬಂತೆ ನೋಡಲಾಗುತ್ತಿತ್ತು. ಅದು ಶಾಪವಲ್ಲ; ಭಾಗ್ಯಲಕ್ಷ್ಮಿ ಎಂದು ತಿಳಿಸಿ ಆಗಿನ ಮುಖ್ಯಮಂತ್ರಿ ಯಡಿಯೂರಪ್ಪ ವಿಶೇಷ ಯೋಜನೆ ತಂದರು. ಅಷ್ಟೇ ಅಲ್ಲದೆ, ಬೈಸಿಕಲ್ ನೀಡುವ ಯೋಜನೆ ಜಾರಿಗೊಳಿಸಿ ಸ್ವಾಭಿಮಾನ ಹೆಚ್ಚಿಸಿದರು. ಗ್ರಾಮೀಣ ಹೆಣ್ಮಕ್ಕಳು ಸ್ವಾಭಿಮಾನಿ ಬದುಕನ್ನು ಕಾಣುವಂತಾಗಲು ಹೈನುಗಾರಿಕೆಗೆ ಪ್ರೋತ್ಸಾಹ ನೀಡಿದ್ದರು ಎಂದು ಸ್ಮರಿಸಿದರು.

> ದೇಶದ ಮಹಿಳೆಯರಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂಬ ಸದುದ್ದೇಶದೊಂದಿಗೆ ಮೀಸಲಾತಿ ನೀಡಲು ಮೋದಿ ಅವರು ಮುಂದಾಗಿದ್ದಾರೆ.
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವೇದಿಕೆಯಲ್ಲಿ ಉಪಸ್ಥಿತರಿದ್ದ ಕ್ಯಾನ್ಸರ್ ತಜ್ಞೆ ಪದ್ಮಶ್ರೀ ಪುರಸ್ಕೃತೆ ಡಾ. ವಿಜಯಲಕ್ಷ್ಮಿ ದೇಶಮಾನೆ, ಪದ್ಮಶ್ರೀ ಪುರಸ್ಕೃತೆ ಡಾ. ಸುಶೀಲಮ್ಮ, ಹಿರಿಯ ವಕೀಲೆ ಲಕ್ಷ್ಮೀ ಅಯ್ಯಂಗಾರ್, ಅಂತಾರಾಷ್ಟ್ರೀಯ ಕ್ರೀಡಾಪಟು ಅಶ್ವಿನಿ ನಾಚಪ್ಪ, ಲೇಖಕಿ ಸೀನು ಜೋಸೆಫ್, ಚಲನಚಿತ್ರ ನಟಿ ಮಾಳವಿಕ ಅವಿನಾಶ್, ಎನ್.ಡಬ್ಲ್ಯೂ.ಸಿ ಮಾಜಿ ಅಧ್ಯಕ್ಷೆ ಸಿ. ಮಂಜುಳಾ ಮಾತನಾಡಿ, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಜಾರಿಗೆ ಮುಂದಾದುದನ್ನು ಶ್ಲಾಘಿಸಿದರು.

ಮಹಿಳಾ ಮೀಸಲು ವಿಧೇಯಕ ಪದ್ಮಶ್ರೀ ಸುಶೀಲಮ್ಮ ಸ್ವಾಗತ

ಬೆಂಗಳೂರು: ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಬೇಕು ಎಂದು ಹಲವು ವರ್ಷಗಳಿಂದ ಹೋರಾಟ ಮಾಡಿದ್ದೆವು, ಇದೀಗ ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ಸಾಕಾರವಾಗುತ್ತಿದೆ. ಇದು ದೇಶದ ಎಲ್ಲ ಮಹಿಳೆಯರಿಗೆ ಖುಷಿಯ ವಿಷಯ ಎಂದು ಸುಮಂಗಲಿ ಸೇವಾಶ್ರಮದ ಸ್ಥಾಪಕಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ಎಸ್.ಜಿ.ಸುಶೀಲಮ್ಮ ಹೇಳಿದರು.



ಆರ್.ಟಿ.ನಗರದ ಸುಮಂಗಲಿ ಸೇವಾ ಆಶ್ರಮದಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ರಂಗದಲ್ಲಿ ಮಹಿಳೆಯರು ಸಾಧನೆ ಮಾಡಿದ್ದಾರೆ. ಇದರೊಂದಿಗೆ ರಾಜಕೀಯದಲ್ಲಿ ಹೆಚ್ಚು ಮೀಸಲು ಸಿಕ್ಕರೆ ಅವರಿಗೆ ಶಕ್ತಿ ಸಿಗಲಿದೆ. ಹಾಗಾಗಿ ನಾವು ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ಸಾಕಾರವಾಗುತ್ತಿದೆ ಎಂದರು.

ಮಹಿಳೆಯರಿಗೆ ಇಡೀ ಜಗತ್ತು ಆಳುವ ಶಕ್ತಿ ಇದೆ. ಕುಟುಂಬದಲ್ಲಿ ಸೌಟು ಹಿಡಿದವಳು ಎಂದು ಮೂಲೆಗುಂಪು ಮಾಡಿದಾಗ ನೋವಾಗುತ್ತಿತ್ತು. ಆದರೆ ನಾರಿಶಕ್ತಿ ದೊಡ್ಡದು, ಹಳ್ಳಿಯಿಂದ ರಾಷ್ಟ್ರಮಟ್ಟದವರೆಗೆ ಅವರು ಸಾಧಿಸಿ ತೋರಿಸಿದಾರೆ. ವಿಜ್ಞಾನಿಯಾಗಿ, ನ್ಯಾಯಾಧೀಶೆಯಾಗಿ, ಪೈಲೆಟ್ ಆಗಿ ದುಡಿಮೆ ಮಾಡುತ್ತಿದ್ದಾರೆ. ಬುಡಕಟ್ಟು ಜನರೂ ಪ್ರಸ್ತುತ ಮುಂದೆ ಬಂದಿದ್ದಾರೆ.

ಕಾಡು ಜನರೂ ಮೈಕ್ ಹಿಡಿದು ಮಾತನಾಡಲು ಆರಂಭಿಸಿದ್ದಾರೆ. ಇವರ ಕಲ್ಯಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿ ಮಾಡಿದ ಯೋಜನೆಗಳೇ ಸಾಕಷ್ಟು ಇವೆ ಎಂದರು.

ವೈದ್ಯರ ನಿರ್ಲಕ್ಷ್ಯಕ್ಕೆ ಗರ್ಭಿಣಿ, ಮಗು ಸಾವು: ಆರೋಪ

ಬೆಳಗಾವಿ: ನಗರದಲ್ಲಿರುವ ಬಿಮ್ಸ್ ವೈದ್ಯರ ನಿರ್ಲಕ್ಷ್ಯಕ್ಕೆ ಗರ್ಭಿಣಿ ಮೃತಪಟ್ಟಿರುವ ಗಂಭೀರ ಆರೋಪಕ್ಕೆ ಸಂಬಂಧಿಸಿದಂತೆ ಬಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಬೆಳಗಾವಿ ತಾಲೂಕಿನ ತುರಮರಿ ಗ್ರಾಮದ ಗರ್ಭಿಣಿ ಈರಮ್ಮ ಈರಪ್ಪ ಶಿಗೀಹಳ್ಳಿ (21) ಅವರನ್ನು ಏಪ್ರಿಲ್ 10ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಸರಿಯಾದ ಚಿಕಿತ್ಸೆ ನೀಡದ ಕಾರಣ ಈರಮ್ಮ ಹಾಗೂ ಹೊಟ್ಟೆಯಲ್ಲಿದ್ದ ಶಿಶು ಮೃತಪಟ್ಟಿದೆ ಎಂದು ಕುಟುಂಬಸ್ಥರು ಬಿಮ್ಸ್ ಆಸ್ಪತ್ರೆಯ ವೈದ್ಯರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಭಾನುವಾರ ಮಧ್ಯರಾತ್ರಿ ಸಹಿ ಪಡೆದು ದೇಹವನ್ನು ಕಳುಹಿಸಲು ಯತ್ನಿಸಿದ್ದಾಗಿ ತಿಳಿದು ಬಂದಿದೆ. ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕುಟುಂಬಸ್ಥರು ಒತ್ತಾಯಿಸಿದರು. ಎಪಿಎಂಸಿ ಠಾಣೆಯ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಸಂಪಾದಕೀಯ

ಅಭಿನಂದಿಸಬೇಕೇ ಹೊರತು...

ಪಾಕಿಸ್ತಾನವು ಇರಾನ್ ಮತ್ತು ಅಮೆರಿಕದ ನಡುವೆ ಶಾಂತಿ ಮಾತುಕತೆಯ ಮಧ್ಯಸ್ಥಿಕೆ ವಹಿಸಲು ಸಫಲವಾದುದು ವಿಶ್ವಗುರು ಎಂದು ಹೇಳಿಕೊಳ್ಳುವ ಭಾರತದ ಘನತೆಗೆ ಬಿದ್ದ ಪೆಟ್ಟು ಎಂಬುದಾಗಿ, ಮೋದಿ ಸರಕಾರವನ್ನು ತೆಗಳಲು ಸದಾ ಕಾದಿರುವ ಮಂದಿಯಿಂದ ಇತ್ತೀಚೆಗೆ ಬಂದ ಪ್ರತಿಕ್ರಿಯೆಗಳು. ಅವರ ಹೇಳಿಕೆಯಲ್ಲಿ ಕೊನೆಗಾದರೂ ಭಾರತದ ವಿರುದ್ಧ ಪಾಕಿಸ್ತಾನವು ಮೇಲುಗೈ ಸಾಧಿಸಿತಲ್ಲ ಎಂಬ ಪರೋಕ್ಷ ಹಿಗ್ಗೂ ಇದ್ದುದು ಸುಳ್ಳಲ್ಲ. ಮೋದಿ ಸರಕಾರದಡಿಯಲ್ಲಿ ಭಾರತದ ಘನತೆಯು ಜಾಗತಿಕವಾಗಿ ಕುಸಿಯುವುದನ್ನೆ ಕಾದಿರುವ ಕತ್ತೆಕಿರುಬಗಳಿವರು. ಆದರೆ ಈಗ ಶಾಂತಿ ಮಾತುಕತೆ ಮುರಿದು ಬಿದ್ದಿದೆ. ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಇಂಗು ತಿಂದ ಮಂಗನಂತಾಗಿದೆ. ಈ ಮಾತುಕತೆ ಮುರಿದು ಬೀಳುತ್ತದೆ ಎನ್ನುವುದು ಪೂರ್ವನಿರ್ಧಾರಿತವಾಗಿತ್ತು. ಏಕೆಂದರೆ ಟ್ರಂಪ್‌ರನ್ನು ಹಿಡಿದುಕೊಂಡು ಯಾವುದೇ ಒಪ್ಪಂದ ರೂಪಿಸುವುದು ಸಾಧ್ಯವೇ ಇರಲಿಲ್ಲ. ಟ್ರಂಪ್‌ಗೆ ಇರಾನ್ ಜತೆಗಿನ ಸಮರದಲ್ಲಿ ಉಂಟಾದ ಹಿನ್ನಡೆಯಿಂದ ಮುಖವುಳಿಸಬೇಕಾಗಿತ್ತು ಹಾಗೂ ಜಗತ್ತಿನ ದೃಷ್ಟಿಯನ್ನು ಬೇರೆಡೆಗೆ ಹರಿಸಬೇಕಾಗಿತ್ತು. ಅದಕ್ಕಾಗಿ ಪಾಕಿಸ್ತಾನದ ಮೂಲಕ ಶಾಂತಿ ಮಾತುಕತೆಯ ನಾಟಕವಾಡಿಸಿದರು. ಇದನ್ನು ಅರಿತಿದ್ದರಿಂದಲೇ ಭಾರತವು ಶಾಂತಿ ಮಾತುಕತೆಯ 'ದಲ್ಲಾಳಿ' ಕೆಲಸಕ್ಕೆ ಮುಂದಾಗಿರಲಿಲ್ಲ. ಇದು ಭಾರತದ ಜಾಣ ನಡೆಯಾಗಿತ್ತು.



ಇರಾನ್-ಇಸ್ರೇಲ್-ಅಮೆರಿಕನಡುವೆಸಮರಸ್ಫೋಟಗೊಂಡಂದಿನಿಂದಲೂ ನಮ್ಮ ದೇಶದಲ್ಲಿನ ಒಂದು ವರ್ಗಕ್ಕೆ ಭಾರತ ಸರಕಾರವನ್ನು ಟೀಕಿಸುವುದೇ ಕೆಲಸವಾಗಿದೆ. ಅವರಿಂದ ಸದಾ, ಪರಿಸ್ಥಿತಿಯನ್ನು ಸರಕಾರವು ಸರಿಯಾಗಿ ನಿಭಾಯಿಸಿಲ್ಲ ಎಂಬ ದೂರುಗಳು. ದೇಶವು ತೈಲ ಬಿಕ್ಕಟ್ಟಿಗೆ ಸಿಲುಕಿದಷ್ಟೂ ಅವರಿಗೆ ಹೆಚ್ಚು ಹರ್ಷ. ಮೋದಿ ಸರಕಾರವನ್ನು ಟೀಕಿಸಲೊಂದು ಅವಕಾಶ ಸಿಕ್ಕಿತಲ್ಲ ಎಂಬುದಾಗಿ. ನಿಜವಾಗಿ ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶ ಹಿತ ಕಾಯುವುದು ಮುಖ್ಯ ಹಾಗೂ ತಾವೆಲ್ಲರೂ ಆಡಳಿತದೊಂದಿಗೆ ಕೈಜೋಡಿಸಬೇಕು ಎಂಬಂತಹ ಮನಸ್ಥಿತಿ ಇರಬೇಕು. ಆದರೆ ನಮ್ಮಲ್ಲಿನ ವಿರೋಧ ಪಕ್ಷಗಳಿಗೆ ಮತ್ತು ಕೆಲವು ರಾಷ್ಟ್ರವಿರೋಧಿ ಮಾನಸಿಕತೆಯವರಿಗೆ ಅಂತಹ ಚಿಂತನೆ ಇಲ್ಲ. ದೇಶಕ್ಕೆ ಹಿನ್ನೆಡೆಯಾಗುವುದನ್ನೆ ಅವರು ಸಂಭ್ರಮಿಸುತ್ತಾರೆ. ಪಾಕಿಸ್ತಾನ ಶಾಂತಿ ಮಾತುಕತೆಯ ಮಧ್ಯಸ್ಥಿಕೆ ವಹಿಸಿದಾಗಲೂ ಅವರಿಗೆ ಉಂಟಾದುದು ಇದೇ ಸಂಭ್ರಮ. ಆದರೆ ಈ ಸಮರಕಾಲದಲ್ಲಿ ಭಾರತ ಸರಕಾರವು ತೈಲ ಪೂರೈಕೆ ಮತ್ತು ಅಡುಗೆ ಅನಿಲ ಪೂರೈಕೆಯನ್ನು ಅಬಾಧಿತವಾಗಿರುವಂತೆ ನೋಡಿಕೊಂಡುದು, ಸಮರ ನಿರತ ಎಲ್ಲಾ ದೇಶಗಳೊಂದಿಗೆ ಆಪ್ತ ಸಂಬಂಧವನ್ನು ಮುಂದುವರಿಸಿಕೊಂಡು ಬಂದುದು ರಾಜತಾಂತ್ರಿಕತೆಯ ಮಹತ್ಸಾಧನೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಇದಕ್ಕಾಗಿ ಭಾರತ ಸರಕಾರವನ್ನು ಅಭಿನಂದಿಸಬೇಕೇ ಹೊರತು ಟೀಕಿಸುವುದಲ್ಲ.

ಯುದ್ಧಮಧ್ಯಸ್ಥಿಕೆಯ ದೊಂಬರಾಟದಲ್ಲಿ ಸಿಲುಕಿರುವ ಪಾಕ್

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಯುದ್ಧವಿರಾಮ ಬಂತೆಂದು ನಾವೆಲ್ಲಾ ನಿಟ್ಟುಸಿರು ಬಿಡುತ್ತಿರುವಾಗಲೇ, ಇಸ್ಲಾಮಾಬಾದಿನಲ್ಲಿ ನಡೆದ ಸಂಧಾನ ವಿಫಲವಾಗಿದೆಯೆಂಬ ಕಳವಳಕಾರಿ ಸುದ್ದಿ ಹೊರಬಿದ್ದಿದೆ. ಮತ್ತೊಂದು ಸುತ್ತು ಮಾತುಕತೆ ನಡೆಯಬಹುದು ಎಂಬ ಆಸೆಯಿದ್ದರೂ, ಇರಾನ್ ತನ್ನ ಅಣುಪರೀಕ್ಷೆಯನ್ನು ಕೈಬಿಡಬೇಕು ಎಂದು ಮುಖ್ಯ ಅಂಶವೇ ಬಗೆಹರಿಯದಕ್ಕಾಗಿ, ಅಮೇರಿಕನ್ನರು ಎದ್ದು ಹೊರನಡೆದಿದ್ದಾರೆ. ಅಲ್ಲಿಗೆ ಎಲ್ಲವೂ ಮೊದಲಿನ ಯುದ್ಧಸನ್ನದ್ಧ ಸ್ಥಿತಿಗೇ ಬಂದು ನಿಂತಂತಾಗಿದೆ, ಶಾಂತಿ ಮರುಕಳಿಸಬಹುದೆಂಬ ಆಸೆಗೆ ಮತ್ತೆ ನೀರೆರಚಿದಂತಾಗಿದೆ.

ನಲವತ್ತು ದಿನಗಳ ಹಿಂದೆ ಪ್ರಾರಂಭವಾದ ಚಕಮಕಿಯೊಂದು, ಇದ್ದಕ್ಕಿದ್ದಂತೆ ಬೆಂಕಿಯಾಗಿ ಪರಿವರ್ತನೆಗೊಂಡು, ಕಾಳ್ಗಿಚ್ಚಿನಂತೆ ಪಶ್ಚಿಮ ಏಷ್ಯಾದಲ್ಲಿ ಹರಡಿ, ಇಡೀ ಜಗತ್ತಿಗೇ ಅದರ ಬಿಸಿ ತಾಗಿಸಿತು. ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿದ್ದ, ಅಲ್ಲೆಲ್ಲೋ ದೂರದಲ್ಲಿದ್ದ ಒಂದು ಕೊಂಕು ಬಿಟ್ಟರೆ, ತನ್ನದಲ್ಲದ ಈ ಗಲಾಟೆಗೆ ಮೂಗು ತೂರಿಸಿದ ಅಮೇರಿಕ, ಬಹಳಷ್ಟು ಮೇಲುಗೈ ಸಾಧಿಸಿದರೂ, ಕಳೆದ ಮೂರುವಾರದಲ್ಲಿ ಅನಿರೀಕ್ಷಿತ ಪೆಟ್ಟುಗಳನ್ನೂ ತಿಂದಿತು. ಅಮೇರಿಕಾದ ಸೈನ್ಯ ದೊಡ್ಡದು ಮತ್ತು ಶಕ್ತಿಶಾಲಿಯಂತೂ ಹೌದು. ಆದರೆ ಮಹಾದೈತ್ಯನನ್ನು, ದೈತ್ಯನಂತೆ ಎದುರಿಸದೇ, ಇಪ್ಪತ್ತು ವರ್ಷಗಳ ಕಾಲ ಹೊಂಚು ಹಾಕಿ ಕಾದು ಕೂತು, ಹೇಗೆಲ್ಲಾ ತನ್ನ ಶತ್ರುಗಳನ್ನು ಹೊಡೆಯಬೇಕು ಎಂದು ಇರಾನ್ ಉಪಾಯ ಮಾಡಿತ್ತೋ ಹಾಗೇ ಮಾಡಿದೆ.

ನಾಲ್ಕುವಾರಗಳ ನಂತರ ಯಾವುದೋ ಮಾಯೆ ಕೆಲಸ ಮಾಡಿ, ಎರಡೂ ಬಣಗಳನ್ನು ಮಾತುಕತೆಗೆ ಕರೆಸುವಂತಾದದ್ದು ಒಂದು ಒಳ್ಳೆಯ ಬೆಳವಣಿಗೆ ಅಂತಲೇ ಹೇಳಬಹುದು. ಎರಡು ಬಣಗಳು ತಯಾರಿದ್ದರೆ ನಾವು ಮಧ್ಯಸ್ಥಿಕೆ ಮಾಡಲು ತಯಾರಿದ್ದೇವೆ ಎಂದು ಪಾಕಿಸ್ಥಾನ ಹೇಳಿದ್ದೇ ತಡ, ನಮ್ಮಲ್ಲಿನ ಮೋದಿ ವಿರೋಧಿಗಳು (ದೇಶ ವಿರೋಧಿಗಳು ಅಂತಲೇ ಅಂದುಕೊಳ್ಳಿ) ಹಾಹಾಕಾರ ಎಬ್ಬಿಸಿಬಿಟ್ಟರು. ವಿಶ್ವಗುರು ಅಂದಿದ್ದೇನು, ಐವತ್ತಾರು ಇಂಚಿನ ಎದೆ ಅಂದಿದ್ದೇನು, ಮತ್ಯಾಕೆ ಮೋದಿ ಈ ಸಂಧಾನ ಮಾಡಿಸಲಿಲ್ಲ, ಎಲ್ಲಾ ಬಿಟ್ಟು ಪಾಕಿಸ್ಥಾನ ಸಂಧಾನಕ್ಕೆ ಮುಂದಾಯ್ತಲ್ಲ ಅಂತಾ ಜರಿದದ್ದೇನು! ಆದರೆ, ಇವರ್ಯಾರಿಗೂ ತಿಳಿಯದೇ ಹೋದ ವಿಷಯವೆಂದರೆ, ಮಾತುಕತೆಗೆ ಯಾವತ್ತೂ ಪಾಕಿಸ್ಥಾನ ತಾನಾಗಿಯೇ ಆಹ್ವಾನ ಕೊಟ್ಟಿರಲೇ ಇಲ್ಲ. ಅಮೇರಿಕದ ಹೊಲಸು ತೊಳೆಯುವ ಕಾಯಕವನ್ನು ಮೊದಲಿಂದಲೂ ಮಾಡಿಕೊಂಡು ಬಂದಿದ್ದ ಪಾಕಿಸ್ಥಾನ, ತನ್ನ ಯಜಮಾನನ ಅಣತಿಯ ಮೇರೆಗೆ ಮಾತಾಡಿತಷ್ಟೇ. ಪಾಕಿಸ್ಥಾನ ಹೇಳಿದ್ದೇ ತಡ, ಅಮೇರಿಕಾ 'ನಮ್ಮ ಬೇಡಿಕೆಗಳನ್ನು ಪಾಕಿಸ್ಥಾನ ಮೂಲಕ ಕಳಿಸಲಿದ್ದೇವೆ' ಎಂದು ಏಕಪಕ್ಷೀಯವಾಗಿ ಘೋಷಿಸಿಕೊಂಡಿತು. ಇರಾನ್ ಇನ್ನೂ ಈ ಮಾತುಕತೆಗೆ ತಯಾರಿಯನ್ನೇ ಮಾಡಿಕೊಂಡಿರಲಿಲ್ಲ, ಅಲ್ಲದೇ ಪಾಕಿಸ್ಥಾನದ ಮೂಲಕ ಸಂಧಾನಕ್ಕೆ ಮುಂದಾಗಲು ಇರಾನ್ ಯೋಚಿಸಿಯೂ ಇರಲಿಲ್ಲ. ಇದಿಷ್ಟೂ ಅಮೇರಿಕಾದ ಪಿ.ಆರ್ ಆಟವಷ್ಟೇ ಆಗಿದ್ದದ್ದು. ಎಷ್ಟರ ಮಟ್ಟಿಗೆ ಇದಿಷ್ಟೂ ಅಮೇರಿಕಾದ ಆಟವಾಗಿತ್ತೆಂದರೆ, ಪಾಕಿಸ್ಥಾನ ಪ್ರಧಾನಿ ಟಿವಿಯ ಮುಂದೆ ಏನು ಹೇಳಬೇಕು, ಸಾಮಾಜಿಕ ತಾಣಗಳಲ್ಲಿ ಏನು ಬರೆಯಬೇಕು ಎನ್ನುವ ಚಿತ್ರಕಥೆ-ಸಂಭಾಷಣೆಗಳೂ ವಾಷಿಂಗ್ಟನ್ನಿನಿಂದ ಬಂದಿದ್ದವು. ಹಾಗೆ ಬಂದ ಕಥೆಯನ್ನೂ ಸರಿಯಾಗಿ ಕಾರ್ಯಗತಗೊಳಿಸಲಾದಷ್ಟೂ ಕೈಲಾಗದ ಪಾಕಿಸ್ಥಾನಿಗಳು, ತಮ್ಮ ಪ್ರಧಾನಿಯ ಎಕ್ಸ್ ಖಾತೆಯ ಪೋಸ್ಟ್‌ನಲ್ಲಿ ಕೈಗೆ ಕೊಟ್ಟ ಚಿತ್ರಕಥೆಯಲ್ಲಿದ್ದ ಇದು ಪಾಕ್ ಪ್ರಧಾನಿ ಬರೆಯಬೇಕಾದ ಸಾಲುಗಳು ಎನ್ನುವ ಸಾಲನ್ನೂ ಅಳಿಸದೇ, ಅದರ ಸಮೇತವೇ ಯಥಾವತ್ತಾಗಿ ಅಂಟಿಸಿ, ಅದನ್ನು ಜನರು ಎಡಿಟ್ ಹಿಸ್ಟರಿಯಲ್ಲಿ ನೋಡಿ, ಹೊಟ್ಟೆಹಿಡಿದು ನಕ್ಕರು.

ಈ ಪ್ರಹಸನದಲ್ಲಿ ಯಾರಾದರೂ ಪಾಕಿಸ್ಥಾನವನ್ನು ಸಂಧಾನಕಾರ, ಮಧ್ಯಸ್ಥಿಕೆದಾರ ಅಥವಾ ಶಾಂತಿಮಾತುಕತೆಯ ಮುತ್ಸದ್ದಿ ಪಾಲುದಾರ ಎಂದುಕೊಂಡಿದ್ದರೆ ಅದಕ್ಕಿಂತಾ ದೊಡ್ಡ ತಪ್ಪುತಿಳುವಳಿಕೆ ಇನ್ನೊಂದಿಲ್ಲ. ಅಮೇರಿಕಾಕ್ಕೆ ಏಷ್ಯಾದಲ್ಲಿ ತನ್ನ ಮಾತನ್ನು ಹೇಳಿದಂತೆಯೇ ತಲುಪಿಸಿ ಪೋಸ್ಟ್- ಮ್ಯಾನ್ ಕೆಲಸ ಮಾಡುವ ಒಬ್ಬ ಸಂದೇಶಗಾರ ಬೇಕಿತ್ತು. ಅರಬ್ ದೇಶಗಳು ಯುದ್ಧದಿಂದ ಹೊರಗೇ ಇರುತ್ತೇವೆ ಎಂದು ಹೇಳಿದ್ದರಿಂದ, ಸಂಧಾನಕ್ಕೆ ಸೂಕ್ತ ಸ್ಥಳಗಳಾಗಿರಲಿಲ್ಲ. ಪಾಕಿಸ್ಥಾನದಲ್ಲಿ ಸದ್ಯಕ್ಕೆ ಶೆಹ್ಬಾಜ್ ಶರೀಫ್‌ಗಿಂತಲೂ ಶಕ್ತಿಶಾಲಿಯಾಗಿರುವ ಅಲ್ಲಿನ ಸೇನಾಧ್ಯಕ್ಷ ಅಸೀಫ್ ಮುನೀರ್, ಅಮೇರಿಕನ್ ಸೈನ್ಯದಲ್ಲಿರುವ ತನ್ನ ಗಾಲ್ಫ್ ದೋಸ್ತಿಗಳಿಗೆ ಫೋನಾಯಿಸಿ, ನೋಡಿ ಬೇಕಾದರೆ ನಾವಿದ್ದೇವೆ ಮಾತುಕತೆಗೆ ಎಂದಿದ್ದಕ್ಕೆ ಇಷ್ಟೆಲ್ಲಾ ಕತೆ ನಡೆದದ್ದು. ಈ ಮಾತುಕತೆಯಲ್ಲಿ ಪಾಕಿಸ್ಥಾನ 'ಬನ್ನಿ, ಈ ಈ ವಿಚಾರಗಳ ಬಗ್ಗೆ ಮಾತಾಡೋಣ, ಸಂಧಾನ ಮಾತುಕತೆಗೆ ನಮ್ಮ ಪ್ರಕಾರ ಈ ಹತ್ತು ಅಂಶಗಳ ಪ್ರಣಾಳಿಕೆಯನ್ನು ನಾವು ತಯಾರಿಸಿದ್ದೇವೆ' ಎಂದೇನೂ ಹೇಳಲಿಲ್ಲ. ಬದಲಿಗೆ? ಎರಡೂ ಪಾರ್ಟಿಗಳು ಕೊಟ್ಟ ತಮ್ಮತಮ್ಮ ಹತ್ತು ಹದಿಮೂರು ಅಂಶಗಳ ಪಟ್ಟಿಯನ್ನು ಅಲ್ಲಿಂದಿಲ್ಲಿಗೇ, ಇಲ್ಲಿಂದಲ್ಲಿಗೇ ಮಾಡಿದ್ದು ಬಿಟ್ಟರೆ ಪಾಕಿಸ್ಥಾನದ ಹೆಗ್ಗಳಿಕೆ ಈ ಇಡೀ ಪ್ರಕ್ರಿಯೆಯಲ್ಲಿ ಏನೇನೂ ಇಲ್ಲ. ಆ ಪೋಸ್ಟ್-ಮ್ಯಾನ್ ಕೆಲಸವನ್ನೂ ಸರಿಯಾಗಿ ಮಾಡದ ಪಾಕಿಗಳು ಇರಾನಿಗಳು ಕೊಟ್ಟ ತಮ್ಮ ಪಟ್ಟಿಯನ್ನು ಸರಿಯಾಗಿ ಇಂಗ್ಲೀಷಿಗೆ ತರ್ಜುಮೆಯನ್ನೂ ಮಾಡದೇ ಅಮೇರಿಕಾಕ್ಕೆ ಕೊಟ್ಟಿದ್ದಾರೆ. ಅತ್ತ ಕಡೆ ಇಸ್ರೇಲ್ ಮತ್ತು ಅಮೇರಿಕಾ ಈ ಯುದ್ಧವಿರಾಮ ಇರಾನ್'ಗೆ ಮಾತ್ರ ಅನ್ವಯವಾಗುತ್ತದೆ ಎಂದಿದ್ದನ್ನ ಇರಾನಿಗಳಿಗೆ ಹೇಳಲೇ ಇಲ್ಲ. ಲೆಬನಾನ್ ಅನ್ನೂ ಯುದ್ಧವಿರಾಮದ ಮಾತುಕತೆಯೊಳಗೆ ತಾವೇ ಸೇರಿಸಿ, ಘೋಷಿಸಿ, ಲೆಬನಾನಿನಲ್ಲಿ ಜನ 'ಅಬ್ಬಾ ಸದ್ಯಕ್ಕೆ ವಿರಾಮ ಬಂತು' ಎಂದು ನಿಟ್ಟುಸಿರು ಬಿಟ್ಟು ಮನೆಗಳಿಂದ ಹೊರಗೆ ಬಂದು, ಹತ್ತೇ ನಿಮಿಷದಲ್ಲಿ ಇಸ್ರೇಲ್ ಬಾಂಬ್ ದಾಳಿಗೆ ಸಿಕ್ಕು 250 ಜನ ಸುಖಾಸುಮ್ಮನೇ ಪ್ರಾಣ ಕಳೆದುಕೊಂಡರು.

ಆ ಕಡೆ ಇರಾನಿನ ಮುಖ್ಯ ಸ್ನೇಹಿತ ಚೀನಾ ಕೂಡಾ ಪಾಕಿಸ್ಥಾನಕ್ಕೆ ಆಗಾಗ ಹಳಸಿದ ಅನ್ನವನ್ನು ಹಾಕಿ ಸಾಕಿಟ್ಟುಕೊಂಡಿರುವ ವಿಚಾರ ಎಲ್ಲರಿಗೂ ತಿಳಿದದ್ದೇ. ಚೀನಾದ ಒತ್ತಾಯದಂತೆ ಕೊನೆಗೂ ಇರಾನ್ ಪಾಕಿಸ್ಥಾನದಲ್ಲಿ ಸಂಧಾನ ಮಾತುಕತೆಗೆ ಒಪ್ಪಿದ್ದೇ ಹೊರತು, ಪಾಕಿಸ್ಥಾನದ ಮುತ್ಸದ್ದಿತನವನ್ನು ನಂಬಿ ಅಲ್ಲ.

ಆದರೆ ಈಗ ತಮಾಷೆ ನೋಡಿ. ಸಂಧಾನ ಮುರಿದುಬಿದ್ದ ಬೆನ್ನಹಿಂದೆಯೇ, ತನ್ನ ಮತ್ತು ಸೌದಿ ಅರೇಬಿಯಾದ ನಡುವೆ ಇರುವ ಒಪ್ಪಂದದಂತೆ, ಸೌದಿಯ ಮೇಲೆ ನಡೆದ ಧಾಳಿಯ ವಿರುದ್ಧ (ಅಂದರೆ ಇರಾನ್ ನಡೆಸಿದ ದಾಳಿಯ ವಿರುದ್ಧ) ಹೋರಾಡಲಿಕ್ಕೆ ತನ್ನ ಹದಿಮೂರು ಸಾವಿರ ಸೈನಿಕರನ್ನೂ, ಒಂದಷ್ಟು ಜೆಟ್ ವಿಮಾನಗಳನ್ನೂ ಕಳುಹಿಸಿದೆ. ಈ ಕಡೆ ಇರಾನ್ ಜೊತೆ ಸಂಧಾನ ಮಾತುಕತೆ ನಡೆಸುತ್ತೇನೆಂದು ಹೇಳಿದ ಒಂದೇ ವಾರದಲ್ಲಿ, ಯೂ-ಟರ್ನ್ ಹೊಡೆದ ಪಾಕಿಸ್ಥಾನ ಆ ಕಡೆ ಇರಾನ್ ವಿರುದ್ಧವೇ ಹೋರಾಡಲಿಕ್ಕೆ ತನ್ನ ಸೈನಿಕರನ್ನು ಕಳುಹಿಸಿದೆ. ಈ ಎಡಬಿಡಂಗಿಗಳು ಯಾವ ಮುಖ ಇಟ್ಟುಕೊಂಡು, ಎರಡನೇ ಸುತ್ತಿನ ಮಾತುಕತೆಗೆ ಇರಾನಿನ ನಾಯಕರನ್ನು ಕರೆಸುತ್ತಾರೆ!? ಬೆಣೆ ಬಿಡಿಸಲು ಹೋಗಿ ಬಾಲ ಸಿಗಿಸಿಕೊಂಡ ಪರಿಸ್ಥಿತಿ ಈಗ ಪಾಕಿಸ್ಥಾನದ್ದು!

ಈ ಮಧ್ಯಸ್ಥಿಕೆ ಅಮೇರಿಕಕ್ಕೂ ಇರಾನಿಗೂ ಹಾಗೂ ಜಗತ್ತಿಗೂ ಅಗತ್ಯವಿದೆಯೋ ಇಲ್ಲವೋ, ಪಾಕಿಸ್ಥಾನಕ್ಕೆ ಮಾತ್ರ ನೂರಕ್ಕೆ ನೂರು ಅಗತ್ಯವಿತ್ತು. ಇವತ್ತೋ ನಾಳೆಯೋ ಅಂತರ್ದಹಿಸಿಯೋ, ಕುಸಿದೋ ಬಿದ್ದುಹೋಗುವ ಹಂತದಲ್ಲಿರುವ ಪಾಕಿಸ್ಥಾನಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತಲೆಯೆತ್ತಿ ನಿಲ್ಲಲಿಕ್ಕೆ ಒಂದು ಊರುಗೋಲು ಬೇಕಾಗಿತ್ತು. ಆಪರೇಷನ್ ಸಿಂಧೂರ್‌ನಿಂದ ಆಗಿರುವ ಮಂಗಳಾರತಿಯ ಉರಿ ಇನ್ನೂ ಇಳಿದಿಲ್ಲ. ಸ್ನೇಹಿತನೆಂದು ಹೇಳಿಕೊಂಡಿರುವ ಚೀನಾ ಕೂಡ ಇದುವರೆಗೂ ಒಂದೇ ಒಂದು ಆಲಿಂಗನ ಕೊಟ್ಟು ಸಮಾಧಾನ ಮಾಡಿಲ್ಲ. ಒಳಗಿನ ಉರಿ ಆರಿಲ್ಲ, ಅಷ್ಟೊತ್ತಿಗೇ ಈ ಹೊಸ ಯುದ್ಧದಿಂದ ಉಂಟಾಗಿರುವ ತೈಲ ಕೊರತೆಯ ಹೊಡೆತಕ್ಕೆ ಪಾಕಿಸ್ಥಾನದ ಸರ್ಕಾರಿ ವಾಹನಗಳೇ ಓಡುತ್ತಿಲ್ಲ. ಲೋಡ್ ಶೆಡ್ಡಿಂಗ್ ಶುರುವಾಗಿ, ಆಫೀಸುಗಳಲ್ಲಿ ಫ್ಯಾನ್ ಬಂದ್ ಆಗಿದೆ. ಪೂರ್ತಿ ಸಂಬಳ ಸರಿಯಾಗಿ ಪಾವತಿಸಿ ತಿಂಗಳುಗಳೇ ಕಳೆದಿವೆ. ಅಕ್ಷರಶಃ ಮುಳುಗುತ್ತಿರುವ ದೋಣಿಯಾಗಿರುವ ಪಾಕಿಸ್ಥಾನಕ್ಕೊಂದು ರಾಜತಾಂತ್ರಿಕ ಆಸರೆ ಬೇಕಿದೆ. ಅದಕ್ಕೇ ಈ ಮಧ್ಯಸ್ಥಿಕೆಯ ನಾಟಕದಲ್ಲಿ ಪಾತ್ರವಹಿಸುತ್ತಿದೆ.

ಅಂದಹಾಗೆ, ಭಾರತಕ್ಕೆ ಈ ಮಧ್ಯಸ್ಥಿಕೆಯ ಅವಕಾಶ ಸಿಕ್ಕಿಲ್ಲ ಅಂತಾ ಬಾಯಿಬಡಿದುಕೊಳ್ಳುತ್ತಿರುವವರ ಗಮನಕ್ಕೆ ಕೆಲಮಾತುಗಳು. ಭಾರತಕ್ಕೆ ಯಾವ ದೇಶಗಳ ಮಾತು ಕೇಳಿ ತನ್ನ ನೀತಿ ನಿಯಮಾವಳಿಗಳನ್ನು ರೂಪಿಸುವ ಅಗತ್ಯ ಇಲ್ಲ. ಭಾರತಕ್ಕೆ ಯಾವ ದೇಶಗಳ ನಡುವೆ ಮಧ್ಯಸ್ಥಿಕೆ ವಹಿಸುವ ಯಾವ ಅಗತ್ಯವೂ ಇಲ್ಲ. ವಿಶೇಷವಾಗಿ ಈ ಹುಚ್ಚು ದೇಶಗಳಾದ ಅಮೇರಿಕ ಮತ್ತು ಇರಾನ್ ನಡುವಂತೂ ಮಧ್ಯಸ್ಥಿಕೆ ನಡೆಸುವ ಅಗತ್ಯವಿಲ್ಲ. ಈ ಹಿಂದೆಯೂ ಭಾರತ ಇಂತಹಾ ಮಧ್ಯಸ್ಥಿಕೆಗಳಿಗೆ ಮುಂದಾಗಿಲ್ಲ. ಈಗಲೂ ಅದರ ಅಗತ್ಯವಿಲ್ಲ. 'ಅಲಿಪ್ತ ನೀತಿ'ಯೆಂದರೆ ಯುದ್ಧದಲ್ಲಿ ಪರವಹಿಸದೇ ಇರುವುದು ಮಾತ್ರವಲ್ಲ. ಶಾಂತಿಯಲ್ಲೂ ಯಾವ ಪರವನ್ನೂ ವಹಿಸಿದೇ, ನಮ್ಮದೆಷ್ಟಿದೆ ಅದನ್ನು ನೋಡಿಕೊಂಡಿರುವುದು. ಹಾಗೂ ಭಾರತ ತನ್ನ ಅಲಿಪ್ತತೆಯ ನೀತಿಯನ್ನು ಸರಿಯಾಗಿಯೇ ನಿಭಾಯಿಸಿದೆ.

ಕೊನೆಯಮಾತು: ಈ ಸಂಧಾನ ಮಾತುಕತೆಗಳಿಗೊಪ್ಪದೇ ಹೊರನಡೆದಲ್ಲಿ ಹೆಚ್ಚಿನ ನಷ್ಟ ಇರಾನಿಗೇ ಹೊರತು ಅಮೇರಿಕಾಕ್ಕಲ್ಲ. ಅಮೇರಿಕಾ ಹತ್ತು ಸರ್ಕಸ್ಸುಗಳನ್ನು ಮಾಡಿ, ಇದರಿಂದ ಹೊರಬಂದು ಮೈಕೊಡವಿ ನಿಲ್ಲಲಿದೆ. ಅದಾಗಲೇ ಒಂದೇ ಒಂದು ಕುಂಟುಗಾಲಿನಲ್ಲಿ ನಿಂತಿರುವ ಗಾಯಾಳು ಇರಾನ್, ಸಿಕ್ಕ ಹುಲ್ಲುಕಡ್ಡಿಯನ್ನು ಬಳಸಿಕೊಳ್ಳದೇ ಹೋದರೆ, ಮುಳುಗುವುದು ಖಚಿತ. ಇದರೊಂದಿಗೇ ಅಮೇರಿಕಾ ಮತ್ತಷ್ಟು ದೇಶಗಳ ಮೇಲೆ ರೌಡಿ ವರ್ತನೆ ಮಾಡುವುದೂ ಖಚಿತ.

ಅರಿವನ್ನು ಪರೀಕ್ಷಿಸಿ

ಅಕ್ಷರಾಣಿ ಪರೀಕ್ಷ್ಯಂತಾಂ ಅಂಬರಾಡಂಬರೇಣ ಕಿಮ್।
ಶುಂಭುರಂಬರಹೀನೋಽಪಿ ಸರ್ವಜ್ಞಃ ಕಿಂ ನ ಜಾಯತೇ ॥

-ಸುಭಾಷಿತಾ ರತ್ನ ಭಾಂಡಾಗಾರ

ಅಕ್ಷರವನ್ನು (ತಿಳಿವನ್ನು) ಪರೀಕ್ಷಿಸಿ. ಬಟ್ಟೆಯ ಆಡಂಬರದಿಂದೇನು? ಈಶ್ವರನು ದಿಗಂಬರನಾಗಿದ್ದರೂ ಸರ್ವಜ್ಞನಾಗಿಲ್ಲವೇನು? -ಎಂಬುದು ಶ್ಲೋಕಾರ್ಥ.

ಇಂದು ಮನುಷ್ಯರನ್ನು ಗುರುತಿಸುವ ರೀತಿ ಸಾಕಷ್ಟು ಬದಲಾಗಿದೆ. ಅವರ ಕುಲಗೋತ್ರ ನೋಡುತ್ತಾರೆ. ಬಡವನೋ ಬಲ್ಲಿದನೋ ಎಂಬುದನ್ನು ಗಮನಿಸುತ್ತಾರೆ. ಅವರ ಉಡುಗೆ ತೊಡುಗೆಗಳನ್ನು ಅವಲೋಕಿಸುತ್ತಾರೆ. ಸ್ಥಾನಮಾನ, ಪ್ರತಿಷ್ಠೆಗಳನ್ನು ಲೆಕ್ಕ ಹಾಕುತ್ತಾರೆ. ಉತ್ತಮ ಕುಲದವನಾದರೆ, ಶ್ರೀಮಂತನಾದರೆ, ಆಡಂಬರದ ಪೋಷಾಕು ಧರಿಸಿದ್ದರೆ, ವಿಶೇಷ ಸ್ಥಾನಮಾನ ಹೊಂದಿದ್ದರೆ ಸತ್ಕರಿಸುವ, ಸ್ವಾಗತಿಸುವ ಪರಿಯೇ ಬೇರೆ. ಇವು ಯಾವುದೂ ಇಲ್ಲದಿದ್ದರೆ ನೋಡುವ ದೃಷ್ಟಿಯೇ ಬೇರೆ.

ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದ ಮೇಲೆ ಕವಿಯು ನಿರ್ಣಯ ರೂಪದಲ್ಲಿ ವಿಚಾರವನ್ನು ಮಂಡಿಸುತ್ತಾನೆ. ಮನುಷ್ಯರನ್ನು ಗುರುತಿಸುವುದು ಜ್ಞಾನದ ಮೂಲಕ. ಅವರ ತಿಳುವಳಿಕೆಯ ಹಿನ್ನೆಲೆಯಲ್ಲಿ. ನಿಜವಾದ ಜ್ಞಾನಿಯು ಲೌಕಿಕ ಆಡಂಬರಕ್ಕೆ ಬೆಲೆ ಕೊಡುವುದಿಲ್ಲ. ಜ್ಞಾನ ಮೂಲದತ್ತ ಚಿಂತಿಸುತ್ತಾನೆ. ಜ್ಞಾನ ವಿಶೇಷದತ್ತ ಗಮನವೀಯುತ್ತಾನೆ. "ನ ಹಿ ಜ್ಞಾನೇನ ಸದೃಶಮ್' 'ಜ್ಞಾನಂ ಬ್ರಹ್ಮೇತಿ ವ್ಯಜಾನಾತ್ ' ' ಪ್ರಜ್ಞಾನಂ ಬ್ರಹ್ಮ'.... ಈ ಎಲ್ಲ ಶ್ರೇಷ್ಠ ವಾಕ್ಯಗಳು ಪರಬ್ರಹ್ಮನನ್ನು ಪ್ರತಿನಿಧಿಸುತ್ತವೆ. ಪರಮ ತತ್ವವನ್ನು ಪ್ರತಿಪಾದಿಸುತ್ತವೆ. ಪರಮಪದವು ಜ್ಞಾನ ಮಾರ್ಗದಲ್ಲಿ ಪ್ರಾಪ್ತಿಯಾಗುತ್ತದೆ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಸನಾತನ ಪರಂಪರೆ ಜ್ಞಾನೋಪಾಸನೆಗೆ ಅತ್ಯಂತ ಮಹತ್ವವನ್ನು ನೀಡಿದೆ. ಸನಾತನ ಪ್ರಪಂಚದಲ್ಲಿ ವ್ಯಕ್ತಿಯೋರ್ವನನ್ನು ಗುರುತಿಸುವುದು ಜ್ಞಾನದ ಹಿನ್ನೆಲೆಯಲ್ಲಿ, ವಿದ್ಯೆಯ ಆಧಾರದಲ್ಲಿ. ವಿದ್ಯಾವಂತನು ಎಲ್ಲೆಡೆಯಿಂದಲೂ ಗೌರವ ಪಡೆಯುವುದರಿಂದ "ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ಉಕ್ತಿ ಜನಜನಿತವಾಗಿದೆ.

ಲೋಕದಲ್ಲಿ ವ್ಯಕ್ತಿಯನ್ನು ಅವನ ಅರಿವಿನ ಹಿನ್ನೆಲೆಯಿಂದಲೇ ಗುರುತಿಸಬೇಕು. ವಿದ್ಯಾವಂತನಿಗೆ, ಜ್ಞಾನಿಗೆ ಎಲ್ಲೆಡೆಯಲ್ಲೂ ಯಾವಾಗಲೂ ಗೌರವವಿದ್ದೇ ಇರುತ್ತದೆ. ಜ್ಞಾನಕ್ಕೇ ಬೆಲೆಯೇ ಹೊರತು ಹೊರಗಿನ ಆಡಂಬರಕ್ಕಲ್ಲ. ಪಾಂಡಿತ್ಯವೆಂಬುದು ಸಾರ್ವಕಾಲಿಕ ಹಾಗೂ ಸಾರ್ವತ್ರಿಕ. ಆದ್ದರಿಂದ ವ್ಯಕ್ತಿಯನ್ನು ಜ್ಞಾನದ ಹಿನ್ನೆಲೆಯಲ್ಲಿಯೇ ಅಳೆಯಬೇಕು, ಗುರುತಿಸಬೇಕು.

ಸಮುದ್ರರಾಜನು ಪೀತಾಂಬರಧಾರಿಯಾದ ಮಹಾವಿಷ್ಣುವನ್ನು ನೋಡಿ ಲಕ್ಷ್ಮಿಯನ್ನು ಕೊಟ್ಟನಂತೆ, ಚರ್ಮಾಂಬರಧಾರಿಯಾದ ಶಿವನನ್ನು ನೋಡಿ ವಿಷವನ್ನಿತ್ತನಂತೆ ಎನ್ನುತ್ತಾ ವಸ್ತ್ರಾಲಂಕಾರವೇ ಮುಖ್ಯ ಎನ್ನುವ ಸುಭಾಷಿತವೂ ಇದೆ. ಶಂಭುವು ವಸ್ತ್ರಹೀನನಾದರೂ ದಿಗಂಬರ. ಸರ್ವಜ್ಞನು ಅವನೊಬ್ಬನೇ. ಸರ್ವಜ್ಞ ಪದವಿಗೆ ಏರಿದವ ಅವನು ಮಾತ್ರ. ದಿಗಂಬರತ್ವ ಅವನ ಯೋಗ್ಯತೆಯನ್ನು ತಡೆಯಲಿಲ್ಲ. ಅಂಬರಹೀನತ್ವವೆಂಬುದು ಜ್ಞಾನಿಗಳ ಜ್ಞಾನಿ ಎಂದು ಗೌರವಿಸುವುದಕ್ಕೆ ತಡೆಯೊಡ್ಡಿಲ್ಲ.

ಆದ್ದರಿಂದ ಜ್ಞಾನಸಿದ್ಧಿಗೆ, ಜ್ಞಾನವೃದ್ಧಿಗೆ, ಜ್ಞಾನಾಭಿವೃದ್ಧಿಗೆ ಜ್ಞಾನಸಿದ್ಧರಾಗಿ ತೊಡಗಿಕೊಳ್ಳಬೇಕು. 'ಜ್ಞಾನೇ ಸರ್ವಂ ಪ್ರತಿಷ್ಠಿತಮ'. ಜ್ಞಾನದಲ್ಲಿಯೇ ಎಲ್ಲವೂ ಇದೆ.

ಆರ್ಯರು ಮೂಲತಃ ಗೋಪಾಲಕರು

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಪುರಾತನ ಕಾಲದಿಂದಲೂ ಭಾರತದಲ್ಲಿ ಹಲವಾರು ಉತ್ತಮ ತಳಿಯ ದನಗಳಿದ್ದವು. ಇವುಗಳಲ್ಲಿ ಕೆಲವು ಏಕೋದ್ದೇಶದ ಬಳಕೆಯ ದನಗಳಾಗಿ ರೂಪುಗೊಂಡಿದ್ದರೆ, ಇನ್ನು ಕೆಲವು ದ್ವಂದ್ವೋದ್ದೇಶದ ಬಳಕೆಯ ದನಗಳಾಗಿ ಉಪಯೋಗಕ್ಕೆ ಬರುತ್ತಿವೆ. ಇಂತಹ ದನಗಳ ಪಾಲನೆ ಪೋಷಣೆ ಮತ್ತು ತಳಿ ಅಭಿವೃದ್ಧಿಯ ನಿರ್ವಹಣೆಯನ್ನು ಕಾಲಕಾಲಕ್ಕೆ ಆಡಳಿತ ನಡೆಸಿದ ಅಂದಿನ ಅರಸರು ಹಾಗೂ ಸಾರ್ವಜನಿಕರು ಹೆಚ್ಚು ಆಸಕ್ತಿಯಿಂದ ನಡೆಸಿದ್ದರ ಪರಿಣಾಮವಾಗಿ ಅಂತಹ ದನಗಳ ತಳಿಗಳು ಶುದ್ಧ ಸ್ಥಿತಿಯಲ್ಲಿಯೇ ಇಂದಿಗೂ ಅಲ್ಲಲ್ಲಿ ನಮಗೆ ಕಂಡು ಬರುತ್ತಿವೆ. ಹಾಗೆಯೇ ಭಾರತದ ಪಶುಪಾಲನಾ ಪದ್ಧತಿ ಬೇರೆ ದೇಶಗಳಿಗಿಂತ ಶ್ರೇಷ್ಠ ಮಟ್ಟದ್ದಾಗಿತ್ತೆಂದು ನಮ್ಮ ವೇದ ಪುರಾಣಗಳೇ ಸ್ಪಷ್ಟೀಕರಿಸುತ್ತವೆ. ಇಂದು ನಾವು ಡೆನ್ಮಾರ್ಕ್, ಹಾಲೆಂಡ್, ಅಮೆರಿಕಾ, ಆಸ್ಟ್ರೇಲಿಯಾದಂತಹ ಮುಂದುವರೆದ ದೇಶಗಳಿಂದ ಹೈನು ಉತ್ಪಾದನಾ ತಳಿಗಳನ್ನು ಹೇಗೆ ಆಮದು ಮಾಡಿಕೊಳ್ಳುತ್ತಿದ್ದೇವೆಯೋ ಅದೇ ರೀತಿ ವಿದೇಶಿಯರು ಸಹ ನಮ್ಮಲ್ಲಿಯ ಉತ್ಕೃಷ್ಟ ತಳಿಗಳನ್ನು ಇಲ್ಲಿಂದ ಕೊಂಡುಹೋಗುತ್ತಿದ್ದುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ನಮ್ಮ ದೇಶದ ದನಗಳ ಇತಿಹಾಸವನ್ನು ಆರ್ಯರ ಪುರಾತನ ಇತಿಹಾಸವಿಲ್ಲದೆ ಅರಿಯಲು ಸಾಧ್ಯವೇ ಇಲ್ಲ ಎಂಬುದು ಬಹುತೇಕ ತಜ್ಞರ ಅಭಿಪ್ರಾಯ. ಅದು ನಿಜವೂ ಹೌದು. ಮೊದಲು ಆರ್ಯರ ಆಕ್ರಮಣ ಒಂದು ಸಿದ್ಧಾಂತ ಎಂದು ಹೇಳುತ್ತಿದ್ದ ಬ್ರಿಟಿಷರನ್ನೊಳಗೊಂಡಂತೆ ಎಲ್ಲಾ ಪಾಶ್ಚಿಮಾತ್ಯರು ಹಾಗೂ ಇತಿಹಾಸಕಾರರು ಇಂದು ಅದು ಸುಳ್ಳೆಂದು ಸಾಬೀತಾದ ಮೇಲೆ, ಅದು ಆರ್ಯರ ಆಕ್ರಮಣವಲ್ಲ, ಆರ್ಯರ ವಲಸೆ ಎಂಬುದಾಗಿ ತಮ್ಮ ವರಸೆ ಬದಲಿಸಿದ್ದಾರೆ. ಇದರಿಂದ ಆರ್ಯರು ಬೇರೆ ದೇಶದಿಂದ ವಲಸೆ ಬಂದವರು ಎಂಬುದು ಸಹಾ ಶುದ್ಧ ಸುಳ್ಳೆಂದು ಸಾಬೀತಾಗಿದೆ.

ಆರ್ಯ ಎಂದರೆ ಗೋಪಾಲಕ ಎಂದರ್ಥ. ಇವರ ಮೂಲ ಮತ್ತು ಮುಖ್ಯ ಕಸಬು ಪಶುಪಾಲನೆಯಾಗಿತ್ತು. ಇದರಿಂದ ಇವರಿಗೆ ಪಶುಪಾಲನೆ, ಪೋಷಣೆ ಮತ್ತು ಸಂವರ್ಧನೆಯಲ್ಲಿ ಹೆಚ್ಚಿನ ಪರಿಣತಿಯಿತ್ತು. ಆದ್ದರಿಂದ ಇವರಲ್ಲಿನ ಪಶುಪಾಲಕರನ್ನು ಗೊಲ್ಲರು, ದನಗಾಹಿಗಳು ಎಂಬುದಾಗಿ ಕರೆಯುತ್ತಿದ್ದರು. ಇವರಲ್ಲಿ ಪಶು ಸಂಪತ್ತು ವಿಪುಲವಾಗಿದ್ದರಿಂದ ದನಗಳ ಹಿಂಡೇ ಇವರ ಸಂಪತ್ತಾಗಿತ್ತು. ಹೀಗಾಗಿ ಒಬ್ಬರ ಗೋವುಗಳನ್ನು ಮತ್ತೊಬ್ಬರು ಹಿಡಿದು ತಂದು ತಮ್ಮ ಹಿಂಡನ್ನು ವೃದ್ಧಿಸಿಕೊಳ್ಳುವ ಕಾರ್ಯ ಆಗಾಗ ನಡೆಯುತ್ತಿತ್ತು. ಈ ಕಾರಣಕ್ಕಾಗಿಯೇ ಅವರಲ್ಲಿ ಆಗಾಗ್ಗೆ ಜಗಳ, ಹೊಡೆದಾಟ, ಯುದ್ಧಗಳೂ ಸಹ ಆಗುತ್ತಿದ್ದವು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಹೀಗೆ ಯಾರ ಹತ್ತಿರ ಹೆಚ್ಚು ದನಗಳ ಸಂಗ್ರಹವಿರುತ್ತಿದ್ದವೋ ಅವನನ್ನೇ ರಾಜ, ಅಧಿನಾಯಕ ಇಲ್ಲವೇ ಸಮಾಜದ ಮುಖ್ಯಸ್ಥನೆಂದು ಕರೆಯುವುದು ವಾಡಿಕೆಯಾಗಿತ್ತು.

ಇದೇ ಕಾರಣಕ್ಕೆ ಆರ್ಯರ ಇತಿಹಾಸಕ್ಕೂ ಈ ದೇಶದ ಉತ್ತಮ ಗೋತಳಿಗಳ ಇತಿಹಾಸಕ್ಕೂ ಪರಸ್ಪರ ಸಂಬಂಧವಿದೆ ಎಂದು ಹೇಳಲಾಗುತ್ತಿರುವುದು. ಇದಕ್ಕೆ ಸಾಕ್ಷಿ ನಮ್ಮಲ್ಲಿಯ ವಿವಿಧ ಜಾತಿಯ ದನಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಾರ್ಯದಲ್ಲಿ ಆರ್ಯರ ಪಾತ್ರ ಅತ್ಯಂತ ಪ್ರಮುಖವಾಗಿ ಕಂಡುಬಂದಿರುವುದು. ಹೀಗಾಗಿಯೇ ಆರ್ಯರನ್ನು ಇಂದಿನ ಉತ್ಕೃಷ್ಟ ಗೋ ತಳಿಗಳ ಮೂಲ ಪುರುಷರು ಎಂದು ಹೇಳಲಾಗುತ್ತಿರುವುದು. ಅಷ್ಟೇ ಅಲ್ಲದೆ ಆರ್ಯರ ಪುರಾತನ ಇತಿಹಾಸ ಇಂದಿನ ನಮ್ಮಲ್ಲಿಯ ದನಗಳ ಇತಿಹಾಸಕ್ಕೆ ದಾರಿದೀಪದಂತೆ ಕಂಡುಬಂದಿರುವುದು.

ಇಂದು ನಮ್ಮಲ್ಲಿರುವ ಉತ್ತರ ಭಾರತದ ತಳಿಗಳಾದ ಕಾಂಕ್ರೇಜ್ ಮತ್ತು ಗೀರ್ ಹಾಗೂ ಕರ್ನಾಟಕದ ಹೆಸರಾಂತ ತಳಿಯಾದ ಹಳ್ಳಿಕಾರ್ ದನಗಳೇ ಭಾರತದ ಪುರಾತನ ಇತಿಹಾಸ ಪ್ರಸಿದ್ಧವಾದ ಮೂಲ ತಳಿಗಳು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಹಾಗೆಯೇ ಈ ಮೂರು ತಳಿಗಳನ್ನು ನಮ್ಮಲ್ಲಿ ಸಾಕಿ ಸಂವರ್ಧಿಸಿರುವುದಕ್ಕೆ ಸುಮಾರು 2000 ವರ್ಷಗಳ ಹಿಂದಿನ ಇತಿಹಾಸವಿರುವುದು ಸಹ ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಋಗ್ವೇದದಲ್ಲಿ ಸಿಂಧು ನದಿಯ ಬಯಲು ಮತ್ತು ಅದರ ಉಪನದಿಯಾದ ಗೋಮಾಲ ತೀರ ಪ್ರದೇಶಗಳು ಬಹಳ ಫಲವತ್ತಾದ ಪ್ರದೇಶಗಳನ್ನು ಹೊಂದಿದ್ದು, ಅಲ್ಲಿ ಉತ್ತಮ ದನಗಳ ಹಿಂಡು ಇತ್ತೆಂದು ಹೇಳಲಾಗಿರುವುದು. ಈ ಪ್ರದೇಶ ದಲ್ಲಿಯೇ ಆರ್ಯರು ಬಹಳ ಕಾಲದವರೆಗೆ ನೆಲೆಸಿದ್ದರು ಎಂದು ಸಹ ಹೇಳಲಾಗುತ್ತದೆ. ಹಾಗೆಯೇ ಮೊಹೆಂಜೋದಾರೋ ಮತ್ತು ಹರಪ್ಪಗಳಲ್ಲಿ ಸಿಕ್ಕಿರುವ ಪುರಾತನ ಅವಶೇಷಗಳಲ್ಲಿ ದನಗಳ ಮುದ್ರೆ ಮತ್ತು ಎಲುಬುಗಳು ದೊರೆತಿವೆ. ಈ ಎಲುಬುಗಳು ಎತ್ತರವಾದ, ದೊಡ್ಡ ಡುಬ್ಬಗಳನ್ನೊಳಗೊಂಡ ಮತ್ತು ಉದ್ದ ಕೋಡಿನ ದನಗಳದ್ದು ಎಂಬುದಾಗಿ ಸಂಶೋಧಕರು ದೃಢಪಡಿಸಿ ದ್ದಾರೆ. ಅಚ್ಚರಿಯೇನೆಂದರೆ ಹೀಗೆ ಅವರ ಬಳಿಯಿದ್ದ ಆ ದನಗಳ ಎಲ್ಲಾ ಹೋಲಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅದು ಇಂದಿನ ನಮ್ಮ ಉತ್ತರ ಭಾರತದ ಕಾಂಕ್ರೇಜ್ ತಳಿಯನ್ನು ಬಹುತೇಕ ಹೋಲುತ್ತಿರುವುದು ದೃಢಪಟ್ಟಿದೆ.

ಆರ್ಯರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಇಲ್ಲವೇ ಮತ್ತಿನ್ಯಾವುದೋ ಕಾರಣಕ್ಕೆ ಹೋದಾಗಲೆಲ್ಲಾ ಅವರ ಜೊತೆಗಿದ್ದ ದನ, ನಡೆ-ನುಡಿ, ಸಂಸ್ಕೃತಿ, ನಾಗರೀಕತೆಗಳನ್ನು ಸಹ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತಿದ್ದರು ಎಂಬುದನ್ನು ಅಧ್ಯಯನಗಳು ಹೇಳುತ್ತವೆ. ಹೀಗೆ ಅವರು ತಮ್ಮ ಜೊತೆಯಲ್ಲಿ ಕೊಂಡೊಯ್ದ ದನಗಳೇ ನಮ್ಮ ದೇಶದ ಮೂಲ ತಳಿಯ ದನಗಳೆಂದು ಕೆಲವು ಇತಿಹಾಸ ತಜ್ಞರು ಅಭಿಪ್ರಾಯಿಸುತ್ತಾರೆ. ಹೀಗಾಗಿಯೇ ಉತ್ತರದ ಹರಿಯಾಣವಿ, ಮೇವಡಿ ಹಾಗೂ ನಗೋರಿ, ದಕ್ಷಿಣದ ಗವ್ಲೋಲೋ, ಓಂಗೋಲ್, ಕೃಷ್ಣಾತೀರ, ಬಚಾರ್ ಹಾಗೂ ಕೆರಿಫೆಡ್ ದನಗಳು ಆರ್ಯರ ಮೂಲ ದನಗಳಿಂದ ರೂಪುಗೊಂಡಿರುವ ದನಗಳು ಎಂಬುದಾಗಿ ಹೇಳಲಾಗುತ್ತದೆ. ಇದಕ್ಕೆ ನಿದರ್ಶನ ಆರ್ಯರು ಹೇಗೆ ಹೇಗೆ ಹರಡಿಕೊಂಡರೋ, ಎಲ್ಲೆಲ್ಲಿ ನೆಲೆಸಿದ್ದರೋ ಅಲ್ಲೆಲ್ಲಾ ಆರ್ಯರ ಈ ತಳಿಯ ದನಗಳು ಇಂದಿಗೂ ಹೆಚ್ಚಾಗಿ ಹಬ್ಬಿಕೊಂಡಿರುವುದನ್ನು ನಾವು ಕಾಣುವುದೇ ಆಗಿದೆ. ಅಷ್ಟೇ ಅಲ್ಲದೆ ಆರ್ಯರ ಒಟ್ಟು ದನದ ಹಿಂಡಿನಲ್ಲಿ ಬಣ್ಣ ಬಣ್ಣಗಳಿಂದ ಕೂಡಿದ ದನಗಳು ಸಹ ಇದ್ದವು ಎಂಬುದು ಯುರೋಪ್ ದೇಶದ ಅಂದಿನ ಚರಿತ್ರೆಯಿಂದ ತಿಳಿದುಬರುತ್ತದೆ.

ಒಂದು ಕಾಲಕ್ಕೆ ರೋಮನ್ ಸಾಮ್ರಾಜ್ಯ ತಮ್ಮ ಪ್ರಭುತ್ವವನ್ನು ಯೂರೋಪಿನಲ್ಲೆಲ್ಲಾ ವಿಸ್ತರಿಸಿತ್ತು. ಅಂದು ಇಟಲಿಯ 'ಪೋ' ನದಿಯ ಕೊಳ್ಳದ ಪ್ರದೇಶಗಳಾದ ಟಸ್‌ಕನಿ ಮತ್ತು ಲೊಂಬಾರ್ಡಿ ಎಂಬಲ್ಲಿ ಉತ್ತಮ ಜಾತಿಯ ದನಗಳಿದ್ದವು. ಈ ಲೊಂಬಾರ್ಡಿ ದನಗಳಲ್ಲಿ ಕೆಲವು ದನಗಳ ಮೈಬಣ್ಣ ಹಳದಿ ಮಿಶ್ರಿತ ಬೂದು ಬಣ್ಣದಿಂದ ಕೂಡಿತ್ತು ಹಾಗೂ ಅವುಗಳ ಹೊಟ್ಟೆಯ ತಳಭಾಗವು ಬಿಳುಪು ಬಣ್ಣದಿಂದ ಕೂಡಿತ್ತು. ಹಾಗೆಯೇ ಈ ಪ್ರದೇಶದ ದನಗಳು ಅಂದಿನ ಆರ್ಯರ ಬಳಿಯಿದ್ದ ದನಗಳೊಂದಿಗೆ ಕೂಡಿ ಬೆಳೆದಿದ್ದರಿಂದ ಆರ್ಯರ ದನಗಳಲ್ಲಿಯೂ ಸಹ ಈ ಬಣ್ಣ ಮೂಡಿಬಂದಿರಬಹುದು ಎಂಬುದಾಗಿ ಅಂದಾಜಿಸಲಾಗಿದೆ. ಅಷ್ಟೇ ಅಲ್ಲದೆ ನಮ್ಮ ಪುರಾಣದಲ್ಲಿ 'ಶ್ಯಬಳೀ ಧವಳಾದಯಃ' ಎಂದು ಒಂದು ಕಡೆ ಹೇಳಲಾಗಿದೆ. 'ಶ್ಯಬಳಿ' ಅಂದರೆ ಚುಕ್ಕೆ ಚುಕ್ಕೆಗಳಿಂದ ಕೂಡಿದ ದನ ಎಂದರ್ಥ. ಹಾಗೆಯೇ 'ಧವಳ' ಎಂದರೆ ಬಿಳಿಯದು ಎಂದರ್ಥ. ಹೀಗಾಗಿಯೇ ವಸಿಷ್ಠರ ಬಳಿಯಿದ್ದ ಆಕಳಾದ ಕಾಮಧೇನುವಿನ ಮಗಳಿಗೆ 'ಶ್ಯಬಳಿ' ಎಂಬ ಹೆಸರಿತ್ತು ಎಂಬುದಾಗಿ ಹೇಳಲಾಗುತ್ತದೆ.

ಆಗಿನ ಕಾಲದಲ್ಲಿ ಗೋಸಂವರ್ಧನೆಯ ಸಲುವಾಗಿ ಹಿಂಡಿನಲ್ಲಿ ಉತ್ತಮವಾದ ಹೋರಿಗಳನ್ನು ಬೀಜಕ್ಕಾಗಿ ಆರಿಸುತ್ತಿದ್ದರು. ಒಕ್ಕಲುತನಕ್ಕೆ ಯೋಗ್ಯವಾದ ದನಗಳನ್ನು ಬೇರ್ಪಡಿಸುತ್ತಿದ್ದರು. ಬ್ರಾಹ್ಮಣರಿಗೆ, ಗಾಯಕರಿಗೆ, ವಿದ್ಯಾವಂತರಿಗೆ ಉತ್ತೇಜನಕ್ಕಾಗಿ ಮತ್ತು ಮರ್ಯಾದೆಗಾಗಿ ಗೋವುಗಳನ್ನು ಕೊಡುತ್ತಿದ್ದರು ಎಂಬುದು ಈ ಕೆಳಗಿನ ಕುಮಾರವ್ಯಾಸನ ಗದುಗಿನ ಭಾರತದ ಪದ್ಯದಿಂದ ತಿಳಿದುಬರುತ್ತದೆ.

ತರಿಸಿ ಹೋರಿಯ ಗವಿಯ ಗೂಳಿಯ ಬರಸಿದನು ಕೆಲ ಕೆಲವ ಕೃಷಿಕರಿ
ಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ॥
ಕರಿಸಿ ಕೊಟ್ಟನು ಭಟರಿಗೆ, ಮಲ್ಲರಿಗೆ, ಗಾಯಕರಿಗೆ, ವಿದ್ಯಾವಂ
ತರಿಗೆ ಬಹು ವಿಧ ಬಹಳ ವಂದಿಗೆ ಮಾಗಧವ್ರಜಕೆ॥

ಹಾಗೆಯೇ ಅಂದಿನ ಕಾಲದಲ್ಲಿ ದನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ದನಗಳಿಗೆ ಬಹುಮಾನ ಕೊಟ್ಟು ಗೌರವಿಸುತ್ತಿದ್ದರು ಎಂಬುದು ಈ ಕೆಳಗಿನ ಪದ್ಯದಿಂದ ತಿಳಿದುಬರುತ್ತದೆ.

ಅಂಗ ಚಿತ್ತವನಿತ್ತು ಮೊದಲಿನ /
ಪುಂಗವೆ ಸತ್ಕರಿಸಿ ಹಿಂಡಿನ /
ಪಂಗಡದ ಗೋಪಾಲಕರಿಗೆ ಕೊಟ್ಟನುಡುಗೊರೆಯ //

ಈ ಎಲ್ಲಾ ಸಂಶೋಧನೆ ಮತ್ತು ಸಾಕ್ಷ್ಯಗಳಿಂದ ಸ್ಪಷ್ಟವಾಗುವುದೇನೆಂದರೆ ಇಡೀ ಮನುಕುಲದ ಮೂಲ ಭಾರತ. ಜಗತ್ತಿನ ಎಲ್ಲಾ ಮನುಷ್ಯರ ಪೂರ್ವಜರು ಭಾರತೀಯರು. ಆರ್ಯರು ಸಹಾ ಭಾರತೀಯರು, ಅವರು ಹೊರಗಿನಿಂದ ಬಂದವರಲ್ಲ. ಹಾಗೆಯೇ ಜಗತ್ತಿನ ಎಲ್ಲಾ ನಾಗರಿಕತೆಗಳ ಮೂಲ ಭಾರತ. ಹಾಗಾಗಿ ಗೋವಿನ ಸೃಷ್ಟಿಯೂ ಈ ಪುಣ್ಯಭೂಮಿಯಲ್ಲಿಯೇ ಆಗಿದೆ ಎಂಬುದು ಶತಸ್ಸಿದ್ಧ!

ಅಂಬೇಡ್ಕರ್: ಭಾರತದ ನಾಗರಿಕತೆಯ ಸೇನಾನಿ

ಇಂದು ಅಂಬೇಡ್ಕರ್ ಜಯಂತಿ

▸ ಉತ್ಪಲ್ ಕುಮಾರ್

ಎಲ್ಲಾ ದೇಶಗಳಿಗೂ ಅದರದೇ ಆದ ಹೀರೋಗಳಿದ್ದಾರೆ. ಕೆಲವರನ್ನು ಗುರುತಿಸಿ ಶ್ಲಾಘಿಸಲಾಗುತ್ತದೆ. ಆದರೆ ಕೆಲವರು ಕಡೆಗಣಿಸಲ್ಪಡುತ್ತಾರೆ. ಇದು ಭಾರತದ ಪುರಾತನ ಮತ್ತು ಮಧ್ಯಯುಗಕ್ಕಷ್ಟೇ ಸೀಮಿತವಲ್ಲ. ಭಾರತದ ಆಧುನಿಕ ರಾಜಕೀಯ ಪಡಸಾಲೆಯಲ್ಲೂ ಇಂತಹ ನಿದರ್ಶನ ಗಳು ಕಾಣಸಿಗುತ್ತವೆ. ಮಹಾತ್ಮಾ ಗಾಂಧಿಯವರನ್ನು ಸಹಜವಾಗಿಯೇ ಹೊಗಳಲಾಯಿತಾದರೂ, ನೇತಾಜಿ ಸುಭಾಷ್ಚಂದ್ರ ಭೋಸ್ ಮತ್ತು ಸಾವರ್ಕರ್‌ರಂತಹ ಮಹಾನ್ ನಾಯಕರ ಕುರಿತಂತೆ ಅನಾದರ ತೋರಲಾಯಿತು.

ವಿಪರ್ಯಾಸವೆಂದರೆ ಈ ಸಾಲಿಗೆ ಡಾ. ಅಂಬೇಡ್ಕರ್ ಅವರೂ ಸೇರುತ್ತಾರೆ. ಈಗ ಅವರನ್ನು ಅತ್ಯಂತ ಮಹನೀಯರ ಮಟ್ಟಕ್ಕೆ ಏರಿಸಲಾಗಿದೆಯಾದರೂ, ದೇಶಾದ್ಯಂತ ಮಹಾತ್ಮಾ ಗಾಂಧಿ ನಂತರ ಅವರದೇ ಹೆಚ್ಚು ಪ್ರತಿಮೆಗಳಿವೆಯಾದರೂ, ಅವರು ಬದುಕಿದ್ದಾಗ ಹಾಗೂ ನಿಧನರಾದ ಬಳಿಕ ಮೊದಲ ಕೆಲವು ವರ್ಷಗಳಲ್ಲಿ ಅವರು ಅನುಭವಿಸಿದ ಅನಾದರ, ಉಪೇಕ್ಷೆ ಹೇಳತೀರದ್ದು.

ಅಂಬೇಡ್ಕರ್‌ರವರು ಬದುಕಿದ್ದಾಗ ಅವರನ್ನು ರಾಜಕೀಯದ ಮುಖ್ಯವಾಹಿನಿಯಿಂದ ಬದಿಗಿಡಲಾಯಿತು. ಅವರು ನಿಧನರಾದ ಬಳಿಕವೂ ನೆಹರೂ ಆಡಳಿತವು ಅವರನ್ನು ಕೇವಲ ದಲಿತರು ಮತ್ತು ಅಸ್ಪೃಶ್ಯರ ಮುಖಂಡ ಎಂಬಷ್ಟಕ್ಕೆ ಸೀಮಿತಗೊಳಿಸಲು ಪ್ರಯತ್ನಿಸಿತು. ಅಂಬೇಡ್ಕರ್‌ರವರ ಪ್ರಖರ ಬುದ್ಧಿವಂತಿಕೆ, ಸಾಂವಿಧಾನಿಕ ತಜ್ಞತೆ, ಆರ್ಥಿಕ ಪ್ರಬುದ್ಧತೆ ಮತ್ತು ನಾಗರಿಕ ತಿಳುವಳಿಕೆ ಮೊದಲಾದವುಗಳನ್ನು ಕಡೆಗಣಿಸಲಾಯಿತು. ಅಂಬೇಡ್ಕರ್‌ರವರನ್ನು ಕೇವಲ ಒಂದು ಪ್ರತಿಮೆಯಂತೆ ಪರಿಗಣಿಸಲಾಯಿತು.



ನಿಜವಾದ ಅಂಬೇಡ್ಕರ್ ಒಬ್ಬ ಬುದ್ಧಿವಂತ ಪಂಡಿತ ಹಾಗೂ ಪ್ರಬುದ್ಧ ಅರ್ಥಶಾಸ್ತ್ರಜ್ಞ. ನೊಬೆಲ್ ವಿಜೇತ ಅಮರ್ತ್ಯಸೇನ್ ಅವರು "ಅಂಬೇಡ್ಕರ್ ನನ್ನ ಆರ್ಥಿಕತೆಯ ಪಿತಾಮಹ" ಎಂದು ಬಣ್ಣಿಸಿದ್ದರು. ರಿಸರ್ವ್ ಬ್ಯಾಂಕ್, ಕೇಂದ್ರೀಯ ಜಲ ಆಯೋಗ ಮುಂತಾದ ಆಧುನಿಕ ಭಾರತದ ಹಲವಾರು ಸಂಸ್ಥೆಗಳು ಅಂಬೇಡ್ಕರ್‌ರವರ ದೂರದೃಷ್ಟಿಯ ಫಲ. ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಇಕನಾಮಕ್ಸ್‌ನಿಂದ ಎರಡು ಪಿಎಚ್‌ಡಿ ಪಡೆದವರಾದರೂ ಅವರನ್ನು ನೆಹರೂರವರು ಕೇವಲ ದಲಿತ ಮುಖಂಡರೆಂಬಷ್ಟೇ ಪರಿಗಣಿಸಿ ಸಂಪುಟದಲ್ಲಿ ಅವರನ್ನು ಅವಗಣಿಸಿದರು. ಅದಕ್ಕಾಗಿಯೇ ಅಂಬೇಡ್ಕರ್‌ರವರು ನೆಹರೂ ಸಂಪುಟಕ್ಕೆ ರಾಜೀನಾಮೆ ನೀಡಿ ಹೊರಬಂದುದು.

ತಮ್ಮ ರಾಜೀನಾಮೆ ಪತ್ರದಲ್ಲಿ ಅಂಬೇಡ್ಕರ್ "ಕೆಲವಾರು ಸಚಿವರಿಗೆ ಎರಡು ಮೂರು ಖಾತೆಗಳನ್ನು ನೀಡಲಾಗಿದೆ. ಅವರಿಗೆ ಅದು ನಿಭಾಯಿಸಲಾಗದ ಹೊರೆ. ಆದರೆ ನನ್ನನ್ನು ಸಂಪುಟದ ಮುಖ್ಯ ಸಮಿತಿಗೆ ಒಬ್ಬ ಸದಸ್ಯನನ್ನಾಗಿ ಕೂಡಾ ನೇಮಿಸಲಿಲ್ಲ. ಆರ್ಥಿಕ ವ್ಯವಹಾರಗಳ ಸಮಿತಿಯನ್ನು ರಚಿಸಿದಾಗ, ನಾನು ಆರ್ಥಿಕ ಮತ್ತು ಫೈನಾನ್ಸ್ ವಿಭಾಗದಲ್ಲಿ ಪರಿಣಿತರಾಗುವುದರಿಂದ ನನ್ನನ್ನು ಆ ಸಮಿತಿಗೆ ನೇಮಿಸಲಾಗುವುದೆಂದು ನಿರೀಕ್ಷಿಸಿದ್ದೆ. ಆದರೆ ನನ್ನನ್ನು ಕಡೆಗಣಿಸಲಾಯಿತು" ಎಂದು ಬರೆದಿದ್ದರು.

ತಮ್ಮ ಕಾಲದಲ್ಲಿ ಕಾನೂನು ವಿಷಯಗಳ ಬಗ್ಗೆ ಅತ್ಯಂತ ನಿಪುಣತೆ ಹೊಂದಿದ್ದ ಅಂಬೇಡ್ಕರ್‌ರವರು ಸಮಾಜ ಮತ್ತು ಸರಕಾರ ಎರಡನ್ನೂ ಪ್ರಜಾಪ್ರಭುತ್ವಗೊಳಿಸುವ ನಂಬಿಕೆ ಹೊಂದಿದ್ದರು. ದೇಶದಲ್ಲಿ ಸಮಾನತೆ, ಭ್ರಾತೃತ್ವತೆ ಮತ್ತು ಸ್ವಾತಂತ್ರ್ಯವು ಸುಗಮವಾಗಿ ಮುಂದುವರಿಯಬೇಕಾದರೆ ಸಮಾಜ ಮತ್ತು ಸರಕಾರಗಳೆರಡೂ ಪರಸ್ಪರ ಸಮನ್ವಯತೆಯಿಂದ ಕಾರ್ಯವೆಸಗಬೇಕು ಎಂಬುದು ಅವರ ನಿಲುವಾಗಿತ್ತು. ಅದೇರೀತಿ ಕಾನೂನು ಮತ್ತು ನೈತಿಕತೆ, ಸಾಂವಿಧಾನಿಕತೆ ಮತ್ತು ನೀತಿಪರತೆ ಜತೆಯಾಗಿ ಸಾಗಬೇಕು ಎಂದೂ ಅವರು ಪ್ರತಿಪಾದಿಸಿದ್ದರು. ಕಾಂಗ್ರೆಸ್ ಬಯಸಿದಂತೆ ಸಾಗಿದ್ದರೆ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯ ಸದಸ್ಯರೂ ಆಗಿರುತ್ತಿರಲಿಲ್ಲ. ಅವರು ಮುಂಬೈ ಚುನಾವಣೆಯನ್ನು ಸೋಲುವಂತೆ ಮಾಡಲಾಯಿತು. ಆದರೆ ಅಂದಿನ ಬಂಗಾಳದ ಖ್ಯಾತ ದಲಿತ ನಾಯಕ ಜೋಗೇಂದ್ರನಾಥ್ ಮಂಡಲ್ ಅವರ ಬೆಂಬಲದ ಕಾರಣದಿಂದಾಗಿ ಅವರು ಸಂವಿಧಾನ ರಚನಾ ಮಂಡಳಿಯಲ್ಲಿ ಸೇರುವಂತಾಯಿತು.

ನಿಜವಾಗಿ ಅಂಬೇಡ್ಕರ್‌ರವರು ದೇಶದ ಮುಂಚೂಣಿ ನಾಗರಿಕ ಸೇನಾನಿಯಾಗಿದ್ದರು. "ನಾನು ಹಿಂದುವಾಗಿ ಸಾಯಲು ಇಚ್ಛಿಸುವುದಿಲ್ಲ", ಜಾತಿ ಪದ್ಧತಿಯಿಂದ ಗ್ರಸ್ತವಾಗಿರುವ ಹಿಂದು ಧರ್ಮದಲ್ಲಿ ಸುಧಾರಣೆ ಸಾಧ್ಯವಿಲ್ಲ ಎಂದು ಅವರು ಹೇಳಿದ ಮಾತುಗಳನ್ನು ಈಗ ಕೆಲವರು ಆಗಾಗ ಉಲ್ಲೇಖಿಸುತ್ತರಾದರೂ, ಇತರ ಮತಧರ್ಮಗಳ ಕುರಿತಂತೆ ಅವರ ನಿಲುವೇನಾಗಿತ್ತು ಎಂಬ ಬಗ್ಗೆ ವಿವರಿಸುವುದೇ ಇಲ್ಲ. ಇಸ್ಲಾಂನ್ನು ಅವರು 'ಮುಚ್ಚಿದ ನಿಗಮ' ಎಂದು ಬಣ್ಣಿಸಿದ್ದರು. ಮುಸ್ಲಿಮರು ಮತ್ತು ಮುಸ್ಲಿಮೇತರರ ಮಧ್ಯೆ ಇಸ್ಲಾಂ ಕಠೋರ ಭೇದನೀತಿ ಅನುಸರಿಸುತ್ತಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ನಿಜ, ಅಂಬೇಡ್ಕರ್‌ರವರು ಹಿಂದುವಾಗಿ ನಿಧನರಾಗಲಿಲ್ಲ. ಹಾಗೆಂದು ಅವರು ಭಾರತೀಯತೆಯನ್ನು ಎಂದಿಗೂ ಕಳಚಿಕೊಳ್ಳಲಿಲ್ಲ. ಭಾರತದ ಸನಾತನ ಮೌಲ್ಯಗಳಲ್ಲಿ ಆಳವಾಗಿ ಬೇರೆತಿರುವ ಬೌದ್ಧ ಧರ್ಮವನ್ನೇ ಆರಿಸಿಕೊಂಡರು. ಸನಾತನ ಪರಂಪರೆಯ ಕುರಿತಂತೆ ಅಂಬೇಡ್ಕರ್‌ರವರಿಗೆ ಗೌರವವಿತ್ತು. ತಾವು ಮತ್ತು ತಮ್ಮ ಜಾತಿಯ ಇತರರು ಸಮಾಜದಲ್ಲಿ ಭೇದಭಾವ ಎದುರಿಸಿದ್ದರೂ ಅವರು ಸನಾತನ ವಾಸ್ತವಿಕತೆಯ ಬಗ್ಗೆ ಕುರುಡಾಗಿರಲಿಲ್ಲ.

ಅಂಬೇಡ್ಕರ್ ಒಬ್ಬ ಪ್ರಮುಖ ಸಾಮಾಜಿಕ ಮಾನವ ಶಾಸ್ತ್ರಜ್ಞರೆನ್ನಬಹುದು. 1916ರಲ್ಲಿ ಕೊಲಂಬಿಯಾದಲ್ಲಿ ನಡೆದ ಜಾತಿ ಸಮ್ಮೇಳನದಲ್ಲಿ ಅವರು ಮಂಡಿಸಿದ ಪ್ರಬಂಧವು ಭಾರತದಲ್ಲಿನ ಜಾತಿ ವ್ಯವಸ್ಥೆಯ ಉಗಮ ಮತ್ತು ಆಚರಣೆಯ ಕುರಿತಾದ ಪ್ರಥಮ ಗಂಭೀರ ಶೈಕ್ಷಣಿಕ ಅಧ್ಯಯನ ಎಂದು ಹೇಳಬಹುದು. ತಮ್ಮ ಮಾನವ ಶಾಸ್ತ್ರ ಜ್ಞಾನವನ್ನು ಬಳಸಿಕೊಂಡು ಅವರು ಆರ್ಯರ ಆಕ್ರಮಣ ಸಿದ್ಧಾಂತವನ್ನು ಖಂಡಿಸಿದ್ದರು. "ಒಂದು ಪಂಗಡ ಅಥವಾ ಕುಟುಂಬವು ಜನಾಂಗೀಯವಾಗಿ ಆರ್ಯವೇ ಅಥವಾ ದ್ರಾವಿಡವೇ ಎಂಬ ಪ್ರಶ್ನೆಯು, ವಿದೇಶೀ ಶಿಕ್ಷಣವೇತ್ತರರು ಭಾರತಕ್ಕೆ ಬಂದು ವಿಭಜನಾ ರೇಖೆಯನ್ನು ಎಳೆಯುವ ತನಕ ಭಾರತದ ಜನರಿಗೆ ಕಾಡಿರಲೇ ಇಲ್ಲ" ಎಂದು ಅವರು 1918ರಲ್ಲಿ ಬರೆದ ಪ್ರಬಂಧದಲ್ಲಿ ನುಡಿದಿದ್ದರು. ಅವರು ಹಲವಾರು ಸಂದರ್ಭಗಳಲ್ಲಿ ಹಿಂದಿನ ಋಷಿಗಳು ಶೂದ್ರರನ್ನು ಮೇಲೆತ್ತಿದ ನಿದರ್ಶನಗಳನ್ನು ಹಾಗೂ ಶೂದ್ರರು ರಾಜರಾಗಿ ಆಳಿದ್ದನ್ನೂ ಉದಾಹರಿಸುತ್ತಿದ್ದರು.

ಅಂಬೇಡ್ಕರ್‌ರವರು ಕಡು ಬಡತನದಲ್ಲಿ ಮತ್ತು ಇತರರಿಂದ ಜಾತಿಭೇದವನ್ನು ಅನುಭವಿಸಿ ಬೆಳೆದವರು. ವರ್ಷ ಕಳೆದಂತೆ ಅವರು ಬಡತನವನ್ನು ನೀಗಿಕೊಂಡರಷ್ಟೇ ಅಲ್ಲದೆ ಭಾರತೀಯ ಸಮಾಜವನ್ನು ಏಕತೆಯಿಂದ ಪರಿಗಣಿಸತೊಡಗಿದರು. ಪ್ರತಿಯೊಬ್ಬ ಮೇಲ್ವರ್ಗದ ಹಿಂದು ಅವರನ್ನು ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಅವಮಾನಿಸಿದಂತೆಯೇ, ಮತ್ತೊಂದೆಡೆಯಿಂದ ಸಯ್ಯಾಜಿರಾವ್ ಗಾಯಕ್‌ವಾಡ್‌ರಂತಹ ಮೇಲ್ವರ್ಗದ ಇನ್ನು ಕೆಲವರು ಅವರನ್ನು ತುಂಬು ಹೃದಯದಿಂದ ಆದರಿಸಿದ್ದನ್ನೂ ಅವರು ಮರೆಯಲಿಲ್ಲ.

ಅಂಬೇಡ್ಕರ್‌ರನ್ನು ಕೇವಲ ದಲಿತ ನಾಯಕ ಎಂದು ಸೀಮಿತಗೊಳಿಸುವುದು ಸರಿಯಲ್ಲ. ಅವರು ಇಡೀ ದೇಶದ ನಾಯಕರು. ಅವರು ದೇಶದ ನಾಗರಿಕತೆಯ ಸೇನಾನಿ.

ಗಲ್ಫ್, ಒಮಾನ್ ಬಂದರು ಟಾರ್ಗೆಟ್!

ಮಧ್ಯಪ್ರಾಚ್ಯ ಯುದ್ಧ; ಅಮೆರಿಕದಿಂದ ಹಾರ್ಮುಜ್ ದಿಗ್ಬಂಧನ ಘೋಷಣೆ ಬೆನ್ನಲ್ಲೇ ಇರಾನ್ ಖಡಕ್ ಎಚ್ಚರಿಕೆ




ಟೆಹ್ರಾನ್: ಇರಾನ್‌ನ ಎಲ್ಲಾ ಬಂದರುಗಳ ಮೇಲೆ ಅಮೆರಿಕ ನೌಕಾಪಡೆ ದಿಗ್ಬಂಧನ ವಿಧಿಸುವುದಾಗಿ ಘೋಷಿಸಿದ ಬೆನ್ನಲ್ಲೇ, ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಸಮುದ್ರದ ಯಾವುದೇ ಬಂದರುಗಳು ಇನ್ನು ಮುಂದೆ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಎಚ್ಚರಿಸಿದೆ. ಮಧ್ಯಪ್ರಾಚ್ಯದ ಬಂದರುಗಳ ಭದ್ರತೆ ಎಲ್ಲರಿಗೂ ಇರಬೇಕು ಇಲ್ಲವೇ ಯಾರಿಗೂ ಇರಬಾರದು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಕಟಣೆಯಲ್ಲಿ ತಿಳಿಸಿದೆ. ದೇಶದ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸುವುದು ಇರಾನ್ ಸಶಸ್ತ್ರ ಪಡೆಗಳ ನೈಸರ್ಗಿಕ ಮತ್ತು ಕಾನೂನುಬದ್ಧ ಕರ್ತವ್ಯ ಹಾಗೂ ತನ್ನ ಪ್ರಾದೇಶಿಕ ಜಲಪ್ರದೇಶದ ಮೇಲೆ ಸಾರ್ವಭೌಮತ್ವವನ್ನು ಚಲಾಯಿಸುವುದು ಇರಾನ್ ರಾಷ್ಟ್ರದ ಹಕ್ಕು ಎಂದು ಐಆರ್‌ಜಿಸಿ ಹೇಳಿದೆ. ಈ ಹೇಳಿಕೆಯನ್ನು ಅಲ್ಲಿನ ಸರ್ಕಾರಿ ಸುದ್ದಿ ಸಂಸ್ಥೆ ಐಆರ್‌ಐಬಿ ವರದಿ ಮಾಡಿದೆ. ಅಲ್ಲದೆ, ಶತ್ರು ರಾಷ್ಟ್ರಗಳಿಗೆ ಸಂಬಂಧಿಸಿದ ಎಲ್ಲಾ ಹಡಗುಗಳಿಗೆ ಈ ಪ್ರಮುಖ ಜಲಮಾರ್ಗಗಳಲ್ಲಿ ಸಂಚರಿಸಲು ಅನುಮತಿ ನಿರಾಕರಿಸಲಾಗುವುದು ಮತ್ತು ಇತರ ಹಡಗುಗಳು ಟೆಹ್ರಾನ್ ನಿಗದಿಪಡಿಸಿದ ನಿಯಮಗಳಿಗೆ ಒಳಪಟ್ಟು ಸಂಚರಿಸಬಹುದು ಎಂದು ಐಆರ್‌ಜಿಸಿ ತಿಳಿಸಿದೆ.



ಜಲಮಾರ್ಗ ನಿಯಂತ್ರಣದ ಬೆದರಿಕೆ: ತನ್ನ ಬಂದರುಗಳ ಭದ್ರತೆ ಧಕ್ಕೆಯಾದರೆ ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಸಮುದ್ರದ ಯಾವ ಬಂದರೂ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಸಶಸ್ತ್ರ ಪಡೆಗಳು ಎಚ್ಚರಿಸಿವೆ. ಶತ್ರುಗಳ ನಿರಂತರ ಬೆದರಿಕೆಗಳನ್ನು ಉಲ್ಲೇಖಿಸಿರುವ ಐಆರ್‌ಜಿಸಿ, ಅಮೆರಿಕ ಮತ್ತು ಇಸ್ರೇಲ್ ನಡುವಿನ ಯುದ್ಧ ಕೊನೆಗೊಂಡ ನಂತರವೂ ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಿಸಲು ಟೆಹ್ರಾನ್ ಕಟ್ಟುನಿಟ್ಟಾದ ಕಾಯಂ ಕಾರ್ಯವಿಧಾನವನ್ನು ಜಾರಿಗೆ ತರಲಿದೆ ಎಂದು ಹೇಳಿದೆ. ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ನೌಕಾ ಸಂಚಾರದ ಮೇಲೆ ಅಮೆರಿಕ ಹೇರಿರುವ ನಿರ್ಬಂಧಗಳು ಕಾನೂನುಬಾಹಿರ ಮತ್ತು ಕಡಲ್ಗಳ್ಳತನಕ್ಕೆ ಸಮಾನ ಎಂದು ಅದು ಬಣ್ಣಿಸಿದೆ.

ಅಮೆರಿಕದ ದಿಗ್ಬಂಧನ ಘೋಷಣೆ: ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ದಿಗ್ಬಂಧನ ವಿಧಿಸುವುದಾಗಿ ಅಮೆರಿಕ ಸೇನೆ ಘೋಷಿಸಿದೆ. ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಕೊಲ್ಲಿಯ ಇರಾನ್ ಬಂದರುಗಳಿಗೆ ಬರುವ ಅಥವಾ ಅಲ್ಲಿಂದ ನಿರ್ಗಮಿಸುವ ಎಲ್ಲಾ ರಾಷ್ಟ್ರಗಳ ಹಡಗುಗಳ ವಿರುದ್ಧ ಈ ದಿಗ್ಬಂಧನವು ಜಾರಿಗೊಳಿಸಲಾಗುವುದು ಎಂದು ಸೆಂಟ್‌ಕಾಮ್ ತಿಳಿಸಿದೆ. ಆದರೆ, ಇರಾನ್ ಅಲ್ಲದ ಇತರ ಬಂದರುಗಳ ನಡುವೆ ಸಂಚರಿಸುವ ಹಡಗುಗಳಿಗೆ ಜಲಸಂಧಿಯಲ್ಲಿ ಸಂಚರಿಸಲು ಅನುಮತಿಸಲಾಗುವುದು ಎಂದು ಅದು ಹೇಳಿದೆ. ಯುದ್ಧ ಆರಂಭವಾದಾಗಿನಿಂದ ಲಕ್ಷಾಂತರ ಬ್ಯಾರೆಲ್ ತೈಲವನ್ನು ರಫ್ತು ಮಾಡುತ್ತಿರುವ ಇರಾನ್ ಮೇಲೆ ಒತ್ತಡ ಹೇರುವುದು ಈ ದಿಗ್ಬಂಧನದ ಉದ್ದೇಶ ಎಂದು ಯುಎಸ್ ಹೇಳಿಕೊಂಡಿದೆ.



ಡ್ರ್ಯಾಗನ್ ಕಾರ್ಯತಂತ್ರ

ವಿಶ್ಲೇಷಕರ ಪ್ರಕಾರ, ಅಮೆರಿಕ ಈ ಪ್ರದೇಶದಲ್ಲಿ ದಿನಕ್ಕೆ ಸುಮಾರು 1 ಬಿಲಿಯನ್ ಹಣವನ್ನು ಖರ್ಚು ಮಾಡುತ್ತಾ ಮಿಲಿಟರಿ ಶಕ್ತಿಯನ್ನು ವ್ಯಯಿಸುತ್ತಿದೆ. ಚೀನಾಗೆ ತೈಲ ಪೂರೈಕೆಯಲ್ಲಿ ಸ್ವಲ್ಪ ತೊಂದರೆಯಾದರೂ, ಅಮೆರಿಕದ ಗಮನ ತೈವಾನ್ ಮತ್ತು ಪೆಸಿಫಿಕ್ ವಲಯದಿಂದ ಮಧ್ಯಪ್ರಾಚ್ಯದ ಕಡೆಗೆ ಬದಲಾಗಿರುವುದು ಚೀನಾಗೆ ಕಾರ್ಯತಂತ್ರದ ದೃಷ್ಟಿಯಿಂದ ಲಾಭದಾಯಕ ಎನ್ನಲಾಗುತ್ತಿದೆ. ಇದೇ ವೇಳೆ, ರಷ್ಯಾ, ಚೀನಾ ಮತ್ತು ಇರಾನ್ ನಡುವಿನ ಸಮನ್ವಯ ಹೆಚ್ಚುತ್ತಿರುವುದನ್ನು ಜಾಗತಿಕ ವಿಶ್ಲೇಷಕರು ಗುರುತಿಸಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಈ ಮೂರು ರಾಷ್ಟ್ರಗಳ ನಡುವಿನ ಮಿಲಿಟರಿ ಸಹಕಾರ ಮುಂದುವರಿಯುತ್ತಿರುವುದನ್ನು ಖಚಿತಪಡಿಸಿದ್ದಾರೆ.

ಚೀನಾಗೆ ತೈಲಾತಂಕ


ಚೀನಾ ವಿಶ್ವದ ಅತಿದೊಡ್ಡ ತೈಲ ಆಮದುದಾರ ರಾಷ್ಟ್ರವಾಗಿದ್ದು, ಇರಾನ್‌ನಿಂದ ರಫ್ತಾಗುವ ತೈಲದ ಬಹುಪಾಲು ಭಾಗ ಚೀನಾ ತಲುಪುತ್ತದೆ. ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ಸಂಚಾರಕ್ಕೆ ಅಡ್ಡಿಯಾದಲ್ಲಿ, ಚೀನಾದ ಇಂಧನ ಭದ್ರತೆಗೆ ನೇರವಾದ ಸವಾಲು ಎದುರಾಗುತ್ತದೆ. ಇದುವರೆಗೆ ಚೀನಾ ಪಾಶ್ಚಿಮಾತ್ಯ ದೇಶಗಳ ನಿರ್ಬಂಧಗಳನ್ನು ಮೀರಿ ಇರಾನ್‌ನಿಂದ ತೈಲವನ್ನು ಪಡೆಯಲು ಡಾರ್ಕ್ ಟ್ರಾನ್ಸಿಟ್(ಗುಪ್ತ ನೌಕಾ ಸಂಚಾರ) ವಿಧಾನಗಳನ್ನು ಬಳಸುತ್ತಿತ್ತು. ಆದರೆ, ಈಗ ಅಮೆರಿಕ ಮಿಲಿಟರಿ ನೇರವಾಗಿ ದಿಗ್ಬಂಧನ ವಿಧಿಸುವುದರಿಂದ, ಈ ರೀತಿ ಕಣ್ತಪ್ಪಿಸಿ ತೈಲ ಸಾಗಿಸುವುದು ಚೀನಾಗೆ ಅತ್ಯಂತ ಕಷ್ಟಕರವಾಗಲಿದೆ. ಸಾಗಾಟದ ಹಾದಿ ಬದಲಾಗುವುದು ಅಥವಾ ಪೂರೈಕೆ ಸ್ಥಗಿತಗೊಳ್ಳುವುದರಿಂದ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾಗುತ್ತದೆ. ಚೀನಾ ಯುದ್ಧದಲ್ಲಿ ನೇರವಾಗಿ ಭಾಗಿಯಾಗದಿದ್ದರೂ, ಇಂಧನ ಬೆಲೆ ಏರಿಕೆಯ ಆರ್ಥಿಕ ಹೊಡೆತವನ್ನು ಅನುಭವಿಸಬೇಕಾಗುತ್ತದೆ.

ನೌಕಾ ಸಂಚಾರದ ಮೇಲೆ ಪರಿಣಾಮ

ದಿಗ್ಬಂಧನ ಘೋಷಣೆಯಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿ ಪುನರಾರಂಭಗೊಂಡಿದ್ದ ಅಲ್ಪಪ್ರಮಾಣದ ಹಡಗು ಸಂಚಾರವೂ ಸ್ಥಗಿತಗೊಂಡಿದೆ. ಕದನ ವಿರಾಮದ ಆರಂಭದ ನಂತರ ಕೇವಲ 40 ವಾಣಿಜ್ಯ ಹಡಗುಗಳು ಜಲಸಂಧಿಯನ್ನು ದಾಟಿವೆ. ಇದು ಯುದ್ಧಕ್ಕೆ ಮೊದಲು ದಾಖಲಾಗುತ್ತಿದ್ದ ಸರಾಸರಿ 100ರಿಂದ 135 ಹಡಗುಗಳ ಸಂಚಾರಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ. ಈ ಜಲಸಂಧಿ, ಜಾಗತಿಕ ಇಂಧನ ಪೂರೈಕೆಗೆ ಅತ್ಯಂತ ನಿರ್ಣಾಯಕವಾಗಿರುವುದರಿಂದ ದಿಗ್ಬಂಧನ ಜಾಗತಿಕ ತೈಲ ಬೆಲೆಗಳ ಏರಿಕೆಗೆ ಕಾರಣವಾಗುವ ಸಾಧ್ಯತೆಯಿದೆ.

ಹಾರ್ಮುಜ್‌ನಲ್ಲಿ ಭಾರತದ ಹಡಗು ಸಂಚಾರಕ್ಕೆ ಸಹಕಾರ

ಹೊಸದಿಲ್ಲಿ: ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ಭಾರತೀಯ ಹಡಗುಗಳ ಸಂಚಾರವನ್ನು ಸುಗಮಗೊಳಿಸಲು ಟೆಹ್ರಾನ್ ವಿಶೇಷ ವ್ಯವಸ್ಥೆಗಳನ್ನು ಮಾಡುತ್ತಿದೆ ಎಂದು ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ಸೋಮವಾರ ಘೋಷಿಸಿದ್ದಾರೆ. ಜಲಸಂಧಿಯ ಮೂಲಕ ಹಾದುಹೋಗುವ ಭಾರತೀಯ ಟ್ಯಾಂಕರ್‌ಗಳಿಗೆ ಯಾವುದೇ ಸುಂಕ ವಿಧಿಸಲಾಗಿಲ್ಲ ಎಂದು ರಾಯಭಾರಿ



ಫತಾಲಿ ತಿಳಿಸಿದ್ದಾರೆ. ಸಂಚಾರ ನಿರ್ಬಂಧಗಳು ಆರಂಭವಾದಾಗಿನಿಂದ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ (ಎಲ್‌ಪಿಜಿ) ಹೊತ್ತೊಯ್ಯುತ್ತಿದ್ದ ಒಂಬತ್ತು ಹಡಗುಗಳ ನಿರ್ಗಮನಕ್ಕಾಗಿ ಯಾವುದೇ ಶುಲ್ಕ ಪಾವತಿಸಿಲ್ಲ ಎಂದು ಭಾರತ ದೃಢಪಡಿಸಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಈ ದ್ವಿಪಕ್ಷೀಯ ಹಿತಾಸಕ್ತಿಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಕಾರ್ಯತಂತ್ರದ ತೊಡಗಿಸಿಕೊಳ್ಳುವಿಕೆಗಾಗಿ ಇರಾನ್ ವಿದೇಶಾಂಗ ಸಚಿವರು ಗುರುತಿಸಿರುವ ಐದು ಪ್ರಮುಖ ರಾಷ್ಟ್ರಗಳಲ್ಲಿ ಭಾರತವೂ ಒಂದು. ಈ ಜಲಸಂಧಿ, ಇರಾನ್‌ನ ಪ್ರಾದೇಶಿಕ ಜಲಪ್ರದೇಶ ಎಂದು ಬಣ್ಣಿಸಿರುವ ರಾಯಭಾರಿ, ರಾಜತಾಂತ್ರಿಕ ಮಾತುಕತೆಗಳ ನಡೆಯುತ್ತಿರುವಾಗಲೇ ಇರಾನ್ ಮೇಲೆ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಸಂಧಾನದಲ್ಲಿ, ಪರಮಾಣು ಕಾಳಜಿಗಳು, ನಿರ್ಬಂಧಗಳ ಸಡಿಲಿಕೆ ಮತ್ತು ಯುದ್ಧದ ಪರಿಹಾರದಂತಹ ವಿಷಯಗಳು ಚರ್ಚೆಯಾಗಿವೆ, ಎಂದು ಫತಾಲಿ ಉಲ್ಲೇಖಿಸಿದ್ದಾರೆ. ಷರತ್ತುಗಳನ್ನು ಪೂರೈಸಿದರೆ ಇರಾನ್ ಮುಂದಿನ ಮಾತುಕತೆ ಸಿದ್ಧವಾಗಿದೆ. ಆದರೆ ಸಂಘರ್ಷ ಎದುರಿಸಲೂ ಸನ್ನದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

7 ವರ್ಷದ ನಂತರ ಭಾರತಕ್ಕೆ ಇರಾನ್ ತೈಲ

ಹೊಸದಿಲ್ಲಿ: ಸುಮಾರು ಏಳು ವರ್ಷಗಳ ವಿರಾಮದ ಬಳಿಕ ಇರಾನಿನ ಕಚ್ಚಾ ತೈಲ ಮತ್ತೆ ಭಾರತಕ್ಕೆ ತಲುಪಿದೆ. ಇರಾನ್‌ನಿಂದ ಕಚ್ಚಾ ತೈಲವನ್ನು ಹೊತ್ತ ಎರಡು ಸೂಪರ್ ಟ್ಯಾಂಕರ್‌ಗಳು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಬಂದರುಗಳಿಗೆ ಆಗಮಿಸಿವೆ ಎಂದು ಹಡಗು ಟ್ರ್ಯಾಕಿಂಗ್ ಮಾಹಿತಿಗಳು ತಿಳಿಸಿವೆ.

ನ್ಯಾಷನಲ್ ಇರಾನಿಯನ್ ಟ್ಯಾಂಕರ್ ಕಂಪನಿ ನಡೆಸುವ ಫೆಲಿಸಿಟಿ ಎಂಬ ದೊಡ್ಡ ಟ್ಯಾಂಕರ್ ಭಾನುವಾರ ತಡರಾತ್ರಿ ಗುಜರಾತ್‌ನ ಸಿಕ್ಕಾ ಬಂದರನ್ನು ತಲುಪಿದೆ. ಇದು ಮಾರ್ಚ್ ಮಧ್ಯಭಾಗದಲ್ಲಿ ಖಾರ್ಗ್ ದ್ವೀಪದಲ್ಲಿ ಲೋಡ್ ಮಾಡಿದ್ದ ಸುಮಾರು 2 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಹೊತ್ತು ತಂದಿದೆ.

ಇದೇ ವೇಳೆ ಜಯಾ ಎಂಬ ಮತ್ತೊಂದು ಟ್ಯಾಂಕರ್ ಒಡಿಶಾ ಕರಾವಳಿಯ ಪ್ಯಾರಾದೀಪ್ ಬಂದರು ಸಮೀಪ ಲಂಗರು ಹಾಕಿದೆ. ಇದೂ ಕೂಡ ಸುಮಾರು 2 ಮಿಲಿಯನ್ ಬ್ಯಾರೆಲ್ ತೈಲವನ್ನು ಸಾಗಿಸಿದೆ. ಈ ಸರಕು ಫೆಬ್ರವರಿ ಕೊನೆಯಲ್ಲಿ, ಯುಎಸ್-ಇಸ್ರೇಲ್, ಇರಾನ್ ಸಂಘರ್ಷ ಆರಂಭವಾಗುವ ಮುನ್ನವೇ ಲೋಡ್ ಮಾಡಲಾಗಿತ್ತು. ಕಳೆದ ತಿಂಗಳು ಅಮೆರಿಕ ನೀಡಿದ ನಿರ್ಬಂಧಗಳ ತಾತ್ಕಾಲಿಕ ವಿನಾಯಿತಿಯ ಪರಿಣಾಮವಾಗಿ, ಸುಮಾರು ಏಳು ವರ್ಷಗಳ ಬಳಿಕ ಮೊದಲ ಬಾರಿಗೆ ಇರಾನಿನ ತೈಲ ಟ್ಯಾಂಕರ್‌ಗಳು ಭಾರತ ತಲುಪಿವೆ. ಜಾಗತಿಕ ಮಟ್ಟದಲ್ಲಿ ತೈಲ ಕೊರತೆಯನ್ನು ಕಡಿಮೆ ಮಾಡಲು ಮತ್ತು ಬೆಲೆ ನಿಯಂತ್ರಣಕ್ಕಾಗಿ, ಈಗಾಗಲೇ ಸಾಗಣೆಯಲ್ಲಿರುವ ಇರಾನಿನ ತೈಲವನ್ನು ಮಾರಾಟ ಮಾಡಲು ಒಂದು ತಿಂಗಳ ವಿನಾಯಿತಿ ನೀಡಲಾಗಿದೆ.

ಆದರೆ, ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ, ಇರಾನ್‌ನ ತೈಲ ರಫ್ತು ಆದಾಯವನ್ನು ತಡೆಗಟ್ಟಲು ಅಮೆರಿಕ ಮತ್ತೆ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಭಾರತಕ್ಕೆ ಬಂದಿರುವ ಈ ಟ್ಯಾಂಕರ್‌ಗಳ ಖರೀದಿದಾರರ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ.

ಪ್ಯಾರಾದೀಪ್ ಬಂದರನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮುಖ್ಯವಾಗಿ ನಿರ್ವಹಿಸುತ್ತಿದ್ದು, ಅದು ಕನಿಷ್ಠ ಒಂದು ಸಾಗಣೆಯನ್ನು ಖರೀದಿಸುವುದಾಗಿ ದೃಢಪಡಿಸಿದೆ. ಸಿಕ್ಕಾ ಬಂದರು ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ಭಾರತ್ ಪೆಟ್ರೋಲಿಯಂಗೆ ಪ್ರಮುಖ ಕಚ್ಚಾ ತೈಲ ಹ್ಯಾಂಡ್ಲಿಂಗ್ ಕೇಂದ್ರವಾಗಿದೆ.

ಇದಕ್ಕೂ ಮುನ್ನ, ಸುಮಾರು 6 ಲಕ್ಷ ಬ್ಯಾರೆಲ್ ತೈಲ ಹೊತ್ತ ಪಿಂಗ್ ಶುನ್ ಟ್ಯಾಂಕರ್ ಗುಜರಾತ್‌ನ ವಾಡಿನಾರ್ ಕಡೆಗೆ ಬರುತ್ತಿದ್ದರೂ, ಪಾವತಿ ಸಮಸ್ಯೆಗಳ ಕಾರಣದಿಂದ ಮಧ್ಯದಲ್ಲೇ ಚೀನಾಕ್ಕೆ ತಿರುಗಿಸಲಾಯಿತು.

2018ರಲ್ಲಿ ಅಮೆರಿಕದ ನಿರ್ಬಂಧಗಳು ಕಠಿಣಗೊಂಡ ಬಳಿಕ, ಮೇ 2019ರಿಂದ ಭಾರತ ಇರಾನ್‌ನಿಂದ ತೈಲ ಆಮದು ಸಂಪೂರ್ಣ ನಿಲ್ಲಿಸಿತ್ತು. ಅದಕ್ಕೂ ಮೊದಲು ಭಾರತ ದಿನಕ್ಕೆ 5.18 ಲಕ್ಷ ಬ್ಯಾರೆಲ್ ತೈಲ ಖರೀದಿಸುತ್ತಿತ್ತು. ನಂತರ ಇದು 2.68 ಲಕ್ಷ ಬ್ಯಾರೆಲ್‌ಗೆ ಇಳಿದು, ಕೊನೆಗೆ ಸಂಪೂರ್ಣ ಸ್ಥಗಿತಗೊಂಡಿತ್ತು. ಇದೀಗ 30 ದಿನಗಳ ತಾತ್ಕಾಲಿಕ ವಿನಾಯಿತಿಯಿಂದ ಮತ್ತೆ ತೈಲ ಸಾಗಣೆ ಆರಂಭವಾಗಿದೆ.



ಎಲ್‌ಪಿಜಿ ಪೂರೈಕೆಯ ತೀವ್ರ ಕೊರತೆಯಿಲ್ಲ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಇತ್ತೀಚಿನ ಬೆಳವಣಿಗೆಗಳ ನಂತರವೂ ಆಟೋ ಬಿಡಿಭಾಗಗಳ ತಯಾರಕರು ಯಾವುದೇ ಗಂಭೀರ ಎಲ್‌ಪಿಜಿ ಪೂರೈಕೆ ಕೊರತೆಯನ್ನು ವರದಿ ಮಾಡಿಲ್ಲ ಎಂದು ಭಾರಿ ಕೈಗಾರಿಕೆಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಹನೀಫ್ ಖುರೇಷಿ ಸೋಮವಾರ ತಿಳಿಸಿದ್ದಾರೆ.

ಅನಿಲ ಪೂರೈಕೆಯನ್ನು ಕಾಯ್ದುಕೊಳ್ಳಲು ಮತ್ತು ಅಡೆತಡೆಗಳನ್ನು ತಡೆಗಟ್ಟಲು ಬೃಹತ್ ಕೈಗಾರಿಕೆಗಳ ಸಚಿವಾಲಯವು ಆಟೋ ಕಾಂಪೊನೆಂಟ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್(ಎಸಿಎಂಎ) ಜತೆಗೆ ನಿರಂತರ ಸಂಪರ್ಕದಲ್ಲಿದೆ. ಲಭ್ಯವಿರುವ ಕಡೆಗಳಲ್ಲಿ ಎಲೆಕ್ಟ್ರಿಕ್ ಫರ್ನೇಸ್‌ಗಳು ಮತ್ತು ಪೈಪ್ಡ್ ನ್ಯಾಚುರಲ್ ಗ್ಯಾಸ್(ಪಿಎನ್‌ಜಿ) ಬಳಸಲು ಉದ್ಯಮಗಳಿಗೆ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಪ್ರಾದೇಶಿಕ ಉದ್ವಿಗ್ನತೆಯ ನಡುವೆಯೂ, ಮಾರ್ಚ್‌ನಲ್ಲಿ ವಾಹನ ಉತ್ಪಾದನೆ ಶೇ.15ರಿಂದ 16ರಷ್ಟು ಹೆಚ್ಚಾಗಿದೆ.

ಸರ್ಕಾರ ಎಲೆಕ್ಟ್ರಿಕ್ ತ್ರಿಚಕ್ರ ವಾಹನಗಳಿಗೆ ನೀಡಲಾಗುವ 'ಪಿಎಂ ಇ-ಡ್ರೈವ್' ಸಬ್ಸಿಡಿಯನ್ನು ಮಾರ್ಚ್ 2028ರವರೆಗೆ ಮತ್ತು ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಸಬ್ಸಿಡಿಯನ್ನು ಜುಲೈ 31, 2026ರವರೆಗೆ ವಿಸ್ತರಿಸಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಕಾರಣದಿಂದಾಗಿ, ಟ್ರಕ್ ಮತ್ತು ಬಸ್‌ಗಳ ಹಂತ ಹಂತದ ಉತ್ಪಾದನಾ ಕಾರ್ಯಕ್ರಮದ (ಪಿಎಂಪಿ) ಮಾರ್ಗಸೂಚಿಗಳನ್ನು ಆರು ತಿಂಗಳ ಕಾಲ, ಅಂದರೆ ಸೆಪ್ಟೆಂಬರ್‌ವರೆಗೆ ಸಡಿಲಿಸಲಾಗಿದೆ.

ಕಿರುಸುದ್ದಿ

ಲಾಲುಗೆ ಹಿನ್ನಡೆ:ಎಫ್‌ಐಆರ್ ರದ್ದಿಗೆ ಸುಪ್ರೀಂ ನಕಾರ

ಹೊಸದಿಲ್ಲಿ: ಲಾಲು ಪ್ರಸಾದ್ ಯಾದವ್‌ಗೆ ತೀವ್ರ ಹಿನ್ನಡೆಯಂತೆ, ಆರ್‌ಜೆಡಿ ಮುಖ್ಯಸ್ಥ ಮತ್ತು ಅವರ ಕುಟುಂಬ ಸದಸ್ಯರನ್ನು ಒಳಗೊಂಡ ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಸಿಬಿಐ ಎಫ್‌ಐಆರ್ ಅನ್ನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಆದಾಗ್ಯೂ, ನ್ಯಾಯಮೂರ್ತಿಗಳಾದ ಎಂ. ಎಂ. ಸುಂದ್ರೇಶ್ ಮತ್ತು ಎನ್. ಕೋಟಿಶ್ವರ್ ಸಿಂಗ್ ಅವರ ನ್ಯಾಯಪೀಠವು ಹಗರಣದ ವಿಚಾರಣೆ ವೇಳೆ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗುವುದರಿಂದ ವಿನಾಯಿತಿ ನೀಡಿದೆ.

ಪೊಲೀಸ್ ಠಾಣೆ ಮೇಲೆ ದಾಳಿಗೆ ಐಎಸ್‌ಐ ನಂಟು

ಅಮೃತಸರ: ಕಳೆದ ತಿಂಗಳು ಪಂಜಾಬ್‌ನ ಅಮೃತಸರ ಜಿಲ್ಲೆಯ ಭಿಂಡಿ ಸೈದಾ ಪೊಲೀಸ್ ಠಾಣೆ ಮೇಲೆ ನಡೆದ ಗ್ರೆನೇಡ್ ದಾಳಿಗೆ ಸಂಬಂಧಿಸಿದಂತೆ ಆರು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಬಂಧಿತರಿಗೆ ಪಾಕಿಸ್ತಾನದ ಐಎಸ್‌ಐ ಬೆಂಬಲವಿದೆ ಎಂದು ಕಂಡುಬಂದಿದೆ. ಮಾ.29 ಮತ್ತು 30ರ ಮಧ್ಯರಾತ್ರಿಯಲ್ಲಿ ಈ ಘಟನೆ ನಡೆದಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ.

ಟಿಸಿಎಸ್ ನಾಸಿಕ್ ಘಟನೆ ತನಿಖೆಗೆ ಟಾಟಾ ಆದೇಶ

ಮುಂಬೈ: ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್(ಟಿಸಿಎಸ್) ಕಚೇರಿಯಲ್ಲಿ ಹೊರಬಂದಿರುವ ಲೈಂಗಿಕ ಕಿರುಕುಳ ಮತ್ತು ಮತಾಂತರದಂಥ ಗಂಭೀರ ಆರೋಪಗಳು ಆತಂಕಾರಿ ಹಾಗೂ ನೋವುಂಟುಮಾಡುವಂತಿವೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ. ಈ ಸಂಬಂಧ ಹಿರಿಯ ಅಧಿಕಾರಿಯ ನೇತೃತ್ವದಲ್ಲಿ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಾಸಿಕ್ ಘಟಕದಿಂದ ಬಂದ ದೂರುಗಳು ಗಂಭೀರ ಸ್ವರೂಪದ್ದಾಗಿದ್ದು, ಸಂಸ್ಥೆಯ ಮುಖ್ಯ ಕಾರ್ಯಾಚರಣಾಧಿಕಾರಿ ಆರತಿ ಸುಬ್ರಹ್ಮಣಿಯನ್ ಅವರ ಮೇಲ್ವಿಚಾರಣೆಯಲ್ಲಿ ಸಂಪೂರ್ಣ ತನಿಖೆ ನಡೆಯುತ್ತಿದೆ. ಘಟನೆಯ ಸತ್ಯಾಸತ್ಯತೆ ಪತ್ತೆಹಚ್ಚಿ, ಹೊಣೆಗಾರರನ್ನು ಗುರುತಿಸುವುದು ತನಿಖೆಯ ಉದ್ದೇಶವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಂಟು ಮಹಿಳಾ ಉದ್ಯೋಗಿಗಳು ಲೈಂಗಿಕ ಕಿರುಕುಳ ಹಾಗೂ ಬಲವಂತದ ಧಾರ್ಮಿಕ ಮತಾಂತರದ ಆರೋಪಗಳನ್ನು ಹೊರಿಸಿದ್ದಾರೆ. ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದ್ದು, ಆರೋಪಿಗಳ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ತನಿಖೆಗೆ ಕಂಪನಿ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ಚಂದ್ರಶೇಖರನ್ ತಿಳಿಸಿದ್ದಾರೆ. ಉದ್ಯೋಗಿಗಳಿಂದ ಯಾವುದೇ ರೀತಿಯ ದೌರ್ಜನ್ಯ ಅಥವಾ ಅನಾಚಾರದ ವರ್ತನೆಗೆ ಕಂಪನಿಯಲ್ಲಿ ಶೂನ್ಯ ಸಹಿಷ್ಣುತೆ ನೀತಿ ಅನ್ವಯವಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ತನಿಖೆಯಲ್ಲಿ ತಪ್ಪಿತಸ್ಥರು ಪತ್ತೆಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ನಮ್ಮ ರಕ್ಷಣೆಗೆ ಭಾರತದ ಆಧ್ಯಾತ್ಮಿಕ ಜ್ಞಾನ ನೆರವು

6779 6855 6856 6912 7174 7204 7547 7585 7650 7708
7727 7803 7818 7819 7879 7912 7988 8066 8084 8168
8382 8478 8488 8501 8570 8578 8693 8700 8714 8751
8757 8830 8954 9241 9262 9472 9529 9597 9598 9657
9693 9735 9887 9895

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬಗ್ಗೆ ಡಾ.ಬಾಬಾಸಾಹೇಬರ ಅಭಿಪ್ರಾಯಗಳು



ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಚಳವಳಿಗಳ ಬಗ್ಗೆ ತೀಕ್ಷ್ಣ ವಿಮರ್ಶಾತ್ಮಕ ದೃಷ್ಟಿಕೋನ ಹೊಂದಿದ್ದರು. ಕಾಂಗ್ರೆಸ್ ಬಗ್ಗೆ ಅವರು ಅದು ವ್ಯಕ್ತಿಗಳ ಮೇಲೆ ಅವಲಂಬಿತವಾಗಿದ್ದು ಶಾಶ್ವತವಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಜಾತಿ ಆಧಾರಿತ ರಾಜಕೀಯದಿಂದ ಕಾಂಗ್ರೆಸ್ ಗೆಲುವು ಸಾಧಿಸುತ್ತದೆ ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಪರಿಹರಿಸಲಿಲ್ಲ ಎಂದು ಟೀಕಿಸಿದ್ದರು. ಮಹಾತ್ಮ ಗಾಂಧಿಯವರ ನಾಯಕತ್ವವನ್ನೂ ಅವರು ಪ್ರಶ್ನಿಸಿ, ಏಕತೆ ತರಲು ವಿಫಲರಾದರು. ಅಹಿಂಸೆಯ ತತ್ವ ಕಾಂಗ್ರೆಸ್‌ನಲ್ಲಿ ದುರ್ಬಲಗೊಂಡಿದೆ ಮತ್ತು ಅಸ್ಪೃಶ್ಯತೆ ನಿವಾರಣೆಯಲ್ಲಿ ನಿಷ್ಠೆಯ ಕೊರತೆ ಇದೆ ಎಂದು ಅಂಬೇಡ್ಕರ್ ಹೇಳಿದ್ದರು. ಕಮ್ಯುನಿಸ್ಟ್ ತತ್ವದ ಬಗ್ಗೆ, ಹಿಂಸಾಚಾರ ಮತ್ತು ದಂಡಾಧಿಕಾರದ ಮೇಲೆ ಅವಲಂಬಿತವಾಗಿರುವುದನ್ನು ಅವರು ವಿರೋಧಿಸಿದ್ದರು. ಮಾನವ ಜೀವದ ಮೌಲ್ಯವನ್ನು ನಿರ್ಲಕ್ಷಿಸಲಾಗಿದೆ ಮತ್ತು ದೇಶದ ಭವಿಷ್ಯದ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಅವರ ದೃಷ್ಟಿಯಲ್ಲಿ, ಎರಡೂ ಚಿಂತನೆಗಳು ತಾತ್ವಿಕ ಮತ್ತು ಕಾರ್ಯಾತ್ಮಕ ದೋಷಗಳನ್ನು ಹೊಂದಿವೆ.



ಅಂಬೇಡ್ಕರ್ ರಾಜಕೀಯ ಚಿಂತನೆಗಳ ಸತ್ಯ

ಕಾಂಗ್ರೆಸ್ ಶಾಶ್ವತವಲ್ಲ

ಕಾಂಗ್ರೆಸ್ ಎಷ್ಟು ಕಾಲ ಉಳಿಯಲಿದೆ? ಕಾಂಗ್ರೆಸ್ ಎಂದರೆ ಪಂಡಿತ್ ನೆಹರೂ ಮತ್ತು ಪಂಡಿತ್ ನೆಹರೂ ಎಂದರೆ ಕಾಂಗ್ರೆಸ್. ಹಾಗೆಂದು ಪಂಡಿತ್ ನೆಹರೂ ಅಮರರೇ? ಈ ಪ್ರಶ್ನೆಗಳ ಬಗ್ಗೆ ಯೋಚಿಸುವ ಯಾರಿಗಾದರೂ ಸೂರ್ಯ ಮತತು ಚಂದ್ರ ಇರುವವರೆಗೂ ಕಾಂಗ್ರೆಸ್ ಉಳಿಯುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಒಂದು ದಿನ ಅದು ಅಂತ್ಯಗೊಳ್ಳಲೇಬೇಕು. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು- ಸಂಪುಟ 1).

ಕಾಂಗ್ರೆಸ್‌ನಿಂದ ಜಾತಿ ವ್ಯವಸ್ಥೆ ದುರ್ಬಳಕೆ

ಕಾಂಗ್ರೆಸ್ ಯಾವಾಗಲು ಜಯಿಸುತ್ತದೆ, ಹಾಗೆ ಗೋಚರಿಸುತ್ತೆ. ಆದರೂ ಕಾಂಗ್ರೆಸ್ಸೇ ಯಾಕೆ ಜಯಿಸುತ್ತೆ ಎಂದು ಯಾರೂ ಕೇಳುವುದಿಲ್ಲ. ಇದಕ್ಕುತ್ತರ, ಕಾಂಗ್ರೆಸ್ ಅಷ್ಟೊಂದೂ ಜನಪ್ರಿಯ. ಆದರೆ, ನೈಜ ಸತ್ಯವೇ ಬೇರೆ. ಕಾಂಗ್ರೆಸ್ ನಿರ್ದಿಷ್ಟ ಕ್ಷೇತ್ರಗಳಲ್ಲಿ ಯಾವ ಜಾತಿ ಬಹುಸಂಖ್ಯಾತವೋ ಆ ಜಾತಿಯ ಅಭ್ಯರ್ಥಿಗೆ ಟಿಕೆಟ್ ನೀಡುತ್ತೆ. ಜಾತಿಗೂ ಕಾಂಗ್ರೆಸ್‌ಗೂ ನಿಕಟ ಸಖ್ಯ. ಜಾತಿ ವ್ಯವಸ್ಥೆಯನ್ನು ದುರ್ಬಳಸಿಕೊಂಡು ಕಾಂಗ್ರೆಸ್ ಜಯಿಸುತ್ತದೆ. (ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣ- ಸಂಪುಟ 1).

ಮುಸ್ಲಿಮರ ಬಗ್ಗೆ ಕಾಂಗ್ರೆಸ್ ಧೋರಣೆ

ಹಿಂದು ಮಹಾಸಭಾದೊಂದಿಗೆ ತುಲನೆ ಮಾಡಿದರೆ ತಾವೆಲ್ಲಿದ್ದೇವೆಂಬುದು ಮುಸಲ್ಮಾನರಿಗೆ ಗೊತ್ತು. ಇನ್ನೊಂದೆಡೆ, ಕಾಂಗ್ರೆಸ್ ಜತೆಗಿದ್ದರೂ ತಮಗೆ ಅಸ್ತಿತ್ವವೇ ಇಲ್ಲವೆಂಬುದು ಕೂಡ ಮುಸಲ್ಮಾನರಿಗೆ ಗೊತ್ತಿರುವ ವಿಚಾರ. ಯಾಕೆಂದರೆ ಮುಸಲ್ಮಾನರು ಮತ್ತು ಅಲ್ಪಸಂಖ್ಯಾತರ ವಿಚಾರ ಕಾಂಗ್ರೆಸ್ ಪಾಲಿಗೆ ರಾಜತಾಂತ್ರಿಕತೆಯಲ್ಲಿನ ಒಂದು ಆಟವಾಗಿದೆ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು - ಸಂಪುಟ 8).


ಮೋಪ್ಲಾ ಮತ್ತು ಕಾಂಗ್ರೆಸ್

ಮುಸಲ್ಮಾನರ ಭಾವನೆಗಳಿಗೆ ನೋವಾಗದಿರಲು ಕಾಂಗ್ರೆಸ್ ಅದ್ಯಾವ ರೀತಿ ಜಾಗರೂಕತೆ ವಹಿಸುತ್ತದೆ ಎಂಬುದಕ್ಕೆ, ಮೋಪ್ಲಾ ದೌರ್ಜನ್ಯಗಳಿಗೆ ಸಂಬಂಧಿಸಿ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಅಂಗೀಕರಿಸಿರುವ ನಿರ್ಣಯ ಸಾಕ್ಷಿ (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು - ಸಂಪುಟ 8)



ಗಾಂಧೀಜಿ ಏಕತೆಯ ಹರಿಕಾರನಲ್ಲ

ಕಾಂಗ್ರೆಸ್ ದುಂಡುಮೇಜಿನ ಸಮಾವೇಶದ ನೇತೃತ್ವ ವಹಿಸಿ ಅದನ್ನು ಯಶಸ್ವೀಗೊಳಿಸಬೇಕೆಂದು ಪ್ರತಿಯೋರ್ವರು ನಿರೀಕ್ಷಿಸಿದ್ದರು. ದುರದೃಷ್ಟವಶಾತ್ ಕಾಂಗ್ರೆಸ್ ಗಾಂಧಿಯನ್ನು ತನ್ನ ಪ್ರತಿನಿಧಿಯಾಗಿ ಆರಿಸಿತು. ಭಾರತದ ಹಿರಿಮೆಗರಿಮೆ ವ್ಯಾಖ್ಯಾನಿಸಲು ಇಂತಹ ಅನರ್ಹ ವ್ಯಕ್ತಿಯನ್ನು ಕಾಂಗ್ರೆಸ್ ಆರಿಸಕೂಡದಿತ್ತು . ಏಕತಾಶಕ್ತಿಯಾಗಲು ಗಾಂಧೀಜಿ ವಿಫಲರು. ತಾನು ತೀರಾ ಸಭ್ಯ ವ್ಯಕ್ತಿಯೆಂದು ತೋರ್ಪಡಿಸಿಕೊಳ್ಳುವ ಗಾಂಧೀಜಿ , ದುಂಡು ಮೇಜಿನ ಪರಿಷತ್‌ನಲ್ಲಿ ವರ್ತಿಸಿದ್ದು ತೀರಾ ವಿಭಿನ್ನವಾಗಿ. ಸಮಾವೇಶಕ್ಕೆ ಬರೋ ಮುನ್ನ ಸರಕಾರದೊಂದಿಗೆ ಮಾಡಿಕೊಂಡ ಯಶಸ್ವೀ ಸಂಧಾನ ಪರಿಣಾಮ, ಗಾಂಧೀಜಿ ಕಾಂಗ್ರೆಸ್ಸೇತರ ನಿಯೋಗವನ್ನು ತೀರಾ ತಿರಸ್ಕಾರಭಾವದಿಂದ ಕಂಡರು. ನೀವ್ಯಾರೂ ಏನೂ ಅಲ್ಲ, ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಇಡೀ ದೇಶವನ್ನು ಪ್ರತಿನಿಧಿಸಿದ್ದು ತಾನೋರ್ವನೆ ಎಂದು ಅವರನ್ನು ಸಂದರ್ಭ ಸಿಕ್ಕಾಗ ಅಪಮಾನಿಸಿ ತಮ್ಮ ಸಂಕುಚಿತ ಪ್ರವೃತ್ತಿಯನ್ನು ಬಹಿರಂಗಪಡಿಸಿದರು. ಭಾರತೀಯ ನಿಯೋಗವನ್ನು ಒಗ್ಗಟ್ಟಾಗಿಸುವ ಬದಲು ಒಡಕನ್ನು ಬೃಹದಾಗಿಸಿದರು ಗಾಂಧಿ. ತನ್ಮೂಲಕ ಸ್ವಯಂ ಅಸಮರ್ಥ ವ್ಯಕ್ತಿಯೆಂದು ಸಾಬೀತುಪಡಿಸಿದರು. ಸಮಾವೇಶದಲ್ಲಿ ಚರ್ಚೆಗೊಂಡ ಹಲವು ಸಾಂವಿಧಾನಿಕ, ಕೋಮು ಸಂಬಂಧಿತ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಲು ಗಾಂಧೀಜಿಗೆ ಅವಕಾಶವಿತ್ತಾದರೂ ಅವರು ರಚನಾತ್ಮಕ ಸ್ವರೂಪದ ಯಾವುದೇ ಅಭಿಪ್ರಾಯವಾಗಲಿ, ಸಲಹೆಗಳನ್ನಾಗಲಿ ನೀಡಲೇ ಇಲ್ಲ. ಸಮಾವೇಶಕ್ಕೆ ಮುನ್ನ ಪೂರಕ ಸಿದ್ಧತೆಗಳನ್ನೇ ಮಾಡಿರಲಿಲ್ಲ ಗಾಂಧೀಜಿ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 9)



ಅಸ್ಪೃಶ್ಯತೆ ನಿರ್ಮೂಲನೆ ಬಗ್ಗೆ ಕಾಂಗ್ರೆಸ್ ಕಾಳಜಿ ಪ್ರಾಮಾಣಿಕವಲ್ಲ

ಮಹಾತ್ಮಾಜೀ, ನಾನು ಜನಿಸುವ ಮೊದಲೇ ತಾವು ಅಸ್ಪೃಶ್ಯತೆ ಪಿಡುಗಿನ ಬಗ್ಗೆ ಚಿಂತನೆ ಮಾಡಿರುವುದು ಸತ್ಯ. ಎಲ್ಲಾ ವಯೋವೃದ್ಧ, ಹಿರಿಯ ನಾಗರಿಕರು ವಯಸ್ಸಿನ ವಿಚಾರಕ್ಕೆ ಪ್ರಾಧಾನ್ಯತೆ ನೀಡುವುದು ಸಹಜ. ನಿಮ್ಮ ಕಾರಣಕ್ಕೆ ಕಾಂಗ್ರೆಸ್ ಅಸ್ಪೃಶ್ಯತೆ ಸಮಸ್ಯೆಗೆ ಮಾನ್ಯತೆ ಕೊಟ್ಟಿದೆ ಎಂಬುದು ಕೂಡ ಸತ್ಯ. ಆದರೆ, ಕಾಂಗ್ರೆಸ್ ಸಮಸ್ಯೆಗೆ ಔಪಚಾರಿಕ ಮಾನ್ಯತೆ ನೀಡಿದ್ದು ಬಿಟ್ಟರೆ ಬೇರೇನು ಮಾಡಿಲ್ಲ ಎಂದು ನಾನು ತಮ್ಮಲ್ಲಿ ನೇರ ಧೈರ್ಯದಿಂದ ಹೇಳುತ್ತೇನೆ. ಅಸ್ಪೃಶ್ಯರ ಉದ್ಧಾರಕ್ಕಾಗಿ ಕಾಂಗ್ರೆಸ್ ಪಕ್ಷ 20 ಲಕ್ಷ ವ್ಯಯಿಸಿದೆ ಎಂದು ತಾವು ಹೇಳುತ್ತೀರಿ, ಆದರೆ ಅದೆಲ್ಲವು ವ್ಯರ್ಥ. ಅಂತಹ ಬೆಂಬಲವಿರುತ್ತಿದ್ದಲ್ಲಿ ನಾನು ನನ್ನ ಜನರ ಆರ್ಥಿಕ ಸ್ಥಿತಿಗತಿಗಳಲ್ಲಿ ಗಮನಾರ್ಹ ಮಾರ್ಪಾಡುಗಳ ಸಾಕಾರಗೊಳಿಸುತ್ತಿದೆ, ಅವರ ಬದುಕಲ್ಲಿ ಬೆಳಕು ಮೂಡಿಸುತ್ತಿದ್ದೆ. ಕಾಂಗ್ರೆಸ್ ತನ್ನ ವೃತ್ತಿ–ಬಾಧ್ಯತೆಗಳ ವಿಚಾರದಲ್ಲಿ ಪ್ರಾಮಾಣಿಕವಾಗಿಲ್ಲ. ಪ್ರಾಮಾಣಿಕತೆ ಇರುತ್ತಿದ್ದಲ್ಲಿ, ಕಾಂಗ್ರೆಸ್ ಸದಸ್ಯನಾಗಲು ಖದ್ದರ್ ಧರಿಸಬೇಕೆಂದು ಹೇಗೆ ಷರತ್ತು ವಿಧಿಸಿದೆಯೋ ಅದೇ ತೆರ ಅಸ್ಪೃಶ್ಯತೆ ನಿರ್ಮೂಲನೆಯನ್ನೂ ಒಂದು ಶರ್ತವಾಗಿಸುತ್ತಿತ್ತು. (ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು –ಸಂಪುಟ 17)

ಮುಸ್ಲಿಮರ ತುಷ್ಟೀಕರಣ

ಎರಡು ವಿಚಾರಗಳನ್ನು ಅರ್ಥೈಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಮೊದಲಾಗಿ ತುಷ್ಟೀಕರಣಕ್ಕೂ ಇತ್ಯರ್ಥಕ್ಕೂ ವ್ಯತ್ಯಾಸವಿದೆ ಎಂಬುದನ್ನು ಕಾಂಗ್ರೆಸ್ ಅರಿತಿಲ್ಲ. ಈ ವ್ಯತ್ಯಾಸ ಅತ್ಯವಶ್ಯವಾದುದು. ಆಕ್ರಮಣಕೋರ ಅಥವಾ ದಾಳಿಕೋರ ನಿರಪರಾಧಿ ಜನರ ಕೊಲೆ, ಸುಲಿಗೆ, ಅತ್ಯಾಚಾರ ಮಾಡಿದ್ದರೂ, ದೊಂಬಿ ಹಿಂಸಾಚಾರ ತಾಂಡವಿಸಿದ್ದರೂ ಅವೆಲ್ಲಾ ಕೃತ್ಯಗಳನ್ನು ಮನ್ನಿಸಿ ಆತನನ್ನು ಖರೀದಿಸುವುದು ತುಷ್ಟೀಕರಣ. ಇತ್ಯರ್ಥವೆಂದರೆ ಇತ್ತಂಡಗಳೂ ಉಲ್ಲಂಘಿಸಲಾಗದ ಷರತ್ತು ಅಥವಾ ನಿರ್ಬಂಧಗಳನ್ನು ಹಾಕುವುದಾಗಿದೆ. ತುಷ್ಟೀಕರಣದಲ್ಲಿ ಆಕ್ರಮಣಕೋರನ, ಆಶೋತ್ತರಗಳಿಗೆ ಮಿತಿ ಎಂಬುದೇ ಇರುವುದಿಲ್ಲ. ಆದರೆ, ಇತ್ಯರ್ಥ ಪ್ರಕ್ರಿಯೆಯಲ್ಲಿ ಈ ಮಿತಿ ಇರುತ್ತೆ. ವಿನಾಯಿತಿ ನೀತಿಯು ಮುಸಲ್ಮಾನರ ಆಕ್ರಮಣಕಾರಿ ಪ್ರವೃತ್ತಿ ಬೆಳೆಯಲು ಬೆಂಬಲವಾಗುತ್ತೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಕಾಂಗ್ರೆಸ್ ವಿಫಲವಾಗಿದೆ. ತಮಗೆ ದೊರೆಯುವ ವಿನಾಯಿತಿಗಳು ಹಿಂದುಗಳ ಸೋಲಿನ ದ್ಯೋತಕ ಮತ್ತು ಹಿಂದುಗಳಿಗೆ ಪ್ರತಿಭಟಿಸುವ ಇಚ್ಛಾಶಕ್ತಿ ಇಲ್ಲ ಎಂಬುದಾಗಿ ಮುಸಲ್ಮಾನರು ತಪ್ಪಾಗಿ ವಿಶ್ಲೇಷಿಸುವುದು ಇನ್ನೂ ತೀರಾ ಹೇಯ. ಹಿಟ್ಲರನ ದಬ್ಬಾಳಿಕೆಗೆ ಹೆದರಿ ಆತನ ತುಷ್ಟೀಕರಣಕ್ಕೆ ಮುಂದಾಗಿದ್ದ ಮಿತ್ರರಾಷ್ಟ್ರಗಳು ಆ ಹಂತದಲ್ಲಿ ಅದೆಷ್ಟು ಹೆದರಿದ್ದವೋ, ಕಾಂಗ್ರೆಸ್‌ನ ತುಷ್ಟೀಕರಣ ನೀತಿಯು ಹಿಂದುಗಳನ್ನು ಅಷ್ಟೇ ಭೀತ ಸ್ಥಿತಿಗೆ ನೂಕಿದೆ. (ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು –ಸಂಪುಟ 8)

ಅಹಿಂಸೆಯನ್ನು ಮಣ್ಣು ಮಾಡಿದ ಕಾಂಗ್ರೆಸ್

ಕಾಂಗ್ರೆಸ್‌ನಲ್ಲಿ ಅಹಿಂಸಾ ಸಿದ್ಧಾಂತಕ್ಕೆ ಜಾಗವೇ ಇಲ್ಲ. ಪಕ್ಷದ ಅಹಿಂಸಾ ಸಿದ್ಧಾಂತ ಭಯಾನಕವಾಗಿ ಕುಸಿದುಬಿಟ್ಟಿದೆ. ಅಹಿಂಸೆಯನ್ನು ವಸ್ತುಶಃ ಹೂತುಹಾಕಲಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಕಾಂಗ್ರೆಸ್ ಕಲಾಪಗಳನ್ನು ಓದಿದ ನನ್ನ ಮನಸ್ಸಲ್ಲಿ ಈ ರೀತಿ ಅಭಿಪ್ರಾಯ ಬಲವಾಗಿ ಮೂಡಿದೆ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು –ಸಂಪುಟ 10)



ಕಮ್ಯೂನಿಸ್ಟ್ ಪಕ್ಷ ಬಗ್ಗೆ ಡಾ.ಅಂಬೇಡ್ಕರ್ ನಿಲುವು

ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್‌ಗಿರುವ ವ್ಯತ್ಯಾಸಗಳು: ವ್ಯಕ್ತಿಯ ನೈತಿಕ ಸ್ಥಿತಿಗತಿಗಳಲ್ಲಿ ಪರಿವರ್ತನೆಗಳ ಸೃಜಿಸಿ ಆತ ಸ್ವಯಂಪ್ರೇರಿತವಾಗಿ ಅಹಿಂಸಾ ಹಾದಿಯಲ್ಲಿ ಮುನ್ನಡೆಯುವಂತೆ ಮಾಡುವುದು ಬುದ್ಧನ ಸಿದ್ಧಾಂತ. ಕಮ್ಯೂನಿಸ್ಟರು ಅನುಸರಿಸುವ ಹಾದಿ ಸ್ಪಷ್ಟ, ಅಲ್ಪಾವಧಿಯದ್ದು ಮತ್ತು ತ್ವರಿತ. ಅವೆಂದರೆ, 1. ಹಿಂಸೆ, 2. ಶ್ರಮಜೀವಿಗಳ ಮೇಲೆ ದಬ್ಬಾಳಿಕೆ (ಡಾ.ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು -ಸಂಪುಟ 3)

ಕಮ್ಯೂನಿಸ್ಟರ ಅರಾಜಕತೆ

ನಶಿಸಿಹೋಗುವ ರಾಜ್ಯದ ಸ್ಥಾನವನ್ನು ಇನ್ಯಾವುದು ಭರ್ತಿ ಮಾಡಲಿದೆ ಎಂಬ ಪ್ರಶ್ನೆಗೆ ಕಮ್ಯೂನಿಸ್ಟರು ತೃಪ್ತಿಕರ ಉತ್ತರವನ್ನು ಯಾವತ್ತೂ ಕೊಡಲಾರರು. ರಾಜ್ಯ ಯಾವಾಗ ನಶಿಸುವುದು ಎಂಬುದಕ್ಕಿಂತಲೂ ತೆರವಾಗುವ ರಾಜ್ಯದ ಸ್ಥಾನದ ಭರ್ತಿ ಯಾವುದರಿಂದ ಎಂಬುದು ಪ್ರಮುಖ ಪ್ರಶ್ನೆ. ತೆರವಾಗುವ ಜಾಗವನ್ನು ಅರಾಜಕತೆ–ಅವ್ಯವಸ್ಥೆಗಳು ಭರ್ತಿ ಮಾಡಲಿವೆಯೇ? ಹಾಗಾದಲ್ಲಿ ಕಮ್ಯೂನಿಸ್ಟ್ ರಾಜ್ಯ ನಿರ್ಮಾಣ ವ್ಯವಸ್ಥಿತ ಪ್ರಯತ್ನವೇ? (ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು –ಸಂಪುಟ 3)

ಕಮ್ಯೂನಿಸ್ಟ್ ಸಿದ್ಧಾಂತದ ದೌರ್ಬಲ್ಯ

ಶಾಶ್ವತ ದಬ್ಬಾಳಿಕೆ ಅಥವಾ ನಿರಂಕುಶಪ್ರಭುತ್ವ ಕಮ್ಯೂನಿಸ್ಟರ ರಾಜಕೀಯ ಸಿದ್ಧಾಂತದಲ್ಲಿನ ದೌರ್ಬಲ್ಯ. ಇದನ್ನವರು ಸ್ವತಃ ಒಪ್ಪಿಕೊಂಡಿದ್ದಾರೆ. ಇದಲ್ಲದಿದ್ದರೆ ರಾಜ್ಯವು ನಶಿಸಿಹೋಗುವುದು ಅಥವಾ ಅವನತಿಗೊಳ್ಳುವುದು ಎಂಬುದು ಕಮ್ಯೂನಿಸ್ಟರ ಸಮರ್ಥನೆ. ಈ ಹಿನ್ನೆಲೆಯಲ್ಲಿ 2 ಪ್ರಶ್ನೆಗಳಿಗೆ ಅವರು ಉತ್ತರಿಸಬೇಕು. 1. ರಾಜ್ಯವು ನಶಿಸುವುದು ಅಥವಾ ಅವನತಿಗೀಡಾಗೋದು ಯಾವಾಗ? 2. ಹೀಗಾದಲ್ಲಿ ತೆರವಾಗುವ ಜಾಗ ಭರ್ತಿ ಯಾವುದರಿಂದ? ಮೊದಲ ಪ್ರಶ್ನೆಗೆ ನಿಶ್ಚಿತ ಕಾಲವನ್ನವರು ಕೊಡಲಾರರು. (ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು –ಸಂಪುಟ 3)

ಮಾನವ ಜೀವ ಅಮೂಲ್ಯವಲ್ಲವೇ

ತಮ್ಮ ಅಮೂಲ್ಯ ಆಕಾಂಕ್ಷೆ ಅಥವಾ ಸ್ವಾರ್ಥ ಸಾಧನೆಗಾಗಿ ಇತರರ ಅಮೂಲ್ಯ ಸೊತ್ತು– ಜೀವಗಳನ್ನು ನಾಶಪಡಿಸಿಲ್ಲ ಎಂದು ಕಮ್ಯೂನಿಸ್ಟರು ಹೇಳಬಲ್ಲರೆ? ಅವರು ಖಾಸಗಿ ಸೊತ್ತುಗಳನ್ನು ನಾಶಪಡಿಸಿದ್ದಾರೆ. ಇದವರ ಪ್ರಕಾರ ಅಮೂಲ್ಯ ಅಥವಾ ಶ್ರೇಷ್ಠ ಸಾಧನೆ. ಆದರೆ ತಮ್ಮ ಸ್ವಾರ್ಥಕ್ಕಾಗಿ ಇತರರ ಅಮೂಲ್ಯ ಆಶೋತ್ತರಗಳನ್ನು, ಸೊತ್ತುಗಳನ್ನು ನಾಶಪಡಿಸಿಲ್ಲವೆಂದು ಕಮ್ಯೂನಿಸ್ಟರು ಹೇಳಬಲ್ಲರೆ, ತಮ್ಮ ಸ್ವಾರ್ಥಕ್ಕಾಗಿ ಅದೆಷ್ಟು ಜೀವಗಳನ್ನು ಅವರು ಸಾಯಿಸಿಲ್ಲ? ಮಾನವ ಜೀವಕ್ಕೆ ಬೆಲೆಯೇ ಇಲ್ಲವೆ? ಮಾಲೀಕನ ಪ್ರಾಣ ತೆಗೆಯದೆ ಆತನ ಸೊತ್ತುಗಳ ಹಿಡಿತಕ್ಕೆ ತೆಗೆಯಲು ಸಾಧ್ಯವಾಗಲಿಲ್ಲವೇ? (ಡಾ.ಬಾಬಾ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು –ಸಂಪುಟ –3).

ಕಮ್ಯೂನಿಸ್ಟರಿಂದ ಕಾರ್ಮಿಕರ ಶೋಷಣೆ

ಕಮ್ಯೂನಿಸ್ಟರ ಕಾರ್ಮಿಕ ಪರ ಹೋರಾಟಗಳ ಬಗ್ಗೆ ಹೇಳುವುದಾದರೆ, ಅದಕ್ಕೆ ತಾನು ಸೇರುವ ಸಾಧ್ಯತೆಗಳೇ ಇಲ್ಲವಾಗಿತ್ತು. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಕಾರ್ಮಿಕರನ್ನು ಶೋಷಿಸಿದ ಕಮ್ಯೂನಿಸ್ಟರು ನನ್ನ ಬದ್ಧ ವೈರಿಗಳು. ತೃತೀಯ ದರ್ಜೆ ಕಾರ್ಮಿಕ ನಾಯಕರೆಲ್ಲರು ಕಮ್ಯೂನಿಸ್ಟರು. ಇವರು ತಪ್ಪು ಮಾರ್ಗದರ್ಶನದಿಂದಲೆ ರೂಪುಗೊಂಡ ನಾಯಕರು. ಕಾರ್ಮಿಕರನ್ನು ಅತ್ಯಂತ ಹೀನಾಯ ಸ್ಥಿತಿಗೆ ನೂಕಿದ್ದು ಇದೇ ಕಮ್ಯೂನಿಸ್ಟ್ ನಾಯಕರು. ಇಂದು ಕಾರ್ಮಿಕವರ್ಗದ ಬೆನ್ನೆಲುಬು ಪೂರ್ಣ ಮುರಿದಿದ್ದರೆ, ಮಾಲಕರು ತುಂಬು ಅಧಿಕಾರಯುಕ್ತ ಕಪಿಮುಷ್ಟಿ ಹೊಂದಿರಲು, ಯೂನಿಯನ್‌ವಾದವು ಅನಿಷ್ಟವಾಗಲು, ಒಂದು ಕಾಲದಲ್ಲಿ ಕಾರ್ಮಿಕ ಸಂಘಟನೆಗಳ ಮೇಲೆ ಹಿಡಿತ ಸಾಧಿಸೋ ಮುಖೇನ ಪಡೆದ ಅಧಿಕಾರವನ್ನು ಕಮ್ಯೂನಿಸ್ಟರು ಸಂಪೂರ್ಣ ದುರ್ಬಳಸಿದ್ದೇ ಮೂಲ ಕಾರಣ. (ಡಾ.ಅಂಬೇಡ್ಕರ್ ಬರೆಹಗಳು–ಭಾಷಣ –ಸಂಪುಟ 17 (ಭಾಗ 3).



ಕಮ್ಯೂನಿಸ್ಟರ ದ್ವಿಮುಖ ಧೋರಣೆಗಳು

ಕಾರ್ಮಿಕರ ಹಿತಕ್ಕಾಗಿ ಹೋರಾಡುವ ಕಾರ್ಮಿಕ ನಾಯಕರು ಯಾವುದೇ ರಾಜಕೀಯ ಪಕ್ಷಗಳ ಕೈಗೊಂಬೆಯಾಗಕೂಡದು. ಆದರೆ, ಈ ದೇಶದಲ್ಲಿ ಕಾರ್ಮಿಕರಿಗಾಗಿ ಸಮರ್ಪಣಾ ಭಾವದಿಂದ ಶ್ರಮಿಸುವ ನಾಯಕರಿಲ್ಲದಿರುವುದು ದುರದೃಷ್ಟಕರ.



ಸಂವಿಧಾನಕ್ಕೆ ಸಂಬಂಧಿಸಿ 1949 ನವೆಂಬರ್ 25ರಂದು ಶಾಸಕಾಂಗ ಸಭೆಯಲ್ಲಿ ಡಾ.ಅಂಬೇಡ್ಕರ್ ಅವರ ಸಮಾಪನ ಹೇಳಿಕೆಗಳು

ಸಂವಿಧಾನ ಬಗ್ಗೆ ಖಂಡನೆಗಳು ಬಹುತೇಕ ವ್ಯಕ್ತವಾಗಿರುವುದು ಎರಡು ವಲಯಗಳಿಂದ. ಅಂದರೆ ಕಮ್ಯೂನಿಸ್ಟ್ ಹಾಗೂ ಸಮಾಜವಾದಿ ಪಕ್ಷಗಳಿಂದ. ಯಾಕವರು ಸಂವಿಧಾನವನ್ನು ಖಂಡಿಸುತ್ತಾರೆ? ನಿಜವಾಗಿ ಇದೊಂದು ಕೆಟ್ಟ ಸಂವಿಧಾನ ಎಂಬುದು ಅವರು ಮುಂದಿಡುವ ಕಾರಣವೇ? ಆದರೆ ನಾನು ದೃಢವಾಗಿ ಹೇಳುತ್ತೇನೆ, ಖಂಡನೆ ವ್ಯಕ್ತಪಡಿಸುತ್ತಿರೋದು ಈ ಕಾರಣಕ್ಕಾಗಿ ಅಲ್ಲ. ಕಮ್ಯೂನಿಸ್ಟರು ಶ್ರಮಜೀವಿಗಳ ವಿರುದ್ಧ ದಬ್ಬಾಳಿಕೆ ಸಿದ್ಧಾಂತ ಆಧಾರಿತ ಸಂವಿಧಾನವನ್ನು ಅಪೇಕ್ಷಿಸಿದ್ದಾರೆ. ಸಮಾಜವಾದಿ ಪಕ್ಷೀಯರು ಎರಡು ವಿಚಾರಗಳನ್ನು ಬಯಸಿದ್ದಾರೆ. ಮೊದಲಾಗಿ, ತಾವು ಅಧಿಕಾರಕ್ಕೆ ಬಂದಲ್ಲಿ, ಪರಿಹಾರ ಪಾವತಿಗೆ ಅವಕಾಶವಿಲ್ಲದೆ ಎಲ್ಲಾ ಖಾಸಗಿ ಸೊತ್ತುಗಳನ್ನು ರಾಷ್ಟ್ರೀಕರಿಸಲು ಅಥವಾ ಸಮಾಜೀಕರಿಸಲು ಸಂವಿಧಾನ ಅವರಿಗೆ ಸ್ವಾತಂತ್ರ್ಯ ನೀಡಬೇಕು. ಎರಡನೆಯದಾಗಿ, ಸಂವಿಧಾನದಲ್ಲಿ ಉಲ್ಲೇಖಿತ ಮೂಲಭೂತ ಹಕ್ಕುಗಳು ಸಂಪೂರ್ಣ ನಿರಂಕುಶವಾಗಿರಬೇಕು, ಯಾವುದೇ ಮಿತಿರಹಿತವಾಗಿರಬೇಕು. ಯಾಕೆಂದರೆ, ಒಂದು ವೇಳೆ ಪಕ್ಷ ಅಧಿಕಾರಕ್ಕೆ ಬರಲು ವಿಫಲವಾದಲ್ಲಿ, ಕೇವಲ ಟೀಕೆ ಟಿಪ್ಪಣಿಗಲ್ಲ, ರಾಜ್ಯವನ್ನು ಕಿತ್ತೊಗೆವ ಸ್ವಾತಂತ್ರ್ಯ ಕೂಡ ತಮಗಿರಬೇಕೆಂಬುದು ಸಮಾಜವಾದಿಗಳ ಲೆಕ್ಕಾಚಾರವಾಗಿದೆ.

ಕಿರುಸುದ್ದಿ



ಇಂದು ಚೆನ್ನೈನಲ್ಲಿ ಕೆಕೆಆರ್ ಹೋರಾಟ

ಚೆನ್ನೈ: ಕಳೆದ ನಾಲ್ಕು ಪಂದ್ಯಗಳಲ್ಲಿ ಮೊದಲ ಗೆಲುವಿನ ರುಚಿ ಕಂಡಿರುವ ಆತ್ಮವಿಶ್ವಾಸದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್, ಈವರೆಗೆ ಮೂರು ಸೋಲು ಕಂಡಿರುವ ಕೆಕೆಆರ್ ಅನ್ನು ಎದುರಿಸಲಿದೆ. ಕೆಕೆಆರ್ ಪಂದ್ಯವೊಂದಕ್ಕೆ ಮಳೆ ಅಡ್ಡಿಯಾಗಿದ್ದರಿಂದ ಇನ್ನೂ ತನ್ನ ಗೆಲುವಿನ ಲಯ ಕಂಡುಕೊಂಡಿಲ್ಲ. ಈ ಪಂದ್ಯವನ್ನು ಗೆಲ್ಲುವುದು ಕೆಕೆಆರ್ ತಂಡಕ್ಕೆ ಬಹಳ ಮುಖ್ಯವಾಗಿದ್ದು, ಚೆನ್ನೈ ತವರಿನಲ್ಲಿ ಅದನ್ನು ಮಣಿಸುವುದು ಸುಲಭದ ಮಾತಲ್ಲ. ಎರಡು ಬಾರಿ ಐಪಿಎಲ್ ಫೈನಲ್ ಮತ್ತು ಒಂದು ಬಾರಿ ಚಾಂಪಿಯನ್ಸ್ ಲೀಗ್ ಫೈನಲ್‌ನಲ್ಲಿ ಸೆಣಸಾಡಿದ ಬದ್ಧ ಎದುರಾಳಿಗಳ ನಡುವಿನ ಪಂದ್ಯ ಚೆನ್ನೈನಲ್ಲಿ ಕುತೂಹಲ ಕೆರಳಿಸಿದೆ. ಪಂಜಾಬ್ ಕಿಂಗ್ಸ್ ವಿರುದ್ಧದ ಕೆಕೆಆರ್ ತವರಿನ ಪಂದ್ಯವು ಮಳೆಗೆ ರದ್ದಾಗಿತ್ತು. ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆರಂಭಿಕ ಸಂಜು ಸ್ಯಾಮ್ಸನ್ ಶತಕ ದಾಖಲಿಸಿದ್ದು, ಸಂಜು ಲಯ ಕಂಡುಕೊಂಡಿರುವುದು ಸಿಎಸ್‌ಕೆ ಡಗೌಟ್‌ನಲ್ಲಿ ನಿಟ್ಟುಸಿರು ಬಿಡುವಂತಾಗಿದೆ. ಮಾಜಿ ನಾಯಕ ಎಂಎಸ್ ಧೋನಿ ಇನ್ನೂ ಸಹ ಆಯ್ಕೆಯಾಗುವ ಹಂತದಲ್ಲಿಲ್ಲ. ಅವರು ಅಭ್ಯಾಸದಲ್ಲಿ ಮಾತ್ರ ಕಾಣಿಸುತ್ತಿದ್ದು, ಆಡುವ ಬಳಗದಲ್ಲಿ ಕಾಣಿಸಿಕೊಂಡಿಲ್ಲ. ಚೆಪಾಕ್‌ನಲ್ಲಿ ಚರುಣ್ ಚಕ್ರವರ್ತಿ ಅವರ ಅನುಭವವನ್ನು ಬಳಸಿಕೊಳ್ಳಲು ಕೆಕೆಆರ್ ಮುಂದಾಗಲಿದೆ.

ಡಗೌಟ್‌ನಲ್ಲಿ ಫೋನ್ ಬಳಸಿದ ರೋಮಿಗೆ ಬಿಸಿಸಿಐ ನೋಟಿಸ್

ಗುವಾಹಟಿ: ಆರ್‌ಸಿಬಿ ವಿರುದ್ಧದ ಐಪಿಎಲ್ ಪಂದ್ಯದ ವೇಳೆ ಡಗೌಟ್‌ನಲ್ಲಿ ಆಟಗಾರರ ಜತೆ ಕುಳಿತಿದ್ದಾಗ ಪಂದ್ಯದ ಸಮಯದಲ್ಲೇ ಮೊಬೈಲ್ ಫೋನ್ ಬಳಸಿ ನಿಯಮ ಉಲ್ಲಂಘಿಸಿದ್ದ ರಾಜಸ್ಥಾನ್ ರಾಯಲ್ಸ್ ಮ್ಯಾನೇಜರ್ ರೋಮಿ ಬಿಂದರ್ ಅವರಿಗೆ ಬಿಸಿಸಿಐ ಶೋಕಾಸ್ ನೋಟಿಸ್ ಕಳುಹಿಸಿದೆ. ಡಗೌಟ್‌ನಲ್ಲಿ ಮೊಬೈಲ್ ಫೋನ್ ಬಳಸುವ ಮೂಲಕ ರೋಮಿ ಬಿಂದರ್, ಬಿಸಿಸಿಐನ ಭ್ರಷ್ಟಾಚಾರ ವಿರೋಧಿ ಮತ್ತು ಭದ್ರತಾ ಘಟಕದ (ಎಸಿಎಸ್‌ಯು) ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಬಿಸಿಸಿಐ ನೋಟಿಸ್‌ಗೆ 48 ಗಂಟೆಗಳೊಳಗೆ ಬಿಂದರ್ ಮತ್ತು ರಾಜಸ್ಥಾನ್ ಫ್ರಾಂಚೈಸಿ ಉತ್ತರಿಸಬೇಕಾಗಿದೆ. ಡಗೌಟ್‌ನಲ್ಲಿ ಪಂದ್ಯದ ವೇಳೆ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಜತೆ ಕುಳಿತಿದ್ದ ಅನುಭವಿ ಮ್ಯಾನೇಜರ್ ರೋಮಿ ಮೊಬೈಲ್ ಫೋನ್‌ನಲ್ಲಿ ಗುರುಟುತ್ತಿದ್ದರು.

ಅಲ್ಕರಾಜ್ ಮಣಿಸಿದ ಸಿನ್ನರ್ ಮೊಂಟೆ ಕಾರ್ಲೊ ಮಾಸ್ಟರ್

ಮೊಂಟೆ ಕಾರ್ಲೊ: ಫ್ರಾನ್ಸ್‌ನಲ್ಲಿ ನಡೆದ ಮೊಂಟೆ ಕಾರ್ಲೊ ಮಾಸ್ಟರ್ಸ್ ಫೈನಲ್‌ನಲ್ಲಿ ತಮ್ಮ ಬದ್ಧ ಎದುರಾಳಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ನೇರ ಸೆಟ್‌ಗಳ ಅಂತರದಿಂದ ಮಣಿಸಿದ ಇಟಲಿಯ ಯಾನಿಕ್ ಸಿನ್ನರ್ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ಕಳೆದ ತಿಂಗಳು ನಡೆದಿದ್ದ ಅಮೆರಿಕದ ಇಂಡಿಯನ್ ವೆಲ್ಸ್ ಮತ್ತು



ಮಯಾಮಿ ಓಪನ್ ಟೂರ್ನಿಗಳಲ್ಲೂ ಸಿನ್ನರ್ ಚಾಂಪಿಯನ್ ಆಗಿದ್ದು, ಪ್ರಸಕ್ತ ಟೆನಿಸ್ ಋತುವಿನಲ್ಲಿ ಇದು ಮೂರನೇ ಪ್ರಶಸ್ತಿ ಗೆದ್ದು ಹ್ಯಾಟ್ರಿಕ್ ಗೆಲುವನ್ನು ಸಂಭ್ರಮಿಸಿದ್ದಾರೆ. ಭಾನುವಾರ ನಡೆದ ಫೈನಲ್‌ನಲ್ಲಿ ಅಲ್ಕರಾಜ್ ಅವರನ್ನು 7-6(5), 6-3 ನೇರ ಸೆಟ್‌ಗಳಿಂದ ಸೋಲಿಸಿದ ಸಿನ್ನರ್ ಮೊಂಟೆ ಕಾರ್ಲೊ ಮಾಸ್ಟರ್ಸ್ ಪ್ರಶಸ್ತಿಗೆ ಮುತ್ತಿಟ್ಟರು. ಇದರೊಂದಿಗೆ 24ರ ಹರೆಯದ ಸಿನ್ನರ್, ಸತತ ನಾಲ್ಕನೇ ಎಟಿಪಿ-1000 ಪ್ರಶಸ್ತಿ ಗೆದ್ದ ಕೇವಲ ಮೂರನೇ ಆಟಗಾರ ಎಂಬ ದಾಖಲೆಯನ್ನು ಬರೆದಿದ್ದಾರೆ. ಈ ಹಿಂದೆ ನೊವಾಕ್ ಜೊಕೊವಿಚ್ (ಸರ್ಬಿಯಾ) ಮತ್ತು ರಾಫೆಲ್ ನಡಾಲ್ (ಸ್ಪೇನ್) ಮಾತ್ರ ಈ ಸಾಧನೆಗೈದಿದ್ದರು. ಕಳೆದ ನವೆಂಬರ್‌ನಲ್ಲಿ ಎಟಿಪಿ ಫೈನಲ್‌ನಲ್ಲಿ ಮುಖಾಮುಖಿ ಆಗಿದ್ದ ಬಳಿಕ ಸಿನ್ನರ್ ಮತ್ತು ಅಲ್ಕರಾಜ್ ಮುಖಾಮುಖಿ ಆಗಿದ್ದರು. ತಮ್ಮ ಹಿಂದಿನ ಎಲ್ಲಾ 17 ಪಂದ್ಯಗಳನ್ನು ಗೆದ್ದಿರುವ ಸಿನ್ನರ್, 2015ರಲ್ಲಿ ಜೊಕೊವಿಚ್ ಬಳಿಕ ಒಂದೇ ಋತುವಿನಲ್ಲಿ ಆರಂಭಿಕ ಮೂರು ಎಟಿಪಿ-1000 ಪ್ರಶಸ್ತಿಯನ್ನು ಗೆದ್ದ ಆಟಗಾರನೆಂಬ ದಾಖಲೆ ಬರೆದಿದ್ದಾರೆ. ಇದೇ ರೀತಿ ಆವೆಮಣ್ಣಿನಲ್ಲಿ ತಮ್ಮ ಹಿಂದಿನ 17 ಪಂದ್ಯಗಳನ್ನು ಗೆದ್ದಿದ್ದ ಅಲ್ಕರಾಜ್ ಕಳೆದ ಋತುವಿನಲ್ಲಿ ಫ್ರೆಂಚ್ ಓಪನ್ ಮತ್ತು ರೋಮ್‌ನಲ್ಲಿ ಇಟಾಲಿಯನ್ ಓಪನ್ ಗೆದ್ದಿದ್ದರು. ವೃತ್ತಿಜೀವನದಲ್ಲಿ ಸಿನ್ನರ್ ಎದುರು ಅಲ್ಕರಾಜ್ 7ನೇ ಸೋಲುಂಡಿದ್ದು, ಇವರಿಬ್ಬರು ಮುಖಾಮುಖಿ ಗೆಲುವಿನ ಅಂತರವು 7-10 ತಲುಪಿದೆ.

ಮುಂಬೈ ಗೆಲುವಿಗೆ ಕೃಣಾಲ್, ಸುಯಶ್ ಅಡ್ಡಿ | ಬ್ಯಾಟಿಂಗ್‌ನಲ್ಲಿ ಮಿಂಚಿದ ಸಾಲ್ಟ್, ಪಾಟಿದಾರ್


ಗೆಲುವಿನ ಹಾದಿಗೆ ಮರಳಿದ ಆರ್‌ಸಿಬಿ

ಮುಂಬೈ: ತವರಿನ ಫೇವರಿಟ್ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) 18 ರನ್‌ಗಳಿಂದ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಆರ್‌ಸಿಬಿ ಗೆಲುವಿನ ಹಾದಿಗೆ ಮರಳಿದೆ.

ಆರ್‌ಸಿಬಿ ನೀಡಿದ 241 ರನ್ ಬೃಹತ್ ಸವಾಲನ್ನು ಬೆನ್ನತ್ತಿದ ಮುಂಬೈಗೆ ರಿಕೆಲ್ಟನ್ ಭರ್ಜರಿ ಆರಂಭವನ್ನು ನೀಡಿದ್ದರು. ಮುಂಬೈ ಮೊದಲ ಮೂರು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 39 ರನ್, ನಾಲ್ಕು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 48 ರನ್ ಎಂಬ ಉತ್ತಮ ಸ್ಥಿತಿಯಲ್ಲಿತ್ತು. ಸುಲಭದಲ್ಲಿ ಸೋಲು ಒಪ್ಪಿಕೊಳ್ಳಲು ಮುಂಬೈ ಸಿದ್ಧವಿರಲಿಲ್ಲ. ಆದರೆ ಕೃಣಾಲ್ ಪಾಂಡ್ಯ ಬೌಲಿಂಗ್ ಮಾಡಲು ಬಂದಂತೆ ಆಸ್ಕಿಂಗ್ ರೇಟ್ ಹೆಚ್ಚಾಯಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಮೈದಾನಕ್ಕಿಳಿದ ಯುವ ವೇಗಿ ರಸಿಕ್ ದಾರ್ ತಮ್ಮ ಮೊದಲ ಓವರ್‌ನಲ್ಲಿ ವೇರಿಯೇಷನ್ ಬಳಸಿಕೊಂಡು ಕೇವಲ 8 ರನ್ ನೀಡಿದ್ದರು. ಪವರ್ ಪ್ಲೇನಲ್ಲಿ ಎಸೆದಿದ್ದ ಎರಡು ಓವರ್‌ಗಳಲ್ಲಿ 15 ರನ್ ಅಷ್ಟೇ ಬಿಟ್ಟುಕೊಟ್ಟಿದ್ದರು.

ರೋಹಿತ್ ಮೈದಾನ ತೊರೆದ ಬಳಿಕ ರಿಕೆಲ್ಟನ್ ಮತ್ತು ತಿಲಕ್‌ರನ್ನು ಲೆಗ್‌ಸ್ಪಿನ್ನರ್ ಸುಯಶ್ ಒಂದೇ ಓವರ್‌ನಲ್ಲಿ ಪೆವಿಲಿಯನ್ ಕಳುಹಿಸಿದ್ದರು. ಗೂಗ್ಲಿಯಿಂದ 8ನೇ ಓವರ್ ಆರಂಭಿಸಿದ್ದ ಸುಯಶ್, ಸ್ಲಾಗ್ ಸ್ವೀಪ್‌ಗೆ ಯತ್ನಿಸಿದ ರಿಕೆಲ್ಟನ್ ಅವರನ್ನು ಬಲಿ ತೆಗೆದುಕೊಂಡಿದ್ದರು. ಟಾಪ್ ಎಜ್ ಆಗಿ ಭುವನೇಶ್ವರ್ ಕೈಗೆ ಸೇರಿತ್ತು. ಆದೇ ಓವರ್‌ನ ಐದನೇ ಎಸೆತವು ಔಟ್‌ಸೈಡ್ ಲೆಗ್‌ನಲ್ಲಿ ಬಂದಾಗ ಹೊಡೆಯುವ ಯತ್ನದಲ್ಲಿ ತಿಲಕ್ ವರ್ಮಾ ಶಾರ್ಟ್ ಫೈನ್ ಲೆಗ್‌ನಲ್ಲಿ ಕ್ಯಾಚಿತ್ತು ಔಟಾಗಿದ್ದರು.

ಬ್ಯಾಟಿಂಗ್‌ಗಿಳಿದ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಎದುರಿಸಿದ ಮೊದಲ ಎಸೆತದಲ್ಲೇ ಸಿಕ್ಸರ್ ಬಾರಿಸಿದ್ದರು. ಆದರೆ ಅಗತ್ಯವಿರುವ ರನ್ ರೇಟ್ ಹೆಚ್ಚುತ್ತಲೇ ಹೋಗಿತ್ತು. ಪಾಂಡ್ಯ ಸಿಕ್ಸರ್ ಹೊಡೆದಿದ್ದರಿಂದ ಸುಯಶ್ ಶರ್ಮಾ ಮೊದಲ ಓವರ್‌ನಲ್ಲಿ 8 ರನ್‌ಗಳು ಬಂದಿದ್ದವು. ಇಲ್ಲಿ ಸುಯಶ್ ಬೌಲಿಂಗ್‌ನ ಇಂಪ್ಯಾಕ್ಟ್ ಕಾಣಬಹುದು. ಕಳೆದ ಪಂದ್ಯದಲ್ಲಿ ಆರ್‌ಆರ್ ವಿರುದ್ಧ ಸುಯಶ್ ಲೆಗ್‌ಸ್ಪಿನ್ ಕೊರತೆಯನ್ನು ಆರ್‌ಸಿಬಿ ಕಂಡಿತ್ತು.



ಇನ್ನೊಂದು ಬದಿಯಲ್ಲಿ ಭಾರತದ ಟಿ20 ನಾಯಕ ಸೂರ್ಯ, ಕೃಣಾಲ್‌ರ ನಿಧಾನಗತಿಯ ಎಸೆತಕ್ಕೆ ಹೊಡೆಯುವ ಯತ್ನದಲ್ಲಿ ಶಾರ್ಟ್ ಲೆಗ್‌ನಲ್ಲಿ ಕ್ಯಾಚಿತ್ತಿದ್ದರು. ಆದರೆ ಸೂರ್ಯ ಅವರ 150 ಸ್ಟ್ರೈಕ್ ರೇಟ್‌ನ ಬ್ಯಾಟಿಂಗ್ ಮುಂಬೈಗೆ ಪ್ರಯೋಜನ ಸಿಗಲಿಲ್ಲ. ಸೂರ್ಯ ಔಟಾಗಿದ್ದಾಗ ಮುಂಬೈ ಗೆಲುವಿಗೆ 46 ಎಸೆತಗಳಲ್ಲಿ 120 ರನ್‌ಗಳ ಅಗತ್ಯವಿತ್ತು.

ರಥರ್‌ಫೋರ್ಡ್ ಸಿಕ್ಸರ್ ಮಳೆ: ಶೆರ್ಫಾನ್ ರಥರ್‌ಫೋರ್ಡ್ ತಮ್ಮ ಸ್ಫೋಟಕ ಆಟ ಪ್ರದರ್ಶಿಸಿ, ಮುಂಬೈ ಸೋಲಿನ ಅಂತರ ಮತ್ತು ನೆಟ್ ರನ್‌ರೇಟ್ ಕುಸಿತ ಕಡಿಮೆಗೊಳಿಸಿದ್ದರು. ರಥರ್‌ಫೋರ್ಡ್ ಕೇವಲ 31 ಎಸೆತಗಳಿಂದ ಒಂದು ಬೌಂಡರಿ ಮತ್ತು 9 ಭರ್ಜರಿ ಸಿಕ್ಸರ್ ಗಳಿದ್ದ 71 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು.

ಹಿಟ್ ಮ್ಯಾನ್ ಹರ್ಟ್!

ಲಯದಲ್ಲಿ ಕಾಣಿಸಿಕೊಂಡಿದ್ದ ಮಾಜಿ ನಾಯಕ ರೋಹಿತ್ ಶರ್ಮಾ ಅತೀವ ಸ್ನಾಯು ಸೆಳೆತದಿಂದಾಗಿ ಬಳಲುತ್ತಿದ್ದರು. ಈ ವೇಳೆ ಮುಂಬೈ ಇಂಡಿಯನ್ಸ್ 7 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 72 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದಾಗ, ಹಿಟ್ ಮ್ಯಾನ್ ಗಾಯಾಳಾಗಿ ನಿವೃತ್ತಿ ಪಡೆದಿದ್ದರು. ಬಹುಶಃ ಇದೇ ಸಂದರ್ಭ ಅದೃಷ್ಟ ಆರ್‌ಸಿಬಿ ಪಾಲಿಗೆ ಒಲಿದಿತ್ತು. 13 ಎಸೆತಗಳಿಂದ 2 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡಿದ್ದ 19 ರನ್ ಗಳಿಸಿದ್ದರು.



- 462 ರನ್ - ಐಪಿಎಲ್‌ನಲ್ಲೇ ಆರ್‌ಸಿಬಿ-ಮುಂಬೈ ಹಣಾಹಣಿಯಲ್ಲಿ ಒಟ್ಟು ದಾಖಲಾದ ಅತ್ಯಧಿಕ ರನ್
- ಮುಂಬೈ ಪರ ಐಪಿಎಲ್‌ನಲ್ಲಿ 6,000 ರನ್ ಮೈಲಿಗಲ್ಲು ದಾಟಿದ ರೋಹಿತ್ ಶರ್ಮಾ
- ಮುಂಬೈ ಇಂಡಿಯನ್ಸ್ ವಿರುದ್ಧ 1,000 ರನ್ ಮೈಲಿಗಲ್ಲು ದಾಟಿದ ವಿರಾಟ್ ಕೊಹ್ಲಿ
- ಐಪಿಎಲ್‌ನಲ್ಲಿ ತಮ್ಮ ವೈಯಕ್ತಿಕ ಅತಿವೇಗದ ಅರ್ಧಶತಕ ದಾಖಲಿಸಿದ ರಜತ್ ಪಾಟಿದಾರ್

ಪಾಂಡ್ಯ ಸಹೋದರರ ಕಾದಾಟ!

ಬ್ಯಾಟಿಂಗ್‌ಗಿಳಿದ ಹಾರ್ದಿಕ್ ಅವರನ್ನು ಬೌನ್ಸರ್ ಮೂಲಕ ಕೃಣಾಲ್ ಸ್ವಾಗತಿಸಿದ್ದರು, ಕೃಣಾಲ್ ಬೌನ್ಸರ್‌ಗೆ ಹಾರ್ದಿಕ್ ರನ್ ಹೊಡೆದಿಲ್ಲ. ಪಾಂಡ್ಯ ಸಹೋದರರ ವೈಯಕ್ತಿಕ ಜೀವನದ ಭಿನ್ನಾಭಿಪ್ರಾಯ ಆಟದಲ್ಲೂ ಕಾಣಿಸಿತ್ತು. ಕಷ್ಟದ ಕ್ಯಾಚ್ ಕೈಚೆಲ್ಲಿ ಜೀವದಾನ ನೀಡಿದ್ದ ಕೃಣಾಲ್, ಹಾರ್ದಿಕ್ ಔಟಾದಾಗ ಜಿಗಿಯುತ್ತ ಸಂಭ್ರಮಿಸಿದ್ದರು. ಕೃಣಾಲ್ ರತ್ತ ನೋಡುತ್ತಲೇ ಹಾರ್ದಿಕ್ ಪೆವಿಲಿಯನ್ ಕಡೆ ನಡೆದಿದ್ದರು. ಡಫ಼ಿ ಎಸೆತದಲ್ಲಿ ರೊಮಾರಿಯೋಗೆ ಕ್ಯಾಚ್ ನೀಡಿ ಔಟಾಗಿದ್ದರು.

ರಜತ್ ಅವರಿಗೆ ಭಾರೀ ಪ್ರಶಂಸೆ

ಹಾರ್ದಿಕ್, ರೋಹಿತ್, ಸೂರ್ಯರಂತಹ ನಾಯಕರ ಅನುಭವದಿಂದ ಕೂಡಿದ್ದ ಮುಂಬೈ ವಿರುದ್ಧದ ನಾಯಕತ್ವ ಮತ್ತು ಬ್ಯಾಟಿಂಗ್‌ನಲ್ಲಿ ಮಿಂಚಿದ ಪಾಟಿದಾರ್‌ಗೆ ಕ್ರಿಕೆಟ್ ಅಭಿಮಾನಿಗಳಿಂದ ಭಾರೀ ಪ್ರಶಂಸೆ ವ್ಯಕ್ತವಾಗಿದೆ. ಪಂದ್ಯದಲ್ಲಿ ರಜತ್ 17 ಎಸೆತಗಳಲ್ಲಿ ಸ್ಫೋಟಕ ಅರ್ಧಶತಕ ದಾಖಲಿಸಿದ್ದರು. ಕಳೆದ ಐಪಿಎಲ್, ರಣಜಿಯಲ್ಲಿ ಅತ್ಯುತ್ತಮ ಪ್ರದರ್ಶನದ ಹೊರತಾಗಿಯೂ ರಜತ್, ಭಾರತ ತಂಡದಲ್ಲಿ ಸ್ಥಾನ ಪಡೆದಿಲ್ಲ.



ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ - 240/4 (20): ಸಾಲ್ಟ್ 78(36), ಪಾಟಿದಾರ್ 53(20), ಕೊಹ್ಲಿ 50(38), ಡೇವಿಡ್ ಔಟಾಗದೆ 34(16), ಠಾಕೂರ್ 32ಕ್ಕೆ 1.
ಮುಂಬೈ - 222/5 (20): ರಥರ್‌ಫೋರ್ಡ್ ಔಟಾಗದೆ 71(31), ಹಾರ್ದಿಕ್ 40, ರಿಕೆಲ್ಟನ್ 37, ಸೂರ್ಯ 33, ಸುಯಶ್ 47ಕ್ಕೆ 2, ಕೃಣಾಲ್ 26ಕ್ಕೆ 1.

ಹೈ-ಸ್ಕೋರಿಂಗ್ ಪಂದ್ಯ, 18 ರನ್ನಿಂದ ಗೆದ್ದ ಆರ್‌ಸಿಬಿ

ಆರಂಭ ಕೊಟ್ಟ ಕೊಹ್ಲಿ, ಮತ್ತೆ ಟಿಮ್ ಆರ್ಭಟ

ಪಂದ್ಯಶ್ರೇಷ್ಠ: ಸಾಲ್ಟ್

ಪದೇ ಪದೆ ಚೆಂಡು ಪರೀಕ್ಷಿಸಿದ ಡೇವಿಡ್



ಮುಂಬೈ: ಆತಿಥೇಯ ಮುಂಬೈ ಇಂಡಿಯನ್ಸ್ ವಿರುದ್ಧ ಆರ್‌ಸಿಬಿ ಬ್ಯಾಟಿಂಗ್ ಮಾಡುತ್ತಿದ್ದಾಗ ಫೀಲ್ಡ್ ಅಂಪೈರ್‌ಗಳು ದಿಢೀರ್ ಚೆಂಡು ಬದಲಿಸಿದ್ದು, ಚೆಂಡಿನ ಆಕಾರದ ಬಗ್ಗೆ ಅನುಮಾನಿಸುವ ರೀತಿಯಲ್ಲಿ ಆರ್‌ಸಿಬಿ ಬ್ಯಾಟರ್ ಟಿಮ್ ಡೇವಿಡ್ ಪದೇ ಪದೆ ಚೆಂಡನ್ನು ಪರೀಕ್ಷಿಸಿದ ಘಟನೆ ನಡೆದಿತ್ತು. ಅಂಪೈರ್ ಕೈಗೆ ಚೆಂಡು ಹಿಂದಿರುಗಿಸಲು ತಡ ಮಾಡಿದ್ದಕ್ಕಾಗಿ ಮತ್ತು ಅಂಪೈರ್ ಆದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ಡೇವಿಡ್‌ಗೆ ಪಂದ್ಯ ವೇತನದ ಶೇ.25 ದಂಡ ವಿಧಿಸಲಾಗಿದೆ. ಅಲ್ಲದೆ, ಲೆವೆಲ್-1 ಅಪರಾಧ ಅನ್ವಯ 1 ಡೀಮೆರಿಟ್ ಅಂಕ ನೀಡಲಾಗಿದೆ.

ಡೇವಿಡ್‌ಗೆ ಪಂದ್ಯ ವೇತನದ ಶೇ.25 ದಂಡ!

18ನೇ ಓವರ್‌ನಲ್ಲಿ ಹಾರ್ದಿಕ್ ಎಸೆತವನ್ನು ಡೇವಿಡ್ ಸಿಕ್ಸರ್‌ಗಟ್ಟಿದ ಬಳಿಕ ಅಂಪೈರ್‌ಗಳು ಚೆಂಡನ್ನು ಬದಲಾಯಿಸಿದ್ದರು. ಮೈದಾನದ ಔಟ್‌ಫೀಲ್ಡ್ ತೇವಾಂಶದಿಂದ ಚೆಂಡು ಬಹಳ ಒದ್ದೆಯಾಗಿದ್ದು, ಅಂಪೈರ್‌ಗಳು ನಿಯಮದಂತೆ ಹಳೆಯ ಚೆಂಡಿನ ಬಾಕ್ಸ್ ತರಿಸಿ ಚೆಂಡನ್ನು ಬದಲಿಸುವ ನಿರ್ಧಾರ ತಳೆದಿದ್ದರು. ಅಂಪೈರ್ ಚೆಂಡನ್ನು ವಾಪಸ್ ನೀಡುವಂತೆ ಕೇಳಿದರೂ ನೀಡಿರಲಿಲ್ಲ. ಇದರಿಂದ ಅಂಪೈರ್‌ಗಳ ಕೆಂಗಣ್ಣಿಗೆ ಟಿಮ್ ಗುರಿಯಾದರು. ಅಂಪೈರ್‌ಗಳು ಆಯ್ದ ಚೆಂಡನ್ನೇ ಕೈಗೆತ್ತಿದ ಡೇವಿಡ್, ಅದನ್ನು ಮೇಲಕ್ಕೆ ಹಾರಿಸಿ ಕ್ಯಾಚ್ ಮಾಡುತ್ತ ಚೆಂಡಿನ ಆಕಾರ ಮತ್ತು ತೂಕವನ್ನು ಪದೇ ಪದೇ ಪರೀಕ್ಷಿಸಿದ್ದರು. ಮೈದಾನದ ಅಂಪೈರ್ಸ್ ವೀರೇಂದ್ರ ಶರ್ಮಾ ಮತ್ತು ಸ್ವರೂಪಾನಂದ್ ಕಣ್ಣೂರ್ ಶಿಸ್ತು ಉಲ್ಲಂಘನೆ ಎಚ್ಚರಿಕೆ ನೀಡಿದ ನಂತರ ಡೇವಿಡ್ ಚೆಂಡು ಮರಳಿಸಿದ್ದರು. ಅಂಪೈರ್‌ಗಳಿಗೆ ಚೆಂಡನ್ನು ಹಿಂದಿರುಗಿಸಿ ಬ್ಯಾಟಿಂಗ್ ಮರಳುತ್ತಿದ್ದ ಡೇವಿಡ್ ಬಳಿ ಬಂದ ರೋಹಿತ್ ಶರ್ಮಾ ಏನೋ ಹೇಳಿದ್ದು, ಇಬ್ಬರೂ ನಗುತ್ತಿದ್ದರು.

ಕಳೆದ ಆವೃತ್ತಿಗಿಂತ ಬಹುಮಾನದ ಮೊತ್ತ ಶೇ.10 ಏರಿಕೆ

ಮಹಿಳಾ ಟಿ20 ವಿಶ್ವಕಪ್ ಬಹುಮಾನ ₹82 ಕೋಟಿ!

ದುಬೈ: ಮಹಿಳೆಯರ ಟಿ20 ವಿಶ್ವಕಪ್ 2026 ಪಂದ್ಯಾವಳಿಗೆ ದಾಖಲೆಯ 82 ಕೋಟಿ ರೂ. ಬಹುಮಾನದ ಮೊತ್ತವನ್ನು ಐಸಿಸಿ ಸೋಮವಾರ ಘೋಷಿಸಿದೆ. ಯುಎಇ ಆತಿಥ್ಯದಲ್ಲಿ ಆಯೋಜಿಸಲಾಗಿದ್ದ ಕಳೆದ ಆವೃತ್ತಿಯ ಬಹುಮಾನದ ಮೊತ್ತಕ್ಕಿಂತ ಇದು ಶೇ.10 ಹೆಚ್ಚಾಗಿದೆ. ಚಾಂಪಿಯನ್ ತಂಡ ಸುಮಾರು 21.8 ಕೋಟಿ ರೂ. ಪ್ರಶಸ್ತಿ ಮೊತ್ತ ಪಡೆಯಲಿದೆ.



ಇಂಗ್ಲೆಂಡ್ ಮತ್ತು ವೇಲ್ಸ್ ಆತಿಥ್ಯದಲ್ಲಿ ಜೂ.12ರಿಂದ ಜು.5ರವರೆಗೆ ಮಹಿಳಾ ಟಿ20 ವಿಶ್ವಕಪ್ ನಡೆಯಲಿದೆ. 24 ದಿನಗಳ ಟೂರ್ನಿಯಲ್ಲಿ 12 ತಂಡಗಳು ಒಳಗೊಂಡಿವೆ. ಪಂದ್ಯಾವಳಿಯ ಬಹುಮಾನದ ಮೊತ್ತ 87,64,615 ಡಾಲರ್ (ಅಂದಾಜು 82 ಕೋಟಿ ರೂ.) ಆಗಿರಲಿದೆ. ಜೂ.12ರಂದು ಬರ್ಮಿಂಗ್‌ಮ್‌ನ ಎಜ್‌ಬಾಸ್ಟನ್‌ನಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ಸೆಣಸಾಡಲಿವೆ. ಪಂದ್ಯಾವಳಿಯ ಫೈನಲ್ ಜು.5ರಂದು ಐತಿಹಾಸಿಕ ಲಾರ್ಡ್ಸ್ ಮೈದಾನದಲ್ಲಿ ನಡೆಯಲಿದ್ದು, ಒಟ್ಟು 7 ಕ್ರೀಡಾಂಗಣಗಳಲ್ಲಿ 33 ಪಂದ್ಯಗಳು ನಡೆಯಲಿವೆ. ಕಳೆದ ಆವೃತ್ತಿಯ (2024ರ) ಮಹಿಳಾ ಟಿ20 ವಿಶ್ವಕಪ್ ಯುಎಇ ಆತಿಥ್ಯದಲ್ಲಿ ನಡೆದಿತ್ತು. ಯುಎಇನಲ್ಲಿ 10 ತಂಡಗಳು ಸ್ಪರ್ಧಿಸಿದ್ದು, 79,58,077 ಡಾಲರ್ (72.4 ಕೋಟಿ ರೂ.) ಬಹುಮಾನದ ಮೊತ್ತವಿತ್ತು. ಈ ಆವೃತ್ತಿಯಲ್ಲಿ ಇನ್ನೂ ಎರಡು ತಂಡಗಳು (ಸ್ಕಾಟ್ಲೆಂಡ್ ಮತ್ತು ನೆದರ್‌ಲೆಂಡ್) ಸೇರ್ಪಡೆಯಾಗಿದ್ದು, ಬಹುಮಾನದ ಮೊತ್ತವೂ ಇನ್ನಷ್ಟು ಹೆಚ್ಚಾಗಿದೆ.

ವಿಜೇತರಿಗೆ 21.8 ಕೋಟಿ ರೂ.!
ಚಾಂಪಿಯನ್ ತಂಡವು 23,40,000 ಡಾಲರ್ (21.8 ಕೋಟಿ ರೂ.) ಪ್ರಶಸ್ತಿ ಮೊತ್ತವನ್ನು ಬಾಚಿಕೊಳ್ಳಲಿದೆ. ರನ್ನರ್‌ಅಪ್ ಪ್ರಶಸ್ತಿ ಗೆದ್ದ ತಂಡವು 11,70,000 (10 ಕೋಟಿ ರೂ.) ಪಡೆಯಲಿದೆ. ಉಳಿದಂತೆ ಸೆಮಿಫೈನಲಿಸ್ಟ್ ತಂಡಗಳೆರಡು ತಲಾ 6,75,000 ಡಾಲರ್ (6.29 ಕೋಟಿ ರೂ.) ಪಡೆಯಲಿವೆ. ಗುಂಪಿನ ಹಂತದಲ್ಲಿ, ಪ್ರತಿ ಪಂದ್ಯದ ವಿಜೇತ ತಂಡವು 31,154 ಡಾಲರ್ (29 ಲಕ್ಷ ರೂ.) ಪಡೆಯಲಿದೆ. ಎಲ್ಲಾ 12 ತಂಡಗಳು ಕನಿಷ್ಠಪಕ್ಷ 2,47,500 ಡಾಲರ್ (2.31 ಕೋಟಿ ರೂ.) ಬಹುಮಾನದ ಮೊತ್ತ ಪಡೆಯಲಿವೆ.

> ಮಹಿಳಾ ಕ್ರಿಕೆಟ್ ವೇಗದ ಪ್ರಗತಿ ಕಾಣುತ್ತಿದೆ. ಇದರಿಂದ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿ 12 ತಂಡಗಳಿಗೆ ವಿಸ್ತರಿಸಿಕೊಂಡಿದೆ. ದಾಖಲೆಯ ಬಹುಮಾನದ ಮೊತ್ತವು ಪ್ರಬಲ, ಸ್ಪರ್ಧಾತ್ಮಕ ಜಾಗತಿಕ ಕ್ರೀಡೆಯನ್ನಾಗಿ ಮಹಿಳಾ ಕ್ರಿಕೆಟ್ ಬೆಳೆಸುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ.
> ■ ಸಂಜೋಗ್ ಗುಪ್ತಾ, ಐಸಿಸಿ ಸಿಇಒ.

ಇಶಾನ್-ಕ್ಲಾಸನ್ 88 ರನ್ ಜತೆಯಾಟ

ಕಿಶನ್ ನಾಯಕನಾಟ, ಸನ್ ಉತ್ತಮ ಮೊತ್ತ



ಹೈದರಾಬಾದ್: ನಾಯಕ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ತವರಿನ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡ ಹೊರತಾಗಿಯೂ 216 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತು.

ಟಾಸ್ ಗೆದ್ದ ರಾಯಲ್ಸ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಜೊಫ್ರಾ ಆರ್ಚರ್ ಎಸೆದಿದ್ದ ಮೊದಲ ಎಸೆತದಲ್ಲೇ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಸೊನ್ನೆ ಸುತ್ತಿದ್ದರಿಂದ ಸನ್‌ರೈಸರ್ಸ್ ಆಘಾತ ಅನುಭವಿಸಿತ್ತು. ಪವರ್‌ಪ್ಲೇನಲ್ಲಿ 50 ರನ್‌ಗಳ ಗಡಿ ದಾಟಿಸುವಷ್ಟರಲ್ಲಿ ಸನ್‌ರೈಸರ್ಸ್ ತನ್ನೆರಡೂ ಆರಂಭಿಕರ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ ಮೂರನೇ ವಿಕೆಟ್‌ಗೆ ಜತೆಯಾದ ಹೈದರಾಬಾದ್ ನಾಯಕ ಕಿಶನ್ (91) ಮತ್ತು ಹೆನ್ರಿಚ್ ಕ್ಲಾಸನ್ (40) ಬೌಂಡರಿ ಸಿಕ್ಸರ್‌ಗಳೊಂದಿಗೆ 88 ರನ್‌ಗಳ ಮಹತ್ವದ ಜತೆಯಾಟ ಆಡಿದ್ದರು. ಕಿಶನ್ 44 ಎಸೆತಗಳಿಂದ 8 ಬೌಂಡರಿ ಮತ್ತು 6 ಸಿಕ್ಸರ್‌ಗಳನ್ನು ಒಳಗೊಂಡಿದ್ದ 91 ರನ್ ಬಾರಿಸಿದ್ದರು. ಕಿಶನ್ ವಿಕೆಟ್ ಪತನದ ಬಳಿಕವೂ ಕ್ಲಾಸನ್ ರಾಯಲ್ಸ್ ಬೌಲರ್‌ಗಳನ್ನು ಕೊಂಚ ಮಟ್ಟಿಗೆ ದಂಡಿಸಿದರು. ಕೊನೆಯಲ್ಲಿ ನಿತೀಶ್ ಕುಮಾರ್ ರೆಡ್ಡಿ (28) ಮತ್ತು ಔಟಾಗದೆ ಉಳಿದಿದ್ದ ಸಲೀಲ್ ಅರೋರ (24) ಬಿರುಸಿನ ಆಟದಿಂದ ಸನ್‌ರೈಸರ್ಸ್ ಮೊತ್ತವು 200ರ ಗಡಿ ದಾಟಿತು. ರಾಯಲ್ಸ್ ಪರ ಆರ್ಚರ್ 37ಕ್ಕೆ 2 ವಿಕೆಟ್ ಪಡೆದರು. ಉಳಿದಂತೆ ಸಂದೀಪ್ ಶರ್ಮಾ, ತುಷಾರ್ ದೇಶಪಾಂಡೆ ಮತ್ತು ನಾಯಕ ರಿಯಾನ್ ಪರಾಗ್ ತಲಾ 1 ವಿಕೆಟ್ ಪಡೆದರು.

ಒಂದೇ ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡ ರಾಯಲ್ಸ್!

216 ರನ್ ಸವಾಲನ್ನು ಬೆನ್ನತ್ತಿದ್ದ ರಾಯಲ್ಸ್ ಒಂದೇ ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಎಲ್ಲಾ ತಂಡಗಳಿಗೂ ತಲೆನೋವು ಕೊಡುತ್ತಿದ್ದ ಸ್ಫೋಟಕ ಆರಂಭಿಕ ವೈಭವ್ ಸೂರ್ಯವಂಶಿ ಖಾತೆ ತೆರೆಯದೆ ಔಟಾಗಿದ್ದು, ಕಳೆದ ಪಂದ್ಯದ ಹೀರೋ ಧ್ರುವ್ ಜುರೇಲ್ (0), ಪ್ರಿಟೋರಸ್ (0) ಅವರನ್ನು ವೇಗಿ ಪ್ರಫುಲ್ ಹಿಂಜ್ ಮೊದಲ ಓವರ್‌ನಲ್ಲೇ ಪೆವಿಲಿಯನ್‌ಗೆ ಕಳುಹಿಸಿದ್ದರು.

ಸಂಕ್ಷಿಪ್ತ ಸ್ಕೋರ್

ಸನ್‌ರೈಸರ್ಸ್ 216/6 (20): ಕಿಶನ್ 91(44), ಕ್ಲಾಸನ್ 40(26), ನಿತೀಶ್ ರೆಡ್ಡಿ 28(13), ಸಲೀಲ್ 24(13)★.
ಆರ್ಚರ್ 37ಕ್ಕೆ 2, ಸಂದೀಪ್ 52ಕ್ಕೆ 1, ತುಷಾರ್ 55ಕ್ಕೆ 1, ಪರಾಗ್ 5ಕ್ಕೆ 1.

ಟೈಟಾನ್ಸ್-ಚೆನ್ನೈ ಪಂದ್ಯಗಳ ಮೈದಾನ ಅದಲು ಬದಲು

ಮುಂಬೈ: ಐಪಿಎಲ್ 2026ರಲ್ಲಿ ನಡೆಯಲಿರುವ ಗುಜರಾತ್ ಟೈಟಾನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಪಂದ್ಯಗಳ ಸ್ಥಳ ಅದಲು ಬದಲು ಮಾಡಿರುವುದಾಗಿ ಬಿಸಿಸಿಐ ಸೋಮವಾರ ಘೋಷಿಸಿದೆ.

ಏ.26ರಂದು ಗುಜರಾತ್‌ನಲ್ಲಿ ನಗರಸಭೆ ಚುನಾವಣೆ ಹಿನ್ನೆಲೆಯಿಂದ ಟೈಟಾನ್ಸ್ ಹಾಗೂ ಸಿಎಸ್‌ಕೆ ಐಪಿಎಲ್ ವೇಳಾಪಟ್ಟಿಯಲ್ಲಿ ಸ್ಥಳ ಅದಲು ಬದಲು ಮಾಡಲಾಗಿದೆ. ವೇಳಾಪಟ್ಟಿ ಪ್ರಕಾರ, ಏ.26ರಂದು ಮಧ್ಯಾಹ್ನ 3.30ಕ್ಕೆ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಈ ಫ್ರಾಂಚೈಸಿಗಳೆರಡು ಮುಖಾಮುಖಿ ಆಗಬೇಕಿದ್ದು, ಈಗ ಈ ಪಂದ್ಯವನ್ನು ಚೆನ್ನೈನ ಚೆಪಾಕ್‌ನ ಎಂ.ಎ. ಚಿದಂಬರಂ ಸ್ಟೇಡಿಯಂನಲ್ಲಿ ಆಯೋಜಿಸಲಾಗುವುದು. ಅದೇ ರೀತಿ ಚೆಪಾಕ್‌ನಲ್ಲಿ ಮೇ.21ರ ರಾತ್ರಿ 7.30ಕ್ಕೆ ನಡೆಯಬೇಕಿದ್ದ ಪಂದ್ಯವನ್ನು ಅಹಮದಾಬಾದ್ ಸ್ಟೇಡಿಯಂನಲ್ಲಿ ಆಯೋಜಿಸಲಾಗುವುದು.



ಪಾದದ ಕೆಳಭಾಗದ ಗಾಯದಿಂದ ಬಳಲುತ್ತಿರುವ ವಿರಾಟ್

ಲಖನೌ ವಿರುದ್ಧ ಆಡ್ತಾರಾ ಕೊಹ್ಲಿ?

ಬೆಂಗಳೂರು: ವಾಂಖೇಡೆಯ ಅಪ್ಪಟ ಫ್ಲ್ಯಾಟ್ ಬ್ಯಾಟಿಂಗ್ ಪಿಚ್‌ನಲ್ಲಿ ಕೊಂಚ ನಿಧಾನಗತಿ ಬ್ಯಾಟಿಂಗ್ ನಡೆಸಿದ್ದ ವಿರಾಟ್ ಕೊಹ್ಲಿ ತಮ್ಮ ಎಂದಿನ ಲಯದಲ್ಲಿ ಕಾಣಿಸಿಕೊಂಡಿರಲಿಲ್ಲ. ಪಾದದ ಕೆಳಬಾಗದ ಗಾಯದಿಂದಾಗಿ ವಿರಾಟ್ ಕೊಹ್ಲಿ ನಿಧಾನಗತಿ ಆಟಕ್ಕೆ ಕಾರಣವೆಂದು ತಿಳಿದುಬಂದಿದ್ದು, ಅವರು ಬೆಂಗಳೂರಿನಲ್ಲಿ ಬುಧವಾರ ನಡೆಯುವ ಲಖನೌ ವಿರುದ್ಧ ಆಡುವ ಬಗ್ಗೆ ಸಂಶಯ ವ್ಯಕ್ತವಾಗಿದೆ.

ಮುಂಬೈ ವಿರುದ್ಧ ಫಿಲ್ ಸಾಲ್ಟ್ ಜತೆಗೂಡಿ ಆರ್‌ಸಿಬಿಗೆ ಉತ್ತಮ ಆರಂಭ ನೀಡಿದ್ದ ಕೊಹ್ಲಿ, ಸ್ವತಃ ತಮ್ಮ ಬ್ಯಾಟಿಂಗ್‌ನಿಂದ ಅತೃಪ್ತರಾಗಿ ಕಾಣಿಸಿಕೊಂಡಿದ್ದರು. 38 ಎಸೆತಗಳಿಂದ 50 ರನ್ ಗಳಿಸಿದ ಔಟಾಗಿದ್ದ ಕೊಹ್ಲಿ, ಪೆವಿಲಿಯನ್ ತೆರಳುತ್ತಿದ್ದಾಗ ತಮ್ಮ ಎರಡೂ ಗ್ಲೌಸ್‌ಗಳನ್ನು ಮತ್ತು ಹೆಲ್ಮೆಟ್ ಅನ್ನು ಡಗೌಟ್ ಮುಂದೆ ಎಸೆದು ಹತಾಶೆ ವ್ಯಕ್ತಪಡಿಸಿದ್ದರು. ಪಂದ್ಯಕ್ಕೂ ಮುನ್ನ ವಿರಾಟ್ ತೀವ್ರ ಜ್ವರ ಹೊಂದಿದ್ದರು, ಆದರೂ ಅವರು ಬ್ಯಾಟಿಂಗ್ ಮಾಡಲು ಮೈದಾನಕ್ಕಿಳಿದಿದ್ದರು




ಎಂದೆಲ್ಲಾ ವದಂತಿ ಹಬ್ಬಿತ್ತು. ವಿರಾಟ್ ಬದಲಿಗೆ ಜೇಕಬ್ ಬೆಥೆಲ್ ಬದಲಿ ಕ್ಷೇತ್ರರಕ್ಷಕನಾಗಿ ಇಳಿದಿದ್ದರು. ಕೊಹ್ಲಿ ಪಾದದ ಕೆಳಭಾಗದ ನೋವಿನಿಂದ ಬಳಲುತ್ತಿದ್ದ ಕಾರಣ ಕ್ಷೇತ್ರರಕ್ಷಣೆಗೆ ಇಳಿದಿರಲಿಲ್ಲ ಎನ್ನಲಾಗಿದೆ. ಪಂದ್ಯ ಮುಗಿದ ಬಳಿಕ ಹ್ಯಾಂಡ್‌ಶೇಕ್ ನಡೆಸಲು ಮೈದಾನಕ್ಕಿಳಿದ ಕೊಹ್ಲಿ, ಕ್ರಿಕೆಟ್ ದೇವರು ಸಚಿನ್ ತೆಂಡುಲ್ಕರ್‌ರಿಂದ ಅಪ್ಪುಗೆ ಪಡೆದಿದ್ದರು. ಸಚಿನ್ ಸಹ ಕೊಹ್ಲಿ ಆರೋಗ್ಯ ವಿಚಾರಿಸಿದಂತಿತ್ತು. ಪಂದ್ಯ ಮುಗಿದ ಬಳಿಕ ನಾಯಕ ರಜತ್ ಪಾಟಿದಾರ್, ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಸಹ ಕೊಹ್ಲಿ ಅನಾರೋಗ್ಯದ ಬಗ್ಗೆ ತುಟಿಪಿಟಿಕ್ ಎಂದಿಲ್ಲ. ಯಾವುದೇ ಮಾಹಿತಿ ಬಿಟ್ಟುಕೊಡದ ರಜತ್, ಕೊಹ್ಲಿ ಚೆನ್ನಾಗಿದ್ದಾರೆಂಬ ಭರವಸೆ ನನಗಿದೆ. ನಾನಿನ್ನೂ ಫಿಸಿಯೋ ಜತೆ ಮಾತನಾಡಿಲ್ಲ ಎಂದಿದ್ದರು. ಅದೇ ರೀತಿ ಕೃಣಾಲ್, ಕೊಹ್ಲಿ ಶೀಘ್ರ ಗುಣಮುಖರಾಗಲಿದ್ದಾರೆ ಎಂಬ ಭರವಸೆ ವ್ಯಕ್ತಪಡಿಸಿದ್ದರು.

ಸೈಮನ್ ವಿರುದ್ಧ ಫ್ಯಾನ್ಸ್ ಆಕ್ರೋಶ : ಸಾಲ್ಟ್, ಪಾಟಿದಾರ್ ಅಬ್ಬರದ ಆಟವಾಡಿದ್ದು, ಡೇವಿಡ್ ಡಗೌಟ್‌ನಲ್ಲಿ ತಯಾರಾಗಿ ನಿಂತಿದ್ದನ್ನು ತೋರಿಸಲಾಗಿತ್ತು. ಕೊಹ್ಲಿ ನಿಧಾನಗತಿಯಲ್ಲಿ ಬ್ಯಾಟ್ ಬೀಸುತ್ತಿದ್ದಾರೆ. ಅವರು ಹೊಡೆಬಡಿ ಆಡಬೇಕು ಅಥವಾ ರಿಟೈರ್ಡ್ ಹರ್ಟ್ ಔಟಾಗಿ ಇತರರಿಗೆ ಅವಕಾಶ ನೀಡಬೇಕೆಂದು ರಜತ್ ಸಂದೇಶ ರವಾನಿಸಬೇಕೆಂದು ಹೇಳಿದ್ದರು. ಕೊಹ್ಲಿ ಬ್ಯಾಟಿಂಗ್ ಬಗ್ಗೆ ತಿಳಿದುಕೊಂಡು ಮಾತನಾಡಬೇಕು ಎಂದು ಕೊಹ್ಲಿ ಅಭಿಮಾನಿಗಳು ಸೈಮನ್ ಅವರನ್ನು ರುಬ್ಬಿದ್ದಾರೆ.

ಪದಬಂಧ 5953

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಕೇಸರಿ ಬಣ್ಣದ ಸಿಂಹದ ಗುರುತುಳ್ಳ ಧ್ವಜ (6)
5.ಬಾಳೆಹಣ್ಣು-ಸಕ್ಕರೆಯ ಸಿಹಿಖಾದ್ಯ (4)
7. ಸೆರೆಯಾಳು ಈತ (2)
8.ಸುದರ್ಶನ ಚಕ್ರ ಹಿಡಿದವನು ತಿರುಗಿದ್ದಾನೆ (4)
9.ನಾಕದ ನಡುವೆ ಅಡಗಿದ ಸರ್ಪಗಳ ಪ್ರಪಂಚ (4)
10.ಮೂರು ತಿಂಗಳಿಗೊಮ್ಮೆ ಹೊರಡುವ ಪತ್ರಿಕೆ (4)
12.ಹಾರ ಹಾಕಿದ ದ್ವಾರಪಾಲಕ ತಿರುಗಿದ್ದಾನೆ (4)
14.ರಾಜಸುಖ ಪಡೆಯದ ಜಾನುವಾರು (2)
15.ಶೂರನ ಶಕ್ತಿಯನ್ನು ಆನೆಗೆ ಹೋಲಿಸಿ ಬಳಸುವ ಪದ (4)
17.ಬಿಲ್ವಿದ್ಯೆಯನ್ನು ಚೆನ್ನಾಗಿ ತಿಳಿದವನು (6)

ಮೇಲಿನಿಂದ ಕೆಳಕ್ಕೆ
2.ಸದಾ ನಿಜವನ್ನೇ ನುಡಿಯುವವನು (4)
3.ಮನುಷ್ಯನೂ ಹೌದು-ಅರ್ಜುನನೂ ಹೌದು (2)
4.ಸಂಗೀತದಲ್ಲಿ ಸ್ವರಗಳ ವಿಸ್ತಾರವಿದು (2)
6.ಮೈಮೇಲೆ ಚುಕ್ಕೆಗಳಿರುವ ಜಿಂಕೆ (3)
7.ಹಸ್ತಕೌಶಲ್ಯ-ನೈಪುಣ್ಯವಿದು (4)
9.ಒಂದು ಪ್ರದೇಶವನ್ನು ಆಳುವ ರಾಜ (4)
11.ಕೋಪದ ವರ್ತನೆಯುಳ್ಳವನು (3)
13.ಬುದ್ಧಿ ಕಡಿಮೆಯುಳ್ಳವನು-ಹುಂಬ (4)
15.ಮುದ್ದು ಮಕ್ಕಳಿಗೆ ತಿನ್ನಿಸಿದ ಔಷಧ (2)
16.ಕೋರಿಕೆಯಿಂದ ತಂದ ಹರಕು ಕಂಬಳಿ ತಿರುಗಿದೆ (2)

5952 ಉತ್ತರ

ಎಡದಿಂದ ಬಲಕ್ಕೆ:
1.ಕೈಲಾಸವಾಸ 3.ನಾಸಿಕ
5.ಮಾಗಡಿ 6.ಹದಿನಾರು
9.ಕೇಸರಿಣಿ 10.ಗಾರುಡಿಗ
12.ಕೇಡುಗಾಲ 14.ಜನಪ
16.ನಕಲು 17.ಥಳಥಳಿಸು

ಮೇಲಿನಿಂದ ಕೆಳಕ್ಕೆ :
1.ಕೈತೋರು 2.ಮಾಸ
3.ನಾಡಿಗ 4.ಕಸ್ತೂರಿಮೃಗ
7.ಹವಣಿಸು 8.ಕೈಗಾರಿಕೇ
9.ಕೇಶವಪನ 11.ಮಜಲು
13.ಸುಜಲ 15.ಪಥ

ಕಿರುಸುದ್ದಿ

ಬಾವಿಗೆ ಬಿದ್ದು ಬಾಲಕ ಮೃತ್ಯು

ಕಾರ್ಕಳ: ಬಾವಿಯಲ್ಲಿರು ಪಂಪ್‌ಸೆಟ್‌ಗೆ ಅಳವಡಿಸಿದ್ದ ಪೈಪ್ ಮೇಲೆತ್ತಲು ಹೋದ ಬಾಲಕ ಆಯತಪ್ಪಿ ಬಾವಿಗೆ ಬಿದ್ದು ಮೃತಪಟ್ಟಿರುವ ಘಟನೆ ಕಾರ್ಕಳ ತಾಲೂಕಿನ ಬೋಳ ಗ್ರಾಮದ ಪುರ್ಲಾಡ್ಕ ಪರಾರಿ ಎಂಬಲ್ಲಿ ಭಾನುವಾರ (ಏ.12) ನಡೆದಿದೆ. ಬೋಳ ರಾಜೇಶ್ ಶೆಟ್ಟಿ ಮತ್ತು ತ್ರಿವೇಣಿ ದಂಪತಿಯ ಪುತ್ರ ರಿತಿಕ್ ಆರ್. ಶೆಟ್ಟಿ ಮೃತಪಟ್ಟ ಬಾಲಕ. ರಾಜೇಶ್ ಶೆಟ್ಟಿ ಅವರು ತೋಟಕ್ಕೆ ನೀರು ಬಿಡಲು ಬಾವಿಗೆ ಪಂಪ್ ಸೆಟ್ ಅಳವಡಿಸಿದ್ದು ಪಂಪ್ ಆನ್ ಮಾಡಿದಾಗ ನೀರು ಬಾರದೆ ಇದ್ದ ಕಾರಣ ಅವರ ಮಕ್ಕಳು ರಿತಿಕ್ ಮತ್ತು ರಿತೇಶ್ ಬಾವಿಯ ಬಳಿ ಹೋಗಿದ್ದರು. ಪಂಪ್‌ನಲ್ಲಿ ನೀರು ಬರದೆ ಇದ್ದ ಕಾರಣ ರಿತಿಕ್ ಬಾವಿಯಲ್ಲಿ ಅಳವಡಿಸಿದ್ದ ಪೈಪನ್ನು ಮೇಲಕ್ಕೆತ್ತಲು ಪ್ರಯತ್ನಿಸಿದಾಗ ಆಯತಪ್ಪಿ ಬಾವಿಗೆ ಬಿದ್ದು ಮೃತಪಟ್ಟಿದ್ದಾನೆ. ಈ ಕುರಿತು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಜೀಪ್ ಡಿಕ್ಕಿ ಹೊಡೆದು ಪರಾರಿ: ಸವಾರ ಗಂಭೀರ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಪಡು ಪಣಂಬೂರು ಪೆಟ್ರೋಲ್ ಬಂಕ್ ಬಳಿ ಬೈಕ್‌ಗೆ ಥಾರ್ ಜೀಪ್ ಡಿಕ್ಕಿ ಹೊಡೆದು ಪರಾರಿಯಾಗಿದ್ದು ಬೈಕ್ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ. ಗಾಯಗೊಂಡ ಬೈಕ್ ಸವಾರನನ್ನು ಮುಲ್ಕಿ ಸಮೀಪದ ಮಾನಂಪಾಡಿ ನಿವಾಸಿ ಪ್ರವೀಣ್ (54) ಎಂದು ಗುರುತಿಸಲಾಗಿದೆ. ಗಾಯಾಳು ಪ್ರವೀಣ್ ಮುಲ್ಕಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದು ಪಡು ಪಣಂಬೂರು ಪೆಟ್ರೋಲ್ ಬಂಕ್ ಹೆದ್ದಾರಿ ಜಂಕ್ಷನ್ ಬಳಿ ಹಿಂದಿನಿಂದ ಅದೇ ದಿಕ್ಕಿನಲ್ಲಿ ಚಲಿಸುತ್ತಿದ್ದ ಥಾರ್ ಜೀಪ್ ಡಿಕ್ಕಿ ಹೊಡೆದು ಪರಾರಿಯಾಗಿದೆ. ಅಪಘಾತದಿಂದ ಬೈಕ್ ಸವಾರ ಪ್ರವೀಣ್‌ಗೆ ಗಂಭೀರ ಗಾಯಗಳಾಗಿದ್ದು ಬೈಕ್ ಸಂಪೂರ್ಣ ಜಖಂಗೊಂಡಿದೆ. ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಹಾಗೂ ಹೆದ್ದಾರಿ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ಬೈಕ್‌ಗೆ ಡಿಕ್ಕಿ ಹೊಡೆದು ಪರಾರಿಯಾದ ಥಾರ್ ಜೀಪನ್ನು ಚಾಲಕ ಸಮಯದ ಪೊಲೀಸರು ಪತ್ತೆ ಹಚ್ಚಿ ಪ್ರಕರಣ ದಾಖಲಿಸಿದ್ದಾರೆ ಎಂದು ತಿಳಿದುಬಂದಿದೆ.

ಕಾರು ವರ್ಕ್‌ಶಾಪ್‌ನಲ್ಲಿ ಶಾರ್ಟ್ ಸರ್ಕೀಟ್

ಮಂಗಳೂರು: ನಗರದ ಫಳ್ನೀರ್‌ನಲ್ಲಿರುವ ಕಾರು ಮೋಡಿಫಿಕೇಶನ್ ವರ್ಕ್ ಶಾಪ್ ಒಂದರಲ್ಲಿ ಸೋಮವಾರ ರಾತ್ರಿ ಶಾರ್ಟ್‌ಸರ್ಕೀಟ್‌ನಿಂದ ಬೆಂಕಿ ಅವಘಡ ಸಂಭವಿಸಿ ಅಪಾರ ನಷ್ಟ ಉಂಟಾಗಿದೆ. ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಆವರಿಸಿ ಶಾಪ್‌ನಲ್ಲಿದ್ದ ಕಾರುಗಳು ಸೇರಿದಂತೆ ಇತರ ಸೊತ್ತುಗಳಿಗೆ ಹಾನಿಯಾಗಿದೆ. ವಿಷಯ ತಿಳಿದ ತಕ್ಷಣ ಪಾಂಡೇಶ್ವರ ಅಗ್ನಿಶಾಮಕ ತಂಡ ಸ್ಥಳಕ್ಕಾಗಮಿಸಿದ್ದು, ಬೆಂಕಿ ನಂದಿಸಿದೆ. ಆದರೆ ಅಷ್ಟರಲ್ಲಾಗಲೇ ಸಾಕಷ್ಟು ಸೊತ್ತುಗಳು ಬೆಂಕಿಗಾಹುತಿಯಾಗಿದ್ದವು. ಗ್ರಾಹಕರು ಮೋಡಿಫಿಕೇಶನ್‌ಗೆ ಇಟ್ಟಿದ್ದ ಮೂರು ಕಾರುಗಳು ಬೆಂಕಿಗೆ ಆಹುತಿಯಾಗಿವೆ.

ಯುವಕ ಆತ್ಮಹತ್ಯೆ

ಹಿರಿಯಡ್ಕ: ವೈಯಕ್ತಿಕ ಕಾರಣದಿಂದ ಮನನೊಂದು ಏ.5ರಂದು ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆಗೆ ಯತ್ನಿಸಿದ್ದ ಬೆಂಗಳೂರಿನಲ್ಲಿ ಗ್ರಾಫಿಕ್ ಡಿಸೈನ್ ವಿದ್ಯಾಭ್ಯಾಸ ಮಾಡಿಕೊಂಡಿದ್ದ ಪೆರ್ಡೂರು ಗ್ರಾಮದ ಸುಹಾನ್ ಸೇರಿಗಾರ್(19) ಎಂಬವರು ಚಿಕಿತ್ಸೆ ಫಲಕಾರಿಯಾಗದೆ ಏ.11ರಂದು ರಾತ್ರಿ ವೇಳೆ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧೆಯನ್ನು ಕೂಡಿಹಾಕಿ ಚಾಕು ತೋರಿಸಿ 10 ಸಾವಿರ ರೂ., ಚಿನ್ನಾಭರಣ ದರೋಡೆ

ಕಾಸರಗೋಡು: ಹಾಡಹಗಲೇ ಮನೆಗೆ ಅತಿಕ್ರಮಿಸಿ ನುಗ್ಗಿದ ದುಷ್ಕರ್ಮಿಯೋರ್ವ ವೃದ್ಧೆಯನ್ನು ಕೊಠಡಿಯೊಳಗೆ ಕೂಡಿಹಾಕಿ ಚಾಕು ತೋರಿಸಿ ಬೆದರಿಕೆಯೊಡ್ಡಿ ಹಣ ಚಿನ್ನಾಭರಣವನ್ನು ದರೋಡೆಗೈದ ಘಟನೆ ನಡೆದಿದೆ. ಚೀಮೇನಿ ಪೊಲೀಸ್ ಠಾಣೆ ವ್ಯಾಪ್ತಿಯ ಪಟ್ಟೋಳಿ ತೊಡುವಳಂ ಮಾಟ್ರಾಡನ್ ಹೌಸ್‌ನ ಎಂ.ನಾರಾಯಣಿ (73) ಎಂಬವರಿಗೆ ಬೆದರಿಕೆಯೊಡ್ಡಿ ಹಣ ಹಾಗೂ ಚಿನ್ನದ ಬೆಂಡೋಲೆಯನ್ನು ದೋಚಲಾಗಿದೆ. ಭಾನುವಾರ ನಾಡನ್ನು ಬೆಚ್ಚಿಬೀಳಿಸಿದ ಈ ಘಟನೆ ನಡೆದಿದೆ. ನಾರಾಯಣಿ ತನ್ನ ಪುತ್ರಿಯ ಮನೆಗೆ ಬಂದಿದ್ದರು. ಈ ವೇಳೆ ಮನೆಗೆ ಅತಿಕ್ರಮಿಸಿ ನುಗ್ಗಿದ ದುಷ್ಕರ್ಮಿ ನಾರಾಯಣಿಯನ್ನು ಕೊಠಡಿಯೊಳಗೆ ಕೂಡಿಹಾಕಿದ್ದಾನೆನ್ನಲಾಗಿದೆ. ಬಳಿಕ ಕಪಾಟು ತೆರೆದು ಅದರಲ್ಲಿದ್ದ 10 ಸಾವಿರ ರೂಪಾಯಿಗಳನ್ನು ದೋಚಿದ್ದಾನೆ. ಚಿನ್ನಾಭರಣಕ್ಕಾಗಿ ಹುಡುಕಾಟ ನಡೆಸಿದರೂ ಲಭಿಸಿರಲಿಲ್ಲ. ಇದರಿಂದ ನಾರಾಯಣಿಯ ಕುತ್ತಿಗೆಗೆ ಚಾಕು ಇರಿಸಿ ಬೆದರಿಕೆಯೊಡ್ಡಿದ ಬಳಿಕ ಅವರ ಬೆಂಡೋಲೆಯನ್ನು ತೆಗೆದಿರುವುದಾಗಿ ದೂರಲಾಗಿದೆ. ನಾರಾಯಣಿಯ ಮೊಬೈಲ್ ಫೋನ್‌ನ್ನು ದುಷ್ಕರ್ಮಿ ವಶಪಡಿಸಿ ಪರಾರಿಯಾಗಿದ್ದಾನೆಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಚೀಮೇನಿ ಪೊಲೀಸರು ಸ್ಥಳಕ್ಕೆ ತಲುಪಿ ತನಿಖೆ ಆರಂಭಿಸಿದ್ದಾರೆ. ದುಷ್ಕರ್ಮಿಯನ್ನು ಕಂಡರೆ ಗುರುತುಹಚ್ಚಬಹುದೆಂದು ನಾರಾಯಣಿ ತಿಳಿಸಿದ್ದಾರೆ.





ಪೆರಾಜೆ ಕಲ್ಚರ್ಪೆಯಲ್ಲಿ ನಡೆದ ಘಟನೆ | ಅರಣ್ಯ ಇಲಾಖೆ, ಅಗ್ನಿಶಾಮಕ ದಳದ ಯಶಸ್ವೀ ಕಾರ್ಯಾಚರಣೆ

ಪಾಳುಬಾವಿಗೆ ಬಿದ್ದ ಕಾಡಾನೆಯ ರಕ್ಷಣೆ

ಸುಳ್ಯ: ಆಳವಾದ ಪಾಳು ಬಾವಿಗೆ ಬಿದ್ದು ದಿಕ್ಕು ತೋಚದೆ ಅಸಹಾಯಕ ಸ್ಥಿತಿಯಲ್ಲಿದ್ದ ಕಾಡಾನೆಯೊಂದನ್ನು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿದ ಘಟನೆ ಸೋಮವಾರ ಪೆರಾಜೆ ಕಲ್ಚರ್ಪೆಯಲ್ಲಿ ನಡೆದಿದೆ.

ಸುಳ್ಯ ಸಮೀಪದ ಪೆರಾಜೆ ಬಳಿಯ ಕಲ್ಚರ್ಪೆಯಲ್ಲಿ ಅಂದಾಜು 20 ವರ್ಷ ಪ್ರಾಯದ ಗಂಡಾನೆಯೊಂದು ಖಾಸಗಿ ಜಮೀನು ಮಾಲಿಕ ರಾಮ ನಾಯ್ಕ ಅವರ ಅರಣ್ಯದಂಚಿನ ತೋಟದ ಬದಿಯಲ್ಲಿದ್ದ 30 ಅಡಿ ಆಳದ ಪಾಳು ಬಾವಿಗೆ ಭಾನುವಾರ ರಾತ್ರಿ 11.30ರ ವೇಳೆಗೆ ಬಿದ್ದಿದ್ದು ಈ ವೇಳೆ ಕಾಡಾನೆಯ ರೋಧನೆಯನ್ನು ಕೇಳಿದ ರಾಮ ನಾಯ್ಕ ಅವರ ಮನೆಯವರು ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಿದ ಸಿಬ್ಬಂದಿಗಳು ಬೆಳಿಗ್ಗೆ 6 ಕಾರ್ಯಾಚರಣೆ ಪ್ರಾರಂಭಿಸಿದರು. ಇಲಾಖೆಯ ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಬೆಳಗ್ಗೆ 6 ಗಂಟೆಗೆ ಆನೆಯ ರಕ್ಷಣಾ ಕಾರ್ಯಾಚರಣೆ ಆರಂಭಿಸಿ ಸುಮಾರು ಎಂಟು ಗಂಟೆಯಿಂದ ಹಿಟಾಚಿ ಯಂತ್ರದ ಮೂಲಕ ಕಾರ್ಯಾಚರಣೆ ನಡೆಸಿ ಬಾವಿಯ ಒಂದು ಬದಿಯಿಂದ ಆಳ ಮಾಡಿ ದಾರಿ



ಮಾಡಿ ಕೊಡಲಾಯಿತು.

ಮಧ್ಯಾಹ್ನ 12.50ರ ವೇಳೆಗೆ ಹಿಟಾಚಿ ತೋಡಿದ ದಾರಿಯ ಮೂಲಕ ಮೇಲಕ್ಕೆ ಆನೆ ಬಂದಿತು. ಅರಣ್ಯ ಇಲಾಖೆಯು 7 ಗಂಟೆ ಕಾರ್ಯಾಚರಣೆ ನಡೆಸಿತ್ತು. ಬಾವಿಯಿಂದ ಮೇಲೆದ್ದು ಬಂದ ಆನೆಯು ಮೇಲಕ್ಕೆ ಬಂದು ತೋಟದ ಮೇಲಿನ ಭಾಗದ ರಾಷ್ಟ್ರೀಯ ಹೆದ್ದಾರಿ ಕಡೆ ಓಡಿತ್ತು. ಇದರಿಂದ ಕೆಲ ಕಾಲ ಆತಂಕ ಸೃಷ್ಟಿಸಿತು. ಬಾವಿಯಿಂದ ಮೇಲೆ ಬಂದಾಗ ಎದುರಿಗಿದ್ದ ಹಿಟಾಚಿಗೆ ಹಾದುಕೊಂಡು ಕೆಳ ಭಾಗಕ್ಕೆ ನುಗ್ಗಿತು. ಬಳಿಕ ಅರಣ್ಯ ಇಲಾಖೆಯ ಸಿಬ್ಬಂದಿಗಳು ಪಟಾಕಿ ಸಿಡಿಸಿ ಆನೆಯನ್ನು ದೂರಕ್ಕೆ ಸರಿಸಿದರು. ಕೆಲ ಕಾಲದ ಬಳಿಕ ತೋಟಕ್ಕೆ ತೆರಳಿ ಅದೇ ದಾರಿಯಾಗಿ ಬಂದ ಕಾಡಾನೆ ಬಳಿಕ ಹಿಂತಿರುಗಿ ಬಂದು ಪೂಮಲೆ ಕಾಡಿನತ್ತ ಸಾಗಿತು. ಕಾರ್ಯಾಚರಣೆಯಲ್ಲಿ ಸಿಸಿಎಫ್ ಕರಿಕಾಳನ್, ಡಿಎಫ್‌ಒ ಅಂಥೋನಿ ಮರಿಯಪ್ಪ, ಪ್ರೊಬೇಷನರಿ ಡಿಎಫ್‌ಒ ಸಂಕೇತ್ ಅದಾವ್, ಎಸಿಎಫ್ ಪ್ರಶಾಂತ್ ಕುಮಾರ್ ಪೈ, ಪುತ್ತೂರು ಎಸಿಎಫ್ ಸುಬ್ಬಯ್ಯ ನಾಯ್ಕ್, ಪುತ್ತೂರು ವಲಯ ಅರಣ್ಯಾಧಿಕಾರಿ ಕಿರಣ್ ಬಿ.ಎಂ., ಸುಬ್ರಹ್ಮಣ್ಯ ವಲಯ ಅರಣ್ಯಾಧಿಕಾರಿ ವಿಮಲ್‌ಬಾಬು, ಸುಳ್ಯ ಪೊಲೀಸ್ ಉಪ ನಿರೀಕ್ಷಕ ಸಂತೋಷ್ ಬಿ.ಪಿ, ಅಗ್ನಿಶಾಮಕ ದಳದ ಎಸ್.ಐ ಕಿರಣ್ ಕುಮರ್, ಪಶು ವೈದ್ಯಾಧಿಕಾರಿ ಡಾ. ನಿತೀನ್ ಪ್ರಭು, ಆನೆ ಕಾರ್ಯಪಡೆಯ ಸಿಬ್ಬಂದಿಗಳು, ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿಗಳು, ಸಿಬ್ಬಂದಿಗಳು, ಅಗ್ನಿಶಾಮಕದಳದ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಆನೆಯ ಅರಚಾಟಕ್ಕೆ ಬೆಚ್ಚಿಬಿದ್ದ ಚಾಲಕ

ಆನೆ ರಕ್ಷಣೆಗೆ ಬಂದ ಹಿಟಾಚಿ ಯಂತ್ರದ ದೂರದೂರಿನ ಚಾಲಕ ಅನೆಯ ಅರಚಾಟಕ್ಕೆ ಭಯ ಬಿದ್ದು ಕೆಲ ಕಾಲ ಕಾಮಗಾರಿ ಸ್ಥಗಿತಗೊಂಡಿತ್ತು. ಬಳಿಕ ಪ್ರಶಾಂತ್ ಕುಮಾರ್ ಪೈ ಮತ್ತು ಕಿರಣ್ ಬಿ.ಎಂ. ಮಾರ್ಗದರ್ಶನದಲ್ಲಿ ಸ್ಥಳೀಯರಾದ ಲಕ್ಷ್ಮೀ ಪ್ರಸಾದ್ ತೊಡಿಕಾನ. ತೇಜಸ್ ಚೆಮ್ನೂರು ಎಂಬವರು ಹಿಟಾಚಿ ಯಂತ್ರವನ್ನೇರಿ ರಕ್ಷಣಾ ಕಾರ್ಯಕ್ಕೆ ಮುಂದಾಗಿ ಆಳ ತೋಡಿ ಆನೆಯನ್ನು ಮೇಲೆತ್ತಲು ಸಹಕಾರಿಯಾದರು.

ರಾಜ್ಯ ಟಾಪರ್ ದಿಶಾ ಪೂಜಾರಿಗೆ ವಿಶ್ವ ಬಂಟರ ಪ್ರತಿಷ್ಠಾನದ ಬೆಂಬಲ

ಶಿಕ್ಷಣ ಖರ್ಚು ಭರಿಸುವ ಘೋಷಣೆ

ಮೂಡುಬಿದಿರೆ: 2026 ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ 600ರಲ್ಲಿ 600 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದಿಶಾ ಪೂಜಾರಿಯ ಮುಂದಿನ ವಿದ್ಯಾಭ್ಯಾಸಕ್ಕೆ ಮಹತ್ವದ ಬೆಂಬಲ ಲಭಿಸಿದೆ.

ವಿಶ್ವ ಬಂಟರ ಪ್ರತಿಷ್ಠಾನದ ಮಹಾಪೋಷಕರಾದ ಡಾ. ಬಿ. ಆರ್. ಶೆಟ್ಟಿಯವರು ದಿಶಾ ಪೂಜಾರಿಯ ಸಂಪೂರ್ಣ ವಿದ್ಯಾಭ್ಯಾಸದ ಖರ್ಚನ್ನು ಭರಿಸುವುದಾಗಿ ಭರವಸೆ ನೀಡಿದ್ದಾರೆ. ಸೋಮವಾರ ಸಂಜೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವರ ಕಚೇರಿಯಲ್ಲಿ ವಿಶ್ವ ಬಂಟರ ಪ್ರತಿಷ್ಠಾನದ ವತಿಯಿಂದ ದಿಶಾ ಅವರನ್ನು ಗೌರವಿಸಲಾಯಿತು.

ಅವಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಡಾ. ಬಿ. ಆರ್. ಶೆಟ್ಟಿ, ದೂರವಾಣಿ ಮೂಲಕ ದಿಶಾಳೊಂದಿಗೆ ಮಾತನಾಡಿ ಅಭಿನಂದನೆ ಸಲ್ಲಿಸಿದರು. ಜೊತೆಗೆ, ದಿಶಾಳ ಆಯ್ಕೆಯಂತೆ ಆಳ್ವಾಸ್ ಪದವಿ ಕಾಲೇಜಿನಲ್ಲಿ ಬಿ.ಕಾಂ ಶಿಕ್ಷಣ ಹಾಗೂ ನಂತರದ ಕನಸಾದ ಚಾರ್ಟರ್ಡ್ ಅಕೌಂಟೆಂಟ್ ಆಗುವವರೆಗಿನ ಶಿಕ್ಷಣ, ಊಟ ಮತ್ತು ವಸತಿಯ ಸಂಪೂರ್ಣ ವೆಚ್ಚವನ್ನು ಭರಿಸುವುದಾಗಿ ಘೋಷಿಸಿದರು.



> **ದಿಶಾಳ ಆಯ್ಕೆಯಂತೆ ಆಳ್ವಾಸ್ ಪದವಿ ಕಾಲೇಜಿನಲ್ಲಿ ಬಿ.ಕಾಂ ಶಿಕ್ಷಣ ಹಾಗೂ ನಂತರದ ಕನಸಾದ ಚಾರ್ಟರ್ಡ್ ಅಕೌಂಟೆಂಟ್ ಆಗುವವರೆಗಿನ ಶಿಕ್ಷಣ, ಊಟ ಮತ್ತು ವಸತಿಯ ಸಂಪೂರ್ಣ ವೆಚ್ಚವನ್ನು ಭರಿಸುವುದಾಗಿ ಡಾ. ಬಿ. ಆರ್. ಶೆಟ್ಟಿ ಘೋಷಿಸಿದರು.**

ಇದೇ ವೇಳೆ, ದಿಶಾ ಪೂಜಾರಿ ಪಿಯು ಶಿಕ್ಷಣ ಪಡೆದ ಆಳ್ವಾಸ್ ಆವರಣದಲ್ಲಿರುವ ಡಾ.ಬಿ.ಆರ್.ಶೆಟ್ಟಿ ಅವರ ಹೆಸರಿನ ಬ್ಲಾಕ್‌ನಲ್ಲಿ ಛಾಯಾಚಿತ್ರಗಳನ್ನು ತೆಗೆಯಲಾಯಿತು.

ಈ ಸಂದರ್ಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ವಿಶ್ವ ಬಂಟರ ಪ್ರತಿಷ್ಠಾನದ ಪ್ರಾಜೆಕ್ಟ್ ಡೈರೆಕ್ಟರ್ ಡಾ. ಸಂಜೀವ್ ರೈ, ಕಾರ್ಯದರ್ಶಿ ಡಾ. ಬಿ. ಸಚ್ಚಿದಾನಂದ ರೈ, ಉಪಾಧ್ಯಕ್ಷ ಸಿಎ ಸುದೀರ್ ಕುಮಾರ್ ಶೆಟ್ಟಿ, ಖಜಾಂಚಿ ಸಿಎ ಪ್ರವೀಣ ಕುಮಾರ್ ಶೆಟ್ಟಿ, ಟ್ರಸ್ಟಿಗಳಾದ ಡಾ. ಶಿಶಿರ್ ಶೆಟ್ಟಿ, ಪ್ರಕಾಶ್ ಮಾಣೈ ಹಾಗೂ ಸದಸ್ಯರಾದ ದೀಪಕ್ ಪ್ರಸಾದ್ ಮತ್ತು ಜೀವರಾಜ್ ಶೆಟ್ಟಿ ಉಪಸ್ಥಿತರಿದ್ದರು.

ಕೇರಳದಲ್ಲಿ ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಮಾರಾಟ

600ಕ್ಕೂ ಅಧಿಕ ಸಿಲಿಂಡರ್‌ಗಳ ಪತ್ತೆ

ಕಾಸರಗೋಡು: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧದ ವಾತಾವರಣ ಮುಂದುವರಿಯುತ್ತಿರುವ ವೇಳೆಯಲ್ಲೇ ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದಾದ್ಯಂತ ಕಾಳಸಂತೆಯಲ್ಲಿ ಎಲ್‌ಪಿಜಿ ಅಡುಗೆ ಅನಿಲ ಸಿಲಿಂಡರ್ ಮಾರಾಟ, ಅವುಗಳ ಅಕ್ರಮ ದಾಸ್ತಾನು ಮಾತ್ರವಲ್ಲದೆ ಗೃಹ ಬಳಕೆ ಮತ್ತು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಅವ್ಯವಹಾರ ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ.

ಇದರಿಂದ ಇಂತಹ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ರಾಜ್ಯದಲ್ಲಿ ಎನ್‌ಫೋರ್ಸ್‌ಮೆಂಟ್ ಕ್ರಮಗಳನ್ನು ಇನ್ನಷ್ಟು ಬಿಗುಗೊಳಿಸಿದೆ. ಅಲ್ಲದೆ ಸಾರ್ವಜನಿಕ ವಿತರಣಾ ಇಲಾಖೆ ಇನ್ನೊಂದೆಡೆ ಪೊಲೀಸರ ಸಹಾಯದೊಂದಿಗೆ ರಾಜ್ಯಾದ್ಯಂತ ವ್ಯಾಪಕ ದಾಳಿ ಮತ್ತು ತಪಾಸಣೆ ಆರಂಭಿಸಿದೆ.

ಕಾಸರಗೋಡು ಜಿಲ್ಲೆ ಸಹಿತ ರಾಜ್ಯದ ಹೆಚ್ಚಿನ ಎಲ್ಲಾ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ತಿರುವನಂತಪುರ, ಕೊಲ್ಲಂ ಮತ್ತು ಪತ್ತನಂತಿಟ್ಟ ಜಿಲ್ಲೆಗಳಲ್ಲಿ ಇಂತಹ ಭಾರೀ ಅವ್ಯವಹಾರಗಳು ನಡೆಯುತ್ತಿರುವ ಬಗ್ಗೆ ಸರಕಾರಕ್ಕೆ ರಹಸ್ಯ ಮಾಹಿತಿ ಲಭಿಸಿದೆ ಎನ್ನಲಾಗಿದೆ. ಆದ್ದರಿಂದ ರಹಸ್ಯ ಆದರ ಜಾಡು ಹಿಡಿದು ಸ್ಪೆಷಲ್ ಎನ್‌ಫೋರ್ಸ್‌ಮೆಂಟ್ ಸ್ಕ್ವಾಡ್ ಮತ್ತು ಸಾರ್ವಜನಿಕ ಸರಬರಾಜು ಇಲಾಖೆ ರಾಜ್ಯಾದ್ಯಂತವಾಗಿ ಈ ಜಂಟಿ ಕಾರ್ಯಾಚರಣೆಯಲ್ಲಿ ನಡೆಸುತ್ತಿದೆ. ಅದರಲ್ಲಿ ಸಾರ್ವಜನಿಕ ತೈಲ ಸಂಸ್ಥೆಗಳಿಗೆ ಸೇರಿದ ಗೃಹಬಳಕೆ, ವಾಣಿಜ್ಯ ಮತ್ತು ಕಿರು ಎಲ್‌ಪಿಜಿ ಸಿಲಿಂಡರ್‌ಗಳೂ ಸೇರಿದಂತೆ ಈ ತನಕ ಸುಮಾರು 600ಕ್ಕೂ ಹೆಚ್ಚು ಎಲ್‌ಪಿಜಿ ಸಿಲಿಂಡರ್‌ಗಳನ್ನು ಪತ್ತೆಹಚ್ಚಿ ವಶಪಡಿಸಿಕೊಳ್ಳಲಾಗಿದೆ. ಇದರ ಹೊರತಾಗಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಹೇರಿಕೊಂಡು ಸಾಗುತ್ತಿರುವ ವಾಹನಗಳನ್ನೂ ಈ ತಂಡ ಪರಿಶೀಲಿಸುತ್ತಿದೆ. ಇಂತಹ ಪರಿಶೀಲನೆಯಲ್ಲಿ ಸರಿಯಾದ ದಾಖಲು ಪತ್ರಗಳಿಲ್ಲದೆ ವಾಹನವೊಂದರಲ್ಲಿ ಸಾಗಿಸುತ್ತಿದ್ದ 50ರಷ್ಟು ಎಲ್‌ಪಿಜಿ ಸಿಲಿಂಡರ್‌ಗಳನ್ನು ನಾಗರಿಕ ಸರಬರಾಜು ಇಲಾಖೆ ತಂಡ ವಶಕ್ಕೆ ತೆಗೆದುಕೊಂಡಿದೆ. ಮಾತ್ರವಲ್ಲದೆ ಈ ರೀತಿ ಅಕ್ರಮ ಎಲ್‌ಪಿಜಿ ಸಿಲಿಂಡರ್ ಸಾಗಿಸುವ, ಬಚ್ಚಿಡುವ, ಮಾರಾಟ ಮಾಡುವವರ ವಿರುದ್ಧ 1955ರ ಆವಶ್ಯಕ ಸಾಮಗ್ರಿ ಕಾನೂನು ಪ್ರಕಾರ ಅಗತ್ಯದ ಕಾನೂನುಗಳಿಗೂ ಚಾಲನೆ ನೀಡಲಾಗಿದೆ. ಹೀಗೆ ವಶಪಡಿಸಲಾದ ಸಾಮಗ್ರಿಗಳನ್ನು ಮುಂದಿನ ಹಂತದ ತನಿಖೆಗಾಗಿ ಬಿಗು ಭದ್ರತೆಯಲ್ಲಿರಿಸಲಾಗಿದೆ ಎಂದು ಕೇರಳ ಎಲ್‌ಪಿಜಿ ವಾರ್ ರೂಮ್‌ನ ಹೊಣೆಗಾರಿಕೆ ಹೊಂದಿರುವ ಸ್ಪೆಷಲ್ ಆಫೀಸರ್ ಮೊಹಮ್ಮದ್ ಶಫೀಕ್ ಹೇಳಿದ್ದಾರೆ. ಅಲ್ಲದೆ ಇಂತಹ ದಾಳಿ ಇನ್ನೂ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ.



> **ಸಿಲಿಂಡರ್‌ಗಳ ಅವ್ಯವಹಾರ ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ.**
>
> **ಸಾರ್ವಜನಿಕ ವಿತರಣಾ ಇಲಾಖೆ ಪೊಲೀಸರ ಸಹಾಯದೊಂದಿಗೆ ರಾಜ್ಯಾದ್ಯಂತ ವ್ಯಾಪಕ ದಾಳಿ ಮತ್ತು ತಪಾಸಣೆ ಆರಂಭಿಸಿದೆ.**

ಏಕಾಂಗಿಯಾಗಿ ವಾಸಿಸುತ್ತಿದ್ದ ವ್ಯಕ್ತಿ ಸಾವು

ಮಂಜೇಶ್ವರ: ಏಕಾಂಗಿಯಾಗಿ ವಾಸಿಸುತ್ತಿದ್ದ ವ್ಯಕ್ತಿಯೋರ್ವರರು ಮನೆಯೊಳಗೆ ಸಾವನ್ನಪ್ಪಿದ ಸ್ಥಿತಿಯಲ್ಲಿ ಪತ್ತೆಯಾದ ಘಟನೆ ನಡೆದಿದೆ. ಮಿಂಜ ಪಂಚಾಯತ್ ವ್ಯಾಪ್ತಿಯ ಮೀಯಪದವು ಬಳಿಯ ಪೊಳ್ಳಕಜೆ ನಿವಾಸಿ ದಿ.ಧೂಮ ಮೂಲ್ಯರವರ ಪುತ್ರ ವಿಶ್ವನಾಥ (45) ಮೃತಪಟ್ಟ ವ್ಯಕ್ತಿಯಾಗಿದ್ದಾರೆ.

ಕಳೆದ ಮೂರು ದಿನಗಳ ಹಿಂದೆ ಮೃತಪಟ್ಟಿರಬಹುದೆಂದು ಅಂದಾಜಿಸಲಾಗಿದೆ. ಅವರು ಕೆಲವು ವರ್ಷಗಳಿಂದ ಏಕಾಂಗಿಯಾಗಿ ವಾಸಿಸುತ್ತಿದ್ದರು. ಅಲ್ಲದೆ ಶುಗರ್ ಅನಾರೋಗ್ಯದಿಂದ ಬಳಲುತ್ತಿರುವುದಾಗಿ ಸಂಬಂಧಿಕರು ಪೊಲೀಸರಿಗೆ ತಿಳಿಸಿದ್ದಾರೆ.

ಮನೆಯಿಂದ ದುರ್ವಾಸನೆ ಬೀರುತ್ತಿರುವ ಹಿನ್ನೆಲೆಯಲ್ಲಿ ಪರಿಸರ ನಿವಾಸಿಗಳು ಮನೆಯ ಬಾಗಿಲನ್ನು ತೆರೆದು ನೋಡಿದಾಗ ನೆಲದಲ್ಲಿ ಜೀರ್ಣಾವಸ್ಥೆಯಲ್ಲಿ ಮೃತದೇಹ ಪತ್ತೆಯಾಗಿದೆ.

ಸ್ಥಳೀಯರು ನೀಡಿದ ಮಾಹಿತಿಯಂತೆ ಮಂಜೇಶ್ವರ ಪೊಲೀಸರು ಸ್ಥಳಕ್ಕೆ ತಲುಪಿ ಮೃತದೇಹದ ಪಂಚನಾಮೆ ನಡೆಸಿದ್ದಾರೆ. ಮೃತರ ಸಹೋದರ ಬಾಬು ಸಾಲಿಯಾನ್ ನೀಡಿದ ದೂರಿನಂತೆ ಮಂಜೇಶ್ವರ ಪೊಲೀಸರು ಅಸಹಜ ಸಾವು ಕೇಸು ದಾಖಲಿಸಿದ್ದಾರೆ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಟೆಂಪೋ ಡಿಕ್ಕಿ: ವಿದ್ಯಾರ್ಥಿನಿ ಸಾವು

ಹೆಬ್ರಿ: ಟೆಂಪೊ ಡಿಕ್ಕಿ ಹೊಡೆದ ಪರಿಣಾಮ ಬಸ್ ಇಳಿದು ಶಾಲೆಗೆ ಹೋಗಲು ರಸ್ತೆ ದಾಟುತ್ತಿದ್ದ ವಿದ್ಯಾರ್ಥಿನಿ ಮೃತಪಟ್ಟ ಘಟನೆ ಏ.10ರಂದು ಹೆಬ್ರಿ ಎಸ್.ಆರ್. ಶಾಲೆಯ ಎದುರು ರಾಷ್ಟ್ರೀಯ ಹೆದ್ದಾರಿ 169ಎ ರಲ್ಲಿ ನಡೆದಿದೆ.

ಮೃತರನ್ನು ಎಸ್‌ಆರ್ ಶಾಲೆಯ ವಿದ್ಯಾರ್ಥಿನಿ ಪ್ರೀತಿ ಎಂದು ಗುರುತಿಸಲಾಗಿದೆ. ಇನ್ನೋರ್ವ ವಿದ್ಯಾರ್ಥಿನಿ ಮೃತರ ಸಂಬಂಧಿ ಅರ್ಪಣಾ ಗಾಯಗೊಂಡು ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇವರು ಉಡುಪಿ ಕಡೆಯಿಂದ ಬಸ್‌ನಲ್ಲಿ ಬಂದು ಹೆಬ್ರಿ ಕಡೆಗೆ ಹೋಗುವ ರಸ್ತೆಯಲ್ಲಿ ಶಾಲೆಗೆ ಹೋಗುವುದಕ್ಕಾಗಿ ಇಳಿದಿದ್ದು, ಈ ವೇಳೆ ರಸ್ತೆ ದಾಟುತ್ತಿದ್ದ ಇವರಿಗೆ ಉಡುಪಿ ಕಡೆಯಿಂದ ರಾಂಗ್ ಸೈಡ್‌ನಿಂದ ಬಂದ ಮಿನಿ ಗೂಡ್ಸ್ ಡಿಕ್ಕಿ ಹೊಡೆಯಿತೆನ್ನಲಾಗಿದೆ. ಇದರಿಂದ ಅರ್ಪಣ ಮತ್ತು ಪ್ರೀತಿ ತೀವ್ರವಾಗಿ ಗಾಯಗೊಂಡು ಮಣಿಪಾಲದ ಆಸ್ಪತ್ರೆಗೆ ದಾಖಲಾಗಿದ್ದರು.

ಇವರಲ್ಲಿ ಗಂಭೀರ ಸ್ಥಿತಿಯಲ್ಲಿದ್ದ ಪ್ರೀತಿ ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ ವೇಳೆ ಮೃತಪಟ್ಟರು ಎಂದು ತಿಳಿದು ಬಂದಿದೆ. ಈ ಬಗ್ಗೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಣೂರು ಬಾಳೆಬೆಟ್ಟಿನಲ್ಲಿ ಆಘಾತಕಾರಿ ಘಟನೆ

ಮೂವರ ಮೇಲೆ ಬೀದಿ ನಾಯಿಗಳ ಅಟ್ಟಹಾಸ

ಕೋಟ: ಇಲ್ಲಿನ ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಣೂರು ಬಾಳೆಬೆಟ್ಟು ಪರಿಸರದಲ್ಲಿ ಬೀದಿ ನಾಯಿಗಳ ದಾಳಿಗೆ ಗ್ರಾಮದ ಮೂವರು ಗಂಭೀರ ಗಾಯಗೊಂಡ ಘಟನೆ ಸೋಮವಾರ ನಡೆದಿದೆ.

ನಿಶಾಂತ್ ಮತ್ತು ರಾಧ ಪೂಜಾರಿ ಗಾಯಗೊಂಡವರಾಗಿದ್ದು ಇವರು ಕೋಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಓರ್ವ ಮಹಿಳೆ ಕ್ಷಮಾ ಭಟ್ ಅವರನ್ನು ಕುಂದಾಪುರ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಇತ್ತೀಚಿಗಿನ ದಿನಗಳಲ್ಲಿ ಕೋಟ, ಸಾಲಿಗ್ರಾಮ ಸೇರಿದಂತೆ ವಿವಿಧ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆ ದಿನದಿಂದ ದಿನ ಹೆಚ್ಚುತ್ತಿದ್ದು ಸ್ಥಳೀಯಾಡಳಿತ ಕಣ್ಮುಚ್ಚಿ ಕುಳಿತು ಆಡಳಿತ ನಡೆಸುತ್ತಿವೆ. ಸ್ಥಳೀಯಾಡಳಿತಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವಿಫಲವಾಗಿದೆ. ಕೆಲ ವರ್ಷಗಳ ಹಿಂದೆ ಬ್ರಹ್ಮಾವರ ತಾಲೂಕು ಪಶುಪಾಲನಾ ಇಲಾಖೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳುತ್ತಿದ್ದು ಇದೀಗ ಅವರ ಕಾಲಘಟ್ಟದ ನಂತರ ಈ ಸಂತಾನ ಹರಣ ಯೋಜನೆ ಮರೆಗೆ ಸರಿದಿದೆ. ಈ ಹಿನ್ನಲೆಯಲ್ಲಿ ಕಂಡ ಕಂಡಲ್ಲಿ ಬೀದಿ ನಾಯಿಗಳ ಸಂತೆ ಹೆಚ್ಚುತ್ತಿದ್ದು ಜನ ಭಯದ ನೆರಳಲ್ಲಿ ಸಂಚರಿಸುವಂತಾಗಿದೆ.

ಶೀಘ್ರ ಕ್ರಮ ಕೈಗೊಳ್ಳಿ

ಈ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ನೀಡಿದ ಸ್ಥಳೀಯರು, ಒಂದೋ ನೀವುಗಳೇ ಕಡಿವಾಣ ಹಾಕಿ ಇಲ್ಲ, ಇಲ್ಲಾ ಅಧಿಕಾರದ ಕಾರ್ಯಭಾರಕ್ಕೆ ನೀವು ಯೋಗ್ಯರಲ್ಲ ಎಂಬುದು ಸಾಬೀತು ಎಂದು ತೀಕ್ಷ್ಣ ಟೀಕೆಯನ್ನು ಮಾಡಿದ್ದಾರೆ.

> **ನಮ್ಮ ಆಸ್ಪತ್ರೆಗೆ ಮೂವರು ಬೀದಿ ನಾಯಿ ಕಡಿತದಿಂದ ದಾಖಲಾಗಿದ್ದು ಓರ್ವರ ಸ್ಥಿತಿ ಗಂಭೀರವಾಗಿರುವುದರಿಂದ ತಾಲೂಕು ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ. ಇಬ್ಬರಿಗೆ ಇಲ್ಲೆ ಚಿಕಿತ್ಸೆ ನೀಡಲಾಗಿದೆ.**
>
> **ಡಾ.ಮಾಧವ ಪೈ,**
> **ಆಡಳಿತ ವೈದ್ಯಾಧಿಕಾರಿ, ಕೋಟ ಸಮುದಾಯ ಆರೋಗ್ಯ ಕೇಂದ್ರ**

ಬೀದಿ ನಾಯಿಗಳಿಗೆ ಕಡಿವಾಣಕ್ಕೆ ವಿಳಂಬಿಸುತ್ತಿರುವ ಸ್ಥಳೀಯಾಡಳಿ ಹಾಗೂ ಸಂಬಂಧಿಸಿದ ಇಲಾಖೆಯ ವಿರುದ್ಧ ಸಾರ್ವಜನಿಕರು ಆಕ್ರೋಶ ಹೊರ ಹಾಕಿದ್ದು ಶೀಘ್ರ ಈ ಬಗ್ಗೆ ಕ್ರಮ ಕೈಗೊಳ್ಳಲು ಆಗ್ರಹಿಸಿವೆ.

ಯಾಕೆ ನಿರ್ಲಕ್ಷ್ಯ - ಸಾರ್ವಜನಿಕರ ಪ್ರಶ್ನೆ

ಜನರ ಜೀವದ ಜತೆ ಚೆಲ್ಲಾಟವಾಡುವ ಆಡಳಿತ ವ್ಯವಸ್ಥೆಯ ವಿರುದ್ಧ ಸಾರ್ವಜನಿಕರು ಸಾಮಾಜಿಕ ಚಿಂತಕರು ಬೇಸರ ಹೊರಹಾಕಿದ್ದು ಕೋಟ ಸಾಲಿಗ್ರಾಮ, ಕೋಡಿ ಸೇರಿದಂತೆ ವಿವಿಧ ಭಾಗಗಳ ಮುಖ್ಯ ಪೇಟೆ ಗ್ರಾಮೀಣ ಭಾಗಗಳಲ್ಲಿ ಬೀದಿ ನಾಯಿಗಳು ಹೆಚ್ಚಿದ್ದು ಶಾಲಾ ಮಕ್ಕಳು ಇದೀಗ ಮನೆ ವಿವಿಧ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು ಬೀದಿ ನಾಯಿಗಳು ಅಂತವರ ಮೇಲೆ ದಾಳಿ ಮಾಡುತ್ತಿವೆ. ಇಷ್ಟಿದ್ದೂ ಕ್ರಮ ಕೈಗೊಳ್ಳಬೇಕಿದ್ದವರು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದು ವಿಪರ್ಯಾಸವೇ ಸರಿ ಎಂಬ ಅಭಿಪ್ರಾಯ ಕೇಳಿ ಬಂದಿದೆ.



ರಾಷ್ಟ್ರೀಯ ಹೆದ್ದಾರಿ 169ರಲ್ಲಿ ಟ್ರಾಫಿಕ್ ಜಾಮ್

ಹಾಲ್‌ಗಳ ಮೇಲೆ ಬಿತ್ತು ಕೇಸ್

ಕೈಕಂಬ: ಮಂಗಳೂರು– ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗಂಜಿಮಠ ಸಮೀಪದ ಮುಚ್ಚೂರು ಕ್ರಾಸ್ ಬಳಿ ಹೆದ್ದಾರಿ ಬದಿಯಲ್ಲಿರುವ ಎರಡು ಮದುವೆ ಹಾಲ್‌ಗಳ ಮಾಲೀಕರು ಮತ್ತು ಆಯೋಜಕರ ವಿರುದ್ಧ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟು ಮಾಡಿದ ಕಾರಣಕ್ಕೆ ಬಜಪೆ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಭಾನುವಾರ ಇಲ್ಲಿನ ಎರಡು ಹಾಲ್‌ಗಳಲ್ಲಿ ಮದುವೆಗಳು ನಡೆದಿದ್ದವು. ಎರಡೂ ಹಾಲ್‌ಗಳು ಅಕ್ಕಪಕ್ಕದಲ್ಲಿದ್ದು, ಎರಡೂ ಮದುವೆಗೆ ಭಾರೀ ಸಂಖ್ಯೆಯ ವಾಹನಗಳ ದಂಡು ಬಂದಿತ್ತು. ಹಾಲ್‌ಗಳ ಪಾರ್ಕಿಂಗ್ ಸ್ಥಳಗಳು ಭರ್ತಿಯಾದುದರಿಂದ ವಾಹನಗಳನ್ನು ಹೆದ್ದಾರಿ ಬದಿಯಲ್ಲಿ ಪಾರ್ಕ್ ಮಾಡಲಾಗಿತ್ತು. ಇದರ ಪರಿಣಾಮ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯ ಮಧ್ಯೆ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ಕಿಲೋಮೀಟರ್ ಟ್ರಾಫಿಕ್ ಜ್ಯಾಮ್ ಉಂಟಾಗಿತ್ತು. ಹಾಲ್‌ಗೆ ಬಂದ ವಾಹನಗಳಿಗೆ ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಮಾಡದೇ ವಾಹನಗಳನ್ನು ಹೆದ್ದಾರಿ ಬದಿಯಲ್ಲಿ ಪಾರ್ಕಿಂಗ್ ಮಾಡಿಸಿ ಟ್ರಾಫಿಕ್ ಜ್ಯಾಮ್ ಆಗಲು ಕಾರಣವಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಅಕ್ರಮವಾಗಿ ಅಡ್ಡಿಪಡಿಸಿ ಸಾರ್ವಜನಿಕರಿಗೆ ತೊಂದರೆ ಮತ್ತು ಅಪಾಯವನ್ನುಂಟು ಮಾಡಿರುವ ಬಗ್ಗೆ ರಾಯಲ್ ಪ್ಯಾಲೇಸ್ ಮತ್ತು ಒಂಡೆಲಾ ಹಾಲ್‌ನ ಮಾಲಿಕರ ಮತ್ತು ಆಯೋಜಕರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
33° 25°	32° 26°




ಪುಟ 2
ಡಾ.ಕೆ. ಗೋವಿಂದ ಭಟ್ ಅವರಿಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ



ಪುಟ 6
ಬಾಳಿಗೆ ಭರವಸೆ ಆಗಬೇಕಿದ್ದ ಮಾಸಾಶನಕ್ಕೆ ತಾಂತ್ರಿಕ ಗ್ರಹಣ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!



ಕರಾವಳಿಯಲ್ಲಿ ದಿನಪೂರ್ತಿ ಈಗ ಸುಡು ಬಿಸಿಲಿನ ಝಳಕ್ಕೆ ಹೈರಾಣಾದ ಜನತೆ ಸಂಜೆಯ ಹೊತ್ತಿಗೆ ಕಡಲಕಿನಾರೆಗಳತ್ತ ಹೆಜ್ಜೆಹಾಕುತ್ತಿದ್ದು, ಆಹ್ಲಾದಕರ ವಾತಾವರಣಕ್ಕೆ ಮೈಯೊಡ್ಡಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ವಾರಾಂತ್ಯದ ಬಳಿಕ ತಣ್ಣೀರುಬಾವಿ, ಸುರತ್ಕಲ್, ಪಣಂಬೂರು, ಉಳ್ಳಾಲ ಬೀಚ್‌ಗಳಲ್ಲಿ ಕೂಡಾ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಿದೆ. ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ಸುತ್ತಮುತ್ತ

ತಾಪಮಾನ ಮತ್ತಷ್ಟು ಏರಿಕೆ: ಉರಿ ಬಿಸಿಲಿಗೆ ಇಳೆ ಅಕ್ಷರಶಃ ಕಂಗಾಲು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಮತ್ತಷ್ಟು ಏರಿಕೆ ಕಂಡಿದ್ದು, ಸೋಮವಾರ ಗರಿಷ್ಠ 38 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಆರ್ದ್ರ ವಾತಾವರಣ ಇರುವ ಹಿನ್ನೆಲೆಯಲ್ಲಿ 40 ಡಿಗ್ರಿಗೂ ಮೀರಿದ ತಾಪದ ಅನುಭವವಾಗುತ್ತಿದೆ.
ಈ ನಡುವೆ ಕರಾವಳಿಯಲ್ಲಿ ಗುಡುಗು ಸಹಿತ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಭರ್ಜರಿ ಬೇಸಗೆ ಮಳೆಯೊಂದರ ನಿರೀಕ್ಷೆಯಲ್ಲಿ ಕರಾವಳಿ ಭಾಗದ ಜನತೆ ಇದ್ದಾರೆ.

ಕರಾವಳಿಯ ಕಡಲ ಕಿನಾರೆಯಲ್ಲಿ ಹೆಚ್ಚುತ್ತಿದೆ ಪ್ರವಾಸಿಗರ ಸಂಖ್ಯೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕಡಲ ಕಿನಾರೆಗಳಲ್ಲಿ ಈಗ ಪ್ರವಾಸಿಗರ ದಂಡೇ ಕಾಣಸಿಗುತ್ತಿದೆ. ವಾರಾಂತ್ಯದ ಹಿನ್ನೆಲೆಯಲ್ಲಿ ಶನಿವಾರ ಹಾಗೂ ಭಾನುವಾರ ಮಂಗಳೂರಿನ ಪಣಂಬೂರು, ಉಳ್ಳಾಲ, ಸುರತ್ಕಲ್ ಮೊದಲಾದ ಕಡಲ ತೀರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಕಂಡುಬಂದಿದ್ದರು. ಎಲ್ಲೆಡೆ ಇಲಾಖೆಗಳು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಿದ್ದು, ಯಾವುದೇ ಅಪಾಯ ಸಂಭವಿಸದಂತೆ ಎಚ್ಚರಿಕೆ ವಹಿಸಿದ್ದು ಕಂಡುಬಂದಿದೆ.

ಹೆಚ್ಚುತ್ತಿರುವ ಧಗೆಯ ನಡುವೆ 'ಬಚ್ಚಂಗಾಯಿ'ಗೆ ಭರ್ಜರಿ ಡಿಮ್ಯಾಂಡ್!

ಮಂಗಳೂರು: ಎಲ್ಲೆಡೆ ಬಿಸಿಲಿನ ಕಾವು ಏರಿಕೆಯಾದ ಬೆನ್ನಿಗೇ ಕಲ್ಲಂಗಡಿ ಹಣ್ಣುಗಳಿಗೆ ಭರ್ಜರಿ ಬೇಡಿಕೆ ಬಂದಿದೆ. ಈ ನಡುವೆ ಬೇಡಿಕೆಗೆ ತಕ್ಕಷ್ಟು ಪ್ರಮಾಣದಲ್ಲಿ ಹಣ್ಣುಗಳು ಪೂರೈಕೆಯಾಗುತ್ತಿರುವುದು ಹಾಗೂ ಹಣ್ಣುಗಳ ಧಾರಣೆಯಲ್ಲಿಯೂ ಇಳಿಕೆಯಾಗಿರುವುದು ಗ್ರಾಹಕರಿಗೆ, ಮಾರಾಟಗಾರರಿಗೆ ಸಂತಸ ತಂದಿದೆ. ಸದ್ಯ ತೈವಾನ್ ತಳಿಯ ಕಲ್ಲಂಗಡಿಗೆ ಕಿಲೋ ಒಂದಕ್ಕೆ 24 ಹಾಗೂ ನಾಮಧಾರಿ ತಳಿ ಕಿಲೋ ಒಂದಕ್ಕೆ 28ರಿಂದ 30 ರೂ.ಗಳಿಗೆ ಮಾರಾಟವಾಗುತ್ತಿದೆ.

ಗ್ರಾಹಕರಿಗೆ ಶಾಕ್ ನೀಡಿದ ಟೊಮೆಟೋ: ಹಠಾತ್ ಏರಿಕೆ ಕಂಡಿದೆ ಧಾರಣೆ

ಮಂಗಳೂರು: ಮಾರುಕಟ್ಟೆಯಲ್ಲಿ ಟೊಮೆಟೊ ಧಾರಣೆ ಹಠಾತ್ ಏರಿಕೆಯಾಗಿದೆ. ಎರಡು ದಿನಗಳ ಹಿಂದಷ್ಟೇ ಕಿಲೋ ಒಂದಕ್ಕೆ 28 ರೂ. ಗಳಿದ್ದ ಟೊಮೆಟೊ ಬೆಲೆ ಈಗ ಬರೋಬ್ಬರಿ ಕಿಲೋ ಒಂದದಕ್ಕೆ 36 ರೂಪಾಯಿಗಳಿಗೆ ಜಿಗಿದಿದೆ.

ಮತಚಲಾವಣೆಗೆ ಗುಳೇ ಹೊರಟ ಕಾರ್ಮಿಕರು
ಕೋರೆ, ಫ್ಯಾಕ್ಟ್ರಿ ಮೌನ!
ಸಂಕಷ್ಟದಲ್ಲಿ ಕೆಂಪುಕಲ್ಲು, ಮರದ ಉದ್ಯಮ

ಕಾಸರಗೋಡು: ಮತದಾರರ ಪಟ್ಟಿ ಪರಿಷ್ಕರಿಸಿದ (ಎಸ್‌ಐಆರ್) ನಂತರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಹುತೇಕ ಮತದಾರರನ್ನು ಮತಗಟ್ಟೆಗೆ ತಲುಪುವಂತೆ ಮಾಡಿದೆ. ಮತದಾನ ಎಂದರೆ ಮೂಗು ಮುರಿಯುತ್ತಿದ್ದವರೂ ಈ ಬಾರಿ ದೂರದೂರಿಂದಲೂ ಆಗಮಿಸಿ ಮತದಾನದಲ್ಲಿ ಪಾಲ್ಗೊಂಡಿರುವುದು ವಿಶೇಷತೆಯಾಗಿತ್ತು.

'ಪೌರತ್ವಕ್ಕೂ ಧಕ್ಕೆ' ಕೆಲಸ ಮಾಡಿದೆ!
ದೂರದ ಮುಂಬಯಿ, ಬೆಂಗಳೂರು, ಕೊಚ್ಚಿ, ತಿರುವನಂತಪುರ ಸೇರಿದಂತೆ ಉದ್ಯೋಗಕ್ಕಾಗಿ ತೆರಳಿದ್ದವರಲ್ಲಿ ಬಹುತೇಕ ಮಂದಿ ಊರಿಗೆ ಆಗಮಿಸಿ ಮತ ಚಲಾಯಿಸಿದ್ದಾರೆ. ಇನ್ನು ಯುದ್ಧಾತಂಕದ ಹಿನ್ನೆಲೆಯಲ್ಲಿ ವಿದೇಶದಲ್ಲಿರುವ ಬೆರಳೆಣಿಕೆ ಮಂದಿಗೆ ಮಾತ್ರ ಮತದಾನದಲ್ಲಿ ಭಾಗವಹಿಸಲು ಸಾಧ್ಯವಾಗಿದೆ. ಮತದಾನದಲ್ಲಿ ಪಾಲ್ಗೊಳ್ಳದಿದ್ದಲ್ಲಿ ಪೌರತ್ವಕ್ಕೂ ಧಕ್ಕೆ ಉಂಟಾಗಲಿದೆ ಎಂಬ ಪ್ರಚಾರವೂ ಬಹುತೇಕ ಮಂದಿಯನ್ನು ಮತದಾನಕ್ಕೆ ಪ್ರೇರೇಪಿಸಿತ್ತು.





ಕಾರ್ಮಿಕರ ಕೊರತೆ
ಜಿಲ್ಲೆಯಲ್ಲಿ ನೂರಾರು ಮಂದಿ ಇತರ ರಾಜ್ಯ ಕಾರ್ಮಿಕರಿದ್ದು ಅವರಲ್ಲಿ ಬಹುತೇಕ ಮಂದಿ ಬಂಗಾಳಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಂಪು ಕಲ್ಲಿನ ಕ್ವಾರೆ, ಮರದ ಕಾರ್ಖಾನೆ, ತೇಪಿನ ಕೆಲಸದಲ್ಲಿ ನಿರತರಾಗಿರುವವರು ಬಂಗಾಳಿ, ಅಸ್ಸಾಂ ಸೇರಿದಂತೆ ಉತ್ತರದ ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಈ ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಹುತೇಕ ಮಂದಿ ಕಾರ್ಮಿಕರೂ ಅವರವರ ಊರಿಗೆ ತೆರಳಿರುವುದರಿಂದ ಈ ವಲಯಗಳಲ್ಲಿನ ಕೆಲಸ ಕಾರ್ಮಿಕರ ಕೊರತೆಯಿಂದ ಸ್ಥಗಿತಗೊಳ್ಳುವಂತಾಗಿದೆ.
ಬಹುತೇಕ ಕೆಂಪುಕಲ್ಲು ಕ್ವಾರೆ, ಮರದ ಕಾರ್ಖಾನೆಗಳು ಕೆಲಸ ಸ್ಥಗಿತಗೊಳಿಸಿವೆ. ಈ ಕಾರ್ಮಿಕರು ಕಠಿಣ ಕೆಲಸಗಳಲ್ಲಿ ದಿನ ಪೂರ್ತಿ ತೊಡಗಿಕೊಳ್ಳುತ್ತಾರೆ. ಪುಟ 6

ಕಾರ್ಮಿಕರಿಗೆ ಕಾಡಿದೆ ಪೌರತ್ವಕ್ಕೆ ಧಕ್ಕೆ ಭೀತಿ
ಈ ಹಿಂದಿನ ಚುನಾವಣೆಗಳಲ್ಲಿ ಇತರ ರಾಜ್ಯ ಕಾರ್ಮಿಕರು ಮತದಾನಕ್ಕೆ ತೆರಳುವುದಕ್ಕೆ ಹಿಂದೇಟು ಹಾಕುತ್ತಿದ್ದರು. ಊರಿಗೆ ತೆರಳಲು ಹೆಚ್ಚಿನ ಖರ್ಚು ವೆಚ್ಚ ಹಾಗೂ ದಿವಸಗಳು ತಗಲುವುದರಿಂದ ಮತದಾನ ಪ್ರಕ್ರಿಯೆಯಿಂದ ದೂರ ಉಳಿಯುತ್ತಿದ್ದರು. ಆದರೆ ಈ ಬಾರಿ ಪರಿಸ್ಥಿತಿ ತುಸು ಭಿನ್ನವಾಗಿದೆ. ಎಸ್‌ಐಆರ್ ಹಿನ್ನೆಲೆಯಲ್ಲಿ ಮತದಾನದಿಂದ ಬಿಟ್ಟು ನಿಂತಲ್ಲಿ ತಮ್ಮ ಪೌರತ್ವಕ್ಕೆ ಧಕ್ಕೆಯುಂಟಾಗಬಹುದೆಂಬ ಭೀತಿಯಿಂದ ಎಲ್ಲಾ ಕಾರ್ಮಿಕರೂ ಮತದಾನಕ್ಕಾಗಿ ಊರಿಗೆ ತೆರಳಿದ್ದಾರೆ.

ಶಿಥಿಲ 'ನಾಗಪಟ್ಟಣ'ಕ್ಕೆ ಕಾಯಕಲ್ಪ
ಸೇತುವೆ ದುರಸ್ತಿ: ಸಂಚಾರ ಬಂದ್
ಬದಲಿ ಮಾರ್ಗ ಬಳಕೆಗೆ ಸೂಚನೆ

ಸುಳ್ಯ: ಆಲೆಟ್ಟಿ– ಬಡ್ಡಡ್ಕ ಕೂರ್ನಡ್ಕ ಹಾಗೂ ಅಂತರ್ ರಾಜ್ಯ ಸಂಪರ್ಕದ ರಸ್ತೆಯ ನಾಗಪಟ್ಟಣ ಸೇತುವೆ ಶಿಥಿಲಗೊಂಡ ಹಿನ್ನೆಲೆಯಲ್ಲಿ ಸೇತುವೆಯ ದುರಸ್ತಿ ಕಾರ್ಯವು ಏ.15ರಂದು ಪ್ರಾರಂಭಗೊಳ್ಳಲಿದ್ದು, ಮೇ 31ರ ತನಕ ನಡೆಯಲಿದೆ. ಈ ಅವಧಿಯಲ್ಲಿ ಇಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗುತ್ತಿದೆ.
ಈ ಅವಧಿಲ್ಲಿ ಪರ್ಯಾಯವಾಗಿ ಸುಳ್ಯದಿಂದ ಆಲೆಟ್ಟಿ– ಬಡ್ಡಡ್ಕ ಕೂರ್ನಡ್ಕ ಮತ್ತು ಆಲೆಟ್ಟಿ– ಕೋಲ್ಚಾರು– ಕಣಕ್ಕೂರು– ಬಂದಡ್ಕ ಹಾಗೂ ಕೇರಳ ಭಾಗಕ್ಕೆ ಸಂಚರಿಸುವ ವಾಹನಗಳು ಜಿಲ್ಲಾ ಮುಖ್ಯ ರಸ್ತೆಯಾಗಿರುವ ಸುಳ್ಯ– ಕಾಂತಮಂಗಲ– ಅಜ್ಜಾವರ– ಮಂಡೆಕೋಲು– ಕನ್ಯಾನ ಮಾರ್ಗವಾಗಿ ಅಜ್ಜಾವರ ನಾರ್ಕೋಡು ಸಂಪರ್ಕ ರಸ್ತೆ ಬಳಸಬಹುದಾಗಿದೆ.
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಡಿ ಅಧೀಕ್ಷಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಮಂಗಳೂರಿನಿಂದ ಅನುಮೋದನೆಗೊಂಡಿದ್ದು, ಇಲಾಖೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕರೆದು ಗುತ್ತಿಗೆ ನಿಗದಿಪಡಿಸಲಾಗಿದೆ. ಅದರಂತೆ



ಸೇತುವೆಯು ಶಿಥಿಲಗೊಂಡಿದ್ದು ಸೇತುವೆಯ ಬೇರಿಂಗ್ ಎಕ್ಸ್‌ಪೆನ್ಸನ್ ಜಾಯಿಂಟ್‌ಗಳನ್ನು ಬದಲಿಸಿ ದುರಸ್ತಿಪಡಿಸಬೇಕಾಗಿದ್ದು ಅನಿವಾರ್ಯವಾಗಿ ವಾಹನ ಸಂಚಾರ ಸಂಪೂರ್ಣವಾಗಿ ನಿಷೇಧಿಸಬೇಕಾಗುವುದು ಎಂದು ಇಲಾಖೆಯ ವತಿಯಿಂದ ಪ್ರಕಟಣೆ ಹೊರಡಿಸಲಾಗಿದೆ. ಸುಳ್ಯ ಲೋಕೋಪಯೋಗಿ ಇಲಾಖೆ ಉಪವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಕೋರಿಕೆಯಂತೆ ಏ.15ರಿಂದ 31ರವರೆಗೆ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗುವುದು.

ದಿವ್ಯಾಂಗ ಮಕ್ಕಳ ಪುನರ್ವಸತಿ, ಅಭಿವೃದ್ಧಿಗೆ ಮಡಿಕ್ಕೈಯಲ್ಲಿ ಐಐಪಿಡಿ ಕೇಂದ್ರ
ಆರ್ಥಿಕ ಬಲಕ್ಕಾಗಿ 'ಎಂಕ್ಯೂಬ್' ಆಯೋಜನೆ

ಕಾಸರಗೋಡು: ದಿವ್ಯಾಂಗ ಮಕ್ಕಳ ಪುನರ್ವಸತಿ, ಸಮಗ್ರ ಅಭಿವೃದ್ಧಿಯನ್ನು ಗುರಿಯಿರಿಸಿ ಖ್ಯಾತ ಜಾದೂಗಾರ ಗೋಪಿನಾಥ್ ಮುದುಕ್ಕಾಡ್ ನೇತೃತ್ವದಲ್ಲಿ ಕಾಞಂಗಾಡು ಸಮೀಪದ ಮಡಿಕ್ಕೈಯಲ್ಲಿ ಇಂಟರ್ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ಸ್ ಡಿಸಾಬಿಲಿಟಿ (ಐಐಪಿಡಿ) ಕೇಂದ್ರವನ್ನು ಪ್ರಾರಂಭಿಸಲಾಗುತ್ತಿದೆ.

ಸುಮಾರು 121 ಕೋಟಿ ರೂ. ವೆಚ್ಚ
ಇದಕ್ಕೆ ಸುಮಾರು 121 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. ಪ್ರಯುಕ್ತ ಈ ಕೇಂದ್ರಕ್ಕೆ ಬೇಕಾದ ಆರ್ಥಿಕ ಸಹಾಯಕ್ಕಾಗಿ ಮೇ 1ರಂದು ಸಂಜೆ 6ರಿಂದ ವಿದ್ಯಾನಗರ ಸಮೀಪದ ಚೆಟ್ಟುಂಗುಳಿ ರೋಯಲ್ ಕನ್‌ವೆನ್ಶನ್ ಸೆಂಟರ್‌ನಲ್ಲಿ 'ಎಂಕ್ಯೂಬ್' ಎಂಬ ಹೆಸರಿನಲ್ಲಿ ಆಕರ್ಷಕ ಜಾದೂ ಪ್ರದರ್ಶನ ಮತ್ತು ಸಂಗೀತ ಕಛೇರಿ ಕಾರ್ಯಕ್ರಮ ನಡೆಯಲಿದೆ.



ಪ್ರಸ್ತುತ ಕಾರ್ಯಕ್ರಮವು ಕಾಸರಗೋಡು ಪ್ರೆಸ್‌ಕ್ಲಬ್‌ನ ಸಹಕಾರದೊಂದಿಗೆ ನಡೆಯಲಿದೆ ಎಂದು ಖ್ಯಾತ ಜಾದೂಗಾರ ಗೋಪಿನಾಥ್ ಮುದುಕ್ಕಾಡ್ ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಈ ನೂತನ ಕೇಂದ್ರದಲ್ಲಿ ಒಟ್ಟು 21 ವಿಭಾಗಗಳಿಗೊಳಪಟ್ಟು ಡಿಸಾಬಿಲಿಟಿ ರೋಗಿಗಳ ಆರೈಕೆಯು ನಡೆಯಲಿದೆ. ಇಲ್ಲಿ ಸುಮಾರು ಸಾವಿರ ಮಂದಿಗೆ ತಂಗುವ ವ್ಯವಸ್ಥೆ ಇದೆ. ಈ ಕೇಂದ್ರವನ್ನು ಸ್ಥಾಪಿಸಲು ವಿವಿಧ ವಿದೇಶಿ ರಾಷ್ಟ್ರಗಳಲ್ಲಿ ಈಗಾಗಲೇ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಕೇಂದ್ರವು ಸಾಕಾರಗೊಂಡರೆ ಜಿಲ್ಲೆಯ ದಿವ್ಯಾಂಗರಿಗೆ ಭಾರೀ ಉಪಕಾರವಾಗಲಿದೆ. ಈ ಕೇಂದ್ರದ ನಿರ್ಮಾಣ ಮುಂದಿನ ವರ್ಷ ಜೂನ್ ತಿಂಗಳೊಳಗೆ ಪೂರ್ತಿಗೊಳಿಸಲು ಉದ್ದೇಶಿಸಲಾಗಿತ್ತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಅವಧಿಯೊಳಗೆ ಪೂರ್ತಿಗೊಳಿಸುವುದು ಕಷ್ಟಕರವಾಗಿದ್ದು ಮುಂದಿನ ಡಿಸೆಂಬರ್ ಒಳಗೆ ಪೂರ್ತಿ ಸಾಧ್ಯ ವಿಶ್ವಾಸವಿದೆ ಎಂದು ಅವರು ತಿಳಿಸಿದರು. ಪ್ರೆಸ್‌ಕ್ಲಬ್ ಅಧ್ಯಕ್ಷ ಶಿಜು ಕಣ್ಣನ್, ಕಾರ್ಯದರ್ಶಿ ಪ್ರದೀಪ್ ನಾರಾಯಣನ್, ರಾಧಾಕೃಷ್ಣನ್ ಉಪಸ್ಥಿತರಿದ್ದರು.

ಕುಮಾರಧಾರೆ ಒಡಲಿಗೆ ಕಸ ಎಸೆತ: 'ಯಾತ್ರಾರ್ಥಿ'ಗಳ ಜೇಬಿಗೆ 'ದಂಡ'!
ಪಂಚಾಯತ್ ಕ್ರಮಕ್ಕೆ ಸ್ಥಳೀಯರಿಂದ ಮೆಚ್ಚುಗೆ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರಾ ನದಿಗೆ ಕಸ ಎಸೆದವರಿಗೆ ಸುಬ್ರಹ್ಮಣ್ಯ ಪಂಚಾಯತ್‌ನಿಂದ ದಂಡ ವಿಸಲಾಗಿದೆ.
ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ಆಗಮಿಸಿದ್ದ ಯಾತ್ರಾರ್ಥಿಗಳ ಟೆಂಪೋ ಟ್ರಾವೆಲ್ಲರ್ ವಾಹನವೊಂದರಿಂದ ಕುಮಾರಧಾರಾ ನದಿಗೆ ಕಸ ಎಸೆದಿದೆ.

ಪಂಚಾಯತ್‌ಗೆ ಮಾಹಿತಿ ನೀಡಿದರು
ಇದನ್ನು ಸುಬ್ರಹ್ಮಣ್ಯ ಟ್ಯಾಕ್ಸಿ ಯೂನಿಯನ್‌ನ ಸದಸ್ಯರೊಬ್ಬರು ನೋಡಿ ಆಕ್ಷೇಪಿಸಿದ್ದಾರೆ. ಅಲ್ಲದೆ, ಈ ಬಗ್ಗೆ ಪಂಚಾಯತ್‌ಗೆ ಮಾಹಿತಿ ನೀಡಿದ್ದು, ಇದರ ಆಧಾರದಲ್ಲಿ ಕಸ ಬಿಸಾಡಿದ ವಾಹನದವರಿಗೆ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮೋನಪ್ಪ ಡಿ. ಅವರು ರೂ.1500 ದಂಡ ವಿಧಿಸಿದ್ದಾರೆ.



ಇಲ್ಲಿ ಈ ಹಿಂದೆ ಕೂಡಾ ಇದೇ ರೀತಿ ವಾಹನವೊಂದಕ್ಕೆ ಕಸ ಬಿಸಾಡಿದ ವಿಚಾರವಾಗಿ ದಂಡ ವಿಧಿಸಲಾಗಿತ್ತು. ಸುಬ್ರಹ್ಮಣ್ಯ ಪಂಚಾಯತ್‌ನ ಈ ಕ್ರಮಕ್ಕೆ ಸಾರ್ವಜನಿಕರು, ಸ್ಥಳೀಯರಿಂದ ಈಗ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ರಸ್ತೆ ಅತ್ಯಾಧುನಿಕಗೊಂಡರೂ ಹಳೇ ವಿನ್ಯಾಸದಲ್ಲೇ ಇರುವ ರೈಲ್ವೆ ಸೇತುವೆ | ಪ್ರತಿನಿತ್ಯ ನೀಡುತ್ತಿದೆ ಅಪಘಾತ, ಅನಾಹುತಗಳಿಗೆ ಬಿಂದಾಸ್ ಆಹ್ವಾನ
ಮೊಡಂಕಾಪುವಿನ ರಸ್ತೆ ನಡುವೆ ಚಾಲಕರ ಎದೆ ನಡುಗಿಸುತ್ತಿದೆ ಈ ಕಲ್ಲಿನ ಗೋಡೆ!

ಬಂಟ್ವಾಳ: ಬಿ.ಮೂಡ ಗ್ರಾಮದ ಮೊಡಂಕಾಪು ಬಳಿ ಇರುವ ರೈಲ್ವೆ ಮೇಲ್ಸೇತುವೆ ದಿನನಿತ್ಯ ಅಪಾಯವನ್ನು ಆಹ್ವಾನಿಸುವಂತಿದೆ.
ಇದು ಇತಿಹಾಸ ಪ್ರಸಿದ್ಧ ಪೊಳಲಿ, ಕಟೀಲು ದೇವಸ್ಥಾನ, ಬಜಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಹಿತ ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಗೆ ಸಂಪರ್ಕವನ್ನು ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದರೂ, ರೈಲ್ವೆಯ ಈ ಮೇಲ್ಸೇತುವೆ ಇಂದಿಗೂ ಹಳೆಯ ವಿನ್ಯಾಸದಲ್ಲೇ ಉಳಿದಿರುವುದು ವಿಪರ್ಯಾಸವಾಗಿದೆ.

ಇಲ್ಲಿ ಆಗುತ್ತಿರುವ ಸಮಸ್ಯೆ ಏನು?
ಮೊಡಂಕಾಪಿನ ಈ ರೈಲ್ವೆ ಸೇತುವೆ, ಅಡಿಭಾಗದಲ್ಲಿ ಕಲ್ಲಿನಿಂದ ಬೃಹತ್ ಪಿಲ್ಲರ್ ನಿರ್ಮಿಸಿ ಎರಡು ಮಾರ್ಗವಾಗಿ ವಿಭಜಿಸಲಾಗಿದೆ. ಇಲ್ಲಿ ಏಕಕಾಲದಲ್ಲಿ ಎದುರು ಬದುರು ವಾಹನ ಸಂಚರಿಸುವ ವೇಳೆ ಚಾಲಕರು ಅಪಾಯದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಮೇಲ್ಸೇತುವೆಯಲ್ಲಿ ನಿರಂತರ ಪ್ಯಾಸೆಂಜರ್ ಹಾಗೂ ಗೂಡ್ಸ್ ರೈಲು ಸಂಚರಿಸುತ್ತಿದ್ದರೂ, ಕೆಳಭಾಗದ ರಸ್ತೆ ವ್ಯವಸ್ಥೆ ಮಾತ್ರ ಕಾಲಕ್ಕೆ ಸರಿಯಾಗಿ ಬದಲಾಗಿಲ್ಲ. ಪ್ರತಿನಿತ್ಯ ಸಾವಿರಾರು ವಾಹನಗಳು ಈ ಸೇತುವೆ ಕೆಳಗೆ ಹಾದು ಹೋಗುತ್ತವೆ. ಪುಟ 6




ಶೀಘ್ರ ಮೊಡಂಕಾಪು ಸೇತುವೆಯ ಸುಧಾರಣೆ
ಮೊಡಂಕಾಪು ಸೇತುವೆ ಹಳೆಯದಾಗಿದ್ದು, ಅದನ್ನು ಅಭಿವೃದ್ಧಿಪಡಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲೆಯ ಹಲವು ರೈಲ್ವೆ ಸೇತುವೆಗಳು ಅಭಿವೃದ್ಧಿಗೊಂಡಿದ್ದು, ಮುಂದಿನ ದಿನಗಳಲ್ಲಿ ಮೊಡಂಕಾಪು ಸೇತುವೆಯೂ ಸುಧಾರಣೆಯಾಗಲಿದೆ



● ಕ್ಯಾ. ಬ್ರಿಜೇಶ್ ಚೌಟ, ಸಂಸದರು

ಸಾವು, ನೋವಿಗೂ ಇದು ಕಾರಣವಾಗುತ್ತಿದೆ...
ಮೊಡಂಕಾಪು ರೈಲ್ವೆ ಮೇಲ್ಸೇತುವೆ ಆಧುನಿಕತೆಗೆ ತಕ್ಕಂತೆ ಅಭಿವೃದ್ಧಿಯಾಗಿಲ್ಲ, ಇಲ್ಲಿ ಅಪಘಾತ, ಸಾವು, ನೋವಿಗೂ ಕಾರಣವಾಗುತ್ತಿದೆ. ಸಾರ್ವಜನಿಕರು ಸಮಸ್ಯೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಜನಪ್ರತಿನಿಧಿಗಳು ಗಮನಹರಿಸಬೇಕು.



● ಸದಾಶಿವ ಬಂಗೇರ, ಬೂಡ ಮಾಜಿ ಸದಸ್ಯರು

ಅಪಾಯ ಆಹ್ವಾನಿಸುತ್ತಿದೆ ಇಲ್ಲಿರುವ ಕಬ್ಬಿಣದ ಕಮಾನು
ಘನ ವಾಹನಗಳ ಸಂಚಾರ ನಿಯಂತ್ರಿಸುವ ನಿಟ್ಟಿನಲ್ಲಿ ಸೇತುವೆಯ ಕೆಳಭಾಗದಲ್ಲಿ ಅಳವಡಿಸಿರುವ ಕಬ್ಬಿಣದ ಕಮಾನು ಇದೀಗ ಅಪಾಯವನ್ನು ಆಹ್ವಾನಿಸುತ್ತಿದೆ. ಇಲ್ಲಿ ಸಮರ್ಪಕ ಸೂಚನಾ ಫಲಕಗಳಿಲ್ಲ, ಪ್ರತಿಬಿಂಬಿಸುವ ಬಣ್ಣಗಳಿಲ್ಲ. ಕಳೆದ ಕೆಲ ತಿಂಗಳಿನಿಂದ ನಿರಂತರವಾಗಿ ಇಲ್ಲಿ ಸಂಭವಿಸುತ್ತಿರುವ ಅಪಘಾತ, ಸಾವು ನೋವುಗಳು ಇದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ. ಕಳೆದ ವಾರ ಇಲ್ಲಿ ನಡೆದ ಅಪಘಾತದ ಗಾಯಾಳು ಈಗಲೂ ಆಸ್ಪತ್ರೆಯಲ್ಲಿ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

ಸುತ್ತಮುತ್ತ

ದೇವಸ್ಥಾನಗಳಿಗೆ ಒಟ್ಟು 1.60 ಕೋ.ರೂ. ಅನುದಾನ ಮಂಜೂರು



ಬೆಳ್ತಂಗಡಿ: ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಮತ್ತು ವಿವೇಚನಾ ಅನುದಾನದಡಿ ತಾಲೂಕಿನ ದೇವಸ್ಥಾನಗಳಿಗೆ ಒಟ್ಟು 1 ಕೋಟಿ 60 ಲಕ್ಷ ರೂ. ಅನುದಾನ ಮಂಜೂರಾಗಿದೆ ಎಂದು ಶಾಸಕ ಹರೀಶ್ ಪೂಂಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುದಾನ ವಿವರಗಳು:

ಗರ್ಡಾಡಿ ಗ್ರಾಮದ ನಂದಿಬೆಟ್ಟ ಶ್ರೀ ನಂದಿಕೇಶ್ವರ ದೇವಸ್ಥಾನ ಅಭಿವೃದ್ಧಿಗೆ 1 ಕೋ. ರೂ., ಕರಾಯ ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ರೂ.20 ಲಕ್ಷ ರೂ.,
ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಕಾರ್ಯಕ್ಕೆ 10 ಲಕ್ಷ, ಹತ್ಯಡ್ಕ ಗ್ರಾಮದ ನೆಕ್ಕರಡ್ಕ ಶ್ರೀ ವಿಠೋಬ ರುಕುಮಾಯಿ ದೇವಸ್ಥಾನ 5 ಲ.ರೂ., ಶ್ರೀ ಅನಂತೇಶ್ವರ ದೇವಸ್ಥಾನ, ಬಳ್ಳಮಂಜ 10 ಲ.ರೂ., ಚಿಬಿದ್ರೆ ಗ್ರಾಮದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಕುಡುಮಡ್ಕ 5 ಲಕ್ಷ, ಮಚ್ಚಿನ ಗ್ರಾಮದ ಮಾಣೂರು ಶ್ರೀ ಧರ್ಮಶಾಸ್ತಾವು ದೇವಸ್ಥಾನ 10 ಲ.ರೂ. ಅನುದಾನ ಬಿಡುಗಡೆಗೊಂಡಿದೆ.

ಅಧ್ಯಕ್ಷರಾಗಿ ಯು. ಸುರೇಶ್ ನಾಯಕ್ ಆಯ್ಕೆ



ಬಂಟ್ವಾಳ: ಇಲ್ಲಿಯ ತಾಲೂಕಿನ ಬಿ.ಸಿ.ರೋಡ್ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಸೇವಾ ಸಮಿತಿಯ ನೂತನ ಅಧ್ಯಕ್ಷರಾಗಿ ಯು.ಸುರೇಶ್ ನಾಯಕ್ ಅವರು ಆಯ್ಕೆಯಾಗಿದ್ದಾರೆ. ಬಿ.ಸಿ.ರೋಡ್‌ನ ಗೀತಾಂಜಲಿ ಕಲ್ಯಾಣ ಮಂಟಪದಲ್ಲಿ ಸಂಘದ ಅಧ್ಯಕ್ಷ ಎನ್.ದುರ್ಗಾದಾಸ್ ಶೆಣೈ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ಆಡಳಿತ ಸಮಿತಿಯ ಪದಾಧಿಕಾರಿಗಳ ಆಯ್ಕೆ ನಡೆಸಲಾಯಿತು. ಉಪಾಧ್ಯಕ್ಷರಾಗಿ ಆರ್. ಮಂಜುನಾಥ ಪೈ, ಕಾರ್ಯದರ್ಶಿಯಾಗಿ ಶ್ರೀಧರ ಹೆಗ್ಡೆ, ಜತೆ ಕಾರ್ಯದರ್ಶಿಗಳಾಗಿ ಮಧುಸೂದನ ಶೆಣೈ, ದೇವಿದಾಸ ಭಟ್, ಕೋಶಾಧಿಕಾರಿಯಾಗಿ ಬಿ. ಕೃಷ್ಣ ನಾಯಕ್, ಕಾರ್ಯಕಾರಿ ಸದಸ್ಯರಾಗಿ ಅನಂತ ಕೃಷ್ಣ ನಾಯಕ್, ಹರೀಶ್ ಭಟ್, ಸದಾಶಿವ ಪೈ, ವಾಸುದೇವ ಭಂಡಾರ್ಕರ್, ವಿವೇಕ್ ಹೆಗ್ಡೆ ಅವರು ಆಯ್ಕೆಯಾಗಿದ್ದಾರೆ.

ಏ.19ರವರೆಗೆ ಪಾವಂಜೆ ಕ್ಷೇತ್ರದಲ್ಲಿ ಜಾತ್ರೆ

ಮೂಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮೀ ದೇವಸ್ಥಾನ ನಾಗವ್ರಜ ಕ್ಷೇತ್ರದಲ್ಲಿ ಏ.13ರಂದು ಆರಂಭಗೊಂಡಿದ್ದು, ಏ.19ರವರೆಗೆ ವರ್ಷಾವಧಿ ಜಾತ್ರಾ ಮಹೋತ್ಸವ ನಡೆಯಲಿದೆ. ಏ.14ಕ್ಕೆ ಬೆಳಗ್ಗೆ ಧ್ವಜಾರೋಹಣ, ಸಂಜೆ ಉತ್ಸವ ಬಲಿ, ಹಳೆಯಂಗಡಿ ಪೇಟೆ ಸವಾರಿ ನಡೆಯಲಿದೆ. ಪ್ರತಿದಿನ ಮಹಾಪೂಜೆ, ಬಲಿ, ಅನ್ನಸಂತರ್ಪಣೆ, ಸಂಜೆ ಉತ್ಸವ ಬಲಿ, ಹೊಯಿಗೆಗುಡ್ಡೆ ಸವಾರಿ. ಏ.16ರಂದು ಮಹಾಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಉತ್ಸವ ಬಲಿ, ಪಾವಂಜೆ ಗ್ರಾಮಸವಾರಿ. ಏ.17ಕ್ಕೆ ಮಹಾರಂಗಪೂಜೆ, ಅನ್ನಸಂತರ್ಪಣೆ. ಸಂಜೆ ಉತ್ಸವ ಬಲಿ,"ರೆ ದೀಪ. ಏ.18ಕ್ಕೆ 10:30ಕ್ಕೆ ರಥಾರೋಹಣ, ಅನ್ನಸಂತರ್ಪಣೆ. ಸಂಜೆ 7ಕ್ಕೆ ಮಹಾರಥೋತ್ಸವ, ಉತ್ಸವ ಬಲಿ. ಏ.19ಕ್ಕೆ ಕವಾಟೋದ್ಘಾಟನೆ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಉತ್ಸವ ಬಲಿ, ಅವಭೃತೋತ್ಸವ, ಧ್ವಜಾವರೋಹಣ, ಅಣ್ಣಪ್ಪ ಸ್ವಾಮಿಗೆ ನರ್ತನ ಸೇವೆ ನಡೆಯಲಿದೆ. ಏ.18ಕ್ಕೆ ವಿಶೇಷ ಕಲಾರಾಧನೆಗಳು ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಏ.16: ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕಾರ್ನಾಡ್ ಇಂಡಸ್ಟ್ರಿಯಲ್ ಏರಿಯಾ, ಮುಲ್ಕಿ, ಬಪ್ಪನಾಡು, ಕಾರ್ನಾಡು, ಮಾನಂಪಾಡಿ, ಕವತ್ತಾರು, ಬಳ್ಕುಂಜೆ, ಶಿಮಂತೂರು, ಕಿನ್ನಿಗೋಳಿ, ಐಕಳ, ಎಳತ್ತೂರು, ಗುತ್ತಕಾಡು, ಏಳಿಂಜೆ, ಮೆನ್ನಬೆಟ್ಟು, ಮೂರು ಕಾವೇರಿ, ಗೋಳಿಜೋರ, ಕೆಮ್ರಾಲ್, ಹಳೆಯಂಗಡಿ, ತೋಕೂರು, ಪಡುಪಣಂಬೂರು, ಲಿಂಗಪ್ಪಯ್ಯ ಕಾಡು, ಕೆರೆಕಾಡು, ಎಸ್ಕೋಡಿ, ಪುನರೂರು, ಚೇಳ್ಯಾರು ಎಂ.ಆರ್.ಪಿ.ಎಲ್ ಕಾಲೊನಿ, ಮುಕ್ಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.16ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಡಾ.ಕೆ. ಗೋವಿಂದ ಭಟ್‌ಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ | ಡಾ.ಎಂ.ಪ್ರಭಾಕರ ಜೋಷಿ ಬಣ್ಣನೆ

ತಿರುಗಾಟ ಮೂಲಕ ದಾಖಲೆ ನಿರ್ಮಿಸಿದ ಸವ್ಯಸಾಚಿ ಕಲಾವಿದ

ಬಂಟ್ವಾಳ: ಸೂರಿಕುಮೇರಿ ಗೋವಿಂದ ಭಟ್ಟರು ನಿರಂತರ ಎಪ್ಪತ್ತು ವರ್ಷಗಳ ತಿರುಗಾಟದ ಮೂಲಕ ದಾಖಲೆ ನಿರ್ಮಿಸಿದ ಸವ್ಯಸಾಚಿ ಕಲಾವಿದರು. ಯಕ್ಷಗಾನ ಕ್ಷೇತ್ರಕ್ಕೆ ಅವರ ಕೊಡುಗೆ ಅನನ್ಯವಾದುದು ಎಂದು ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ಸೋಮವಾರ ನಡೆದ ಗೋವಿಂದ ಸ್ಮರಣೆ ಕಾರ್ಯಕ್ರಮದಲ್ಲಿ ಯಕ್ಷಗಾನ ಹಿರಿಯ ಕಲಾವಿದರು, ಗೋವಿಂದ ಭಟ್ಟರ ಒಡನಾಡಿಗಳು ಹಾಗೂ ಅಭಿಮಾನಿಗಳು ಬಣ್ಣಿಸಿದರು.

ಡಾ. ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ಸಂಪಾಜೆ ಇದರ ವತಿಯಿಂದ ಯಕ್ಷಗಾನ ದಶಾವತಾರಿ ಡಾ.ಕೆ. ಗೋವಿಂದ ಭಟ್ ಅವರ ಸಾರ್ವಜನಿಕ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಗುಣಗಾನ ಮಾಡಿದ ಅಭಿಮಾನಿಗಳು ಕಲಾವಿದ ಶ್ರೇಷ್ಠರಾದರೂ ಎಲ್ಲರೊಡನೆ ಬೆರೆಯುತ್ತಿದ್ದ ಅವರ ಗುಣವನ್ನು ಸ್ಮರಿಸಿದರು.

ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಮಾತನಾಡಿ, ಕಷ್ಟಗಳಿದ್ದರು ತೋರಿಸಿಕೊಳ್ಳದೆ ವೇಷ ಮಾಡಿದವರು ಅವರು ಎಂದರು.



ಹಿರಿಯ ವಿಮರ್ಶಕ, ವಿದ್ವಾಂಸ ಡಾ.ಎಂ.ಪ್ರಭಾಕರ ಜೋಷಿ ಮಾತನಾಡಿ, ನಿರಂತರ ಎಪ್ಪತ್ತೊಂದು ವರ್ಷಗಳ ತಿರುಗಾಟ ಮಾಡಿ ದಾಖಲೆ ಮೆರೆದವರು. ವೇಷ ವೈವಿಧ್ಯಗಳಲ್ಲಿ ವಹಿಸಿದ ಪಾತ್ರಗಳಲ್ಲಿ ಯಕ್ಷಗಾನದ ಮೊದಲ ಹೆಜ್ಜೆಯಿಂದ ಕೊನೆಯ ಹೆಜ್ಜೆಯವರೆಗೆ ಹೇಗಿರಬೇಕು ಎಂದು ತೋರಿಸಿಕೊಟ್ಟವರು. ತೆಂಕು ತಿಟ್ಟಿನ ಯಕ್ಷಗಾನ ಪರಿಪೂರ್ಣ ರೂಪ ಎಂದು ಕುಂಬಳೆ ಸುಂದರ ರಾಯರೇ ಹೇಳಿದ್ದಾರೆ. ಅವರ ಕುರಿತು ಸಂಶೋಧನಾತ್ಮಕ ಅಧ್ಯಯನ ಆಗಬೇಕು ಎಂದರು.

ಹಿರಿಯ ಕಲಾವಿದ ಉಜಿರೆ ಅಶೋಕ ಭಟ್ ಮಾತನಾಡಿ, ಗೋವಿಂದ ಭಟ್ಟರು ಮಾರ್ಗದರ್ಶಿಯಾಗಿದ್ದರು ಎಂದು ಒಡನಾಟ ಸ್ಮರಿಸಿದರು. ಹಾದಿಗಲ್ಲು ಲಕ್ಷ್ಮೀನಾರಾಯಣ ರಾವ್ ಮಾತನಾಡಿ, ಯಕ್ಷಗಾನ ಪೂರ್ಣಾವತಾರಿ ಎಂದರು.

> ಕಲಾವಿದ ಎಷ್ಟೇ ಪಾಂಡಿತ್ಯವುಳ್ಳವನಾದರೂ ಎದುರಿದ್ದ ಪ್ರೇಕ್ಷಕ ಒಪ್ಪಿದಾಗ ಮಾತ್ರ ಪರಿಪೂರ್ಣ. ಗೋವಿಂದ ಭಟ್ಟರು ಅಂಥ ಪರಿಪೂರ್ಣ ಕಲಾವಿದರು.
> ● ಪಟ್ಲ ಸತೀಶ ಶೆಟ್ಟಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ಸ್ಥಾಪಕ

ಯಕ್ಷಧ್ರುವ ಪಟ್ಲ ಫೌಂಡೇಶನ್ ಸ್ಥಾಪಕ ಪಟ್ಲ ಸತೀಶ ಶೆಟ್ಟಿ ಮಾತನಾಡಿದರು.

ಪ್ರಮುಖರಾದ ಜಿ.ಕೆ.ಭಟ್ ಸೇರಾಜೆ, ಪಂಜ ಭಾಸ್ಕರ ಭಟ್, ಜಬ್ಬಾರ್ ಸಮೋ, ಆರ್.ಕೆ.ಭಟ್, ಸಂಜಯ ಕುಮಾರ್, ಶರವು ರಾಘವೇಂದ್ರ ಶಾಸ್ತ್ರಿ, ರಾಧಾಕೃಷ್ಣ ಕಲ್ಚಾರ್, ಧರ್ಮಸ್ಥಳದ ಬಿ. ಭುಜಬಲಿ, ಪ್ರೊ. ಎಂ.ಎಲ್.ಸಾಮಗ,, ಭಾಸ್ಕರ ರೈ ಕುಕ್ಕುವಳ್ಳಿ, ಪುತ್ತಿಗೆ ರಘುರಾಮ ಹೊಳ್ಳ, ಬೇಗಾರು ಶಿವಕುಮಾರ್, ವಸಂತ ಗೌಡ ಕಾಯರ್ತಡ್ಕ, ಸರಪಾಡಿ ಅಶೋಕ ಶೆಟ್ಟಿ, ದಿವಾಣ ಗೋವಿಂದ ಭಟ್, ಸಿರಿಬಾಗಿಲು ರಾಮಕೃಷ್ಣ ಮಯ್ಯ, ಸುಣ್ಣಂಬಳ ವಿಶ್ವೇಶ್ವರ ಭಟ್, ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ವಿದ್ಯಾ ಕೋಳ್ಯೂರು, ಮುರಳಿ ಕಡೆಕಾರ್, ಕಟೀಲು ಕ್ಷೇತ್ರದ ಆನುವಂಶಿಕ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ, ವಿಧಾನಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ನಿವೃತ್ತ ಶಿಕ್ಷಕಿ ಶಾರದಾ ಟೀಚರ್, ಗಿರೀಶ್ ರೈ ಕಕ್ಕೆಪದವು, ವಾಸುದೇವ ರಂಗ ಭಟ್ಟ, ಪ್ರಶಾಂತ್ ಹೊಳ್ಳ ಮಾತನಾಡಿದರು.

ಹಿರಿಯ ಕಲಾವಿದರಾದ ಅರುವ ಕೊರಗಪ್ಪ ಶೆಟ್ಟಿ, ಕೋಳ್ಯೂರು ರಾಮಚಂದ್ರ ರಾವ್, ಪ್ರಮುಖರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು, ಧನಲಕ್ಷ್ಮೀ ಕ್ಯಾಶೂಸ್‌ನ ಶ್ರೀಪತಿ ಭಟ್, ಮಾವೆ ದಿನಕರ ಭಟ್, ಮಾಜಿ ಶಾಸಕರಾದ ಎ.ರುಕ್ಮಯ ಪೂಜಾರಿ, ಕೆ.ಪದ್ಮನಾಭ ಕೊಟ್ಟಾರಿ, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕಲ್ಲಡ್ಕ ಡಾ. ಪ್ರಭಾಕರ ಭಟ್, ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ಡಾ. ಶ್ಯಾಮ ಭಟ್ ಉಪಸ್ಥಿತರಿದ್ದರು. ಕದ್ರಿ ನವನೀತ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಬಂಟ್ವಾಳದ ರಂಗೇಲ್ ಪರಿಸರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಖಾಲಿ ಕೊಡಪಾನ, ಬಟ್ಟೆ ನೇತುಹಾಕಿ ಪ್ರತಿಭಟನೆ!

ಬಂಟ್ವಾಳ: ಇಲ್ಲಿನ ಪುರಸಭಾ ವ್ಯಾಪ್ತಿಯ ಕೌಡೇಲು ಮತ್ತು ರಂಗೇಲ್ ಪರಿಸರದ ನಾಗರಿಕರು ಕುಡಿಯುವ ನೀರಿಗಾಗಿ ಪುರಸಭಾ ಕಚೇರಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದರು.

ಪುರಸಭೆಯ ಮುಂಭಾಗದಲ್ಲಿ ಪ್ರತಿಭಟನಾಕಾರರು ಬಟ್ಟೆಗಳನ್ನು ನೇತಾಕಿ, ಖಾಲಿಕೊಡಪಾನಹಾಗೂಬಕೆಟ್‌ಗಳನ್ನಿರಿಸಿ ಪುರಸಭಾಧಿಕಾರಿಗಳಿಗೆ ಧಿಕ್ಕಾರ ಕೂಗಿದರು. ಸ್ಥಳೀಯ ನಿವಾಸಿ ಕಬೀರ್ ಅಹಮ್ಮದ್ ಅವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ಕೌಡೇಲು ಹಾಗೂ ರಂಗೇಲ್ ಭಾಗದ ನಿವಾಸಿಗಳಿಗೆ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗದೆ ತೊಂದರೆ ಅನುಭವಿಸುತ್ತಿದ್ದೇವೆ.ಈ ಭಾಗದ ಸದಸ್ಯರು ಮತ್ತು ಅಧಿಕಾರಿಗಳು ಯಾವುದೇ ಸ್ಪಂದನೆ ನಮ್ಮನ್ನು ಪ್ರತ್ಯೇಕವಾಗಿ ನೋಡುತ್ತಿದ್ದಾರೆ ಎಂದು ದೂರಿದರು.

ಈ ಸಮಸ್ಯೆಯ ಬಗ್ಗೆ ಪುರಸಭೆಗೆ ಲಿಖಿತವಾಗಿ ಮನವಿಗಳನ್ನು ನೀಡಿದ್ದಲ್ಲದೆ ಸಮಸ್ಯೆಯನ್ನು ವಿವರಿಸಿದರೂ ಈ ವರೆಗೆ ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚುನಾವಣಾ ಸಂದರ್ಭದಲ್ಲಿ ಮತಯಾಚಿಗೆ ಮನೆ ಬಾಗಿಲಿಗೆಬರುವರಾಜಕೀಯನಾಯಕರು ಕೂಡ ನೀರಿನ ಸಮಸ್ಯೆಯಿಂದ ನಾವು ತತ್ತರಿಸಿದರೂ ಕೇಳುಸೌಜನ್ಯವನ್ನುಮಾಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



> **ಸ್ಪಂದನೆಗೆ ಆಗ್ರಹ**
> ಬಂಟ್ವಾಳ ಪುರಸಭಾ ವ್ಯಾಪ್ತಿಯ ಕೌಡೇಲು ಮತ್ತು ರಂಗೇಲ್ ಪರಿಸರದಲ್ಲಿ ಹಲವು ಬಾರಿ ನೀರಿನ ಸಮಸ್ಯೆ ತಲೆದೋರಿದೆ. ಆದರೆ ಈ ವರೆಗೂ ಅಧಿಕಾರಿಗಳು ಸ್ಪಂದಿಸಿಲ್ಲ ಎಂಬ ಆರೋಪ ಕೇಳಿ ಬಂದಿದ್ದು ತುರ್ತು ಸ್ಪಂದನೆಗೆ ಆಗ್ರಹಿಸಿದ್ದಾರೆ.

ಪುರಸಭೆಯ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಅವರು ಪ್ರತಿಭಟನಾಕಾರರ ಜೊತೆ ಮಾತನಾಡಿ, ಪ್ರಾಜೆಕ್ಟ್ ನಡೆಯುತ್ತಿದ್ದರಿಂದ ಇಲ್ಲಿ ನೀರಿನ ಸಮಸ್ಯೆಯಾಗಿದ್ದು ತಾಂತ್ರಿಕ ತೊಂದರೆ ಇದೆ ಎಂದು ಸಮಜಾಯಿಷಿ ನೀಡಿದಾಗ ತಾಂತ್ರಿಕ ಸಮಸ್ಯೆಯ ಬಗ್ಗೆ ನಮಗೆ ಅಗತ್ಯವಿಲ್ಲ ನಮಗೆ ಕುಡಿಯಲು ನೀರು ಕೊಡಿ ಎಂದು ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಈ ಸಂದರ್ಭ ಕೆಲ ಹೊತ್ತು ಅಧಿಕಾರಿಗಳು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.ಆಗ ಬಂದೋಬಸ್ತಿನಲ್ಲಿದ್ದ ಪೊಲೀಸರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ತಿಳಿಯಾಗಿಸಿದರು. ಬಳಿಕ ಕಚೇರಿಯೊಳಗೆ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಹಾಗೂ ಪ್ರಮುಖರ ಜೊತೆಗೆ ಮಾತುಕತೆ ನಡೆಸಲಾಯಿತು. ಅಧಿಕಾರಿಗಳಿಂದ ಕುಡಿಯುವ ನೀರಿನ ಸಮಸ್ಯೆಯ ಪರಿಹಾರದ ಭರವಸೆ ಸಿಕ್ಕ ಬಳಿಕ ಪ್ರತಿಭಟನೆಯನ್ನು ಕೈಬಿಡಲಾಯಿತು.

ಹಲೇಜಿ-ತನ್ನೋಜಿ ಶ್ರೀ ಕ್ಷೇತ್ರದಲ್ಲಿ ಶೋಭಾಯಾತ್ರೆಗೆ ಚಾಲನೆ

ಕರಾಯ ದೇವಸ್ಥಾನಕ್ಕೆ ಬ್ರಹ್ಮರಥ ಸಮರ್ಪಣೆ



ಬೆಳ್ತಂಗಡಿ: 800 ನೂರು ವರ್ಷಗಳ ಇತಿಹಾಸವಿರುವ ಕರಾಯ ಗ್ರಾಮದ ಆರಾಧ್ಯಮೂರ್ತಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ನೂತನ ಬ್ರಹ್ಮರಥದ ಶೋಭಾಯಾತ್ರೆ ಏ.13 ರಂದು ಸೋಮವಾರ ಸಂಜೆ ನಡೆಯಿತು.

ಹಲೇಜಿ ಶ್ರೀ ತನ್ನೋಜಿ ಮಹಾಲಿಂಗೇಶ್ವರ ದೇವಸ್ಥಾನ ಬಳಿಯಿಂದ ವೈದಿಕ ವಿಧಿ ವಿಧಾನಗಳೊಂದಿಗೆ ಬ್ರಹ್ಮಕಲಶೋತ್ಸವದ ಗೌರವಾಧ್ಯಕ್ಷರಾದ ಶಾಸಕ ಹರೀಶ್ ಪೂಂಜ ಹಾಗೂ ನಾಗರಾಜನ್ ರಾವ್ ತೆಂಗಿನಕಾಯಿ ಒಡೆದು ಶೋಭಾಯಾತ್ರೆಗೆ ಚಾಲನೆ ನೀಡಿದರು.

ದಿ. ವಿಜಯ ಎನ್. ಬಂಗೇರ ಮತ್ತು ದಿ. ಕೆ. ನಾಣ್ಯಪ್ಪ ಬಂಗೇರ ಇವರ ಸ್ಮರಣಾರ್ಥವಾಗಿ ಮಕ್ಕಳ ಕೊಡುಗೆಯಾಗಿ ಬ್ರಹ್ಮರಥ ಅರ್ಪಿಸಲಾಯಿತು.

ಪೂರ್ಣಕುಂಭ ಸ್ವಾಗತ

ಪೂರ್ಣಕುಂಭಸ್ವಾಗತ, ವೀರಗಾಸೆ, ಕೇರಳ ಶೈಲಿಯ, ಡೊಳ್ಳು ಕುಣಿತ, ವಾಯಲಿನ್, ಚೆಂಡೆ, ಭಜನ ತಂಡ, ಕೀಲು ಕುದರೆ, ವಾದ್ಯಗೋಷ್ಠಿಯಲ್ಲಿ ರಥವನ್ನು ದೇವಸ್ಥಾನಕ್ಕೆ ವೈಭವಪೂರ್ಣವಾಗಿ ತರಲಾಯಿತು. ನೂರಾರು ಸಂಖ್ಯೆಯಲ್ಲಿ ಭಕ್ತರು ರಥದ ಜತೆಯಲ್ಲಿ ಹೆಜ್ಜೆ ಹಾಕಿದರು. ಅಲ್ಲಲ್ಲಿ ಬ್ರಹ್ಮರಥಕ್ಕೆ ಪುಷ್ಪಾರ್ಚನೆ ನಡೆಸಲಾಯಿತು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್.ಹಲೇಜ, ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಅನಂತಕೃಷ್ಣ ಕುದ್ದಣ್ಣಾಯ, ಧಾರ್ಮಿಕ ಪರಿಷತ್ ಸದಸ್ಯ ಯೋಗೀಶ್ ಕುಮಾರ್ ನಡಕ್ಕರ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಜಗದೀಶ್ ಶೆಟ್ಟಿ ಮೈರಾ ಹಾಗೂ ಜಯವಿಕ್ರಮ್ ಕಲ್ಲಾಪು, ಪ್ರಧಾನ ಕಾರ್ಯದರ್ಶಿ ದುರ್ಗೇಶ್ ವಿ. ಕೆದಿಲಾಯ, ಕೋಶಾಧಿಕಾರಿ ಸಮ್ರಾಟ್ ಕೆರ್ರ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುದರ್ಶನ್ ಸುಪ್ರಭಾತ ಕೊಲ್ಲಿ, ಉಪಾಧ್ಯಕ್ಷ ಯುವರಾಜ್ ಅನಾರು, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ, ತಣ್ಣೀರುಪಂತ ಪ್ಯಾಕ್ಸ್ ಅಧ್ಯಕ್ಷ ಜಯಾನಂದ ಕಲ್ಲಾಪು, ಉಪಾಧ್ಯಕ್ಷ ಸುನೀಲ್ ಅಣಾವು, ನಿರ್ದೇಶಕರಾದ ಸುರೇಶ್ ಎಚ್ ಎಲ್, ರೋಹಿತ್, ಪ್ರಮುಖರಾದ ಸುಧೀರ್ ಕೆ.ಎನ್., ಗುಣಾಕರ ಅಗ್ನಾಡಿ, ಪ್ರದೀಪ್ ಶೆಟ್ಟಿ ಯೋಗೀಶ್ ಪೂಜಾರಿ ಕಡ್ತಿಲ, ಪ್ರವೀಣ್ ಕುಪ್ಪೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

> **ಏ.15ರಿಂದ ಕಾರ್ಯಕ್ರಮ**
> ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜೀರ್ಣೋದ್ಧಾರ ಕಾರ್ಯಗಳು ಸುಮಾರು 3.5ಕೋಟಿ ರೂ.ವೆಚ್ಚದಲ್ಲಿ ನಡೆದಿದ್ದು, ಬ್ರಹ್ಮಕಲಶೋತ್ಸವ ಕ್ಷೇತ್ರದಲ್ಲಿ ಏ.15ರಿಂದ 25ರ ತನಕ ಸಂಭ್ರಮದ ಉತ್ಸವ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ರಾರ್ಯಕ್ರಮಗಳೊಂದಿಗೆ ನೆರವೇರಲಿದೆ

ಪ್ರಯತ್ನಶೀಲತೆಯಿಂದ ಮಾತ್ರ ಯಶಸ್ಸು: ಪ್ರೊ. ಹರೀಶ್ ಆಚಾರ್ಯ



ಕಟೀಲು: ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಹಣೆಬರಹ ಇದ್ದ ಹಾಗೆ ಆಗುತ್ತದೆಯೆಂದು ಕೈಕಟ್ಟಿ ಕೂರದೇ ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲಿ ಮಾತ್ರ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯ ಎಂದು ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹರೀಶ್ ಆಚಾರ್ಯ ಹೇಳಿದರು.

ಅವರು ಕಟೀಲು ಶ್ರೀ ದುರ್ಗಾ ಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಿರಣ್ ಕುಮಾರ್ ಶೆಟ್ಟಿಯವರು ಕಾಲೇಜಿಗೆ ಕೊಡುಗೆಯಾಗಿ ನೀಡಿದ ಹುಲ್ಲು ಕತ್ತರಿಸುವ ಯಂತ್ರವನ್ನು ಆಡಳಿತ ಮಂಡಳಿಯ ಪರವಾಗಿ ಕಟೀಲು ದೇವಳದ ಅನುವಂಶಿಕ ಅರ್ಚಕರಾದ ಸದಾನಂದ ಆಸ್ರಣ್ಣ ಸ್ವೀಕರಿಸಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ವೃಂದಾ ಶಶಿಧರ್ ಹೆಗ್ಡೆ ಪ್ರಾಂಶುಪಾಲ ಡಾ. ವಿಜಯ್ ವಿ., ಶಿಕ್ಷಕ ಪ್ರತಿನಿ ಡಾ. ಪದ್ಮನಾಭ ಮರಾಠೆ, ವಿದ್ಯಾರ್ಥಿ ಕ್ಷೇಮಪಾಲನಾಕಾರಿ ಅಶ್ವಿತಾ ವಿ. ಶೆಟ್ಟಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾರ್ತಿಕ್ ಎಸ್. ನಾಯ್ಕ್, ಉಪಾಧ್ಯಕ್ಷ ತರುಣ್ ಡಿ.ದೇವಾಡಿಗ, ಕಾರ್ಯದರ್ಶಿ ಕೃಪಾ ಟಿ. ಶೆಟ್ಟಿ ಮತ್ತು ಜತೆ ಕಾರ್ಯದರ್ಶಿ ಪ್ರಾರ್ಥನಾ ಉಪಸ್ಥಿತರಿದ್ದರು. ಉಪನ್ಯಾಸಕಿ ಪೂಜಾ ಕಾಂಚನ್ ಸ್ವಾಗತಿಸಿದರು. ಗ್ರಂಥಪಾಲಕಿ ಸುಮಿತ್ರಾ ಧನ್ಯವಾದ ಸಮರ್ಪಿಸಿದರು. ಪ್ರಜ್ಞಾ ಭಂಡಾರಿ ನಿರೂಪಿಸಿದರು.

ಏ.17ರಿಂದ ಬೆಂಗರೆ ಮಂದಿರದಲ್ಲಿ 'ಶತ ಸಂಭ್ರಮ' ವಿಶೇಷ ಕಾರ್ಯಕ್ರಮ

ಮಂಗಳೂರು: ಇಲ್ಲಿನ ಸ್ಯಾಂಡ್‌ಸ್ಪಿಟ್ ಬೆಂಗರೆಯಲ್ಲಿ 1926ರಲ್ಲಿ ಸ್ಥಾಪನೆಗೊಂಡ ಶ್ರೀ ವೀರ ಭಾರತಿ ರಾಮಾಂಜನೇಯ ಮಂದಿರ ಹಾಗೂ ಶ್ರೀ ವೀರ ಭಾರತಿ ವ್ಯಾಯಾಮ ಶಾಲೆ ಶತಮಾನೋತ್ಸವದ ಸಂಭ್ರಮದಲ್ಲಿದ್ದು, ಈ ಹಿನ್ನೆಲೆಯಲ್ಲಿ 'ಶತ ಸಂಭ್ರಮ' ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ಮಂದಿರದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶ್ರೀ ಸೀತಾರಾಮ ಲಕ್ಷ್ಮಣ ಹನುಮಾನ್ ಸಮೇತ ಪಟ್ಟಾಭಿರಾಮ ದೇವರ ನೂತನ ಬಿಂಬ ಪ್ರತಿಷ್ಠೆ ಮತ್ತು ಶ್ರೀ ವೀರ ಮಾರುತಿ ದೇವರ ಬಿಂಬ ಪುನಃಪ್ರತಿಷ್ಠೆ ಹಾಗೂ ನಾಗಶಿಲಾ ಪುನಃ ಪ್ರತಿಷ್ಠೆ ಏ.18ರಂದು ಬ್ರಹ್ಮಶ್ರೀ ಕುಡುಪು ಕೃಷ್ಣರಾಜ ತಂತ್ರಿಗಳ ಮಾರ್ಗದರ್ಶನದಲ್ಲಿ ನೆರವೇರಲಿದೆ ಎಂದು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಮೋಹನ್ ಬೆಂಗ್ರೆ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರ್ವ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಬ್ರಹ್ಮಶ್ರೀ ದೇರೆಬೈಲು ರಮೇಶ್ ತಂತ್ರಿ ಮತ್ತು ಬ್ರಹ್ಮಶ್ರೀ ದೇರೆಬೈಲು ಡಾ.ಶಿವಪ್ರಸಾದ್ ತಂತ್ರಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಏ.17ರಿಂದ 20ರ ವರೆಗೆ ನಡೆಯಲಿವೆ. ಏ.15ಕ್ಕೆ 3ಕ್ಕೆ ಸೀತಾರಾಮ ಲಕ್ಷ್ಮಣ ಹನುಮಾನ್ ಸಮೇತ ಪಟ್ಟಾಭಿರಾಮ ದೇವರ ನೂತನ ಪಂಚಲೋಹ ವಿಗ್ರಹದ ಮೆರವಣಿಗೆ ನಡೆಯಲಿದೆ ಎಂದವರು ತಿಳಿಸಿದರು.

ಏ.18ರ ಬೆಳಗ್ಗೆ ಬಿಂಬಗಳ ಪ್ರತಿಷ್ಠೆಯೊಂದಿಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ. 10 ಗಂಟೆಗೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಸ್ವಾಗತ ಗೋಪುರವನ್ನು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಶ್ಯಾಮಿಲಿ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕ ನಾಡೋಜ ಡಾ.ಜಿ.ಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕರು, ಸಂಸದರ ಸಹಿತ ಗಣ್ಯರು ಉಪಸ್ಥಿತರಿರುವರು.

ಮಧ್ಯಾಹ್ನ ಮಹಾಅನ್ನಸಂತರ್ಪಣೆ, ಭಕ್ತಿ ಗಾನ ಲಹರಿ, ಹರಿನಾಮ ಸಂಕೀರ್ತನೆ ನಡೆಯಲಿದ್ದು, ಸಂಜೆ 6ಕ್ಕೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಲಿರುವರು.ರಾತ್ರಿ 8.30ಕ್ಕೆ ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿವೆ ಎಂದು ಮೋಹನ್ ಬೆಂಗ್ರೆ ಮಾಹಿತಿ ನೀಡಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಚೇತನ್ ಬೆಂಗ್ರೆ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್, ಆಡಳಿತ ಮಂಡಳಿ ಅಧ್ಯಕ್ಷ ಆನಂದ ಅಮೀನ್,ತುಕಾರಾಮ್ ಉಪಸ್ಥಿತರಿದ್ದರು.

ಕಟೀಲು ಜಾತ್ರೆ: ಹೊರೆಕಾಣಿಕೆ ಸಮರ್ಪಣೆ, ಇಂದು ಧ್ವಜಾರೋಹಣ



ಕಟೀಲು: ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು (ಏ.14) ಧ್ವಜಾರೋಹಣದೊಂದಿಗೆ ಆರಂಭಗೊಳ್ಳಲಿರುವ ವರ್ಷಾವಧಿ ಉತ್ಸವಾಂಗ ಮಂಗಳವಾರ ಸಿತ್ಲ ಹಾಗೂ ಗಿಡಿಗೆರೆಗಳಿಂದ ಗ್ರಾಮಸ್ಥರು ಹೊರೆಕಾಣಿಕೆ ತಂದರು. ಉತ್ಸವಾಂಗ ಅನ್ನ ಪ್ರಸಾದಕ್ಕೆ ತರಕಾರಿ ಹೆಚ್ಚುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಜಾತ್ರೆ ಅಂಗವಾಗಿ ದೇವಳದಲ್ಲಿ ಅಂಕುರ ಬಲಿ ನಡೆದು ಅಂಕುರಾರೋಪಣ ನಡೆಯಿತು.

ಬಂಟ್ವಾಳ: ಇಂದು ಮಾರಿಪೂಜೆ

ಬಂಟ್ವಾಳ: ಇಲ್ಲಿನ ನಂದನಹಿತ್ಲು ಶ್ರೀ ವೈದ್ಯನಾಥ,ಅರಸು, ಜುಮಾದಿ ಬಂಟ ದೈವಸ್ಥಾನದಿಂದ ಆಚರಿಸಲಾಗುವ ವರ್ಷಾವಧಿ 'ಮಾರಿ ಪೂಜೆ' ಏ.14ಕ್ಕೆ ರಾತ್ರಿ ನಡೆಯಲಿದೆ ಎಂದು ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾತ್ರಿ 8.30ಕ್ಕೆ ಬಂಟ್ವಾಳ ಕಾಲೇಜು ರಸ್ತೆಯಿಂದ ಮಾರಿ ಗೊಂಬೆಯನ್ನು ಬಡ್ಡಕಟ್ಟೆಯ ನಿಗದಿತ ಸ್ಥಳಕ್ಕೆ ವಿವಿಧ ವಾದ್ಯಗೋಷ್ಠಿಯಲ್ಲಿ ತರಲಾಗುತ್ತದೆ. ಬಳಿಕ ಇಲ್ಲಿ ವಿವಿಧ ಪೂಜೆ ಸಹಿತ ವಿಧಿವಿಧಾನಗಳು ನಡೆಯಲಿದೆ.

ಆಳ್ವಾಸ್‌ನ ಕೃಷಿಸಿರಿ ವೇದಿಕೆಯಲ್ಲಿ 'ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು' ವಿಶೇಷ ಕಾರ್ಯಾಗಾರ | 700ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

ಜಾತಿ ವ್ಯವಸ್ಥೆ, ಅಪರಾಧ, ಭ್ರಷ್ಟಾಚಾರ ತಡೆಗೆ ವಕೀಲರ ಮಹತ್ತರ ಪಾತ್ರ: ಎಚ್.ಪಿ. ಸಂದೇಶ್

ಮೂಡುಬಿದಿರೆ: ಸಮಾಜದಲ್ಲಿ ನ್ಯಾಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಈ ಕರ್ತವ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ನೆರವೇರಿಸಲು ಸಾಧ್ಯವಾಗುವ ವೃತ್ತಿಗಳಲ್ಲಿ ವಕೀಲ ವೃತ್ತಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ವಕೀಲರು ಕೇವಲ ನ್ಯಾಯಾಲಯಗಳಲ್ಲಿ ವಾದ ಮಂಡಿಸುವವರಷ್ಟೇ ಅಲ್ಲ, ಅವರು ಸಮಾಜದ ನ್ಯಾಯದ ಕಾವಲುಗಾರರು, ಹಕ್ಕುಗಳ ರಕ್ಷಕರು ಮತ್ತು ಜನ ಸೇವೆಯ ನಿಜವಾದ ಪ್ರತಿನಿಧಿಗಳು ಎಂದು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ನುಡಿದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ



ಕಾನೂನು ವಿದ್ಯಾರ್ಥಿಗಳನ್ನು ಸಾಮಾಜಿಕ ನ್ಯಾಯದ ಪರಿವರ್ತನೆಗೆ ಪ್ರೇರಕ ಶಕ್ತಿಯಾಗಿಸುವ ಉದ್ದೇಶದಿಂದ 'ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು' ಎಂಬ ವಿಷಯದ ಮೇಲೆ ನಡೆದ ದ್ವಿತೀಯ ವಲಯ ಕಾರ್ಯಾಗಾರವನ್ನು ಆಳ್ವಾಸ್‌ನ ಕೃಷಿಸಿರಿ ವೇದಿಕೆಯಲ್ಲಿ ಉದ್ಘಾಟಿಸಿ ಮಾತನಾಡಿದರು.

ದೇಶವನ್ನು ಕಾಡುತ್ತಿರುವ ಜಾತಿ ವ್ಯವಸ್ಥೆ ಅಪರಾಧ ಹಾಗೂ ಭ್ರಷ್ಟಾಚಾರವನ್ನು ನಿವಾರಿಸಲು ಕಾನೂನು ವೃತ್ತಿಯವರು ಮಹತ್ವದ ಪಾತ್ರವಹಿಸಬೇಕು. ನ್ಯಾಯದ ಮಾರ್ಗದಲ್ಲಿ ನಿಷ್ಠೆಯಿಂದ ನಡೆಯುವುದು ಪ್ರತಿಯೊಬ್ಬ ವಕೀಲನ ಧರ್ಮ. ಜನರ ನೋವನ್ನು ಅರ್ಥಮಾಡಿಕೊಂಡಾಗ ಮಾತ್ರ ಕಪ್ಪು ಕೋಟ್ ಧರಿಸಿರುವುದಕ್ಕೆ ಸಾರ್ಥಕತೆ ಲಭಿಸುತ್ತದೆ ಎಂದರು.

> ಕಾನೂನು ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸೈನಿಕರಂತೆ ಕಾರ್ಯನಿರ್ವಹಿಸಬೇಕಿದೆ. ಆದ್ದರಿಂದ ಕೇವಲ ಪಾಠ್ಯ ಜ್ಞಾನವಷ್ಟೇ ಅಲ್ಲದೆ, ಇತಿಹಾಸದ ಅರಿವು, ವಿಮರ್ಶಾತ್ಮಕ ಚಿಂತನೆ ಹಾಗೂ ಪೂರ್ವಪರ ವಿಚಾರಗಳ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು. ಕಾನೂನು ಯಾವ ಸಂದರ್ಭಗಳಲ್ಲಿ, ಯಾವ ಸವಾಲುಗಳ ನಡುವೆ ರೂಪುಗೊಂಡಿತು ಎಂಬ ಅರಿವು ನಿಮ್ಮಲ್ಲಿ ಇದ್ದಾಗ ಮಾತ್ರ ನೀವು ಸಮರ್ಥ ಕಾನೂನು ವೃತ್ತಿಪರರಾಗಲು ಸಾಧ್ಯ.
> ● ಡಾ. ಎಂ. ಮೋಹನ ಆಳ್ವ

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಜಯಕರ ಶೆಟ್ಟಿ ಎಂ. ಮಾತನಾಡಿ, ಕಾನೂನು ವೃತ್ತಿ ಒಂದು ಮಹತ್ವದ ಮತ್ತು ಗೌರವಾನ್ವಿತ ಸೇವಾ ಕ್ಷೇತ್ರವಾಗಿದೆ. ಇಂದಿನ ದಿನಗಳಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅಭ್ಯಾಸ ಮಾಡಿದವರೂ ಸಹ ಕಾನೂನು ಶಿಕ್ಷಣದತ್ತ ಮುಖ ಮಾಡುತ್ತಿದ್ದಾರೆ. ಬದುಕನ್ನು ಸಮರ್ಪಕವಾಗಿ ಸಾಗಿಸಲು ಕಾನೂನಿನ ಜ್ಞಾನ ಅತ್ಯಂತ ಅಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಕಾನೂನು ಇಲ್ಲದೆ ಸಮಾಜದ ವ್ಯವಸ್ಥಿತ ಬದುಕು ಸಾಧ್ಯವಿಲ್ಲ, ಆದ್ದರಿಂದ ಎಲ್ಲಾ ಕ್ಷೇತ್ರಗಳಲ್ಲಿಯೂ ಜ್ಞಾನವನ್ನು ವಿಸ್ತರಿಸಿಕೊಂಡು, ಸಮಗ್ರ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಅವರು ಸಲಹೆ ನೀಡಿದರು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಸಿ. ಬಸವರಾಜು, ಮೂಡುಬಿದಿರೆ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಮಧುಕರ್ ಪಿ. ಭಾಗವತ್, ಪ್ರಾಚಾರ್ಯ ಡಾ ಮಹಾಂತೇಶ್ ಜಿಎಸ್ ಇದ್ದರು. ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಸವರಾಜ್ ಸ್ವಾಗತಿಸಿ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನಿಸಾ ವಂದಿಸಿ, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಸದಸ್ಯ ಕಾರ್ಯದರ್ಶಿ, ಎಚ್. ಶಶಿಧರ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪನ್ಯಾಸಕ ವೇಣುಗೋಪಾಲ ನಿರ್ವಹಿಸಿದರು. ಕರ್ನಾಟಕದ ವಿವಿಧ ಕಾನೂನು ಕಾಲೇಜುಗಳಿಂದ 700ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸುತ್ತ ಮುತ್ತ

ಕಾರ್ಮಿಕರಿಗೆ ನೆರವಾಗಲು ಮನವಿ



ಬೆಳ್ತಂಗಡಿ: ಸೇವಾ ಭಾರತಿ ಕನ್ಯಾಡಿ ಇದರ ವತಿಯಿಂದ ಕರ್ನಾಟಕ ಸರಕಾರದ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಮಿಕ ಆಯುಕ್ತರಾದ ಎಸ್.ಬಿ ರವಿಕುಮಾರ್ ಅವರನ್ನು ಭೇಟಿ ಮಾಡಿ ಅಸಂಘಟಿತ ಕಾರ್ಮಿಕರಲ್ಲಿ ಪ್ರಾಮುಖ್ಯವಾಗಿ ಕೃಷಿ ಕಾರ್ಮಿಕರು ಕೃಷಿ ಕೆಲಸಗಳಲ್ಲಿ ಎತ್ತರದಿಂದ ಬಿದ್ದು ಮಲಗಿದ ಪರಿಸ್ಥಿತಿಯಲ್ಲಿದ್ದವರ ಜೀವನಕ್ಕೆ ಸಹಕಾರಿಯಾಗುವ ಯೋಜನೆಗಳನ್ನು ಅಸಂಘಟಿತ ಮಂಡಳಿಯಲ್ಲಿ ಕೈಗೊಳ್ಳುವಂತೆ ಹಾಗೂ ಈಗಾಗಲೇ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಸೇವಾ ಭಾರತಿ ಕೈಗೊಂಡಿರುವ ಕಾರ್ಯ ಚಟುವಟಿಕೆಗಳನ್ನು ವಿವರಿಸಿ ಬೆನ್ನುಹುರಿ ಮುರಿತಕ್ಕೊಳಗಾದ ಸಮಗ್ರ ಜೀವನ ಅಧ್ಯಯನದ ವರದಿಯನ್ನು ಸಲ್ಲಿಸಲಾಯಿತು. ಈ ಸಂದರ್ಭ ಉಪಕಾರ್ಮಿಕ ಆಯುಕ್ತರಾದ ಎ.ಸಿ ತಮ್ಮಣ್ಣ ಉಪಸ್ಥಿತರಿದ್ದರು ಸೇವಾ ಭಾರತಿಯ ಖಜಾಂಚಿ ಎ.ಜೈ ರಾಜ್ ಸಾಲಿಯಾನ್ ಕಾನರ್ಪ ಅಧಿಕಾರಿಗಳನ್ನು ಭೇಟಿ ಮಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ಪ್ರಕ್ರಿಯೆ ಸ್ಥಗಿತ

ಉಡುಪಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026–2031ನೇ ಸಾಲಿನ ಚುನಾವಣೆಗೆ ಚುನಾವಣಾಧಿಕಾರಿ ಅಧಿಸೂಚನೆ ಹೊರಡಿಸಿದ್ದಾರೆ. ಆದರೆ, ತಾಂತ್ರಿಕ ಕಾರಣದಿಂದಾಗಿ ಉಡುಪಿ ಜಿಲ್ಲಾ ಸಂಘದ ಚುನಾವಣೆ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಜಿಲ್ಲಾಧ್ಯಕ್ಷ ಕೆ.ದಿನಕರ್ ಶೆಟ್ಟಿ ಅಂಪಾರು ತಿಳಿಸಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಏ.11ರಿಂದ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಬೇಕಿತ್ತು. ಆದರೆ, ಶಿಕ್ಷಕರ ಸಂಘದ ಕೇಂದ್ರ ಸಮಿತಿಯು ಫೆಬ್ರವರಿ ತಿಂಗಳಲ್ಲಿ ನಡೆದಿದ್ದ ರಾಜ್ಯ ಮಟ್ಟದ ಧನ್ಯತಾ ಸಮಾವೇಶಕ್ಕೆ ಜಿಲ್ಲೆಯ ಶಿಕ್ಷಕರಿಂದ ಹಣ ವಸೂಲಿ ಮಾಡಿತ್ತು. ಅದನ್ನು ರಾಜ್ಯಸಂಘಕ್ಕೆ ನೀಡದ್ದರಿಂದ ಉಡುಪಿ ಜಿಲ್ಲೆಯ ಮತದಾರರ ಪಟ್ಟಿಗೆ ಅನುಮೋದನೆ ನೀಡಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 4 ವರ್ಷದಿಂದ ಉಡುಪಿ ಜಿಲ್ಲೆಯ ಮತ್ತು ತಾಲೂಕು ಶಾಖೆಗಳಿಗೆ ಶಿಕ್ಷಕರ ಸದಸ್ಯತ್ವ ಶುಲ್ಕದ ಮೊತ್ತದ ಪಾಲು ಪಾವತಿ ಮಾಡಿಲ್ಲ, ನಾನು ಮತ್ತೆ ಕೇಂದ್ರ ಸಮಿತಿಯ ಚುನಾವಣೆಯಲ್ಲಿ ಭಾಗವಹಿಸಬಾರದು ಎಂಬ ಕಾರಣಕ್ಕಾಗಿ ಜಿಲ್ಲೆಯ ಎಲ್ಲ ತಾಲೂಕುಗಳ ಮತದಾರ ಪಟ್ಟಿ ಮತ್ತು ಚುನಾವಣಾ ಅಧಿ ಕಾರಿಗಳ ನೇಮಕ ಪ್ರಕ್ರಿಯೆಗೂ ಅನುಮೋದನೆ ನೀಡಿಲ್ಲ. ಜಿಲ್ಲೆಯ ಇನ್ನಿತರ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಜಿಲ್ಲೆಯ ಸಮಸ್ತ ನೌಕರರು, ಶಿಕ್ಷಕರಿಗಿರುವ ಸಮಸ್ಯೆಗಳಿಗೆ ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಸ್ಪಂದಿಸುತ್ತಿದ್ದೇನೆ. ಹೀಗಾಗಿ ಕೇಂದ್ರ ಸಮಿತಿಯು ಜಿಲ್ಲಾ ಸಂಘದ ಚುನಾವಣಾ ಪ್ರಕ್ರಿಯೆ ಸ್ಥಗಿತಗೊಳಿಸಿದೆ ಎಂದು ದಿನಕರ್ ಶೆಟ್ಟಿ ಆರೋಪಿಸಿದ್ದಾರೆ.

ಏ.16ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಬಂಟ್ಸ್ ಹಾಸ್ಟೆಲ್, ವುಡ್‌ಲ್ಯಾಂಡ್, ಗೋಲ್ಡ್‌ಫಿಂಚ್, ಜ್ಯೋತಿ ಟಾಕೀಸ್, ಲೈಟ್ ಹೌಸ್ ಹಿಲ್, ಲೇಡಿಸ್ ಕ್ಲಬ್, ಸೈಂಟ್ ಅಲೋಶಿಯಸ್ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.16ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕಾಟಿಪಳ್ಳ ಪ್ರದೇಶ

ಕಾನ, ಕಟ್ಲ ಜನತಾ ಕಾಲೊನಿ, ಸುರತ್ಕಲ್, ಗುಡ್ಡೆಕೊಪ್ಲ, ಹೊಸಬೆಟ್ಟು ತಡಂಬೈಲ್, ಪೆಡ್ಡಿಯಂಗಡಿ, 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, 4ನೇ ಬ್ಲಾಕ್, 5ನೇ ಬ್ಲಾಕ್, 7ನೇ ಬ್ಲಾಕ್, ಆಶ್ರಯ ಕಾಲೊನಿ, ಬಾಳ, ಎಂ.ಆರ್.ಪಿ.ಎಲ್ ಕಾರ್ಗೋ ಗೇಟ್, ಕೈಕಂಬ, ಮಂಗಳಪೇಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.16ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಪರಿಶಿಷ್ಟ ಪಂಗಡಗಳ ಕಾಲನಿ ಅಭಿವೃದ್ಧಿಗೆ 1 ಕೋ.ರೂ. ಅನುದಾನ

ಪುತ್ತೂರು: ಕ್ಷೇತ್ರ ವ್ಯಾಪ್ತಿಯ ಪರಿಶಿಷ್ಟ ಪಂಗಡದ ಕಾಲನಿ ಅಭಿವೃದ್ಧಿಗೆ 1 ಕೋ.ರೂ. ಅನುದಾನ ಮಂಜೂರಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಕ್ಷೇತ್ರ ವ್ಯಾಪಿಯ ಒಳಮೊಗ್ರು ಗ್ರಾಮದ ಮುಡಾಲದಿಂದ ಅರಿಯಡ್ಕ ಗ್ರಾಮದ ಮಾಯಿಲಕೊಚ್ಚಿ ಬೈರಮೂಲೆ ಪ. ಪಂಗಡದ ಕಾಲನಿ ಸಂಪರ್ಕ ರಸ್ತೆ ಅಭಿವೃದ್ಧಿಗೆ 20 ಲಕ್ಷ, ಕೊಳ್ತಿಗೆ ಗ್ರಾಮದ ಸರಸ್ವತಿಮೂಲೆ- ಸುತ್ತುಕೋಟೆ ಪಂಜಿಕೊಡೇಲು, ಮಣಿಕ್ಕಾರ, ಪ. ಪಂಗಡದ ಕಾಲನಿ ಸಂಪರ್ಕ ರಸ್ತೆ ಅಭಿವೃದ್ಧಿಗೆ 15 ಲಕ್ಷ, ಪಾಣಾಜೆ ಗ್ರಾಮದ ಕೊಂದಲ್ಕಾನ – ನೀರಮೂಲೆ- ವಡ್ಯ ಪರಿಶಿಷ್ಟ ಪಂಗಡದ ಕಾಲನಿ ಸಂಪರ್ಕ ರಸ್ತೆ ಅಭಿವೃದ್ಧಿಗೆ 15 ಲಕ್ಷ, ಬಲ್ನಾಡು ಗ್ರಾಮದ ನೀರುಕುಕ್ಕು ಪರಿಶಿಷ್ಟ ಪಂಗಡದ ಕಾಲನಿ ಸಂಪರ್ಕ ರಸ್ತೆ ಅಭಿವೃದ್ಧಿಗೆ 10 ಲಕ್ಷ, ಅರಿಯಡ್ಕ ಗ್ರಾಮದ ಕೌಡಿಚ್ಚಾರ್–ಅಕಾಯಿ ಗುಂಡ್ಯಡ್ಕ–ಮಾಯಿಲಕೊಚ್ಚಿ– ದರ್ಬೆತ್ತಡ್ಕ ಪ. ಪಂಗಡ ಕಾಲನಿ ರಸ್ತೆ ಅಭಿವೃದ್ಧಿಗೆ 15 ಲಕ್ಷ, ಅಳಿಕೆ ಗ್ರಾಮದ ಆದಾಳದಿಂದ ಬಿಟ್ಟಿಮೂಲೆ ಪ. ಪಂಗಡದ ಕಾಲನಿ ಸಂಪರ್ಕ ರಸ್ತೆ ಅಭಿವೃದ್ಧಿಗೆ 15 ಲಕ್ಷ, ಪುಣಚ ಗ್ರಾಮದ ಮಾಲೆತ್ತಡ್ಕ ಬಳಿಯ ಪರಿಶಿಷ್ಟ ಕಾಲನಿ ರಸ್ತೆ ಅಭಿವೃದ್ಧಿಗೆ 10 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಡಿಂಬಾಡಿ ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟಡದ ಮೇಲ್ಮಾವಣಿ ಉದ್ಘಾಟನೆ | ಅಶೋಕ್ ಭರವಸೆ

ಬೆಳ್ಳಿಪ್ಪಾಡಿ ಗ್ರಾಮದಲ್ಲಿಯೇ ಕೆಎಂಎಫ್ ಫ್ಯಾಕ್ಟರಿ ನಿರ್ಮಾಣ

ಪುತ್ತೂರು: ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೆಳ್ಳಿಪ್ಪಾಡಿ ಗ್ರಾಮದಲ್ಲಿ ಕೆಎಂಎಫ್ ಫ್ಯಾಕ್ಟರಿ ನಿರ್ಮಾಣ ಮಾಡಲು ಈಗಾಗಲೇ 10 ಎಕ್ರೆ ಜಾಗವನ್ನು ನಿಗದಿಪಡಿಸಲಾಗಿದ್ದು ಅದೇ ಜಾಗದಲ್ಲಿ ಫ್ಯಾಕ್ಟರಿ ನಿರ್ಮಾಣವಾಗಬೇಕು. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಿದರೆ ನಾನು ಸುಮ್ಮನೆ ಕೂರುವುದಿಲ್ಲ ಎಂದು ಪುತ್ತೂರು ಶಾಸಕ ಅಶೋಕ್ ರೈ ಹೇಳಿದ್ದಾರೆ.

ಅವರು ಕೋಡಿಂಬಾಡಿ ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟಡದ ಮೇಲ್ಮಾವಣಿ ಉದ್ಘಾಟಿಸಿ, ಮಾತನಾಡಿದರು.

ಈಗಾಗಲೇ 10 ಎಕ್ರೆ ಸರಕಾರಿ ಸ್ಥಳವನ್ನು ರೂ. 40 ಲಕ್ಷ ಸರಕಾರಿ ದರದಲ್ಲಿ ಮಂಜೂರು ಮಾಡಲಾಗಿದೆ. ಜಾಗ ಸಾಕಾಗದೆ ಇದ್ದಲ್ಲಿ ಇನ್ನೂ 7 ಎಕ್ರೆ ಕೊಡಿಸಲು ಸಿದ್ದವಾಗಿದ್ದೇನೆ. ನಮ್ಮ ಪುತ್ತೂರಿನಲ್ಲಿ ಕೆಎಂಎಫ್ ಫ್ಯಾಕ್ಟರಿ ನಿರ್ಮಾಣವಾಗಬೇಕೆಂದು ನಾನು ಈ ಬಗ್ಗೆ ಸರಕಾರದ ಗಮನಕ್ಕೂ ತಂದು ಜಾಗ ಮಂಜೂರು ಮಾಡಿಸಿದ್ದೇನೆ. ಆದರೆ ಕೆಲವರು ಪುತ್ತೂರು ಬಿಟ್ಟು ಬೇರೆ ಕಡೆ ಫ್ಯಾಕ್ಟರಿ ನಿರ್ಮಾಣ ಮಾಡುವ ಹುನ್ನಾರ ನಡೆಸುತ್ತಿರುವುದು, ನನ್ನ ಗಮನಕ್ಕೆ ಬಂದಿದ್ದು ನಾನು ಶಾಸಕನಾಗಿರುವಷ್ಟು ಕಾಲ ಪುತ್ತೂರು ಬಿಟ್ಟು ಬೇರೆ ಕಡೆ ನಿರ್ಮಾಣ ಮಾಡಲು ಬಿಡುವುದೇ ಇಲ್ಲ. ನನ್ನಿಂದಾಗುವ ಪ್ರಯತ್ನವನ್ನು ಮಾಡಿ ನಾನು ಅದನ್ನು ತಡೆಯುವ ಕೆಲಸ ಮಾಡಿಯೇ ಮಾಡುತ್ತೇನೆ ಎಂದು ಶಾಸಕರು ಎಚ್ಚರಿಕೆ ನೀಡಿದ್ದಾರೆ.

ಪುತ್ತೂರಿನಲ್ಲಿ ಕೆಎಂಎಫ್ ಫ್ಯಾಕ್ಟರಿ ನಿರ್ಮಾಣವಾದಲ್ಲಿ ಇಲ್ಲಿನ ಜನರಿಗೆ ಉದ್ಯೋಗ ದೊರೆಯುತ್ತದೆ. ಪುತ್ತೂರು ಒಂದಿಷ್ಟು ಅಭಿವೃದ್ಧಿಯಾಗುತ್ತದೆ. ಸುಳ್ಯ, ಕಡಬ, ಬೆಳ್ತಂಗಡಿ ಭಾಗದಲ್ಲಿ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ಅದನ್ನು ಮಂಗಳೂರಿಗೆ ಕೊಂಡೊಯ್ದು ಅಲ್ಲಿ ಬಾಟ್ಲಿಂಗ್ ಮಾಡುವ ಬದಲು ಪುತ್ತೂರಿನಲ್ಲೇ ಮಾಡಿದಲ್ಲಿ ಸಂಸ್ಥೆಗೆ ಹೆಚ್ಚಿನ ಲಾಭ ದೊರೆಯಲಿದೆ. ಯುವಕ ಜನತೆಗೆ ಉದ್ಯೋಗ ಸೃಷ್ಟಿಯೇ ಮುಖ್ಯ ಉದ್ದೇಶವಾಗಿದೆ.

ಹತ್ತು ಎಕ್ರೆ ಜಾಗ 40 ಲಕ್ಷಕ್ಕೆ ಸರಕಾರ ನೀಡಿದರೂ ಅದನ್ನು ಬೇಡ ಎಂದು ತಿರಸ್ಕಾರ ಮಾಡುವ ಹುನ್ನಾರದ ಹಿಂದೆ ಯಾರಿದ್ದಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ಕಡಿಮೆ ಕ್ರಯದ ಜಾಗವನ್ನು ಬಿಟ್ಟು ಬೇರೆ ಕಡೆ ದುಬಾರಿ ಬೆಲೆಗೆ ಖಾಸಗಿ ಜಾಗವನ್ನು ಖರೀದಿ ಮಾಡುವ ಪ್ರಯತ್ನ ಇರುವುದಾದರೆ ಇದರ ಹಿಂದೆ ಏನಿದೆ ಎಂಬುದು ಸಾಧಾರಣ ಜನರಿಗೂ ತಿಳಿಯುತ್ತದೆ. ನಾನು ಶಾಸಕನಾಗಿರುವ ತನಕ ಆ ಕೆಲಸ ಮಾಡಲು ಬಿಡುವ ಪ್ರಶ್ನೆಯೇ ಇಲ್ಲ ಎಂದು ಶಾಸಕರು ಹೇಳಿದರು.

ಕೋಡಿಂಬಾಡಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಜಗನ್ನಾಥ ಶೆಟ್ಟಿ ನಡುಮನೆ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘದ ನಿರ್ದೇಶಕ ಚಂದ್ರಶೇಖರ ರಾವ್, ವ್ಯವಸ್ಥಾಪಕ ಡಾ. ರವಿರಾಜ ಉಡುಪ, ಉಪ ವ್ಯವಸ್ಥಾಪಕ ಡಾ.ಡಿ.ಆರ್. ಸತೀಶ್ ರಾವ್, ವಿಸ್ತರಣಾಧಿಕಾರಿ ವಿದ್ಯಾ ಬಿ.ವಿ, ಮಾಲತಿ ಉಪಸ್ಥಿತರಿದ್ದರು.



ಪುತ್ತೂರಿನಲ್ಲಿ ಮಾಡದಿದ್ದಲ್ಲಿ ಧರಣಿ

ಕೆಎಂಎಫ್ ಫ್ಯಾಕ್ಟರಿ ನಿರ್ಮಾಣಕ್ಕೆ ಶಾಸಕ ಅಶೋಕ್ ರೈ ಅವರ ಪ್ರಯತ್ನದ ಫಲವಾಗಿ 10 ಎಕ್ರೆ ಮತ್ತು ಇನ್ನೂ ಹೆಚ್ಚುವರಿಯಾಗಿ 7 ಎಕ್ರೆ ಜಾಗವನ್ನು ಮಂಜೂರು ಮಾಡಿದ್ದಾರೆ. ಇದರ ನಡುವೆ ಸ್ಥಳ ಬದಲಾವಣೆಗೆ ಕೆಲವರು ಹುನ್ನಾರ ನಡೆಸಿದ್ದು ನನ್ನ ಗಮನಕ್ಕೆ ಬಂದಿದೆ. ಎಲ್ಲಿಯಾದರೂ ಸ್ಥಳ ಬದಲಾವಣೆಗೆ ಯತ್ನ ಮಾಡಿದರೆ ನಾವು ಧರಣಿ ನಡೆಸಿ ಇಲ್ಲೇ ಉಳಿಸಿಕೊಳ್ಳುತ್ತೇವೆ. ಯಾವ ಬೆಲೆ ತೆತ್ತಾದರೂ ನಾವು ಆ ಕೆಲಸವನ್ನು ಮಾಡುತ್ತೇವೆ. ಶಾಸಕರು ನಮ್ಮ ಜೊತೆ ಇರುವಾಗ ನಮಗೆ ಆನೆಬಲ ಬಂದಂತಾಗಿದೆ. ಪುತ್ತೂರಿನಲ್ಲೇ ಫ್ಯಾಕ್ಟರಿ ನಿರ್ಮಾಣ ಮಾಡುವ ಮೂಲಕ ಇಲ್ಲಿನ ಜನರಿಗೆ ಉದ್ಯೋಗದ ಜೊತೆ ಎಲ್ಲಾ ಸೌಲಭ್ಯಗಳೂ ಪುತ್ತೂರಿನಲ್ಲೇ ದೊರೆಯುವಂತಾಗಬೇಕು ಎಂದು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಎಸ್.ಬಿ. ಜಯರಾಮ ರೈ ಹೇಳಿದರು.

ಉಚಿತ ಬ್ರಿಡ್ಜ್ ಕೋರ್ಸ್, ಸ್ಪೋಕನ್ ಇಂಗ್ಲಿಷ್ ತರಗತಿಗಳ ಆರಂಭ

ಏ.15ರಿಂದ ಅಕ್ಷಯ ಕಾಲೇಜಿನಲ್ಲಿ ವಿಶೇಷ ತರಗತಿ

ಪುತ್ತೂರು: ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಹಾಗೂ ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಅಕ್ಷಯ ಪಿಯು ಕಾಲೇಜು ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಸಂಸ್ಥೆಯ ವತಿಯಿಂದ ಉಚಿತ ಬ್ರಿಡ್ಜ್ ಕೋರ್ಸ್ ಮತ್ತು ಉಚಿತ ಸ್ಪೋಕನ್ ಇಂಗ್ಲಿಷ್ ಕ್ಲಾಸ್ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ಈ ಕೋರ್ಸ್‌ಗಳು ಏ.15ರಿಂದ ಅಧಿಕೃತವಾಗಿ ಆರಂಭವಾಗಲಿವೆ.

ಇಂಗ್ಲಿಷ್ ಸಂವಹನ ಕೌಶಲ್ಯ ವೃದ್ಧಿ

ಈ ಬ್ರಿಡ್ಜ್ ಕೋರ್ಸ್‌ಗಳು ವಿವಿಧ ಹಂತದ ವಿದ್ಯಾರ್ಥಿಗಳಿಗೆ ವಿನ್ಯಾಸಗೊಳಿಸಲಾಗಿದೆ. 9ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 10ನೇ ತರಗತಿ ಬ್ರಿಡ್ಜ್ ಕೋರ್ಸ್, 10ನೇ ತರಗತಿ ಉತ್ತೀರ್ಣರಾದವರಿಗೆ ಪ್ರಥಮ ಪಿಯುಸಿ ಬ್ರಿಡ್ಜ್ ಕೋರ್ಸ್ ಹಾಗೂ ಪ್ರಥಮ ಪಿಯುಸಿ ಉತ್ತೀರ್ಣರಾದವರಿಗೆ ದ್ವಿತೀಯ ಪಿಯುಸಿಯನ್ನು ವ್ಯವಸ್ಥೆ ಮಾಡಲಾಗಿದೆ. ಇದರ ಮೂಲಕ ವಿದ್ಯಾರ್ಥಿಗಳಿಗೆ ಮುಂದಿನ ಹಂತದ ಪಠ್ಯಕ್ರಮವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗಲಿದೆ. ಇದಕ್ಕೆ ಜೊತೆಗೆ, ಇಂದಿನ ಕಾಲದಲ್ಲಿ ಅತ್ಯಂತ ಮುಖ್ಯವಾಗಿರುವ ಇಂಗ್ಲಿಷ್ ಸಂವಹನ ಕೌಶಲ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಉಚಿತ ಸ್ಪೋಕನ್ ಇಂಗ್ಲಿಷ್ ತರಗತಿಗಳನ್ನೂ ಏರ್ಪಡಿಸಲಾಗಿದೆ. ಈ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಮಾತನಾಡುವ, ಕೇಳುವ ಹಾಗೂ ಪ್ರಸ್ತುತಪಡಿಸುವ ಕೌಶಲ್ಯಗಳನ್ನು ತರಬೇತಿ ನೀಡಲಾಗುತ್ತದೆ. ಇದು ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಭವಿಷ್ಯದ ಉದ್ಯೋಗ ಹಾಗೂ ಉನ್ನತ ಶಿಕ್ಷಣದ ಅವಕಾಶಗಳಿಗೆ ಸಹಕಾರಿಯಾಗಲಿದೆ.

ವಿಶೇಷ ಕೋಚಿಂಗ್

ಅಕ್ಷಯ ಎಜ್ಯುಕೇಶನಲ್ ಎಂಡ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಿರ್ವಹಿಸಲ್ಪಡುವ ಅಕ್ಷಯ ಪಿಯು ಕಾಲೇಜ್, ಈಗಾಗಲೇ ಉತ್ತಮ ಶೈಕ್ಷಣಿಕ ಫಲಿತಾಂಶಗಳ ಮೂಲಕ ತನ್ನದೇ ಆದ ಗುರುತನ್ನು ಪಡೆದಿದೆ. 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶವೂ ಈಗಾಗಲೇ ಆರಂಭವಾಗಿದ್ದು, ವಿಜ್ಞಾನ (ಪಿಸಿಎಂಬಿ, ಪಿಸಿಎಂಸಿ) ಮತ್ತು ವಾಣಿಜ್ಯ (ಎಬಿಎಸ್, ಇಬಿಎಸ್) ವಿಭಾಗಗಳಲ್ಲಿ ತರಗತಿಗಳು ಲಭ್ಯವಿವೆ. ಇದಲ್ಲದೆ, ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಐಐಟಿ ಜೆಇಇ, ನೀಟ್, ಕೆಸಿಇಟಿ ಹಾಗೂ ಸಿಎ ಫೌಂಡೇಶನ್ ತರಬೇತಿಗೂ ವಿಶೇಷ ಕೋಚಿಂಗ್ ವ್ಯವಸ್ಥೆಯನ್ನು ಕಾಲೇಜು ಒದಗಿಸಿದೆ. ಅನುಭವಸಂಪನ್ನ ಉಪನ್ಯಾಸಕರು ಹಾಗೂ ಸಮಗ್ರ ತರಬೇತಿ ವಿಧಾನಗಳ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಲಾಗುತ್ತಿದೆ.



ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ವಿದ್ಯಾರ್ಥಿಗಳು ಈ ಉಚಿತ ಅವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ತಮ್ಮ ಶೈಕ್ಷಣಿಕ ಹಾಗೂ ವ್ಯಕ್ತಿತ್ವ ವಿಕಾಸದಲ್ಲಿ ಮುಂದುವರಿಯಬೇಕು.

ಪೋಷಕರೂ ತಮ್ಮ ಮಕ್ಕಳನ್ನು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು ಎಂದು ಕಾಲೇಜ್ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 7975719385 / 8088381678 / 9980987212

ಯೆಯ್ಯಾಡಿ ಜಿಲ್ಲಾ ಸಣ್ಣ ಕೈಗಾರಿಕಾ ಸಂಘದಲ್ಲಿ 6 ದಿನಗಳ ತರಬೇತಿ ಶಿಬಿರ

ರಫ್ತು ವಲಯದ ಹಲವು ವಿಚಾರಗಳ ಬಗ್ಗೆ ಮಾಹಿತಿ

ಮಂಗಳೂರು: ಭಾರತ ಸರಕಾರದ RAMP ಯೋಜನೆಯಡಿ ವಿಟಿಪಿಸಿ ಬೆಂಗಳೂರು ವತಿಯಿಂದ 140ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮದ ಉದ್ಘಾಟನೆಯು ಯೆಯ್ಯಾಡಿ ಜಿಲ್ಲಾ ಸಣ್ಣ ಕೈಗಾರಿಕಾ ಸಂಘದಲ್ಲಿ ಇತ್ತೀಚೆಗೆ ಜರುಗಿತು.

ಜಿಲ್ಲಾ ಸಣ್ಣ ಕೈಗಾರಿಕಾ ಸಂಘದ ಅಧ್ಯಕ್ಷೆ ಕುಸುಮಾ ದೇವಾಡಿಗ 6 ದಿನಗಳ ತರಬೇತಿ ಶಿಬಿರಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಬೈಕಂಪಾಡಿ ಕೆನರಾ ಕೈಗಾರಿಕಾ ಸಂಘದ ಎಂ.ಡಿ ಪೂಜಾರಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ, ಹಿರಿಯ ರಫ್ತು ಸಲಹೆಗಾರರಾದ ಅರವಿಂದ ಭಟ್ ಭಾಗವಹಿಸಿದರು. ಬೆಂಗಳೂರು ಕಚೇರಿಯ ಜಂಟಿ ನಿರ್ದೇಶಕ ಸಿ.ಎಸ್. ಬಾಬು ನಾಗೇಶ ಅವರು ಅಧ್ಯಕ್ಷತೆ ವಹಿಸಿದ್ದರು. ರಫ್ತು ಸೌಲಭ್ಯ ಕೇಂದ್ರ ಮಂಗಳೂರು ವಿಭಾಗದ ಉಪ ನಿರ್ದೇಶಕ ಮಂಜುನಾಥ್ ಹೆಗಡೆ ಸ್ವಾಗತಿಸಿ, ಎಂ.ಎಸ್. ಅನಿಲ್ ಕುಮಾರ್ ನಿರೂಪಿಸಿದರು.

ರಫ್ತು ವ್ಯವಹಾರ ಪ್ರಾರಂಭಿ ಸಲಿಚ್ಛಿಸುವವರು, ಹಾಲಿ ರಫ್ತುದಾರರು, ವ್ಯಾಪಾರ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ನಿರತರಾದವರು, ರಫ್ತು ಚಟುವಟಿಕೆಯಲ್ಲಿ ಪಾಲ್ಗೊಳ್ಳಲಿಚ್ಛಿಸುವ ಉದ್ದಿಮೆದಾರರು ಹಾಗೂ ರಫ್ತು ವ್ಯವಹಾರ ಕುರಿತು ಬೋಧನೆಯಲ್ಲಿ ನಿರತವಾಗಿರುವ ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರಫ್ತು ವ್ಯವಹಾರದಲ್ಲಿ ಆಸಕ್ತಿ ಹೊಂದಿದ ವಿದ್ಯಾರ್ಥಿಗಳಿಗೆ ಈ ತರಬೇತಿ ಕಾರ್ಯಕ್ರಮವು ಅತ್ಯಂತ ಉಪಯೋಗಕಾರಿಯಾಗಿದ್ದು 6 ದಿನಗಳ ಈ ತರಬೇತಿ ಕಾರ್ಯಕ್ರಮವು ಅಂತರಾಷ್ಟ್ರೀಯ ರಫ್ತು ವ್ಯವಹಾರದ ಮಾಹಿತಿಯನ್ನು ನೀಡುವ ಉದ್ದೇಶವನ್ನು ಹೊಂದಿದ್ದು, ಈ ತರಬೇತಿಯಲ್ಲಿ ರಫ್ತು ವ್ಯವಹಾರಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಹಾಗೂ ಸಮಗ್ರ ಮಾಹಿತಿಯನ್ನು ನೀಡಿ ರಫ್ತು ಅಂದರೇನು? ಏಕೆ? ಎಲ್ಲಿಗೆ? ಹಾಗೂ ಹೇಗೆ ಮಾಡಬೇಕೆಂಬುದರ ಬಗ್ಗೆ ರಫ್ತಿಗೆ ಸಂಬಂಧಿಸಿದಂತೆ ನಿಯಮಾವಳಿಗಳು, ಅಂತರಾಷ್ಟ್ರೀಯ ರಫ್ತು ವ್ಯಾಪಾರ, ರಫ್ತು ಮಾರುಕಟ್ಟೆ ರಫ್ತಿಗೆ ಸಂಬಂಧಿತ ಕೇಂದ್ರ ಸರ್ಕಾರದ ಸಂಸ್ಥೆಗಳಾದ ಡಿ.ಜಿ.ಎಫ್.ಟಿ., ಕಸ್ಟಮ್ಸ್, ಆರ್.ಬಿ.ಐ. ಹಾಗೂ ರಫ್ತು ಉತ್ತೇಜನ ಕೌನ್ಸಿಲ್‌ಗಳಾದ ಅಪೇಡಾ, ಫಿಯೋ ಇತ್ಯಾದಿ, ರಫ್ತು ಪ್ಯಾಕೇಜಿಂಗ್, ಹಣಕಾಸು, ವಿದೇಶಿ ವಿನಿಮಯ, ಇ.ಸಿ.ಜಿ.ಸಿ., ಇ–ವಾಣಿಜ್ಯ ವೇದಿಕೆ ಹಾಗೂ ಜಿ.ಎಸ್.ಟಿ. ನಿಯಮಗಳ ಕುರಿತಾಗಿಯೂ ವಿಷಯ ಮಂಡನೆ ಮಾಡಲಾಗುವುದು ಹಾಗೂ ಮಂಗಳೂರು ವಿಭಾಗದ ರಫ್ತು ಸಾಧ್ಯತಾ ಉತ್ಪನ್ನಗಳ ಕುರಿತು ಮಾಹಿತಿಯನ್ನು ಹಾಗೂ ಆಯಾ ಕ್ಷೇತ್ರಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ / ಸೇವೆ ಸಲ್ಲಿಸುತ್ತಿರುವ ಪರಿಣಿತಿದಾರರು ಅತಿಥಿ ಉಪನ್ಯಾಸಕರಾಗಿ ಪಾಲ್ಗೊಳ್ಳಲಿದ್ದು ಈ ಮಹತ್ವದ ತರಬೇತಿಯ ಸದುಪಯೋಗ ಪಡೆದುಕೊಳ್ಳಲು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು, ಈ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಲಿ ಹಾಗೂ ತರರಬೇತಿಗಾಗಿ ಆಗಮಿಸಿದ ಎಲ್ಲಾ 34 ಶಿಬಿರಾರ್ಥಿಗಳು ರಫ್ತುದಾರರಾಗಿ ದೇಶದ ಆರ್ಥಿಕತೆ ಹೆಚ್ಚಿಸುವಂತಾಗಲಿ ಎಂದು ಮುಖ್ಯ ಅತಿಥಿಗಳು ಮಾಹಿತಿ ನೀಡಿದರು.



ಯುಗಾದಿ ಪ್ರಕೃತಿಯೊಂದಿಗೆ ಮನುಷ್ಯನ ಸಂಬಂಧ ಗಟ್ಟಿಗೊಳಿಸುವ ಹಬ್ಬ: ನರಸಿಂಹ



ಮಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮಂಗಳೂರು ತಾಲೂಕು ಸಮಿತಿ ಮತ್ತು ಥಿಯೊಸೊಫಿಕಲ್ ಸೊಸೈಟಿ ಮಂಗಳೂರು ವತಿಯಿಂದ ಯುಗಾದಿ ಸಂಭ್ರಮ ಕಾರ್ಯಕ್ರಮ ನಗರದ ಕೊಡಿಯಾಲ್‌ಬೈಲ್‌ನ ಥಿಯೊಸೊಫಿಕಲ್ ಸೊಸೈಟಿ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಥಿಯೊಸೊಫಿಕಲ್ ಸೊಸೈಟಿ ಮಂಗಳೂರು ಅಧ್ಯಕ್ಷ ವಿದ್ವಾನ್ ತುಪ್ಪೆಕಲ್ಲು ನರಸಿಂಹ ಶೆಟ್ಟಿ ಮಾತನಾಡಿ, ಯುಗಾದಿ ಹಬ್ಬ ಪ್ರಕೃತಿಯೊಂದಿಗೆ ಮನುಷ್ಯನ ಸಂಬಂಧವನ್ನು ಗಟ್ಟಿಗೊಳಿಸುವ ಸಾಂಪ್ರದಾಯಿಕ ಆಚರಣೆಯಾಗಿದೆ. ಬೇವು ಬೆಲ್ಲ ಸವಿಯುವ ಮೂಲಕ ಜೀವನದ ಸುಖ, ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಂದೇಶವನ್ನು ಯುಗಾದಿ ಆಚರಣೆಯಿಂದ ಸಾರಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಥಿಯೊಸೊಫಿಕಲ್ ಸೊಸೈಟಿ ಕಾರ್ಯದರ್ಶಿ ಪ್ರೊ.ಕೃಷ್ಣಾನಂದ ಶೆಣೈ ಮಾತನಾಡಿ, ಕೃಷಿ ಚಟುವಟಿಕೆಗಳಿಗೆ ಆರಂಭ ನೀಡುವ ಯುಗಾದಿ ಆಚರಣೆ ನಮ್ಮ ಸಂಸ್ಕೃತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ ಎಂದರು. ಅಭಾಸಾಪ ಜಿಲ್ಲಾ ಸಮಿತಿ ಸದಸ್ಯ ಪಿ.ಬಿ.ಹರೀಶ್ ರೈ ಮುಖ್ಯ ಅತಿಥಿಯಾಗಿದ್ದರು. ದಿವಾನ್ ಕೇಶವ ಭಟ್, ಅಭಾಸಾಪ ಜಿಲ್ಲಾ ಕಾರ್ಯದರ್ಶಿ ಲತೇಶ್ ಬಾಕ್ರಬೈಲ್ ಉಪಸ್ಥಿತರಿದ್ದರು. ಅಭಾಸಾಪ ಮಂಗಳೂರು ತಾಲೂಕು ಸಮಿತಿ ಅಧ್ಯಕ್ಷೆ ಡಾ.ಮೀನಾಕ್ಷಿ ರಾಮಚಂದ್ರ ಸ್ವಾಗತಿಸಿ, ಚಂದ್ರಪ್ರಭಾ ದಿವಾಕರ್ ವಂದಿಸಿದರು, ಪ್ರೊ. ಶೈಲಜಾ ಪುದುಕೋಳಿ ನಿರೂಪಿಸಿದರು.

ರಾಷ್ಟ್ರೀಯ ಭೂಮಾಪನ ದಿನಾಚರಣೆ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ



ಬಂಟ್ವಾಳ: ಬಿ.ಸಿ.ರೋಡಿನ ಅಜ್ಜಿಬೆಟ್ಟು ವಿನಲ್ಲಿರುವ ಬಿ.ಮೂಡ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮುದಾಯದತ್ತ ಶಾಲೆ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಹಾಗೂ 37ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಉಪಾಧ್ಯಕ್ಷೆ ವಿನೋದಾ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ 7ನೇ ತರಗತಿಯಿಂದ ತೇರ್ಗಡೆಯಾಗಿ ತೆರಳುತ್ತಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಭೂಮಾಪನಾ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ನೌಕರರ ಸಂಘದಿಂದ ರಾಷ್ಟ್ರೀಯ ಭೂಮಾಪನ ದಿನಾಚರಣೆ ಹಿನ್ನೆಲೆಯಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಿ ದಕ್ಷಿಣ ಕನ್ನಡ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕ ಪುಷ್ಪರಾಜ್ ಪೂಜಾರಿ ಮಾತನಾಡಿದರು

ಕರ್ನಾಟಕ ರಾಜ್ಯ ಭೂಮಾಪನಾ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಶಾಖೆ ಅಧ್ಯಕ್ಷ ಆನಂದ ಕುಮಾರ್ ಕೆ, ತಾಲೂಕು ಅಧ್ಯಕ್ಷ ರಾಘವೇಂದ್ರ ರಾವ್ ಉಪಸ್ಥಿತರಿದ್ದು ಶುಭ ಹಾರೈಸಿದರು. ಕಂಪ್ಯೂಟರ್ ತರಬೇತಿ ಶಿಕ್ಷಕ ಶಿವಮೂರ್ತಿ ಅವರ ವತಿಯಿಂದ ಕಂಪ್ಯೂಟರ್ ಕಲಿಕಾ ಮಾಹಿತಿ ಪುಸ್ತಕ ಹಾಗೂ ಪ್ರಮಾಣಪತ್ರ ವಿತರಿಸಲಾಯಿತು. ಎಸ್.ಡಿ.ಎಂ.ಸಿ. ನಿಕಟಪೂರ್ವ ಅಧ್ಯಕ್ಷ ಹರೀಶ ಮಾಂಬಾಡಿ ಮಾತನಾಡಿದರು. ಮುಖ್ಯ ಶಿಕ್ಷಕಿ ಲಕ್ಷ್ಮೀ, ಶಾಲೆಯ ಶಿಕ್ಷಕ ವೃಂದ, ಎಸ್‌ಡಿಎಂಸಿ ಸದಸ್ಯರು, ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಿವಮೂರ್ತಿ ಆರ್. ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

ಮೊಬೈಲ್ ಬಳಕೆ ವಿರುದ್ಧ ಸ್ವ ನಿಯಂತ್ರಣವೇ ಮದ್ದು: ಭಟ್



ಮಂಗಳೂರು: ಮಕ್ಕಳು ಮೊಬೈಲ್ ಬಳಸುವುದನ್ನು ನಿಯಂತ್ರಿಸಲು ತಾಯಂದಿರು ಸ್ವತಃ ಮೊಬೈಲ್ ಅವಲಂಬನೆ ಕಡಿಮೆ ಮಾಡಬೇಕು ಎಂದು ಉಪನ್ಯಾಸಕ ಮುಂಡಾಜೆ ಕುಮಾರೇಶ್ವರ ಭಟ್ ಹೇಳಿದರು.

ವಿಟ್ಲ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳು ಕುಂಬ್ಳೆ ನಾಯ್ಕಾಪಿನ ಟೈಲರಿಂಗ್ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಮಕ್ಕಳಲ್ಲಿ ಮೊಬೈಲ್ ಬಳಕೆ ಮತ್ತು ಕೃತಕ ಬುದ್ಧಿಮತ್ತೆ ಕುರಿತು ಅವರು ವಿವರಿಸಿದರು. ವನಿತಾ ಮಹಿಳಾ ಸಮಾಜ ಉಚಿತ ಟೈಲರಿಂಗ್ ತರಬೇತಿ ಶಿಕ್ಷಕಿ ವಿಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು.

ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ, ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಸಿಇಒ ಜ್ಯೋತಿರಾಜ್ ಉಪಸ್ಥಿತರಿದ್ದರು. ಎಂ.ಎಸ್.ಡಬ್ಲ್ಯು ವಿದ್ಯಾರ್ಥಿನಿ ಚೇತಾಕುಮಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾತ್ವಿಕ್‌ಶ್ರೀ ಸ್ವಾಗತಿಸಿದರು. ಪ್ರದೀಪ್ ಕುಮಾರ್ ವಂದಿಸಿದರು. ಅಶೋಕ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ‘ಯುರೇಕಾ-2026’ | 6ನೇ ದಿನ ವಿಶೇಷ ಚಟುವಟಿಕೆ


ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಹೊಸ ಅನುಭವ ಗಳಿಸಿಕೊಂಡ ವಿದ್ಯಾರ್ಥಿಗಳು


ಪುತ್ತೂರು: ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ ರಾಜ್ಯ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ ‘ಯುರೇಕಾ–2026’ರ 5 ಹಾಗೂ 6ನೇ ದಿನಗಳಲ್ಲಿ ವಿವಿಧ ವಿಷಯಾಧಾರಿತ ಅವಗಳನ್ನು ಆಯೋಜಿಸಲಾಗಿದ್ದು ಶಿಬಿರಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಹೊಸ ಅನುಭವ ಹಾಗೂ ಅವಕಾಶಗಳನ್ನು ಪಡೆದುಕೊಂಡರು.

ಶಿಬಿರದ 5ನೇ ದಿನದ ಮೊದಲ ಅವಧಿಯನ್ನು ವಿವೇಕಾನಂದ ಪ.ಪೂ. ಕಾಲೇಜಿನ ಜೀವಶಾಸ್ತ್ರ ವಿಭಾಗ ಉಪನ್ಯಾಸಕ ಡಾ. ಸುಶಾಂತ್ ಎ. ರೈ ಅವರು ‘ಅಂಡರ್‌ಸ್ಟ್ಯಾಂಡಿಂಗ್ ಲೈಫ್ ಇನ್ ಇಟ್ಸ್ ಫುಲ್‌ನೆಸ್’ ಶೀರ್ಷಿಕೆಯಡಿ ನಡೆಸಿಕೊಟ್ಟರು.

ಈ ಅವಧಿಯಲ್ಲಿ ಜೀವಿಗಳ ಉಗಮ, ವಿಕಾಸ ಹಾಗೂ ಪರಿಸರದೊಂದಿಗೆ ಅವುಗಳ ಅವಿನಾಭಾವ ಸಂಬಂಧವನ್ನು ವಿವರವಾಗಿ ವಿಶ್ಲೇಷಿಸಿದರು. ಜೀವನದ ವೈಜ್ಞಾನಿಕ ಹಾಗೂ ತಾತ್ವಿಕ ಆಯಾಮಗಳನ್ನು ಸಮಗ್ರವಾಗಿ ಪರಿಚಯಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ವಿಷಯದ ಕುರಿತು ಸಮಗ್ರ ಅರಿವು ಮೂಡಿಸಲಾಯಿತು.

2ನೇ ಅವಧಿಯಲ್ಲಿ ವಿದ್ಯಾರ್ಥಿಗಳು ಕಾಲೇಜಿನ ಜೀವಶಾಸ್ತ್ರ ಹಾಗೂ ರಾಸಾಯನ ಶಾಸ್ತ್ರ ಪ್ರಯೋಗಾಲಯಗಳಿಗೆ ಭೇಟಿ ನೀಡಿ ಕಾಲೇಜಿನ ಉಪನ್ಯಾಸಕ ವೃಂದದವರ ಮಾರ್ಗದರ್ಶನದಲ್ಲಿ ತಾವು ಸ್ವತಃ ಪ್ರಯೋಗಗಳಲ್ಲಿ ಭಾಗಿಯಾಗುವುದರೊಂದಿಗೆ ಪ್ರಾಯೋಗಿಕ ಹಾಗೂ ನೇರ ಅನುಭವಗಳನ್ನು ಪಡೆಯುವ ಮೂಲಕ ತಮ್ಮ ವೈಜ್ಞಾನಿಕ ಅರಿವನ್ನು ವಿಸ್ತೃತಗೊಳಿಸಿದರು. ಅಪರಾಹ್ನ ಬಳಿಕ ಶಿಬಿರಾರ್ಥಿಗಳು ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯದ ಎಲ್‌ಒಟಿ ಪ್ರಯೋಗಾಲಯಕ್ಕೆ ಭೇಟಿ ನೀಡಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಮಾಹಿತಿಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಅರಿತುಕೊಂಡರು. ಶಿಬಿರದ 6ನೇ ದಿನದ ಮೊದಲನೇ ಅವಧಿಯು ‘ಮೆಥಮ್ಯಾಟಿಕ್ಸ್ – ದಿ ಲ್ಯಾಂಗ್ವೇಜ್ ಆಫ್ ಪ್ರಿಸಿಶನ್ ಎಂಡ್ ಪ್ಯಾಟರ್ನ್ಸ್’ ಶೀರ್ಷಿಕೆಯಡಿ ಆಯೋಜನೆಗೊಂಡಿದ್ದು ಗಣಿತವು ಕೇವಲ ಅಂಕೆ ಸಂಖ್ಯೆಗಳ ಲೆಕ್ಕಾಚಾರ ಮಾತ್ರವಾಗಿರದೆ, ಪ್ರತಿಯೊಂದು ಕ್ಷೇತ್ರದಲ್ಲೂ ಅಡಕವಾಗಿರುವ ನಿಖರ, ನಿಯಮಬದ್ಧ ಮಾದರಿಗಳ ಸಾರ್ವತ್ರಿಕ ಭಾಷೆಯಾಗಿದೆ ಎನ್ನುವುದನ್ನು ವಿವೇಕಾನಂದ ಪದವಿಪೂರ್ವ ಕಾಲೇಜಿನ ಗಣಿತಶಾಸ್ತ್ರ ವಿಭಾಗ ಮುಖ್ಯಸ್ಥೆ ಕವಿತಾ ಅವರು ಶಿಬಿರಾರ್ಥಿಗಳಿಗೆ ಅರ್ಥೈಸಿದರು. ನಂತರ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗ ಉಪನ್ಯಾಸಕ ಶ್ರೀಧರ ಶೆಟ್ಟಿಗಾರ್ ನಿತ್ಯ ಜೀವನದಲ್ಲಿ ವಾಣಿಜ್ಯಶಾಸ್ತ್ರ ಎಂಬ ವಿಷಯದ ಕುರಿತು ಅವಧಿಯನ್ನು ನಡೆಸಿಕೊಟ್ಟರು.





ಗುಂಪು ಚರ್ಚೆ

ಹಲವು ದೈನಂದಿನ ಉದಾಹರಣೆಗಳು, ಗುಂಪು ಚರ್ಚೆಗಳು, ವಿನೋದಮಯ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆರ್ಥಿಕ ಹಾಗೂ ವ್ಯಾವಹಾರಿಕ ಜ್ಞಾನ ವಿಸ್ತರಿಸುವುದರ ಜೊತೆಗೆ ವಾಣಿಜ್ಯ ಶಾಸ್ತ್ರದ ಮಹತ್ವವನ್ನು ಮನದಟ್ಟು ಮಾಡಿತು.

ಸುತ್ತಮುತ್ತ

ಜ್ಞಾನಗಂಗಾ ಪ.ಪೂ. ಕಾಲೇಜಿಗೆ 97.33 ಫಲಿತಾಂಶ

ಶಿರ್ವ: ಜ್ಞಾನಗಂಗಾ ಪ.ಪೂ.ಕಾಲೇಜು ನೆಲ್ಲಿಕಟ್ಟೆಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿಗೆ ಒಟ್ಟು ಶೇ. 97.33 ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ ಆದಿತಿ ಭಟ್ 594 ಅಂಕಗಳೊಂದಿಗೆ ಪ್ರಥಮ ಸ್ಥಾನ ಹಾಗೂ ವಿಜ್ಞಾನ ವಿಭಾಗದಲ್ಲಿ ರಕ್ಷಿತಾ ಆರ್ ನಾಯಕ್ 590 ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನಿಯಾಗಿದ್ದಾರೆ. 51 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 85 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ನಮ್ಮ ನಾಡ ಒಕ್ಕೂಟದಿಂದ ಬ್ಯಾರಿಕೇಡ್ ಹಸ್ತಾಂತರ

ಕುಂದಾಪುರ: ಕೇವಲ ಶಿಕ್ಷಣಕ್ಕೆ ಸೀಮಿತವಾಗದೆ ಸಮಾಜದ ಇತರ ಆಗತ್ಯಗಳಿಗೂ ಸ್ಪಂದಿಸುವುದು ನಮ್ಮ ಆಶಯ. ಕುಂದಾಪುರ ಸಂಚಾರಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸುಗಮ ಸಂಚಾರಕ್ಕೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಬ್ಯಾರಿಕೇಡ್‌ಗಳ ಅವಶ್ಯಕತೆ ಬಗ್ಗೆ ಅಪೇಕ್ಷೆ ವ್ಯಕ್ತವಾಗಿತ್ತು. ಕುಂದಾಪುರ ಸಂಚಾರಿ ಪೊಲೀಸರ ಕರ್ತವ್ಯದ ಮೇಲಿನ ಕಾಳಜಿಯನ್ನು ಗೌರವಿಸಿ ವಾಹನಗಳ ಸುಗಮ ಸಂಚಾರಕ್ಕೆ ಮತ್ತು ಪಾದಚಾರಿಗಳ ಸುರಕ್ಷತೆಗಾಗಿ ಮೂರು ಬ್ಯಾರಿಕೇಡ್‌ಗಳನ್ನು ನೀಡುತ್ತಿದ್ದೇವೆ. ಇತರ ಸಂಘ ಸಂಸ್ಥೆಗಳು ಕೂಡ ಸಹಕಾರ ನೀಡುವ ಮೂಲಕ ಸಮಾಜದ ಏಳಿಗೆಗೆ ಕೈ ಜೋಡಿಸಬೇಕು ಎಂದು ನಮ್ಮ ನಾಡ ಒಕ್ಕೂಟದ ಉಪಾಧ್ಯಕ್ಷ ಹುಸೇನ್ ಹೈಕಾಡಿ ಹೇಳಿದರು.

ನಮ್ಮ ನಾಡ ಒಕ್ಕೂಟ ಹಾಗೂ ನಮ್ಮ ನಾಡ ಒಕ್ಕೂಟ ಕಮ್ಯೂನಿಟಿ ಸೆಂಟರ್ ಕುಂದಾಪುರ ಇದರ ವತಿಯಿಂದ ಕುಂದಾಪುರ ಸಂಚಾರಿ ಪೊಲೀಸ್ ಠಾಣೆಗೆ ಬ್ಯಾರಿಕೇಡ್‌ಗಳನ್ನು ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬ್ಯಾರಿಕೇಡ್‌ಗಳನ್ನು ಪಡೆದು ಮಾತನಾಡಿದ ಸಂಚಾರಿ ಪೊಲೀಸ್ ಉಪನಿರೀಕ್ಷಕ ಅನೂಪ್ ನಾಯಕ್ ಮತ್ತು ಸುಧಾ ಪ್ರಭು ಅವರು ಇಲಾಖೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು. ನಮ್ಮ ನಾಡ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜಮೀರ್ ಅಹ್ಮದ್ ರಶಾದಿ, ಖಜಾಂಚಿ ಮೊಹಮ್ಮದ್ ಪೀರು ಸಾಹೇಬ್ ಉಡುಪಿ, ಜಿಲ್ಲಾ ಉಪಾಧ್ಯಕ್ಷ ಬಿ. ಎಸ್. ಎಫ್. ರಫೀಕ್ ಗಂಗೊಳ್ಳಿ, ಸಂಘಟನಾ ಕಾರ್ಯದರ್ಶಿ ನಿಹಾರ್ ಅಹ್ಮದ್ ಕುಂದಾಪುರ, ಸದಸ್ಯರಾದ ಶಾಬನ್ ಹಂಗಳೂರು, ಮನ್ಸೂರ್ ಇಬ್ರಾಹಿಂ, ಕುಂದಾಪುರ ಘಟಕದ ಅಧ್ಯಕ್ಷ ಜಮಾಲ್ ಗುಲ್ವಾಡಿ, ಹೆಬ್ರಿ ಘಟಕದ ಅಧ್ಯಕ್ಷ ಅನ್ಸಾರ್ ಹೊಸಂಗಡಿ, ಉಡುಪಿ ಘಟಕದ ಸದಸ್ಯ ಅಕ್ರಮ್ ಪೀರು ಹಾಗೂ ಸಂಚಾರಿ ಪೊಲೀಸ್ ಠಾಣೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೋಟದ ಗಾಡಿ ಕೂಸ ಪೂಜಾರಿ, ರಮಾನಾಥ ಜೋಗಿಗೆ ನುಡಿನಮನ



ಕೋಟ: ಸಮಾಜದ ಬಗ್ಗೆ ಅಪಾರವಾದ ಗೌರವ ಮನ್ನಣೆ ಪಡೆದ ರಮಾನಾಥ ಜೋಗಿ ಹಾಗೂ ಕೂಸ ಪೂಜಾರಿಯವರ ಕೊಡುಗೆ ಅನನ್ಯವಾದದ್ದು ಎಂದು ಕೋಟದ ಸಾಂಸ್ಕೃತಿಕ ಚಿಂತಕ ಕೋಟ ಚಂದ್ರಶೇಖರ ಆಚಾರ್ ಹೇಳಿದರು.

ಶುಕ್ರವಾರ ಕೋಟದ ಪಂಚವರ್ಣದ ಕಛೇರಿಯಲ್ಲಿ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಇತ್ತೀಚಿಗೆ ಅಗಲಿದ ಕೋಟದ ಇರ್ವರು ಗಣ್ಯರಾದ ಗಾಡಿ ಕೂಸ ಪೂಜಾರಿ ಹಾಗೂ ರಮಾನಾಥ ಜೋಗಿ ಇವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಸಮಾಜದೊಂದಿಗೆ ಸಮಾಜಕ್ಕಾಗಿ ಶ್ರಮಿಸಿ ಅಪಾರ ಜನಮನ್ನಣೆ ಪಡೆದವರು ಇರ್ವರು ಮಹಾನ್ ಚೇತನರು, ಅವರ ಇರುವಿಕೆಯ ಕಾಲಘಟ್ಟದಲ್ಲಿ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಗಾಡಿ ಕೂಸ ಪೂಜಾರಿಯವರ ಕುರಿತಾಗಿ ನ್ಯಾಯವಾದಿ ಕೆ.ಅನಂತಪದ್ಮನಾಭ ಐತಾಳ್ ನುಡಿನಮನ ಸಲ್ಲಿಸಿದರು.

ರಮಾನಾಥ ಜೋಗಿ ಅವರ ಪುತ್ರ ಶಶಿಧರ ಜೋಗಿ, ಕೋಟ ಅಮೃತೇಶ್ವರೀ ದೇಗುಲದ ಅರ್ಚಕ ಅಶ್ವಥ್ ಜೋಗಿ, ಪಂಚವರ್ಣ ಯುವಕ ಮಂಡಲದ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಅಧ್ಯಕ್ಷ ಕೆ. ಮನೋಹರ್ ಪೂಜಾರಿ, ಮಹಿಳಾ ಮಂಡಲದ ಗೀತಾ ಹಾಡಿಕೆರೆ ಮತ್ತಿತರರು ಇದ್ದರು. ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್ ಕಾರ್ಯಕ್ರಮ ಸ್ವಾಗತಿಸಿ ನಿರೂಪಿಸಿದರು. ರವೀಂದ್ರ ಕೋಟ ವಂದಿಸಿದರು.

ಬೈಕಂಪಾಡಿ ಕೈಗಾರಿಕಾ ಪ್ರದೇಶ, ಪಣಂಬೂರು ಬಂದರು ಸಹಿತ ವಿವಿಧ ಕಡೆ ವಾಹನ ಸವಾರರಿಗೆ ಅಡಚಣೆ

ರಾಷ್ಟ್ರೀಯ ಹೆದ್ದಾರಿ 66ರ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಮಸ್ಯೆ

ಸುರತ್ಕಲ್: ಮಂಗಳೂರು ಸಮೀಪದ ಬೈಕಂಪಾಡಿ ಕೈಗಾರಿಕಾ ಪ್ರದೇಶ, ಪಣಂಬೂರು ಬಂದರು ಹಾಗೂ ರಾಷ್ಟ್ರೀಯ ಹೆದ್ದಾರಿ 66 ಸಂಪರ್ಕಿಸುವ ಪ್ರಮುಖ ಜಂಕ್ಷನ್ ಈಗ ಭಾರೀ ಟ್ರಾಫಿಕ್ ಒತ್ತಡದ ಕೇಂದ್ರವಾಗಿದ್ದು ನಿತ್ಯವೂ ವಾಹನ ಸವಾರರಿಗೆ ತೀವ್ರ ತೊಂದರೆ ಉಂಟುಮಾಡುತ್ತಿದೆ. ಕೈಗಾರಿಕಾ ವಲಯದ ಹೃದಯ ಭಾಗವಾಗಿರುವ ಈ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಲಾರಿಗಳು, ಕಂಟೈನರ್‌ಗಳು, ಟ್ಯಾಂಕರ್‌ಗಳು ನಿರಂತರ ಸಂಚಾರ ನಡೆಸುತ್ತಿರುವುದರಿಂದ ಹೆದ್ದಾರಿಯ ಸಂಚಾರವೇ ಅಸ್ತವ್ಯಸ್ತವಾಗುತ್ತಿದೆ. ಅದ್ದರಿಂದ ಅಂಡರ್ ಪಾಸ್ ನಿರ್ಮಾಣ ಮಾಡಬೇಕು ಎಂಬ ಕೂಗಿಗೆ ಮತ್ತಷ್ಟು ಬಲ ಬಂದಿದೆ.



ದಿನನಿತ್ಯದ ಸಮಸ್ಯೆ

ಟ್ರಾಫಿಕ್ ಜಾಮ್ ಬೆಳಗ್ಗೆ ಮತ್ತು ಸಂಜೆ ಪೀಕ್ ಅವಧಿಯಲ್ಲಿ ಈ ಜಂಕ್ಷನ್‌ನಲ್ಲಿ ವಾಹನ ದಟ್ಟನೆ ಹೆಚ್ಚುತ್ತಿದೆ. ಅಂಡರ್ ಪಾಸ್ ಇಲ್ಲದ ಕಾರಣ ಟ್ರಾಫಿಕ್ ಪೊಲೀಸರಿಗೆ ಹೆಚ್ಚುವರಿ ಜವಾಬ್ದಾರಿ ನೀಡಿದಂತಾಗಿದೆ.

ಸುರತ್ಕಲ್‌ನಿಂದ ಬೈಕಂಪಾಡಿ ವರೆಗೆ ಅಲ್ಲಲ್ಲಿ ತಿರುವು ಲಭಿಸುವುದರಿಂದ ಹೆದ್ದಾರಿಯೂ ರಾಜ್ಯ ರಸ್ತೆಯಂತೆ ಕಂಡು ಬರುತ್ತಿದೆ.

ಕೈಗಾರಿಕಾ ಪ್ರದೇಶದಿಂದ ಹೊರಬರುವ ಭಾರೀವಾಹನಗಳು ಹೆದ್ದಾರಿಯನ್ನು ದಾಟುವಾಗ ಅಥವಾ ತಿರುಗುವಾಗ, ಎರಡೂ ದಿಕ್ಕಿನ ವಾಹನ ಸಂಚಾರ ಸಂಪೂರ್ಣವಾಗಿ ನಿಧಾನಗೊಳ್ಳುತ್ತದೆ. ಇದರಿಂದ ಕೆಲಸಕ್ಕೆ ತೆರಳುವವರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ತುರ್ತು ಸೇವೆಗಳ ವಾಹನಗಳು ಸಹ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ತ್ವರಿತ ಕ್ರಮ ಬೇಕು

ಸ್ಥಳೀಯ ನಿವಾಸಿಗಳು, ಉದ್ಯಮಿಗಳು ಮತ್ತು ವಾಹನ ಸವಾರರು ಸಂಬಂಧಿಸಿದ ಇಲಾಖೆಗೆ ಮನವಿ ಸಲ್ಲಿಸಿ, ತಕ್ಷಣ ಸಮಗ್ರ ಟ್ರಾಫಿಕ್ ಅಧ್ಯಯನ ನಡೆಸಿ ಅಂಡರ್‌ಪಾಸ್ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ. ಈ ಯೋಜನೆ ಜಾರಿಗೆ ಬಂದರೆ ಬೈಕಂಪಾಡಿ ಪ್ರದೇಶದ ದೀರ್ಘಕಾಲದ ಟ್ರಾಫಿಕ್ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತವಾಗುತ್ತಿದೆ.

ಸುಗಮ ಸಂಚಾರಕ್ಕೆ ಅಡ್ಡಿ

ಬೈಕಂಪಾಡಿ ಕೈಗಾರಿಕಾ ವಲಯ, ಬಂದರು ಪ್ರದೇಶದಲ್ಲಿ ನೂರಾರು ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿದ್ದು ದಿನವೂ ಸಾವಿರಾರು ಟನ್ ಸರಕು ಸಾಗಣೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಭಾರಿ ಲಾರಿಗಳ ಓಡಾಟ ಹೆಚ್ಚಿದ್ದು ಸಣ್ಣ ವಾಹನಗಳು ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ತೊಂದರೆ ಉಂಟಾಗುತ್ತಿದೆ. ವಿಶೇಷವಾಗಿ, ಕಂಟೈನರ್ ವಾಹನಗಳು ತಿರುವು ತೆಗೆದುಕೊಳ್ಳುವ ವೇಳೆ ಹೆದ್ದಾರಿಯ ಅಗಲವೇ ಸಾಲದಂತಾಗುತ್ತದೆ.

ಅಪಘಾತ ಭೀತಿ, ಸುರಕ್ಷತೆ ಪ್ರಶ್ನಾರ್ಥಕ

ಈ ಜಂಕ್ಷನ್‌ನಲ್ಲಿ ನಿಯಂತ್ರಣದ ಕೊರತೆ ಮತ್ತು ಗೊಂದಲಕಾರಿ ಸಂಚಾರದಿಂದ ಅಪಘಾತಗಳ ಸಂಭವವೂ ಹೆಚ್ಚುತ್ತಿರುವುದಾಗಿ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ವೇಗವಾಗಿ ಸಾಗುವ ಹೆದ್ದಾರಿ ವಾಹನಗಳು ಮತ್ತು ನಿಧಾನವಾಗಿ ಚಲಿಸುವ ಭಾರಿ ಲಾರಿಗಳ ನಡುವೆ ಘರ್ಷಣೆಗೆ ಅವಕಾಶ ಸೃಷ್ಟಿಯಾಗುತ್ತಿದೆ. ಕೆಲವು ಸಣ್ಣ ಅಪಘಾತಗಳು ಈಗಾಗಲೇ ವರದಿಯಾಗಿದ್ದು, ದೊಡ್ಡ ಅಪಘಾತ ಸಂಭವಿಸುವ ಭೀತಿ ಕಾಡುತ್ತಿದೆ.

ಸಿಗ್ನಲ್ ವ್ಯವಸ್ಥೆ ವಿಫಲ

ಈ ಪ್ರದೇಶದಲ್ಲಿ ಅಳವಡಿಸಿರುವ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆ ಸಂಚಾರ ನಿಯಂತ್ರಣಕ್ಕೆ ಸಮರ್ಪಕವಾಗಿ ಸಹಕಾರಿಯಾಗುತ್ತಿಲ್ಲಎಂಬ ಆರೋಪಕೇಳಿಬರುತ್ತಿದೆ. ಲಾರಿಗಳ ಪ್ರಮಾಣ ಹೆಚ್ಚಿರುವುದರಿಂದ ಸಿಗ್ನಲ್ ಸಮಯವನ್ನು ಪಾಲಿಸಲು ಸಾಧ್ಯವಾಗದೇ, ನಿಯಮ ಉಲ್ಲಂಘನೆಗಳು ಸಾಮಾನ್ಯವಾಗಿವೆ. ಇದರಿಂದ ಗೊಂದಲ ಮತ್ತು ಅಸ್ತವ್ಯಸ್ತತೆ ಮತ್ತಷ್ಟು ಹೆಚ್ಚುತ್ತಿದೆ.

ಅಂಡರ್‌ಪಾಸ್ ಸಮಗ್ರ ಪರಿಹಾರ

ತಜ್ಞರ ಪ್ರಕಾರ, ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂದರೆ ಅಂಡರ್‌ಪಾಸ್ ಅಥವಾ ಫ್ಲೈಓವರ್ ನಿರ್ಮಾಣ. ವಿಶೇಷವಾಗಿ ಅಂಡರ್‌ಪಾಸ್ ನಿರ್ಮಿಸಿದರೆ ಕೈಗಾರಿಕಾ ಪ್ರದೇಶದಿಂದ ಹೊರಬರುವ ವಾಹನಗಳು ಹೆದ್ದಾರಿಯ ಸಂಚಾರಕ್ಕೆ ಅಡ್ಡಿಯಾಗದೇ ಸಾಗುವ ವ್ಯವಸ್ಥೆ ಕಲ್ಪಿಸಬಹುದು. ಇದರಿಂದ ಹೆದ್ದಾರಿಯಲ್ಲಿ ನಿರಂತರ, ತಡೆರಹಿತ ಸಂಚಾರ ಸಾಧ್ಯವಾಗುತ್ತದೆ.

ಆರ್ಥಿಕ ಪರಿಣಾಮ ಕೈಗಾರಿಕೆಗಳಿಗೂ ಹೊರೆ

ಟ್ರಾಫಿಕ್ ಜಾಮ್ ಸಮಸ್ಯೆಯಿಂದ ಸರಕು ಸಾಗಣೆ ವಿಳಂಬವಾಗುತ್ತಿದ್ದು, ಕೈಗಾರಿಕೆಗಳ ಉತ್ಪಾದನೆ ಮತ್ತು ವಿತರಣೆ ಮೇಲೂ ಪರಿಣಾಮ ಬೀರುತ್ತಿದೆ. ಇಂಧನ ವ್ಯಯ ಹೆಚ್ಚು ಹಾಗೂ ಸಮಯ ನಷ್ಟದಿಂದ ಉದ್ಯಮಿಗಳಿಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ. ಇದರಿಂದ ಪ್ರದೇಶದ ಕೈಗಾರಿಕಾ ಬೆಳವಣಿಗೆಗೂ ಅಡ್ಡಿಯಾಗುವ ಸಾಧ್ಯತೆ ಇದೆ.

ರೋಟರ್‍ಯಾಕ್ಟ್ ಕ್ಲಬ್ ಕೆಯ್ಯೂರು ಘಟಕದ ಉದ್ಘಾಟನೆ | ಪದಗ್ರಹಣ

ವ್ಯಕ್ತಿತ್ವ ವಿಕಸನಕ್ಕೆ ಅವಕಾಶ: ಸತೀಶ್ ಬೋಳಾರ್

ಪುತ್ತೂರು: ರೋಟರಿ ಕ್ಲಬ್ ನಿರಂತರ ಸಮಾಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ ಹಾಗೂ ಸಮಾಜದಲ್ಲಿ ನಾಯಕತ್ವವನ್ನು ಕಲಿಸಿಕೊಡುತ್ತದೆ. ರೋಟರಿ ಕ್ಲಬ್ ಉದ್ಯೋಗ ವೃದ್ಧಿ ಮತ್ತು ವಿವಿಧ ಕ್ಷೇತ್ರಗಳ ಅನುಭವವನ್ನು ಕಲಿಸುವುದರೊಂದಿಗೆ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಕಲ್ಪಿಸುತ್ತದೆ ಎಂದು ರೋಟರಿ ನಿಯೋಜಿತ ಜಿಲ್ಲಾ ಗವರ್ನರ್ ಸತೀಶ್ ಬೋಳಾರ್ ಹೇಳಿದರು.



ಅವರು ಕೆಯ್ಯೂರು ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ರೋಟರಿ ಕ್ಲಬ್ ಪುತ್ತೂರು ಪ್ರಾಯೋಜಿತ ರೋಟರ್‍ಯಾಕ್ಟ್ ಕ್ಲಬ್ ಕೆಯ್ಯೂರು ಘಟಕದ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ರೋಟರಿ ಇಂಡಕ್ಷನ್ ಅಧಿಕಾರಿಗಳಾದ ಸುಬ್ರಹ್ಮಣಿ, ಉಮಾನಾಥ ಪಿ.ಬಿ., ಬಾಲಕೃಷ್ಣ ಪೈ, ರೋಟರಿ ಕ್ಲಬ್ ಪುತ್ತೂರು ಸೆಂಟ್ರಲ್‌ನ ನಿಕಟಪೂರ್ವ ಅಧ್ಯಕ್ಷ ಅಶ್ರಫ್ ಮುಕ್ವೆ ಶುಭಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ರೋಟರಿ ಕ್ಲಬ್ ಪುತ್ತೂರು ಸೆಂಟ್ರಲ್ ಇದರ ಅಧ್ಯಕ್ಷ ಚಂದ್ರಹಾಸ ರೈ ಬಿ. ಅವರು ರೋಟರ್‍ಯಾಕ್ಟ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿ ಮಾತನಾಡಿ, ಯುವಕರು ಸಮಾಜದಲ್ಲಿನ ಆಗತ್ಯತೆ ಅರಿತುಕೊಂಡು ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ರೋಟರಿ ಕ್ಲಬ್ ಸಮಾಜ ಸೇವೆಗೆ ಮಾದರಿಯಾಗಿದೆ ಎಂದುರೋಟರಿಸಂಸ್ಥೆಯಕಾರ್ಯವ್ಯಾಪಿ, ಉದ್ದೇಶದ ಬಗ್ಗೆ ತಿಳಿಸಿದರು.

ರೋಟರ್‍ಯಾಕ್ಟ್ ಕ್ಲಬ್ ಕೆಯ್ಯೂರು ಘಟಕದ ಅಧ್ಯಕ್ಷ ದೀಕ್ಷಿತ್ ರೈ ಉದ್ಲೋಳೆ ಮಾತನಾಡಿ, ರೋಟರಿ ಸಂಸ್ಥೆಯ ಆಶಯಕ್ಕೆ ಪೂರಕವಾಗಿ ಸಂಸ್ಥೆ ಮುನ್ನಡೆಸುವುದಾಗಿ ಹೇಳಿದರು.

ಲಾವಣ್ಯ ನಾಯಕ್ ಪ್ರಾರ್ಥಿಸಿದರು. ರೋಟರ್‍ಯಾಕ್ಟ್ ಅಡ್ವೈಸರ್ ರಮೇಶ್ ರೈ ಬೋಳೋಡಿ ಸ್ವಾಗತಿಸಿದರು. ಡಾ.ರಾಜೇಶ್ ಬೆಜ್ಜಂಗಳ ಪ್ರಸ್ತಾವನೆಗೈದರು. ರೋಟರಿ ಪದಾಧಿಕಾರಿಗಳಾದ ವಸಂತ ಶಂಕರ್, ಸುರೇಶ್ ಜಿ.ಎಸ್., ಜಗನ್ನಾಥ ಅರಿಯಡ್ಕ ಶಿವರಾಮ ಎಂ.ಎಸ್. ವಿವಿಧಕಾರ್ಯಕ್ರಮ ನಿರ್ವಹಿಸಿದರು. ಜಯಪ್ರಕಾಶ್ ಎ.ಎಲ್. ವಂದಿಸಿದರು. ಡಾ.ಭಾರತಿ ಎಸ್. ರೈ ಕಾರ್ಯಕ್ರಮ ನಿರ್ವಹಿಸಿದರು.

ಪದಸ್ವೀಕಾರ

ಸಮಾರಂಭದಲ್ಲಿ ಅಧ್ಯಕ್ಷ ದೀಕ್ಷಿತ್ ರೈ ಉದ್ಲೋಳೆ, ಕಾರ್ಯದರ್ಶಿಯಾಗಿ ಪ್ರಜ್ವಲ್ ರೈ ಚೆನ್ನಾವರ ಪಟ್ಟೆ, ಕೋಶಾಧಿಕಾರಿ ಹಾಗೂ ನಿಯೋಜಿತ ಅಧ್ಯಕ್ಷರಾಗಿ ಹಿತೇಶ್ ಗೌಡ, ಉಪಾಧ್ಯಕ್ಷರಾಗಿ ಸಂತೋಷ್ ರೈ ಕೋರಂಗ, ಜತೆ ಕಾರ್ಯದರ್ಶಿಯಾಗಿ ಅರ್ಚನಾ ರೈ, ಕ್ಲಬ್ ಸರ್ವೀಸ್ ಆಗಿ ಮನೋಜ್ ರೈ, ಸಮುದಾಯ ಸೇವೆಗೆ ಗುರುರಾಜ್ ಸುವರ್ಣ, ಅಂತಾರಾಷ್ಟ್ರೀಯ ಸೇವೆಗೆ ದಿವಾಕರ ಪೂಜಾರಿ ಪಲ್ಲತಡ್ಕ ಪ್ರೊಫೆಶನಲ್ ಡೆವಲಪ್ಮೆಂಟ್ ರಿತ್ವಿಕ್ ಪೂಜಾರಿ, ಪಬ್ಲಿಕ್ ಇಮೇಜ್ ಆಗಿ ಪ್ರವೀಣ್ ಚೆನ್ನಾವರ, ಸಾರ್ಜೆಂಟ್ ಎಟ್ ಆರ್ಮ್ಸ್ ಆಗಿ ಶಶಿಧರ ಆಚಾರ್ಯ, ರೋಟರ್‍ಯಾಕ್ಟ್ ಅಡ್ವೈಸರ್ ಆಗಿ ರಮೇಶ್ ರೈ ಬೋಳೋಡಿ ಹಾಗೂ ಸದಸ್ಯರು ಪದಸ್ವೀಕಾರ ಮಾಡಿದರು.

ಡಾ. ಅಂಬೇಡ್ಕರ್ ಜಯಂತಿ 'ಮಹಾನಾಯಕ ರಾಷ್ಟ್ರನಾಯಕ' ಕಾರ್ಯಕ್ರಮ

ಸ್ತ್ರೀ ಸಬಲೀಕರಣ, ಶಿಕ್ಷಣಕ್ಕೆ ಒತ್ತು: ರಾಧಾಕೃಷ್ಣ

ಉಳ್ಳಾಲ: ನಮ್ಮ ಹಿರಿಯರ ಕಾಲದಲ್ಲಿ ತುಳಿತಕ್ಕೊಳಗಾದ ಶೋಷಿತರ ಸಂತತಿಯನ್ನ ಪ್ರೀತಿಸಿ, ಗೌರವಿಸುವ ಬಗ್ಗೆ ನಾವು ಶಪಥ ಮಾಡಬೇಕಿದೆ. ಅದುವೇ ನಾವು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಕೊಡುವ ಗೌರವವಾಗಿದೆಯೆಂದು ಕಲ್ಲಡ್ಕ ಶ್ರೀರಾಮ ವಿದ್ಯಾ ಕೇಂದ್ರದ ನಿವೃತ್ತ ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯ ಅಭಿಪ್ರಾಯಪಟ್ಟರು.



ಸನಾತನ ಹಿಂದು ಸೇವಾ ಪ್ರತಿಷ್ಠಾನ ಮತ್ತು ಉಳ್ಳಾಲ ತಾಲೂಕು ಸಾಮರಸ್ಯ ವೇದಿಕೆಯ ಸಹಯೋಗದೊಂದಿಗೆ ಸಂವಿಂಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಭಾನುವಾರದಂದು ನಡೆದ 'ಮಹಾನಾಯಕ ರಾಷ್ಟ್ರನಾಯಕ' ಕಾರ್ಯಕ್ರಮದಲ್ಲಿ ಅವರು ವಿಚಾರ ಮಂಡನೆಗೈದು ಮಾತನಾಡಿದರು.

ಅಂಬೇಡ್ಕರ್ ಅವರು ಅನೇಕ ಅವಮಾನಗಳನ್ನ ಸಹಿಸಿದ್ದರೂ ಸಹ ಶಿಕ್ಷಣದ ಬಗ್ಗೆ ಮಹತ್ತರ ಕ್ರಾಂತಿ ನಡೆಸುವ ಕುರಿತು ಯೋಚಿಸಿದ್ದರು. ಮಹಿಳೆಯರನ್ನ ಒಗ್ಗೂಡಿಸಿ ಸಮಾಜದ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದರು. ಮಹಿಳೆ ಕಲಿತರೆ ಸುಶಿಕ್ಷಿತ ಸಮಾಜ ನಿರ್ಮಾಣ ಸಾಧ್ಯವೆಂದು ಮನಗಂಡ ಅವರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಿದ್ದರು. ಅಂಬೇಡ್ಕರ್ ಅವರ ಅಸ್ಪೃಶ್ಯತೆಯ ವಿರುದ್ಧದ ನಿರಂತರ ಹೋರಾಟದಲ್ಲಿ ಒಂದಷ್ಟು ಮೇಲ್ವರ್ಗದವರು ಸಹ ಬೆಂಬಲವಾಗಿ ಇದ್ದರು. ಅದನ್ನು ಅಂಬೇಡ್ಕರ್ ಅವರೇ ಹೇಳಿಕೊಂಡಿದ್ದರು. ಅವರು ಬಹಳ ನೋವಿ ನಿಂದಲೇ ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರು. ಹಿಂದೂ ಸಮಾಜದ ಆಚರಣೆಯಲ್ಲಿ ದೋಷವಿರುವಾಗ ಹುಟ್ಟಿಕೊಂಡಿದ್ದೇ ಬೌದ್ಧ ಧರ್ಮವಾಗಿದ್ದರಿಂದ ಅಂಬೇಡ್ಕರ್ ಅವರು ಬೇರೆ ಧರ್ಮವನ್ನು ಸ್ವೀಕರಿಸದೆ ಬೌದ್ಧ ಧರ್ಮಕ್ಕೆ ಸೇರಿದ್ದರೆಂದರು.

ಸನಾತನ ಹಿಂದು ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷರು ಮಾಜಿ ಶಾಸಕ ಕೆ. ಜಯರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮೊಂಟೆಪದವು ಶ್ರೀ ಬ್ರಹ್ಮಮುಗೇರ ಮಹಾಂಕಾಳಿ ದೈವಸ್ಥಾನದ ಮಾಜಿ ಅಧ್ಯಕ್ಷ ಶ್ರೀಧರ ಪೆರಡೆ, ಸನಾತನ ಹಿಂದು ಸೇವಾ ಪ್ರತಿಷ್ಠಾನದ ಉಪಾಧ್ಯಕ್ಷ ಜಗನ್ನಾಥ್ ಸಾಲ್ಯಾನ್, ಕೋಶಾಧಿಕಾರಿ ಸುನಿಲ್ ಕುಮಾರ್ ಉಳ್ಳಾಲ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾದ ಉದಯೋನ್ಮುಖ ಕರಾಟೆಪಟು ಕುಮಾರಿ ಛಾಯಾ ಪೂಜಾರಿಯವರಿಗೆ ಸನಾತನ ಹಿಂದು ಸೇವಾ ಪ್ರತಿಷ್ಠಾನದ ವತಿಯಿಂದ ಪ್ರೋತ್ಸಾಹಕ ಸಹಾಯಧನದ ಚೆಕ್ಕನ್ನು ವಿತರಿಸಲಾಯಿತು. ಸಾಮರಸ್ಯ ವೇದಿಕೆಯ ಉಳ್ಳಾಲ ತಾಲೂಕು ಸಂಯೋಜಕ ಕೇಶವ ನರಿಂಗಾನ ವೈಯಕ್ತಿಕ ಗೀತೆ ಹಾಡಿದರು. ಮಂಗಳೂರು ಗ್ರಾಮಾಂತರ ಜಿಲ್ಲೆಯ ಸಾಮರಸ್ಯ ವೇದಿಕೆಯ ಜಿಲ್ಲಾ ಸಹ ಸಂಯೋಜಕರಾದ ಭರತ್ ಮಂಜನಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಟೋಳಿ ಸದಸ್ಯರಾದ ಹರಿಣಿ ಕೃಷ್ಣ ಕುತ್ತಾರ್ ಸ್ವಾಗತಿಸಿದರು. ನಿರ್ಮಿತ ಹರೀಶ್ ಭಂಡಾರಿ ವಂದಿಸಿದರು. ಧನಲಕ್ಷ್ಮಿ ಗಟ್ಟಿ ನಿರೂಪಿಸಿದರು. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಕುತ್ತಾರು ಬಾಲ ಸಂರಕ್ಷಣಾ ಕೇಂದ್ರದಿಂದ ಕುತ್ತಾರು ಶ್ರೀ ರಾಜರಾಜೇಶ್ವರಿ ದೇವಸ್ಥಾನದವರೆಗೆ ಆಕರ್ಷಕ ಶೋಭಾಯಾತ್ರೆ ನಡೆಯಿತು.

ವಾಲ್ಪಾಡಿಯಲ್ಲಿ ಗ್ರಾಮೋತ್ಸವ: ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ಮೂಡುಬಿದಿರೆ: ಗ್ರಾಮೋತ್ಸವ ಸಮಿತಿ ವಾಲ್ಪಾಡಿ ಇದರ ವತಿಯಿಂದ ಗ್ರಾಮೋತ್ಸವ, ಸಾಧಕರಿಗೆ ಸನ್ಮಾನ ಹಾಗೂ ವಾಲ್ಪಾಡಿ ಮಾಡದಂಗಡಿ ಶಾಲಾ ಎಸ್‌ಡಿಎಂಸಿ ವತಿಯಿಂದ ಐದನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವು ಇತ್ತೀಚೆಗೆ ನಡೆಯಿತು.

ಶಾಲಾ ಮುಖ್ಯೋಪಾಧ್ಯಾಯಿನಿ ವಾಣಿಶ್ರೀ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುವ ಮುಖಂಡ ಅಶ್ವಥ್ ಕೆ.ಪಣಪಿಲ, ಶಿರ್ತಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಫ್ರೆಡ್ರಿಕ್ ಪಿಂಟೊ, ಉದ್ಯಮಿ ನಾಗೇಶ್ ಬಂಗೇರ, ಗ್ರಾ.ಪಂ.ಮಾಜಿ ಸದಸ್ಯರಾದ ಅರುಣ್ ಕುಮಾರ್ ಶೆಟ್ಟಿ ಶ್ರೀಧರ ಬಂಗೇರ, ಉದ್ಯಮಿ ಶರೀಫ್ ಎಂ.ಎಂ, ಸಮಾಜ ಸೇವಕ ಅಬೂಬಕ್ಕರ್ ಶಿರ್ತಾಡಿ, ವಸಂತ ಪಂಚಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ನಿವೃತ್ತ ಶಿಕ್ಷಕಿ ಲಿಡ್ವಿನ್ ಸಲ್ಡಾನ್ಹ ನಯನಾಡು ಚರ್ಚ್ ಧರ್ಮಗುರು ಅನಿಲ್ ಅವಿಲ್ಡ ಲೋಬೋ ವಾಲ್ಪಾಡಿ, ಸೈಕಲ್ ರಿಪೇರಿಯ ಯೂಸುಫ್ ವಾಲ್ಪಾಡಿ, ಹೋಟೇಲ್ ಸ್ಥಾಪಕ ಮಹಾಬಲ ಭಂಡಾರಿ, ಪವರ್ ಮ್ಯಾನ್ ಅಬ್ದುಲ್ ರಹ್ಮಾನ್, ಅಂಗನವಾಡಿ ಶಿಕ್ಷಕಿ ಗುಣವತಿ ಹಾಗೂ ಪತ್ರಿಕಾ ವಿತರಕ ವಿಠಲ ಶೆಟ್ಟಿ ಅವರನ್ನು ಗ್ರಾಮೋತ್ಸವ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಗ್ರಾಮೋತ್ಸವ ಸಮಿತಿಯ ಅಧ್ಯಕ್ಷ ಆನಂದ, ಜನಾರ್ಧನ, ಮೋಹಿನಿ, ಶೇಖರ್, ಇರ್ಷಾದ್, ಶಿವರಾಮ, ಅಖಿಲೇಶ್, ಸುಕುಮಾರ್, ಗೋಪಾಲ, ಎಸ್‌ಡಿಎಂಸಿ ಸದಸ್ಯರು ಉಪಸ್ಥಿತರಿದ್ದರು. ಎಸ್ಡಿಎಂಸಿ ಅಧ್ಯಕ್ಷ ಅಶ್ರಫ್ ವಾಲ್ಪಾಡಿ ಸ್ವಾಗತಿಸಿದರು. ಗಣೇಶ್ ಬಿ.ಅಳಿಯೂರು ಹಾಗೂ ಸಹಶಿಕ್ಷಕಿ ರಶ್ಮಿ ಎಂ.ಎಸ್.ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಗಣೇಶ್ ಬಿ.ಅಳಿಯೂರು ಸಾರಥ್ಯದಲ್ಲಿ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ 'ಅಗೆಲ್' ಎಂಬ ನಾಟಕ ನಡೆಯಿತು.

ಕೊಳಚಿಕಂಬಳ ದೈವಸ್ಥಾನದಲ್ಲಿ ವಾರ್ಷಿಕ ನೇಮ, ನಾಗತಂಬಿಲ



ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಆಡಳಿತಕ್ಕೊಳಪಟ್ಟ ಕೊಳಚಿಕಂಬಳ ಶ್ರೀ ಜಾರಂದಾಯ, ಧೂಮಾವತಿ ದೈವಸ್ಥಾನದಲ್ಲಿ ಶ್ರೀ ಜಾರಂದಾಯ, ಧೂಮಾವತಿ ಮತ್ತು ಪರಿವಾರ ದೈವಗಳ ನೇಮ ವಿಜೃಂಭಣೆಯಿಂದ ನಡೆಯಿತು.

ಶನಿವಾರ ಮಧ್ಯಾಹ್ನ ಶ್ರೀ ಜಾರಂದಾಯ ಮತ್ತು ಧೂಮಾವತಿ ದೈವದ ದರ್ಶನದೊಂದಿಗೆ ಭಂಡಾರ ಇಳಿದು ಧ್ವಜಾರೋಹಣ ನಡೆಯಿತು. ಏ.12ಕ್ಕೆ ಬೆಳಗ್ಗೆ ದೈವಸ್ಥಾನದ ನಾಗ ಸನ್ನಿಧಿಯಲ್ಲಿ ನಾಗತಂಬಿಲ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಶ್ರೀ ಜಾರಂದಾಯ, ಶ್ರೀ ಧೂಮಾವತಿ ಮತ್ತು ಪರಿವಾರ ದೈವಗಳ ನೇಮೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭ ಉದ್ಯಮಿ ಶರತ್ ಸಾಲ್ಯಾನ್ ಬೆಂಗಳೂರು, ವೇದ ಪ್ರಕಾಶ್ ಶ್ರೀಯಾನ್ ಮುಂಬೈ, ಊರ ಗುರಿಕಾರ ಡಾ. ಹರಿಶ್ಚಂದ್ರ ಪಿ ಸಾಲ್ಯಾನ್, ಪ್ರಾಣೇಶ್, ದೈವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ಪ್ರಕಾಶ್ ಸುವರ್ಣ, ಕೃಷ್ಣ ಸುವರ್ಣ ಸಾನದ ಮನೆ, ಶ್ರೀ ಧೂಮಾವತಿ ಯೂತ್ ಕ್ಲಬ್ ಅಧ್ಯಕ್ಷ ಚರಣ್ ಬಂಗೇರ, ರಕ್ಷಿತ್ ಪೂಜಾರಿ ಕೊಳಚಿ ಕಂಬಳ, ಜೀವನ್ ಕೋಟ್ಯಾನ್, ರಮಾನಾಥ ಸುವರ್ಣ, ಹೇಮನಾಥ ಕೋಟ್ಯಾನ್, ಮಹಿಳಾ ಮಂಡಳಿಯ ಅಧ್ಯಕ್ಷೆ ಲತಾ ಶೇಖರ್, ರೂಪ ಹರೀಶ್ ಸುವರ್ಣ ಹಾಗೂ ಪದಾಕಾರಿಗಳು. ಊರಿನ ಗ್ರಾಮಸ್ಥರು ಉಪಸ್ಥಿತರಿದ್ದರು. ಸಂಜೆ ಮಾಯಂದಾಳ ದೈವದ ನೇಮೋತ್ಸವ ನಡೆಯಿತು.

ಗೋಲ್ಡನ್ ಪಾರ್ಕ್ ಮೈದಾನ: 'ಮೋಟೊ ಕ್ರಾಸ್' ಬೈಕ್ ರೇಸ್



ಬಂಟ್ವಾಳ: ಟೀಮ್ ಸತ್ಯಜಿತ್ ಸುರತ್ಕಲ್ ಇದರ ಆಶ್ರಯದಲ್ಲಿ ಭಾನುವಾರ ಬಿ.ಸಿ. ರೋಡಿನ ಗೋಲ್ಡನ್ ಪಾರ್ಕ್ ಮೈದಾನದಲ್ಲಿ ನಡೆದ 'ಮೋಟೊ ಕ್ರಾಸ್ 2026' ಬೈಕ್ ರೇಸ್‌ಗೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬೈಕ್ ರೇಸ್ ಮೂಲಕ ಯುವಕರಿಗೆ ಧೈರ್ಯ ಹಾಗೂ ಆತ್ಮವಿಶ್ವಾಸ ಮೂಡಿಸುವ ಕಾರ್ಯವನ್ನು ಟೀಮ್ ಸತ್ಯಜಿತ್ ತಂಡ ಮಾಡುತ್ತಿರುವುದು ಅಭಿನಂದನೀಯವಾಗಿದೆ. ಈ ತಂಡದಿಂದ ಇನ್ನಷ್ಟು ಸಮಾಜಮುಖಿ ಕೆಲಸಗಳು ನಡೆಯಲಿ ಎಂದು ಶುಭ ಹಾರೈಸಿದರು.

ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ, ವಕೀಲರಾದ ಶೈಲಜಾ ರಾಜೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಹಿಂದೂ ಮುಖಂಡ ಸತ್ಯಜಿತ್ ಸುರತ್ಕಲ್, ಪಾಣೆಮಂಗಳೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರ ಶೇಖರ್ ಭಂಡಾರಿ, ಹಿಂದೂ ಮುಖಂಡರಾದ ರವಿರಾಜ್ ಬಿ ಸಿ ರೋಡ್, ಶರ್ಮಿಳಾ ಅನಂತ್ ಪೊಳಲಿ, ಸಂತೋಷ್ ಪೊಳಲಿ, ಟೀಮ್ ಸತ್ಯಜಿತ್ ಸಂಘಟನೆಯ ಅಧ್ಯಕ್ಷ ಜಗದೀಶ್ ನೆತ್ತರಕೆರೆ, ಗುರುರಾಜ್ ಬಂಟ್ವಾಳ ಇದ್ದರು. ಹರ್ಷಿತ್ ಪಲ್ಲಮಜಲು ಸ್ವಾಗತಿಸಿ, ರಾಜೀವ ಕಕ್ಕೆ ಪದವು ಕಾರ್ಯಕ್ರಮ ನಿರೂಪಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಿಬ್ಬಂದಿಗೆ ಕ್ರೀಡಾಕೂಟ | ಶಾಸಕ ಎ.ಎಸ್.ಪೊನ್ನಣ್ಣ ಸಲಹೆ

ಪ್ರತಿಯೊಬ್ಬರು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಮುನ್ನಡೆಯಿರಿ

ಮಡಿಕೇರಿ: ಕ್ರೀಡೆ ಸಹಿತ ವಿವಿಧ ಕ್ಷೇತ್ರದಲ್ಲಿ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಮುನ್ನಡೆಯುವಂತಾಗಬೇಕು ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಇಲಾಖಾ ಸಿಬ್ಬಂದಿಗೆ ಎರಡು ದಿನಗಳ ಕಾಲ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೊಡಗು ಜಿಲ್ಲೆ ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶದಲ್ಲಿ ರಾಜ್ಯದಲ್ಲಿ 3 ನೇ ಸ್ಥಾನ ಪಡೆದಿದೆ. ಶೇಕಡಾವಾರು ಕಡಿಮೆ ಅಂಕ ಪಡೆದವರು ಶಿಕ್ಷಣದ ಜತೆಗೆ ಕ್ರೀಡೆ ಸಹಿತ ಆಸಕ್ತ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸವಾಲನ್ನು ಮೆಟ್ಟಿ ನಿಂತು ಮೇಲೆ ಬರಲು ಪ್ರಯತ್ನಿಸಬೇಕು ಎಂದರು.



ಕ್ರೀಡೆ ಎಂದರೆ ಕೊಡಗು, ಕೊಡಗು ಎಂದರೆ ಕ್ರೀಡೆ ಎಂಬಂತಾಗಿದೆ. ದೇಶಕ್ಕೆ ಅತಿ ದೊಡ್ಡ ಪ್ರಮಾಣದಲ್ಲಿ ಕ್ರೀಡಾಪಟುಗಳನ್ನು ನೀಡಿದ ಜಿಲ್ಲೆ ಕೊಡಗು ಆಗಿದೆ. ಬೇಸಿಗೆ ಕಾಲದಲ್ಲಿ ಜಿಲ್ಲೆಯಾದ್ಯಂತ ವಿವಿಧ ಕ್ರೀಡಾ ಹಬ್ಬಗಳು ಜರುಗುವುದು ವಿಶೇಷ. ಆ ನಿಟ್ಟಿನಲ್ಲಿ ಕ್ರೀಡಾ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್ ಅವರು ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಜಾಗ ಇದ್ದು, ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆಗೆ ಸಹಕಾರ ಮಾಡುವಂತೆ ಶಾಸಕರಲ್ಲಿ ಮನವಿ ಮಾಡಿದರು.

ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಪದ್ಧತಿಯಲ್ಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ಸೇವಾ ಭದ್ರತೆ ಒದಗಿಸುವಂತಾಗಬೇಕು. ಹಾಗೆಯೇ ಮಿನಿ ಆರೋಗ್ಯ ಸೌಧ ನಿರ್ಮಾಣಕ್ಕೆ ಸಹಕರಿಸುವಂತೆಯೂ ಅವರು ಕೋರಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವೈದ್ಯಾಧಿಕಾರಿಗಳಾದ ಡಾ.ಆನಂದ್, ಡಾ.ಸನತ್ ಕುಮಾರ್, ಆಹಾರ ಸುರಕ್ಷತೆ ಅಧಿಕಾರಿ ಡಾ.ಅನಿಲ್ ಧವನ್, ಡಾ. ಇಂದೂಧರ, ವೀರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಿಮ್ಮಯ್ಯ, ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ, ಪಾಲಾಕ್ಷ, ನವೀನ್, ದೇವರಾಜು, ಶ್ರೀನಾಥ್, ಮಂಜುನಾಥ್ ಇದ್ದರು.

ಪರಿಸರದಲ್ಲಿ ದುರ್ವಾಸನೆ, ಸೊಳ್ಳೆಗಳ ಉತ್ಪತ್ತಿ

ಚರಂಡಿಗೆ ಕೊಳಚೆ ನೀರು ಸೇರ್ಪಡೆ

ಸುರತ್ಕಲ್: ಇಲ್ಲಿನ ಇಡ್ಯಾ ನಾರಾಯಣ ಗುರು ಮಂದಿರಕ್ಕೆ ತೆರಳುವ ಪ್ರಮುಖ ಮಾರ್ಗದ ಬಳಿ ಗಂಭೀರ ಸ್ವಚ್ಛತಾ ಸಮಸ್ಯೆ ತಲೆದೋರಿದ್ದು, ಸ್ಥಳೀಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಸ್ತೆಯ ಒಂದು ಬದಿಯ ಮಳೆ ನೀರು ಹರಿಯುವ ಚರಂಡಿಗೆ ದೂರದ ಮನೆಗಳಿಂದ ಪೈಪ್ ಮೂಲಕ ನೇರವಾಗಿ ಕೊಳಚೆ ನೀರನ್ನು ಬಿಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಚರಂಡಿಯಲ್ಲಿ ಕೊಳಚೆ ನೀರು ಹರಿಯದೆ ಸುತ್ತಮುತ್ತಲಿನ ಪ್ರದೇಶದಲ್ಲಿ ದುರ್ವಾಸನೆ ವ್ಯಾಪಕ ಹರಡುತ್ತಿದೆ. ಅಲ್ಲದೆ, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ತಕ್ಷಣವೇ ಈ ಅಕ್ರಮ ಕೊಳಚೆ ನೀರು ಹರಿಸುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಂದು ಸ್ಥಳೀಯರು ಎಚ್ಚರಿಕೆ ನೀಡಿದ್ದಾರೆ.



ಸುತ್ತಮುತ್ತ

ಇಂದು ಮುದಿಯಾರು ಶ್ರೀ ನಾಗೇಂದ್ರ ಸನ್ನಿಧಿ ವಾರ್ಷಿಕೋತ್ಸವ

ಮುಳ್ಳೇರಿಯ: ಮುದಿಯಾರು ಶ್ರೀ ನಾಗೇಂದ್ರ ಸನ್ನಿಧಿಯಲ್ಲಿ ವಾರ್ಷಿಕೋತ್ಸವ ಏ.14ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಇದರಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 7 ಗಂಟೆಗೆ ಮಹಾಗಣಪತಿ ಹೋಮ, 8ಕ್ಕೆ ಭಜನೆ, 9.30ಕ್ಕೆ ತಂಬಿಲ, 11 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಹಿರಿಯ ಸಾಹಿತಿ ಡಾ.ನರೇಂದ್ರ ರೈ ದೇರ್ಲ ಉದ್ಘಾಟಿಸುವರು. ಡಾ.ರಾಜಾರಾಮ್ ಡಿ.ಕೆ. ಗೌಡ, ರಾಮಣ್ಣ ಮಾಸ್ತರ್ ದೇಲಂಪಾಡಿ ಉಪಸ್ಥಿತರಿರುವರು. ಈ ಸಂದರ್ಭದಲ್ಲಿ ಹಿರಿಯ ಧಾರ್ಮಿಕ ಮುಂದಾಳು ಬಿ.ಈಶ್ವರ ಸರಳಾಯರನ್ನು ಸನ್ಮಾನಿಸಲಾಗುವುದು. ನಿವೃತ್ತ ಪ್ರಾಂಶುಪಾಲ ಡಾ.ಯತೀಶ್‌ಕುಮಾರ್ ರೈ ಅವರನ್ನು ಅಭಿನಂದಿಸಲಾಗುವುದು. ನಾರಾಯಣ ದೇಲಂಪಾಡಿ ಅಭಿನಂದನಾ ಭಾಷಣ ಮಾಡುವರು. ಬಳಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣೆ, ಆರೋಗ್ಯ ಮಾಹಿತಿ ಉಪನ್ಯಾಸ ನಡೆಯಲಿದೆ. ಮಧ್ಯಾಹ್ನ ಅನ್ನಸಂತರ್ಪಣೆ, ಅಪರಾಹ್ನ ವೈದ್ಯಕೀಯ ಶಿಬಿರ, ಅಪರಾಹ್ನ 2 ಗಂಟೆಯಿಂದ ಖ್ಯಾತ ಕಲಾವಿದರಿಂದ ಕದಂಬ ಕೌಶಿಕೆ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಸ್ಕೂಟರ್ ಮಗುಚಿ ಬಿದ್ದು ಸಹೋದರಿಯರಿಗೆ ಗಾಯ, ಆಸ್ಪತ್ರೆಗೆ ದಾಖಲು

ಕಾಸರಗೋಡು: ಸ್ಕೂಟರ್ ನಿಯಂತ್ರಣತಪ್ಪಿ ಮಗುಚಿ ಬಿದ್ದು ಸಹೋದರಿಯರಿಬ್ಬರು ಗಾಯಗೊಂಡ ಘಟನೆ ನಡೆದಿದೆ. ಪುಲ್ಲೂರು ಮಧುರಂಬಾಡಿ ನಿವಾಸಿ ಮಂಜುಷ ಎಂಬವರ ಮಕ್ಕಳಾದ ಕಾವ್ಯ (28) ಮತ್ತು ಚೈತನ್ಯ (23) ಗಾಯಗೊಂಡಿದ್ದು ಅವರನ್ನು ಕಣ್ಣೂರಿನ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿದೆ. ಸ್ಕೂಟರ್‌ನಲ್ಲಿ ಅವರ ಜೊತೆಗೆ ಆರು ವರ್ಷದ ಬಾಲಕನೂ ಸಂಚರಿಸುತ್ತಿದ್ದನು. ಆ ಬಾಲಕ ಗಾಯಗಳಿಲ್ಲದೆ ಪಾರಾಗಿದ್ದಾನೆ. ಇವರು ಕುಂಡಂಗುಳಿಯಲ್ಲಿ ವಿವಾಹ ಸಮಾರಂಭದಲ್ಲಿ ಭಾಗವಹಿಸಲೆಂದು ಸ್ಕೂಟರ್‌ನಲ್ಲಿ ಸಾಗುತ್ತಿದ್ದ ದಾರಿ ಮಧ್ಯೆ ಪೆರಿಯ ಸಮೀಪದ ಮೂನಾಂಕಡವು ಇಳಿಜಾರು ಪ್ರದೇಶದಲ್ಲಿ ಸ್ಕೂಟರ್ ನಿಯಂತ್ರಣ ತಪ್ಪಿ ಮಗುಚಿ ಬಿದ್ದು ಈ ಅಪಘಾತ ಸಂಭವಿಸಿದೆ. ಮೂನಾಂಕಡವು ಇಳಿಜಾರು ರಸ್ತೆಯಲ್ಲಿ ವಾಹನ ಅಪಘಾತ ನಡೆಯುತ್ತಿರುವುದು ಇತ್ತೀಚೆಗೆ ಹೆಚ್ಚಾಗುತ್ತಿದ್ದು ಅದಕ್ಕೆ ತುರ್ತು ಪರಿಹಾರ ಕಂಡುಕೊಳ್ಳಬೇಕೆಂದು ಬೇಡಿಕೆ ಇದೇ ಸಂದರ್ಭದಲ್ಲಿ ಪರಿಸರ ನಿವಾಸಿಗಳಿಂದ ಉಂಟಾಗಿದೆ.

ಇಂದು ರುಕ್ಮಿಣೀ ಸ್ವಯಂವರ ಶೋಭಾಯಾತ್ರೆ



ಬದಿಯಡ್ಕ: ಸನಾತನ ಸಂಸ್ಕೃತಿಯ ತತ್ವಾದರ್ಶಗಳನ್ನು ಹಿಂದೂ ಸಮಾಜದಲ್ಲಿ ಮರುಪೂರಣಗೊಳಿಸುತ್ತಾ ಕೌಟುಂಬಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಿ ಧಾರ್ಮಿಕ ಶ್ರದ್ಧೆ ವಿಶ್ವಾಸ, ಜ್ಞಾನ ಹಾಗೂ ಸಾಮಾಜಿಕ ಸಾಮರಸ್ಯದ ಭಾವ ಜಾಗೃತಗೊಳಿಸಲು ಲೋಕ ಕಲ್ಯಾಣಾರ್ಥವಾಗಿ ಶ್ರೀಮದ್ ಭಾಗವತ ಸಪ್ತಾಹ ಎಂಬ ಪುಣ್ಯ ಕಾರ್ಯಕ್ರಮವು ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾಮಂದಿರದಲ್ಲಿ ಈಗಾಗಲೇ ಪ್ರಾರಂಭಗೊಂಡು ಏ.16ರ ತನಕ ಜರಗಲಿರುವುದು. ಆ ಪ್ರಯುಕ್ತ ಏ.14ರಂದು ಸಂಜೆ 4 ಗಂಟೆಗೆ ಮವ್ವಾರು ಶ್ರೀಕೃಷ್ಣ ಭಜನಾ ಮಂದಿರದಿಂದ ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರಕ್ಕೆ ರುಕ್ಮಿಣಿ ಸ್ವಯಂವರ ಶೋಭಾಯಾತ್ರೆಯು ಹೊರಡಲಿರುವುದು. ಈ ಪುಣ್ಯ ಕಾರ್ಯದಲ್ಲಿ ಭಕ್ತ ಬಂಧುಗಳು ಭಾಗವಹಿಸಿ ಶ್ರೀಕೃಷ್ಣ ಪರಮಾತ್ಮನ ದಿವ್ಯಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಾಸರಗೋಡಿನಲ್ಲಿ ವಿಷು ಆಚರಣೆಗೆ ಸಿದ್ಧತೆ | 16 ಅಗತ್ಯ ವಸ್ತುಗಳನ್ನು ಒಳಗೊಂಡಿರುವ ವಿಶೇಷ ಕಿಟ್


ಸಪ್ಲೈಕೋ ಮಳಿಗೆಯಲ್ಲಿ ಇಂದಿನವರೆಗೆ ಮಾತ್ರ ವಿಷುಕಿಟ್ ಲಭ್ಯ

ಕಾಸರಗೋಡು: ವಿಷು ಆಚರಣೆಗೆ ಸಿದ್ಧತೆ ನಡೆಯುತ್ತಿರುವಂತೆಯೇ ಸಪ್ಲೈಕೋ ವಿಷು ಮಾರುಕಟ್ಟೆಗಳು ಸಕ್ರಿಯವಾಗಿವೆ. ವಿಷು ಮಾರುಕಟ್ಟೆಗಳಲ್ಲಿ ವಿಷು ಹಬ್ಬದ ಕಿಟ್ ಏ.14ರ ವರೆಗೆ ಲಭ್ಯವಿದೆ. ಮಾವೇಲಿ ಸ್ಟೋರ್ ಹೊರತುಪಡಿಸಿ ಎಲ್ಲಾ ಸಪ್ಲೈಕೋ ಮಳಿಗೆಗಳಲ್ಲಿ ವಿಷು ಕಿಟ್ ಏ.14ರ ವರೆಗೆ ಲಭಿಸಲಿದೆ ಎಂದು ಸಪ್ಲೈಕೋ ಅಧಿಕಾರಿಗಳು ತಿಳಿಸಿದ್ದಾರೆ.

ಸಪ್ಲೈಕೋ ವಿಷು ಕಣಿ ಮತ್ತು ವಿಷುಗಾಗಿ 16 ಅಗತ್ಯ ವಸ್ತುಗಳನ್ನು ಒಳಗೊಂಡಿರುವ ವಿಶೇಷ ವಿಷು ಕಣಿ ಕಿಟ್ ಸಿದ್ಧಪಡಿಸಲಾಗಿದೆ. ವೈದ್ಯಕೀಯ ಅಂಗಡಿ, ಪೆಟ್ರೋಲ್ ಬಂಕ್ ಮತ್ತು ಎಲ್‌ಪಿಜಿ ಮಳಿಗೆ ಹೊರತುಪಡಿಸಿ ಸಪ್ಲೈಕೋ ಮಳಿಗೆಗಳಿಂದ 1000 ರೂ.ಗಿಂತ ಹೆಚ್ಚಿನ ಮೌಲ್ಯದ ಸಬ್ಸಿಡಿ ರಹಿತ ಸರಕು ಖರೀದಿಸುವವರಿಗೆ ವಿಷು ಕಣಿಯಾಗಿ 101 ರೂ. ಕೂಪನ್ ಲಭಿಸುತ್ತದೆ. ಕೂಪನ್‌ನೊಂದಿಗೆ ರೂ. 100ಕ್ಕಿಂತ ಹೆಚ್ಚಿನ ಸಬ್ಸಿಡಿ ರಹಿತ ಸರಕುಗಳ ಖರೀದಿಗೆ ರೂ. 101 ರಿಯಾಯಿತಿ ಪಡೆಯಬಹುದು.

16 ಅಗತ್ಯ ವಸ್ತುಗಳನ್ನು ಒಳಗೊಂಡಿರುವ ರೂ. 1250 ರೂ. ಮೌಲ್ಯದ ವಿಶೇಷ ವಿಷು ಕಣಿ ಕಿಟ್





ಸಪ್ಲೈಕೋ ಮಳಿಗೆಗಳಲ್ಲಿ ಲಭ್ಯವಿದೆ. ಅಲ್ಲದೆ ಸಪ್ಲೈಕೋ ಕಿಟ್ ರೂ. 1001 ಗೆ ಲಭ್ಯವಿದೆ. ಈ ಕಿಟ್‌ನಲ್ಲಿ ಸಕ್ಕರೆ, ಕಡಲೆ, ಬೆಲ್ಲದ ಪುಡಿ, ಬೀನ್ಸ್, ಬಟಾಣಿ, ಶಬರಿ (ಶ್ಯಾವಿಗೆ/ಪಲಾಡ) ಪಾಯಸಂ ಮಿಶ್ರಣ, ಪಾಯಸಕೂಟ್ಟು, ಮಿಲ್ಮಾ ತುಪ್ಪ, ಶಬರಿ ತೆಂಗಿನ ಎಣ್ಣೆ, ಗೋಲ್ಡ್ ಟಿ ಪುಡಿ, ಜೀರಿಗೆ, ಸಾಸಿವೆ, ಉಪ್ಪು, ಬೇಕಿಂಗ್ ಪೌಡರ್/ಬ್ರೆಡ್ ಪೌಡರ್, ಚಿಕನ್ ಮಸಾಲ ಮತ್ತು ಗರಂ ಮಸಾಲ ಸೇರಿವೆ. ಶಬರಿ ಉತ್ಪನ್ನ ಮತ್ತು ವೇಗವಾಗಿ ಮಾರಾಟವಾಗುವ ಗ್ರಾಹಕ ವಸ್ತುಗಳು ವಿಷು ಮಾರುಕಟ್ಟೆಗಳಲ್ಲಿ ವಿಶೇಷ ಬೆಲೆಯಲ್ಲಿ ಲಭ್ಯವಿದೆ. ಸಪ್ಲೈಕೋ ಈಸ್ಟರ್ - ವಿಷು ಮಾರುಕಟ್ಟೆಗಳು ಏ.1ರಂದು ರಾಜ್ಯದಲ್ಲಿ ಪ್ರಾರಂಭವಾಗಿದ್ದು, ಸಪ್ಲೈಕೋ ಸೂಪರ್‌ಸ್ಟೋರ್, ಸೂಪರ್ ಮಾರ್ಕೆಟ್‌ಗಳು, ಹೈಪರ್ ಮಾರ್ಕೆಟ್‌ಗಳು, ಪೀಪಲ್ಸ್ ಬಜಾರ್‌ಗಳು ಮತ್ತು ಸಿಗ್ನೇಚರ್ ಮಾರ್ಟ್‌ಗಳಲ್ಲಿ ಸಾಮಗ್ರಿಗಳು ಲಭ್ಯವಿದೆ.

ಒಂದು ಕಾರ್ಡ್‌ಗೆ ಒಂದು ಕಿಟ್ ಮಾತ್ರ

ವಿಷು ಸಪ್ಲೈ ಕೋ ಮಾರುಕಟ್ಟೆಯಲ್ಲಿ ಒಂದು ಪಡಿತರ ಕಾರ್ಡ್‌ನಲ್ಲಿ ಎಷ್ಟು ಮಂದಿ ಸದಸ್ಯರಿದ್ದರೂ ಒಂದು ಕಾರ್ಡ್‌ಗೆ ರಿಯಾಯಿತಿ ದರದಲ್ಲಿ ಒಂದು ವಿಷು ಕಿಟ್ ಮಾತ್ರ ಲಭಿಸುವುದು. ಸಪ್ಲೈಕೋದಲ್ಲಿ ವಿಷು ಕಿಟ್‌ಗಾಗಿ ಜನರು ಸೋಮವಾರ ಬೆಳಗ್ಗಿನಿಂದಲೇ ಸರದಿಯಲ್ಲಿ ನಿಂತು ಸಾಮಗ್ರಿ ಪಡೆದುಕೊಂಡರು.

ಅಲ್ಲದೆ ವಿಧಾನಸಭಾ ಚುನಾವಣೆಯಲ್ಲಿ ಎಲ್ಲರೂ ಮತದಾನ ಹಕ್ಕು ಚಲಾಯಿಸಬೇಕೆಂಬ ಉದ್ದೇಶದಿಂದ ಸಪ್ಲೈಕೋದಿಂದ 1,000 ರೂ.ಗಿಂತ ಹೆಚ್ಚಿನ ಸಬ್ಸಿಡಿ ರಹಿತ ವಸ್ತು ಖರೀದಿಸುವ ಗ್ರಾಹಕರಿಗೆ 1 ರೂ.ಗೆ 1 ಕೆಜಿ ಪುಟ್ಟಿ ಪುಡಿ ವಿತರಿಸುವ ಯೋಜನೆ ಕೈಗೊಂಡಿದ್ದು, ಮತದಾನದ ಶಾಹಿ ಹಾಕಿದ ಬೆರಳ ಗುರುತು ತೋರಿಸಿದವರಿಗೆ 1 ರೂ.ಗೆ 1 ಕಿಲೋಗ್ರಾಂ ಶಬರಿ ಪುಟ್ಟು ಹುಡಿ ಶುಕ್ರವಾರ, ಶನಿವಾರ ರಾಜ್ಯದ ಸಪ್ಲೈಕೋ ಮಾರುಕಟ್ಟೆಯಲ್ಲಿ ವಿತರಿಸಲಾಯಿತು.

ಸಾಮಗ್ರಿಗಳಿಗೆ ಶೇಕಡಾ 40ರಷ್ಟು ಸಬ್ಸಿಡಿ

ಸಾಮಾನ್ಯ ಮಾರುಕಟ್ಟೆಗೆ ಹೋಲಿಸಿದರೆ ದಿನನಿತ್ಯದ ವಸ್ತುಗಳು ಶೇಕಡಾ 40ರಷ್ಟು ರಿಯಾಯಿತಿಯಲ್ಲಿ ಲಭ್ಯವಿರುತ್ತವೆ. ಇದರ ಜೊತೆಗೆ ಆಂಧ್ರ ಜಯ ಅಕ್ಕಿ, ಕುರುವಾ ಅಕ್ಕಿ, ಮಟ್ಟಾ ಅಕ್ಕಿ, ಬೆಳ್ತಿಗೆ ಅಕ್ಕಿ, ಸಕ್ಕರೆ, ಉದ್ದಿನಬೇಳೆ, ಸಣ್ಣ ಬಟಾಣಿ, ಬಟಾಣಿ, ಅಲಸಂತೆ ಬೀಜ, ತೊಗರಿಬೇಳೆ, ದೊಡ್ಡ ಬಟಾಣಿ, ಮೆಣಸಿನಕಾಯಿ, ಕೊತ್ತಂಬರಿ ಮತ್ತು ತೆಂಗಿನ ಎಣ್ಣೆ ಮುಂತಾದ 13 ದಿನನಿತ್ಯದ ವಸ್ತುಗಳು ಸರಕಾರದ ಸಬ್ಸಿಡಿಯೊಂದಿಗೆ ಲಭ್ಯವಿರುತ್ತವೆ.

ಎಡನೀರಿನಲ್ಲಿ ಕನ್ನಡ ಸಂಸ್ಕೃತಿ ಶಿಬಿರ ಸಮಾರೋಪ, ಕೃತಿಗಳ ಬಿಡುಗಡೆ



ಬದಿಯಡ್ಕ: ಭೂಮಿಕಾ ಪ್ರತಿಷ್ಠಾನ ಉಡುಪಮೂಲೆ ಎಡನೀರು ಇದರ ಆಶ್ರಯದಲ್ಲಿ ಎಡನೀರು ಶ್ರೀ ಮಠದ ಆವರಣದಲ್ಲಿ ಏ.8ರಿಂದ ಆಯೋಜಿಸಲಾಗಿದ್ದ 14ನೇ ವರ್ಷದ ಕನ್ನಡ ಸಂಸ್ಕೃತಿ ಶಿಬಿರ ಭಾನುವಾರ ಸಮಾರೋಪಗೊಂಡಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಉಪಸ್ಥಿತರಿದ್ದು ಆಶೀರ್ವಚನ ನೀಡಿದರು. ಈ ಸಂದರ್ಭ ಪ್ರತಿಷ್ಠಾನದ ಸಂಯೋಜಕಿ ವಿದುಷಿ ಅನುಪಮಾ ರಾಘವೇಂದ್ರ ಉಡುಪಮೂಲೆ ಅವರ ಹೊಂಗಿರಣ ಕಥಾ ಸಂಕಲನ ಹಾಗೂ ಶಿಲ್ಪಾ ಪರಮೇಶ್ವರ ಅವರ ಮೆಲು ಹೆಜ್ಜೆ ಕವನ ಸಂಕಲನ ಕೃತಿಗಳನ್ನು ಶ್ರೀಗಳು ಲೋಕಾರ್ಪಣೆಗೊಳಿಸಿದರು. ಜೊತೆಗೆ ರ್‍ಯಾಂಕ್ ವಿಜೇತೆ ವೈದೇಹಿ ಕೆ. ಅವರನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಹನ ಕೆ. ಅವರಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಕಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು. ದೀಪಾ ಶಂಕರ ಸುಳ್ಯ ಸ್ವಾಗತಿಸಿ, ವಂದಿಸಿದರು. ವಿದುಷಿ ಅನುಪಮಾ ರಾಘವೇಂದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ಅನಘಾ ಭಟ್ ಸುಳ್ಯ ಪ್ರಾರ್ಥನಾ ಗೀತೆ ಹಾಡಿದರು. ಅನಿರುದ್ಧ ವಿಷ್ಣು ಶರ್ಮ ಉಡುಪಮೂಲೆ ನಿರೂಪಿಸಿದರು. ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ಕಾಸರಗೋಡು ತಂಡದವರಿಂದ ಲಂಕಾ ದಹನ ಬೊಂಬೆಯಾಟ ಪ್ರದರ್ಶನ ನಡೆಯಿತು. ಏ.8ರಂದು ಭವಾನಿ ಶಂಕರ ಎಂ. ಅವರಿಂದ ಉದ್ಘಾಟನೆಗೊಂಡ ಸಂಸ್ಕೃತಿ ಶಿಬಿರದಲ್ಲಿ ನಿರ್ವಹಣಾ ಕೌಶಲ್ಯದೊಂದಿಗೆ ವ್ಯಕ್ತಿತ್ವ ವಿಕಾಸದ ಬಗ್ಗೆ ನಿರ್ಮಲ್ ಕುಮಾರ್ ಕಾವಡ್ಕ, ಸುಂದರ ಹಸಿರು ನಮ್ಮ ಉಸಿರು ವಿಷಯದ ಬಗ್ಗೆ ಚೇವಾರು ವಿನೋದ, ರಂಗೋಲಿಯ ವಿಷಯದಲ್ಲಿ ಸದಾಶಿವ ಬಾಲಮಿತ್ರ, ಹಾಡೋಣ, ನಲಿಯೋಣ, ಕಲಿಯೋಣ ವಿಷಯದಲ್ಲಿ ಕಿಶೋರ್ ಪೆರ್ಲ, ಲತಾ ಪ್ರಕಾಶ್ ರಾವ್ ಬಹುಮಾನ ಬೆಳ್ಳೂರಡ್ಕ ವಿವಿಧ ದಿನಗಳಲ್ಲಿ ತರಬೇತಿ ನೀಡಿದ್ದರು.

ಬೇಕೂರು: ಭಾರೀ ಪ್ರಮಾಣದಲ್ಲಿ ಕುಡಿಯುವ ನೀರು ಪೋಲು, ಆಕ್ರೋಶ



ಉಪ್ಪಳ: ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿ ಪ್ರದೇಶಗಳಲ್ಲಿ ಕುಡಿಯುವ ನೀರು ವಿತರಣೆಗೊಳ್ಳುತ್ತಿರುವ ಪ್ರಧಾನ ಪೈಪ್‌ನಿಂದ ಪ್ರತೀದಿನ ಸಾವಿರಾರು ಲೀಟರ್ ಕುಡಿಯುವ ನೀರು ಪೋಲಾಗುತ್ತಿದ್ದು ವ್ಯವಸ್ಥಿತವಾಗಿ ದುರಸ್ತಿಗೊಳಿಸಲು ಅಧಿಕಾರಿಗಳು ವಿಫಲಗೊಂಡಿರುವುದು ಸಾರ್ವಜನಿಕರನ್ನು ಆಕ್ರೋಶಕ್ಕೀಡುಮಾಡಿದೆ.

ಕೈಕಂಬ - ಬಾಯಾರು ರಸ್ತೆಯ ಬೇಕೂರು ಹಳೇ ಅಂಚೆ ಕಚೇರಿ ಸಮೀಪದಲ್ಲಿ ಪೈಪ್ ಬಿರುಕು ಬಿಟ್ಟು ಭಾರೀ ಪ್ರಮಾಣದ ಕುಡಿಯುವ ನೀರು ಪೋಲಾಗುತ್ತಿದೆ. ಕೊಡಂಗೆ ಹೊಳೆಯಲ್ಲಿರುವ ಬಾವಿಯಿಂದ ಬೇಕೂರು ಹಿರಣ್ಯಪದವಿನ ಟ್ಯಾಂಕ್‌ಗೆ ಸರಬರಾಜುಗೊಳ್ಳುತ್ತಿರುವ ಕುಡಿಯುವ ನೀರಿನ ಪ್ರಧಾನ ಪೈಪ್‌ನಿಂದ ನೀರು ಸೋರಿಕೆಯಾಗುತ್ತಿದೆ. ಇಲ್ಲಿ ವಾಲ್ ಗೇಟ್‌ನ್ನು ನಿರ್ಮಿಸಲಾಗಿದೆ. ಇದರಿಂದ ಸೋರಿಕೆಯಾದ ನೀರು ಪರಿಸರದ ಚರಂಡಿ ಸೇರುತ್ತಿದೆ. ಈ ಪೈಪ್ ಹಲವು ಬಾರಿ ಬಿರುಕುಬಿಟ್ಟಿದ್ದು, ಆದರೆ ಆಗಾಗ ತಾತ್ಕಾಲಿಕವಾಗಿ ಸರಿಪಡಿಸಲಾಗುತ್ತಿದೆ. ಆದರೂ ಸಂಪೂರ್ಣ ರೀತಿಯಲ್ಲಿ ಸರಿಪಡಿಸಲಾಗುತ್ತಿಲ್ಲ. ಇದರಿಂದಾಗಿ ಮತ್ತೆ ಮತ್ತೆ ಬಿರುಕು ಬಿಡುತ್ತಿರುವುದಾಗಿ ಸ್ಥಳೀಯರು ಹೇಳುತ್ತಿದ್ದಾರೆ.

ಹೊಳೆಯಲ್ಲಿ ನೀರಿನ ಕೊರತೆಯಿಂದಾಗಿ ಈಗಾಗಲೇ ಕೆಲವು ದಿನಗಳಿಗೊಮ್ಮೆ ನೀರು ವಿತರಿಸಲಾಗುತ್ತಿದೆ. ಆದ್ದರಿಂದ ಬಿರುಕು ಬಿಟ್ಟು ಕುಡಿಯುವ ನೀರು ಪೋಲಾಗುತ್ತಿರುವ ಪೈಪ್‌ನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಕೆಲಸ ನಡೆಸಿ ಕಡು ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಮೈಸೂರಿನಿಂದ ಪೆರಡಾಲ ಬ್ರಹ್ಮಕಲಶೋತ್ಸವಕ್ಕೆ ಹಸಿರುವಾಣಿ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವವು ಏ.17ರಂದು ಆರಂಭವಾಗಿ 28ರ ತನಕ ನಡೆಯಲಿದೆ.

ಪೂರ್ವಭಾವಿಯಾಗಿ ಮೈಸೂರು ಪ್ರಾದೇಶಿಕ ಸಮಿತಿಯ ನೇತೃತ್ವದಲ್ಲಿ ಶ್ರೀ ಕ್ಷೇತ್ರಕ್ಕೆ ಹಸಿರುವಾಣಿ, ದವಸಧಾನ್ಯಗಳನ್ನು ಸಮರ್ಪಿಸಲಾಯಿತು. ಮೈಸೂರು ಪ್ರಾದೇಶಿಕ ಸಮಿತಿಯ ಅಧ್ಯಕ್ಷರಾದ ಜ್ಯೋತಿಷಿ ವೆಂಕಟೇಶ್ವರ ಭಟ್ ಕುಂಜಾರು ನೇತೃತ್ವದಲ್ಲಿ ಮೈಸೂರಿನ ಭಗವದ್ಭಕ್ತರು ಸಾವಯವ ಕೃಷಿ ಮಾಡಿದ್ದರು. ಸೋಮವಾರ ಬೆಳಗ್ಗೆ ಲಾರಿಗಳಲ್ಲಿ ಆಗಮಿಸಿದ ಹಸಿರುವಾಣಿಯನ್ನು ಶ್ರೀ ಕ್ಷೇತ್ರದ ಪದಾಧಿಕಾರಿಗಳು ಸ್ವೀಕರಿಸಿದರು. ಅರ್ಚಕ ಶಿವರಾಮ ಭಟ್ ಪೆರಡಾಲ ಪ್ರಾರ್ಥನೆಯನ್ನು ಸಲ್ಲಿಸಿದರು.

ಮೊಕ್ತೇಸರ ಜಗನ್ನಾಥ ರೈ ಪೆರಡಾಲಗುತ್ತು, ಸೀತಾರಾಮ ನವಕಾನ, ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಆಹಾರ ಸಮಿತಿಯ ಪ್ರಧಾನ ಸಂಚಾಲಕ ಗಣೇಶಕೃಷ್ಣ ಅಳಕ್ಕೆ, ಜೊತೆ ಕಾರ್ಯದರ್ಶಿ ಡಾ.ಶ್ರೀಶಕುಮಾರ ಪಂಜಿತ್ತಡ್ಕ, ಲೆಕ್ಕಪರಿಶೋಧಕ ಸತೀಶ ಪುದ್ಯೋಡು, ಕಾರ್ಯದರ್ಶಿ ಗಣೇಶಪ್ರಸಾದ ಕಡಪ್ಪು, ಜೊತೆ ಕಾರ್ಯದರ್ಶಿ ಭಾಸ್ಕರ ಪಂಜಿತ್ತಡ್ಕ, ಶಿವಶಕ್ತಿ ಕ್ಲಬ್‌ನ ಸದಸ್ಯರು, ಉಗ್ರಾಣ ಸಮಿತಿಯ ಅಧ್ಯಕ್ಷ ಸದಾಶಿವ ಮುರಿಯಂಕೂಡ್ಲು, ಮಾತೃಸಮಿತಿ ಪದಾಧಿಕಾರಿಗಳು, ಸದಸ್ಯರು, ಬ್ರಹ್ಮಕಲಶೋತ್ಸವ ಸಮಿತಿ, ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಬಾಯಾರು ಹೆಲ್ತ್ ಸೆಂಟರ್‌ನಲ್ಲಿ 24 ಗಂಟೆ ಒಪಿ ಸೇವೆ ನೀಡಲು ಒತ್ತಾಯ



ಮಂಜೇಶ್ವರ: ಬಾಯಾರು ಹೆಲ್ತ್ ಸೆಂಟರ್‌ನಲ್ಲಿ 24 ಗಂಟೆಗಳ ಓ.ಪಿ. ಸೇವೆ ಮಂಜೂರುಗೊಳಿಸಬೇಕೆಂಬ ಬೇಡಿಕೆ ತೀವ್ರಗೊಂಡಿದ್ದು, ಪ್ರಸ್ತುತ ಈ ಸೆಂಟರ್‌ನಲ್ಲಿ ಓರ್ವ ವೈದ್ಯರ ಸೇವೆ ಮಾತ್ರವೇ ಇದೆ. ಬಾಯಾರು ಆರೋಗ್ಯ ಕೇಂದ್ರಕ್ಕಾಗಿ ನೂತನವಾಗಿ ಕಟ್ಟಡ ನಿರ್ಮಿಸಿ ಉದ್ಘಾಟಿಸಿದಾಗ ಆರೋಗ್ಯ ಸಚಿವೆ 24 ಗಂಟೆಗಳ ಓ.ಪಿ.ಸೇವೆ ಜಾರಿಗೊಳಿಸಲಾಗುವುದು ಎಂದು ಘೋಷಿಸಿದ್ದರು. ಆದರೆ ಇದುವರೆಗೆ ಜಾರಿಯಾಗಿಲ್ಲ. ಮೂರು ವೈದ್ಯರ ಸೇವೆ ಬೇಕಾದಲ್ಲಿ ಈಗ ಓರ್ವರು ಮಾತ್ರವೇ ಇದ್ದಾರೆ. ಈಗ ಮಧ್ಯಾಹ್ನದ ವರೆಗೆ ಮಾತ್ರ ಓ.ಪಿ. ಕಾರ್ಯಾಚರಿಸುತ್ತಿದೆ. ಇದರಿಂದಾಗಿ ವೈದ್ಯರುಗಳ ಕೊರತೆ ರೋಗಿಗಳಿಗೆ ಅತ್ಯಂತ ಸಮಸ್ಯೆ ಉಂಟುಮಾಡುತ್ತಿದೆ. ಹಲವಾರು ರೋಗಿಗಳು ದಿನನಿತ್ಯ ತಲುಪುವ ಆಸ್ಪತ್ರೆಯಲ್ಲಿ ಓರ್ವ ವೈದ್ಯರಿಂದ ತಪಾಸಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ನಾಗರಿಕರು ದೂರಿದ್ದಾರೆ.

ಅಲ್ಪ ಮೊತ್ತದ ವೇತನ

ದಿನ ವೇತನದ ಆಧಾರದಲ್ಲಿ ವೈದ್ಯರನ್ನು ನೇಮಕಗೊಳಿಸಲು ಪ್ರಯತ್ನಿಸಲಾಗುತ್ತಿದ್ದರೂ ಅಲ್ಪ ಮೊತ್ತದ ವೇತನಕ್ಕೆ ಯಾರೂ ಬರುತ್ತಿಲ್ಲ. ಈಗ ಇರುವ ಫಾರ್ಮಸಿಸ್ಟ್‌ಗೆ ಪಂಚಾಯತ್ ವತಿಯಿಂದ ವೇತನ ನೀಡಲಾಗುತ್ತಿದೆ. ಅಗತ್ಯಕ್ಕೆ ನೌಕರರನ್ನು ನೇಮಕಗೊಳಿಸದ ಸರಕಾರದ ನಿಲುವು ಆಸ್ಪತ್ರೆಯ ಸುಗಮ ಚಟುವಟಿಕೆಗಳಿಗೆ ಸಮಸ್ಯೆಯನ್ನು ಉಂಟುಮಾಡುತ್ತಿದೆ. ಕೃಷಿಕರು, ಬಡವರು ಹೆಚ್ಚಾಗಿ ಆಶ್ರಯಿಸುವ ಮಲೆನಾಡು ವಲಯದಲ್ಲಿ ಆಶ್ರಯಿಸುವ ಏಕ ಆಸ್ಪತ್ರೆಯ ಈ ದುಸ್ಥಿತಿಯನ್ನು ಸರಿಪಡಿಸಲು ಸಚಿವೆ ನೀಡಿದ ಭರವಸೆಯನ್ನು ಜಾರಿಗೊಳಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಐಲ ಶ್ರೀ ದುರ್ಗಾಪರಮೇಶ್ವರೀ ದೇಗುಲದಲ್ಲಿ ವಿಷು ಜಾತ್ರೆ ಆರಂಭ

ಉಪ್ಪಳ: ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಾವಧಿ ವಿಷು ಜಾತ್ರೆ ಸೋಮವಾರ ಆರಂಭಗೊಂಡಿದ್ದು, ಏ.19ರ ತನಕ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಏ.18ರ ತನಕ ಪ್ರತಿನಿತ್ಯ ಮಧ್ಯಾಹ್ನ 12ರಿಂದ ಸಾಮೂಹಿಕ ಸರ್ವಮಂಗಲ ಮಾಂಗಲ್ಯ ಸ್ತುತಿ ಪಾರಾಯಣ, ಮಧ್ಯಾಹ್ನ 12.30ರಿಂದ ಹೂವಿನ ಪೂಜೆ, ಮಹಾಪೂಜೆ, ಬಲಿ ಉತ್ಸವ, ಸಂಜೆ 5ರಿಂದ ಭಜನಾ ಸಂಕೀರ್ತನೆ, 6.30ರಿಂದ ದೀಪಾರಾಧನೆ, ಭಜನಾಸಂಕೀರ್ತನೆ, ಸರ್ವಮಂಗಳ ಮಂಗ ಸ್ತುತಿ ಪಾರಾಯಣ, ರಾತ್ರಿ 7.30ರಿಂದ ಹೂವಿನಪೂಜೆ, ಮಹಾಪೂಜೆ ನಡೆಯಲಿದೆ.

ಏ.14ರಂದು ಬೆಳಗ್ಗೆ 10ಕ್ಕೆ ಧ್ವಜಾರೋಹಣ, ಬಲಿ ಉತ್ಸವ, ಏ.15ರಂದು ಮುಂಜಾನೆ 5.30ರಿಂದ ವಿಷುಕಣಿ ದರ್ಶನ, ಭಜನೆ, ಪೂರ್ವಾಹ್ನ 7ರಿಂದ ನಿತ್ಯಪೂಜೆ, ಹೂವಿನ ಪೂಜೆ, ಬಲಿ ಉತ್ಸವ, ಗಣಪತಿಹೋಮ, ನವಕ ಕಲಶ, 9.30ರಿಂದ ಪಂಚಾಂಗ ಶ್ರವಣ ಪೂರ್ವಾಹ್ನ 10ರಿಂದ ಮನೋಲ್ಲಾಸಿನಿ ವಿಭಿನ್ನಸಂಗೀತ, ಏ.16ರಂದು ಬೆಳಗ್ಗೆ 7ರಿಂದ ನಿತ್ಯಪೂಜೆ, ಹೂವಿನ ಪೂಜೆ, ಬಲಿ ಉತ್ಸವ, ಗಣಪತಿ ಹೋಮ, ನವಕ ಕಲಶ, ರಾತ್ರಿ 7.45 ರಿಂದ ಮಹಾತಿರುವಾದಿರಕ್ಕಳಿ, 8ರಿಂದ ಮಾಗಣೆ ಕೊಟ, ಪಲ್ಲಕ್ಕಿ ಉತ್ಸವ ಸಹಿತ ಬಲಿ ಉತ್ಸವ, ನಡುದೀಪೋತ್ಸವ, ರಾಜಾಂಗಣ ಪ್ರಸಾದ ನಡೆಯಲಿದೆ. ಏ.17ರಂದು ಪೂರ್ವಾಹ್ನ 7ರಿಂದ ನಿತ್ಯಪೂಜೆ, ಹೂವಿನ ಪೂಜೆ, ಬಲಿ ಉತ್ಸವ, ಗಣಹೋಮ, ನವಕ ಕಲಶ, ರಾತ್ರಿ 7.45ರಿಂದ ಬಲಿ ಉತ್ಸವ, ರಾಜಾಂಗಣ ಪ್ರಸಾದ, ಕೆರೆ ದೀಪೋತ್ಸವ 9.30ರಿಂದ ಐಲ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರ ಮೈದಾನದಲ್ಲಿ ವಿವಿಧ ಕುಣಿತ ಭಜನಾ ತಂಡಗಳ ಸಮ್ಮಿಲನದೊಂದಿಗೆ ಏಕಕಾಲದಲ್ಲಿ ವಿರಾಟ್ ನೃತ್ಯ ಭಜನಾ ಸಂಭ್ರಮ, 10.30ರಿಂದ ಕಟ್ಟೆಪೂಜೆ, ಸಾರ್ವಜನಿಕ ಸುಡುಮದ್ದು ಪ್ರದರ್ಶನ, ರಾತ್ರಿ 12.30ರಿಂದ ಕವಾಟ ಬಂಧನ, ಏ.18ರಂದು ಬೆಳಗ್ಗೆ 7ರಿಂದ ಕವಾಟೋದ್ಘಾಟನೆ, ಅಭಿಷೇಕ, ಪೂಜೆ, 9.30ರಿಂದ ತುಲಾಭಾರ ಸೇವೆ, ಸಂಜೆ 4ರಿಂದ ಆರಾಟೋತ್ಸವ, ರಾಜಾಂಗಣ ಪ್ರಸಾದ (ಅವಭೃತ ಸ್ನಾನಕ್ಕಾಗಿ ದೇವರ ಬಲಿ ಉತ್ಸವವು ಕುಬಣೂರು ಶ್ರೀ ಶಾಸ್ತಾವು ದೇವಸ್ಥಾನದತ್ತ ತೆರಳುವುದು), ರಾತ್ರಿ ಗಂಟೆ 10ರಿಂದ ಧ್ವಜಾವರೋಹಣ ನವಕ ಕಲಶ, ಸಂಪ್ರೋಕ್ಷಣೆ, ಏ.19ರಂದು ಸಂಜೆ 5ಕ್ಕೆ ಶ್ರೀ ವ್ಯಾಘ್ರ ಚಾಮುಂಡಿ ದೈವದ ನೇಮ ಜರಗಲಿದೆ.

ಪ್ರತಾಪನಗರ ಶಿವ ಶಕ್ತಿ ಫ್ರೆಂಡ್ಸ್ ಕ್ಲಬ್ ವಾರ್ಷಿಕೋತ್ಸವ: ಗಣ್ಯರಿಗೆ ಗೌರವಾರ್ಪಣೆ



ಉಪ್ಪಳ: ಪ್ರತಾಪನಗರ ಶಿವಶಕ್ತಿ ಫ್ರೆಂಡ್ಸ್ ಕ್ಲಬ್‌ನ 34ನೇ ವರ್ಷದ ವಾರ್ಷಿಕೋತ್ಸವವು ನಿಮಿತ್ತ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ಶನಿವಾರ ನಡೆಯಿತು. ಇದರಂಗವಾಗಿ ನಡೆದ ಸಭೆಯಲ್ಲಿ ಕ್ಲಬ್‌ನ ಅಧ್ಯಕ್ಷ ದಿವಾಕರ ಪ್ರತಾಪನಗರ ಅಧ್ಯಕ್ಷತೆ ವಹಿಸಿದ್ದರು.

ಸುಕೇಶ್ ಚೌಟ ಉಳ್ಳಾಲಗುತ್ತು ಧಾರ್ಮಿಕ ಭಾಷಣ ಮಾಡಿದರು. ಧಾರ್ಮಿಕ ಮುಂದಾಳು ಸಂಜೀವ ಶೆಟ್ಟಿ ತಿಂಬರ ಮುಂಬಯಿ, ವಕೀಲ ರಾಮ ಪಾಟಾಳಿ ಕುಂಬಳೆ, ಮುಂಬಯಿ ಉದ್ಯಮಿ ಮೋಹನ ಶೆಟ್ಟಿ ಕೂಳೂರು ಮಜ್ವಾರ್, ವಾರ್ಡ್ ಸದಸ್ಯ ವಸಂತ್ ಕುಮಾರ್ ಮಯ್ಯ, ಮಂಗಳೂರು ಎ.ಜೆ.ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಕಿಶೋರ್‌ಕುಮಾರ್ ಶೆಟ್ಟಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಮಂಗಲ್ಪಾಡಿ ಮನೆಯ ಸುಫಲಚಂದ್ರ ನಾಯಕ್ ಹಾಗೂ ವೇದಿಕೆಯಲ್ಲಿದ್ದ ಗಣ್ಯರನ್ನು ಗೌರವಿಸಲಾಯಿತು.

ಸುರೇಶ್ ಜಿ. ಸ್ವಾಗತಿಸಿದರು. ನಿತೀಶ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ರಾಜೇಶ್ ಪ್ರಾರ್ಥನೆ ಹಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ ಅಮ್ಮ ಕಲಾವಿದರ್ ಕುಡ್ಲ ಇವರಿಂದ ಆನ್ ಮಗೆ ಎಂಬ ತುಳು ನಾಟಕ ಪ್ರದರ್ಶನಗೊಂಡಿತು.

ಏ.18-23: ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ

ಕಾಸರಗೋಡು: ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.18ರಿಂದ 23ರ ವರೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ಅನುಗ್ರಹದೊಂದಿಗೆ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಪೌರೋಹಿತ್ಯದಲ್ಲಿ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಪದಾಧಿಕಾರಿಗಳು ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಏ.18ರಂದು ಬೆಳಗ್ಗೆ 7.30ಕ್ಕೆ ಗಣಪತಿ ಹವನ, ವಿವಿಧ ವೈದಿಕ ಕಾರ್ಯಕ್ರಮ, 8.30ಕ್ಕೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಪ್ರಾರ್ಥನೆಗೈದು ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆಗೆ ಚಾಲನೆ, 9 ಗಂಟೆಗೆ ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆ ಕರಂದಕ್ಕಾಡು ಶ್ರೀ ವೀರ ಹನುಮಾನ್ ಮಂದಿರ ಪರಿಸರದಿಂದ ವಾದ್ಯಘೋಷಗಳೊಂದಿಗೆ



ಭವ್ಯ ಮೆರವಣಿಗೆಯೊಂದಿಗೆ ಶ್ರೀ ಕ್ಷೇತ್ರಕ್ಕೆ ಆಗಮನ, 11.30ಕ್ಕೆ ಉಗ್ರಾಣ ಮುಹೂರ್ತ, ಸಂಜೆ 4.30ಕ್ಕೆ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರಿಗೆ ಪೂರ್ಣಕುಂಭ ಸ್ವಾಗತ, 6.15ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಗೆ ಪೂರ್ಣಕುಂಭ ಸ್ವಾಗತ, ಶ್ರೀ ಸನ್ನಿಧಿಯ ಗರ್ಭಗುಡಿ ಬಾಗಿಲಿಗೆ ಬೆಳ್ಳಿ ಹೊದಿಕೆ ಮತ್ತು ಗರ್ಭಗುಡಿಯ ಮುಂಭಾಗಕ್ಕೆ ಹಿತ್ತಾಳೆ ಹೊದಿಕೆ ಸಮರ್ಪಣೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ಧಾರ್ಮಿಕ ಸಭೆ, ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡುವರು, ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ, ವಿವಿಧ ಗಣ್ಯರು ಉಪಸ್ಥಿತರಿರುವರು. ರಾತ್ರಿ 7.30ಕ್ಕೆ ನಾದಮಯ ಬೋಧಿಬ್ರಹ್ಮ ಆರ್ಕೆಸ್ಟ್ರಾ ಜರಗಲಿದೆ.

ಏ.19ರಂದು ಬೆಳಗ್ಗೆ 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮಗಳು, ವಿವಿಧ ಭಜನಾ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಅಪರಾಹ್ನ 2 ಗಂಟೆಗೆ ಯಕ್ಷಗಾನ ತಾಳಮದ್ದಳೆ, ಸಂಜೆ 5ಕ್ಕೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭಾ ಕಾರ್ಯಕ್ರಮ, ಒಡಿಯೂರು ಸ್ವಾಮೀಜಿಯವರಿಂದ ಆಶೀರ್ವಚನ, ರಾತ್ರಿ 7.30ಕ್ಕೆ ನಾಟ್ಯೋತ್ಸವಂ ಜರಗಲಿದೆ.

ಏ.20ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ಕ್ಕೆ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭಾ ಕಾರ್ಯಕ್ರಮ, ಕೊಂಡೆವೂರು ಸ್ವಾಮೀಜಿಯವರಿಂದ ಆಶೀರ್ವಚನ, ರಾತ್ರಿ 7.30ಕ್ಕೆ ನಾಗದಿಗಂಬರಿ ಮಲೆಯಾಳ ನಾಟಕ ಪ್ರದರ್ಶನಗೊಳ್ಳಲಿದೆ.

ಏ.21ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, ತತ್ವಮಸಿ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ಶೋಭಾ ಅರವಿಂದ ನಾಯ್ಕ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ, ಯುನೈಟೆಡ್ ಮೆಡಿಕಲ್ ಸೆಂಟರ್ ಡಾ.ವೀಣಾ ಮಂಜುನಾಥ್ ಕಾಸರಗೋಡು, ಸತಿ ಕೋಡೋತ್ ವಿಶ್ವಹಿಂದು ಪರಿಷತ್, ಮಾತೃ ಸಮಿತಿ, ಕಣ್ಣೂರು, ರಾತ್ರಿ 7.30ಕ್ಕೆ ಸ್ಥಳೀಯ ಪ್ರತಿಭೆಗಳಿಂದ ನೃತ್ಯ ವೈಭವ ಜರಗಲಿದೆ.

ಏ.22ರಂದು ವಿವಿಧ ವೈದಿಕ ಕಾರ್ಯಕ್ರಮಗಳು, ವಿವಿಧ ಭಜನಾ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ಕ್ಕೆ ಶ್ರೀಮಾತಾ ಅಮೃತಾನಂದಮಯಿ ಮಠದ ಬ್ರಹ್ಮಚಾರಿ ಶ್ರೀ ವೇದ ವೇದಾಮೃತ ಚೈತನ್ಯ ಅವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭೆ, ಶ್ರೀಗಳಿಂದ ಆಶೀರ್ವಚನ, ರಾತ್ರಿ 7.30ಕ್ಕೆ ಫ್ಯೂಷನ್ ಭಜನೆ ನಡೆಯಲಿದೆ.

ಏ.23ರಂದು ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ, 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮಗಳು, 7.34ರಿಂದ 9.37ರ ಮಧ್ಯೆ ವೃಷಭ ಲಗ್ನ ಶುಭಮುಹೂರ್ತದಲ್ಲಿ ಅಷ್ಟಬಂಧ ಲೇಪನ ಮತ್ತು ಬ್ರಹ್ಮಕಲಶಾಭಿಷೇಕ, ವಿವಿಧ ತಂಡಗಳಿಂದ ಭಜನೆ, 11.30ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಸಮಾರೋಪ ಸಮಾರಂಭ, ಎಡನೀರು ಶ್ರೀ ಗಳಿಂದ ಆಶೀರ್ವಚನ, ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಉಪಸ್ಥಿತಿ, ವಿವಿಧ ವಲಯಗಳ ಗಣ್ಯರು ಭಾಗವಹಿಸುವರು. ಸಂಜೆ 5ಕ್ಕೆ ಭರತನಾಟ್ಯ, ರಾತ್ರಿ 8 ಗಂಟೆಗೆ ಭಸ್ಮಾಸುರ ಮೋಹಿನಿ, ಶಬರಿಮಲೆ ಶ್ರೀ ಸ್ವಾಮಿ ಅಯ್ಯಪ್ಪ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಏ.24ರಂದು ವಾರ್ಷಿಕ ಮಹೋತ್ಸವ

ವಾರ್ಷಿಕ ಮಹೋತ್ಸವದ ಅಂಗವಾಗಿ ಏ.24ರಂದು ಬೆಳಗ್ಗೆ 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, 10 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಸಂಜೆ 6ಕ್ಕೆ ದೀಪಾರಾಧನೆ, ತಾಯಂಬಕ, ರಾತ್ರಿ 7ಕ್ಕೆ ಶ್ರೀ ದೇವರ ಉತ್ಸವ ಬಲಿ, ಕಟ್ಟೆಪೂಜೆ ಜರಗಲಿದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ರಸಾದ್ ಕೋಟೆಕಣಿ, ಸಮಿತಿ ಕಾರ್ಯಾಧ್ಯಕ್ಷ ಬಾಲಕೃಷ್ಣನ್ ಚೆನ್ನಿಕರೆ, ಶ್ರೀ ಕ್ಷೇತ್ರ ಟ್ರಸ್ಟ್ ಅಧ್ಯಕ್ಷ ಗಣೇಶ್ ಅಮ್ಮೆ, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷರಾದ ರವೀಂದ್ರ ಕೋಟೆಕಣಿ, ರಾಮನ್ ಚೆನ್ನಿಕರೆ, ಪ್ರಚಾರ ಸಮಿತಿ ಅಧ್ಯಕ್ಷ ಗುರುಪ್ರಸಾದ್ ಕೋಟೆಕಣಿ ಉಪಸ್ಥಿತರಿದ್ದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಮಂಗಳವಾರ 14, ಏಪ್ರಿಲ್ 2026

ಸುತ್ತಮುತ್ತ

ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಲೋಕಾರ್ಪಣೆ ಇಂದು



ಕಾರ್ಕಳ: ಕಳೆದ 15 ವರ್ಷಗಳಿಂದ ಮೌಲ್ಯಾಧಾರಿತ ಶಿಕ್ಷಣ ನೀಡುವುದರೊಂದಿಗೆ ಅನೇಕ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನಗಳನ್ನು ನೀಡುತ್ತಾ ಬಂದಿರುವ ಅಜೆಕಾರ್ ಪದ್ಮ ಗೋಪಾಲ್ ಎಜುಕೇಶನ್ ಟ್ರಸ್ಟ್(ರಿ) ವತಿಯಿಂದ ಕಾರ್ಕಳ ತಾಲೂಕಿನ ಅಜೆಕಾರಿನ ಪದ್ಮನಗರದಲ್ಲಿ 4ನೇ ಕ್ಯಾಂಪಸ್ ನ ಇಂದು (ಏಪ್ರಿಲ್ 14) ಲೋಕಾರ್ಪಣೆಗೊಳ್ಳಲಿದೆ. ಕಾರ್ಕಳದ ಗಣಿತ ನಗರದಲ್ಲಿ ಜ್ಞಾನಸುಧಾ ಸಂಸ್ಥೆಯನ್ನು ಕಟ್ಟಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿರುವ ಡಾ. ಸುಧಾಕರ್ ಶೆಟ್ಟಿ ಅವರು ತನ್ನ ಅಮ್ಮನ ನೂರನೆಯ ಹುಟ್ಟುಹಬ್ಬವನ್ನು ಸಾರ್ಥಕ ಪಡಿಸುತ್ತಿದ್ದಾರೆ.
ಪದ್ಮ ಜಿ. ಶೆಟ್ಟಿ ಅವರ ಜನಶತಮಾನೋತ್ಸವದ ಪ್ರಯುಕ್ತ ಅಜೆಕಾರು ಜ್ಞಾನ ಸುಧಾ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಹುಟ್ಟೂರಿನ ವಿದ್ಯಾರ್ಥಿಗಳಿಗಾಗಿ ಅಜೆಕಾರು ಪದ್ಮನಗರದಲ್ಲಿ ಸಕಲ ಸೌಕರ್ಯದೊಂದಿಗೆ 9ನೇ ತರಗತಿಯಿಂದ ಉಚಿತ ಶಿಕ್ಷಣ ಕೊಡುವ ಮಹತ್ವಾಕಾಂಕ್ಷೆ ಯೋಜನೆ ಇದಾಗಿದೆ. ಏ.14ರ ಸಂಜೆ 5.30 ಕ್ಕೆ ಮಾಜಿ ಸಚಿವ ಶಾಸಕ ಸುನಿಲ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಪದವಿ ಪೂರ್ವ ಕಾಲೇಜು ಉದ್ಘಾಟಿಸಲಿದ್ದಾರೆ. ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿಭಾಗವನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಯ ಡಾ. ಮೋಹನ್ ಆಳ್ವ ಉದ್ಘಾಟಿಸಲಿದ್ದಾರೆ. ನಿಟ್ಟೆ ಡಾ. ವಿಶಾಲ್ ಹೆಗ್ಡೆ ಹಾಗೂ ಉದ್ಯಮಿ ಶಿವರಾಮ್ ಜಿ. ಶೆಟ್ಟಿ ಪ್ರಯೋಗಶಾಲೆ ಉದ್ಘಾಟಿಸಲಿದ್ದಾರೆ. ಡಾ. ಸುಧಾಕರ್ ಶೆಟ್ಟಿ ಉಪಸ್ಥಿತರಿರುವರು.

ಸೃಜನಶೀಲ ಕೃತಿಗೆ ಪ್ರಶಸ್ತಿ: ಅರ್ಜಿ ಆಹ್ವಾನ

ಕುಂದಾಪುರ: ಮಣಿಪಾಲ ಅಕಾಡೆಮಿ ಆಡಳಿತಾಧಿಕಾರಿಯಾಗಿದ್ದ ಸ್ವಪ್ನಶಿಲ್ಪಿ ಡಾ. ಎಚ್. ಶಾಂತಾರಾಮ್ ಅವರ ಹೆಸರಿನಲ್ಲಿ ಕುಂದಾಪುರ ಭಂಡಾರ್ಕಾರ್ಸ್ ಕಾಲೇಜು ದತ್ತಿನಿಧಿ ಸ್ಥಾಪಿಸಿ ಪ್ರತಿವರ್ಷ ಕನ್ನಡದ ಅತ್ಯುತ್ತಮ ಸೃಜನಶೀಲ ಕೃತಿಗೆ ಪ್ರಶಸ್ತಿ ನೀಡುತ್ತಾ ಬಂದಿದೆ. ಈ ವರ್ಷ ಸಣ್ಣಕಥೆಯನ್ನು ಪರಿಗಣಿಸಿದ್ದು 2024 ಮತ್ತು 2025ರ ಅವಧಿಯಲ್ಲಿ ಮೊದಲ ಆವೃತ್ತಿಯಾಗಿ ಪ್ರಕಟಗೊಂಡ ಸಣ್ಣ ಕಥಾ ಸಂಕಲನಗಳನ್ನು ಆಹ್ವಾನಿಸಲಾಗಿದೆ.
ಆಸಕ್ತ ಪ್ರಕಾಶಕರು ಮತ್ತು ಲೇಖಕರು ಸಣ್ಣ ಕಥಾಸಂಕಲನದ ನಾಲ್ಕು ಪ್ರತಿಗಳನ್ನು ಮೇ 10, 2026 ರೊಳಗೆ ಡಾ. ಎಚ್.ಶಾಂತಾರಾಮ್ ಸಾಹಿತ್ಯ ಪ್ರಶಸ್ತಿ ಸಮಿತಿ, ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ 576201 ಈ ವಿಳಾಸಕ್ಕೆ ಕಳುಹಿಸಿಕೊಡುವಂತೆ ಕೋರಲಾಗಿದೆ. ಈಗಾಗಲೇ ಪ್ರಶಸ್ತಿ ಪಡೆದವರಿಗೆ ಅವಕಾಶವಿರುವುದಿಲ್ಲ. ಪ್ರಶಸ್ತಿ ಪ್ರದಾನ ಸಮಾರಂಭ ಆಗಸ್ಟ್ ತಿಂಗಳಿನಲ್ಲಿ ನಡೆಯಲಿದ್ದು 15 ಸಾವಿರ ರೂಪಾಯಿಯೊಂದಿಗೆ ಬೆಳ್ಳಿ ಫಲಕ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊ. 8792107369 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಭೀಮ ಯಕ್ಷಶಿಕ್ಷಣ ಸನಿವಾಸ ಶಿಬಿರ ಸಮಾರೋಪ

ಉಡುಪಿ: ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಯಕ್ಷಶಿಕ್ಷಣ ಟ್ರಸ್ಟ್ ಉಡುಪಿ ವತಿಯಿಂದ ಭೀಮ ಗೋಲ್ಡ್ ಪ್ರೈ. ಲಿ., ಬೆಂಗಳೂರು ಇದರ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಒಂದುವಾರದ 'ಭೀಮ ಯಕ್ಷಶಿಕ್ಷಣ ಸನಿವಾಸ ಶಿಬಿರ-2026 ಇದರ ಸಮಾರೋಪ ಸಮಾರಂಭವು ಏ.14ರಂದು ನಡೆಯಲಿದೆ. ಗುರು ಬನ್ನಂಜೆ ಸಂಜೀವ ಸುವರ್ಣರ ನಿರ್ದೇಶನದಲ್ಲಿ 103 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಅಪರಾಹ್ನ 3ರಿಂದ 4ರ ವರೆಗೆ ವಿದ್ಯಾರ್ಥಿಗಳಿಂದ ಯಕ್ಷಗಾನ ಪ್ರಾತ್ಯಕ್ಷಿಕೆ ಹಾಗೂ 4ರಿಂದ ಸಭಾ ಕಾರ್ಯಕ್ರಮ ಜರಗಲಿದೆ ಎಂದು ಯಕ್ಷಶಿಕ್ಷಣ ಟ್ರಸ್ಟ್ನ ಅಧ್ಯಕ್ಷ ಯಶ್‌ಪಾಲ್ ಎ. ಸುವರ್ಣ ಹಾಗೂ ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಕೋರೆ, ಫ್ಯಾಕ್ಟ್ರಿ ಮೌನ!

ಈ ಪ್ರದೇಶದ ಕೆಂಪುಕಲ್ಲು ಕ್ವಾರೆ, ಕಾರ್ಖಾನೆಗಳಲ್ಲಿ ಉತ್ತರ ರಾಜ್ಯದ ಕಾರ್ಮಿಕರನ್ನೇ ತೊಡಗಿಸಿಕೊಳ್ಳಲಾಗುತ್ತಿದೆ. ಇದರಿಂದ ಊರಿನ ಕೂಲಿ ಕಾರ್ಮಿಕರು ಕೆಲಸದ ಕೊರತೆ ಅನುಭವಿಸುತ್ತಿರುವುದಾಗಿಯೂ ದೂರು ಕೇಳಿಬರುತ್ತಿದೆ. ಆದರೆ ಊರಿನ ಕಾರ್ಮಿಕರು ಇಂತಹ ಕಠಿಣ ಕೆಲಸದಲ್ಲಿ ತೊಡಗಿಸಿಕೊಳ್ಳಲು ಹಿಂದೇಟುಹಾಕುತ್ತಿರುವುದಾಗಿ ಕ್ವಾರೆ ಮಾಲಿಕರು ತಿಳಿಸುತ್ತಾರೆ.

ಕಲ್ಲಿನ ಗೋಡೆ!

ಆದರೆ ಸುರಕ್ಷತೆ ವ್ಯವಸ್ಥೆಗಳಿಲ್ಲ ಎಂಬುದಿಲ್ಲಿ ಗಮನಾರ್ಹ ಅಂಶವಾಗಿದೆ.
ಈ ರೈಲ್ವೆ ಸೇತುವೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಶೀಘ್ರ ಮುಂದಾಗಬೇಕು, ಮಧ್ಯದಲ್ಲಿರುವ ಕಾಂಕ್ರೀಟ್ ಪಿಲ್ಲರ್ ತೆರವುಗೊಳಿಸಿ, ರಸ್ತೆಯನ್ನು ವಿಸ್ತರಿಸಿದರೆ ಇಲ್ಲಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ರೈಲ್ವೆ ಮೇಲ್ಸೇತುವೆಯನ್ನು ಆಧುನೀಕರಣಗೊಳಿಸುವ ದೆಸೆ ಯಲ್ಲಿ ಜನಪ್ರತಿನಿಧಿಗಳು ಮನಸ್ಸು ಮಾಡುವಂತೆ ಇಲ್ಲಿನ ಸ್ಥಳೀಯರ ಆಗ್ರಹವಾಗಿದೆ.

ಬ್ಯಾಂಕ್ ಖಾತೆಗಳಿಗೆ ಸಮರ್ಪಕವಾಗಿ ಜಮೆಯಾಗದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಣ

ಬಾಳಿಗೆ ಭರವಸೆ ಆಗಬೇಕಿದ್ದ ಮಾಸಾಶನಕ್ಕೆ ತಾಂತ್ರಿಕ ಗ್ರಹಣ

ಚಿತ್ರ : ಸಾಂದರ್ಭಿಕ



ಉಡುಪಿ: ರಾಜ್ಯ ಸರ್ಕಾರದ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನ ನಂಬಿ ಬದುಕುತ್ತಿರುವ ಲಕ್ಷಾಂತರ ಹಿರಿಯ ನಾಗರಿಕರ ಬದುಕು ಈಗ ಅತಂತ್ರ ಸ್ಥಿತಿಗೆ ತಲುಪಿದೆ. ಕಳೆದ ಕೆಲವು ತಿಂಗಳುಗಳಿಂದ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಗಳ ಹಣ ಬ್ಯಾಂಕ್ ಖಾತೆಗಳಿಗೆ ಸಮರ್ಪಕವಾಗಿ ಜಮೆಯಾಗದೆ ಸ್ಥಗಿತಗೊಂಡಿರುವುದು ರಾಜ್ಯಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.
ಬಡ ವೃದ್ಧರಿಗೆ ದಿನನಿತ್ಯದ ಗುಳಿಗೆ ಮತ್ತು ಸಣ್ಣಪುಟ್ಟ ಖರ್ಚಿಗೆ ಆಸರೆಯಾಗಿದ್ದ ಆ ಮೊತ್ತವು ಈಗ ತಾಂತ್ರಿಕ ಕಾರಣಗಳ ನೆಪದಲ್ಲಿ ಮರೀಚಿಕೆಯಾಗಿ ಪರಿಣಮಿಸಿದೆ. ಸರ್ಕಾರದ ಈ ನಡೆಯಿಂದಾಗಿ ಅಶಕ್ತರು ಹೊಟ್ಟೆಪಾಡಿಗಾಗಿ ಕಚೇರಿಗಳಿಂದ ಕಚೇರಿಗಳಿಗೆ ಅಲೆಯುವಂತಾಗಿದ್ದು ಹಿರಿಯ ಜೀವಗಳ ನೆಮ್ಮದಿ ಕಸಿದುಕೊಂಡಂತಾಗಿದೆ.
ಸರ್ಕಾರವು ಪಿಂಚಣಿ ಪಟ್ಟಿಯನ್ನು ಪರಿಷ್ಕರಿಸುವ ನೆಪದಲ್ಲಿ ರಾಜ್ಯಾದ್ಯಂತ ಲಕ್ಷಾಂತರ ಜನರನ್ನು 'ಅನರ್ಹ' ಎಂದು ಗುರುತಿಸಿರುವುದು ಈ ಸಮಸ್ಯೆಯ ಮೂಲವಾಗಿದೆ. ಶ್ರೀಮಂತರು ಅಥವಾ ಮೃತಪಟ್ಟವರ ಹೆಸರಿನಲ್ಲಿ ಹಣ ದುರ್ಬಳಕೆಯಾಗುವುದನ್ನು ತಡೆಯುವುದು ಅನಿವಾರ್ಯವಾದರೂ, ಈ ಕಟ್ಟುನಿಟ್ಟಿನ ಪ್ರಕ್ರಿಯೆಯಲ್ಲಿ ನಿಜವಾದ ಬಡವರು ಮತ್ತು ಹಿರಿಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎಪಿಎಲ್ ಕಾರ್ಡ್ ಹೊಂದಿರುವುದು ಅಥವಾ ದಾಖಲೆಗಳಲ್ಲಿನ ಸಣ್ಣಪುಟ್ಟ ವ್ಯತ್ಯಾಸಗಳನ್ನೇ ಮುಂದಿಟ್ಟುಕೊಂಡು ವರ್ಷಗಳಿಂದ ಬರುತ್ತಿದ್ದ ಪಿಂಚಣಿಯನ್ನು ಏಕಾಏಕಿ ಸ್ಥಗಿತಗೊಳಿಸಿರುವುದು ಅಮಾನವೀಯವಾಗಿದೆ. ಅದರಲ್ಲೂ ಗ್ರಾಮೀಣ ಭಾಗದ ಜನರಿಗೆ ತಮಗೆ ಯಾಕೆ ಹಣ ಬರುತ್ತಿಲ್ಲ ಎಂಬ ಕನಿಷ್ಠ ಮಾಹಿತಿಯೂ ಸಿಗದೆ ಗೊಂದಲ ಉಂಟಾಗಿದೆ.

ಹೊರೆಯಾಗಿ ಪರಿಣಮಿಸಿವೆ ಆಧಾರ್ ಸೀಡಿಂಗ್, ಇ-ಕೆವೈಸಿ ಪ್ರಕ್ರಿಯೆ

ಇತ್ತೀಚಿನ ದಿನಗಳಲ್ಲಿ ಜಾರಿಗೆ ತಂದಿರುವ ಆಧಾರ್ ಸೀಡಿಂಗ್ ಮತ್ತು ಇ-ಕೆವೈಸಿ ಪ್ರಕ್ರಿಯೆಗಳು ಹಿರಿಯರಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿವೆ. ವಯೋಸಹಜವಾಗಿ ಬೆರಳಚ್ಚು ಸರಿಯಾಗಿ ಮೂಡದ ಕಾರಣ ಗ್ರಾಮ ಒನ್ ಕೇಂದ್ರಗಳಲ್ಲಿ ಇ-ಕೆವೈಸಿ ಮಾಡಿಸಲು ಸಾಧ್ಯವಾಗದೆ ಸಾವಿರಾರು ಜನರು ದಿನಗಟ್ಟಲೆ ಸಾಲುಗಟ್ಟುತ್ತಿದ್ದಾರೆ. ಬ್ಯಾಂಕ್‌ಗಳ ವಿಲೀನ ಪ್ರಕ್ರಿಯೆಯ ನಂತರ ಉಂಟಾಗಿರುವ ತಾಂತ್ರಿಕ ಎಡವಟ್ಟುಗಳು ಕೂಡ ಈ ಪಾವತಿ ವಿಳಂಬಕ್ಕೆ ಕಾರಣವಾಗಿವೆ. ಜಿಲ್ಲಾಡಳಿತಗಳು ಮತ್ತು ಕಂದಾಯ ಇಲಾಖೆಯು ಈ ಕೂಡಲೇ ಎಚ್ಚೆತ್ತುಕೊಂಡು ಅರ್ಹ ಫಲಾನುಭವಿಗಳಿಗೆ ಬಾಕಿ ಇರುವ ಮಾಸಾಶನವನ್ನು ಶೀಘ್ರವಾಗಿ ಬಿಡುಗಡೆ ಮಾಡಿ, ಹಿರಿಯರ ಬಾಳಿಗೆ ಆಸರೆಯಾಗಬೇಕಿದೆ.

ವಿವಿಧ ಸಾಮಾಜಿಕ ಭದ್ರತೆ, ಪಿಂಚಣಿ ಯೋಜನೆ

ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ 60ರಿಂದ 64 ವರ್ಷ ದವರೆಗೆ 600 ರೂ. ಹಾಗೂ 65 ವರ್ಷ ಮೇಲ್ಪಟ್ಟವರಿಗೆ 1,200ರೂ., ವಿಧವಾ ವೇತನದಡಿ 800ರೂ., ಅಂಗವಿಕಲ ವೇತನದಡಿ ಶೇ.40ರಿಂದ 74ರಷ್ಟಿದ್ದವರಿಗೆ 800 ರೂ., ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆಯಿದ್ದರೆ 1,400ರೂ. ಹಾಗೂ ಶೇ.75ಕ್ಕಿಂತ ಹೆಚ್ಚಿನ ಮನೋವೈಕಲ್ಯ ಇದ್ದರೆ 2,000 ರೂ. ಸಂಧ್ಯಾ ಸುರಕ್ಷಾ ದಡಿ 1,200ರೂ., ಮನಸ್ವಿನಿಯಡಿ 800ರೂ., ಮೈತ್ರಿ ಯೋಜನೆಯಡಿ 1,200 ರೂ., ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ 2,000 ರೂ., ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ 10,000 ರೂ., ಎಂಡೋಸಲ್ಫಾನ್ ಸಂತ್ರಸ್ತರಿಗೆ ಶೇ.25ರಿಂದ 59ರವರೆಗೆ ಅಂಗವೈಕಲ್ಯವಿದ್ದರೆ 2,000ರೂ., ಶೇ.60ಕ್ಕಿಂತ ಹೆಚ್ಚಿನ ಅಂಗವೈಕಲ್ಯವಿದ್ದರೆ 4,000ರೂ., ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಮತ್ತು ಕುಟುಂಬ ಪಿಂಚಣಿ 10,000 ರೂ., ಮಾಜಿ ದೇವದಾಸಿ ಮಾಸಾಶನ 2,000 ರೂ. ದೊರೆಯುತ್ತಿದೆ.

- ಬಡ ವೃದ್ಧರಿಗೆ ದಿನನಿತ್ಯದ ಗುಳಿಗೆ ಮತ್ತು ಸಣ್ಣಪುಟ್ಟ ಖರ್ಚಿಗೆ ಆಸರೆಯಾಗಿದ್ದ ಪಿಂಚಣಿ ಮೊತ್ತವು ಈಗ ತಾಂತ್ರಿಕ ಕಾರಣಗಳ ನೆಪದಲ್ಲಿ ಮರೀಚಿಕೆ
- ಸರ್ಕಾರದ ಈ ನಡೆಯಿಂದಾಗಿ ಅಶಕ್ತರು ಹೊಟ್ಟೆಪಾಡಿಗಾಗಿ ಕಚೇರಿಗಳಿಂದ ಕಚೇರಿಗಳಿಗೆ ಅಲೆಯುವಂತ ಪರಿಸ್ಥಿತಿ

ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ದಿನಗಣನೆ

ಏ. 15ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ



ಉಡುಪಿ: ಐತಿಹಾಸಿಕ ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಸಂಭ್ರಮ ಮನೆಮಾಡಿದ್ದು ಏ. 15ರಿಂದ ಏ. 20ರವರೆಗೆ ವೈವಿಧ್ಯಮಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮಾಧವ ಬನ್ನಂಜೆ ತಿಳಿಸಿದ್ದಾರೆ.
ದೇವಳದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಏ. 15ರಂದು ಅದ್ದೂರಿ ಹಸಿರು ಹೊರೆಕಾಣಿಕೆ ಮೆರವಣಿಗೆಗೆ ಉಡುಪಿಯ ಜೋಡುಕಟ್ಟೆಯಲ್ಲಿ ಚಾಲನೆ ದೊರೆಯಲಿದೆ. ನಾಡೋಜ ಜಿ. ಶಂಕರ್ ಅವರ ನೇತೃತ್ವದಲ್ಲಿ 100 ಹೊರೆಕಾಣಿಕೆ ವಾಹನಗಳು ಹಾಗೂ ಇತರ ಭಕ್ತಾದಿಗಳ ಸಹಕಾರದೊಂದಿಗೆ ಒಟ್ಟು 250 ಹೊರೆಕಾಣಿಕೆಗಳು ಕ್ಷೇತ್ರಕ್ಕೆ ಸಮರ್ಪಣೆಯಾಗಲಿವೆ. ವಿವಿಧ ಸ್ತಬ್ಧಚಿತ್ರಗಳನ್ನೊಳಗೊಂಡ ಈ ಮೆರವಣಿಗೆ ಜೋಡುಕಟ್ಟೆಯಿಂದ ಹೊರಟು ಸರ್ವಿಸ್ ಬಸ್ ನಿಲ್ದಾಣದ ಮೂಲಕ ದೇವಸ್ಥಾನಕ್ಕೆ ಆಗಮಿಸಲಿದೆ ಎಂದರು.
ಏ. 16ರಿಂದ ಏ. 20ರವರೆಗೆ ನಡೆಯುವ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಪ್ರತಿನಿತ್ಯ ಸುಮಾರು ಐದು ಸಾವಿರ ಭಕ್ತರಿಗೆ ಅನ್ನಪ್ರಸಾದ ವಿತರಿಸುವ ಆಯೋಜನೆ ಮಾಡಲಾಗಿದೆ. ಕಾರ್ಯಕ್ರಮದ ದಿನಗಳಲ್ಲಿ ಒಟ್ಟಾರೆ 34,000ಕ್ಕೂ ಅಧಿಕ ಭಕ್ತರು ಭಾಗವಹಿಸುವ ನಿರೀಕ್ಷೆಯಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಸರಸ್ವತಿ ಶಾಲೆ, ಸುಗುಣ ಹೋಟೆಲ್ ಪಕ್ಕದ ಆವರಣ, ಜಯಲಕ್ಷ್ಮೀ ಮಳಿಗೆ ಹಾಗೂ ಬನ್ನಂಜೆ ಬಿಲ್ಲವರ ಸೇವಾ ಸಂಘದ ಆವರಣ ಸೇರಿದಂತೆ ವಿವಿಧೆಡೆ ಪಾರ್ಕಿಂಗ್‌ಗೆ ಸ್ಥಳ ಗುರುತಿಸಲಾಗಿದೆ. ಏ. 15ರಿಂದ ದೇವಸ್ಥಾನದ ಆವರಣದ ವ್ಯಾಪಾರ ಮಳಿಗೆಗಳು ಕೂಡ ಶುಭಾರಂಭಗೊಳ್ಳಲಿವೆ.

ಭಕ್ತರ ಸಹಕಾರಕ್ಕೆ ಮನವಿ

ದೇವಸ್ಥಾನಕ್ಕೆ ಬರುವ ಭಕ್ತರಿಗೆ ಪಾರ್ಕಿಂಗ್ ಸಮಸ್ಯೆ ನೀಗಿಸಲು 36 ಸೆಂಟ್ಸ್ ಜಾಗವನ್ನು ಖರೀದಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಈಗಾಗಲೇ 50 ಲಕ್ಷ ರೂಪಾಯಿ ಮುಂಗಡ ಪಾವತಿಸಲಾಗಿದ್ದು, ಇನ್ನುಳಿದ 1.05 ಕೋಟಿ ರೂಪಾಯಿ ಹಣದ ಅವಶ್ಯಕತೆ ಇದೆ. ಈ ಜಾಗವನ್ನು ದೇವರಿಗೆ ಸಮರ್ಪಿಸಲು ಭಕ್ತರ ಉದಾರ ಸಹಕಾರ ಅಗತ್ಯವಿದ್ದು ಇದಕ್ಕಾಗಿ 1 ಸಾವಿರದಿಂದ 5 ಸಾವಿರ ರೂಪಾಯಿಗಳ ಕೂಪನ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, 100 ರೂಪಾಯಿ ಮುಂಗಡ ನೀಡಿ ಕಾಣಿಕೆ ಡಬ್ಬಿ ಪಡೆಯುವ ವ್ಯವಸ್ಥೆಯನ್ನೂ ಮಾಡಲಾಗಿದ್ದು ಭಕ್ತರು ಒಂದು ವರ್ಷದ ಅವಧಿಯಲ್ಲಿ ಅದನ್ನು ತುಂಬಿಸಿ ದೇವರಿಗೆ ಅರ್ಪಿಸುವ ಮೂಲಕ ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಳ್ಳಬಹುದು ಎಂದರು.
ಪ್ರಧಾನ ಅರ್ಚಕ ವಾಸುದೇವ ಉಪಾಧ್ಯಾ, ಪ್ರಧಾನ ತಂತ್ರಿಗಳಾದ ಶಶಿಕಾಂತ್ ತಂತ್ರಿ, ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ರಮೇಶ್ ಕಾಂಚನ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ದಿನೇಶ್ ಪುತ್ರನ್, ಎಂ. ಪ್ರಭಾಕರ್ ಶೆಟ್ಟಿ, ಶೇಖರ್ ಶೆಟ್ಟಿ ಸುದೇಶ್ ಶೇಟ್, ರಾಜೇಶ್ ಬಿ., ವಿದ್ಯಾಲತಾ ಯು. ಶೆಟ್ಟಿ ಹಾಗೂ ಶಮಿತಾ ಎಸ್ ಭಂಡಾರಿ ಉಪಸ್ಥಿತರಿದ್ದರು.

ಮೂಡ್ಲಕಟ್ಟೆಯಲ್ಲಿ 'ಕ್ಯೂ-ಪಿಯರ್' ಶೃಂಗಸಭೆ | ಪ್ರೊ. ಕೃಷ್ಣಮೂರ್ತಿ ಅಭಿಪ್ರಾಯ

ಕ್ವಾಂಟಮ್ ಕಂಪ್ಯೂಟೇಶನ್ ಕ್ರಾಂತಿಯಾಗಿದೆ



ಕುಂದಾಪುರ: ಐಎಂಜೆಐಆರ್' ಸಂಶೋಧನಾ ಸಂಸ್ಥೆ ಲೋಕಾರ್ಪಣೆ ಮತ್ತು ಎರಡು ದಿನಗಳ ಕ್ವಾಂಟಮ್ ಕಂಪ್ಯೂಟೇಶನ್, ಪ್ರಿಸಿಶನ್ ಇನ್ಸ್ಟ್ರುಮೆಂಟೇಶನ್ ಮತ್ತು ಎಮರ್ಜಿಂಗ್ ರಿಸರ್ಚ್ ಇನ್ಫ್ರಾಸ್ಟ್ರಕ್ಚರ್ 'ಕ್ಯೂ-ಪಿಯರ್ 2026' ರಾಷ್ಟ್ರೀಯ ಶೃಂಗಸಭೆ ಉದ್ಘಾಟನೆ ಮೂಡ್ಲಕಟ್ಟೆಯ ಐಎಂಜೆ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಸೋಮವಾರ ಜರುಗಿತು.
ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹೈದರಾಬಾದ್‌ನ ಟಿಐಎಫ್‌ಆರ್ ಇದರ ನಿರ್ದೇಶಕ ಪ್ರೊ.ಎಂ. ಕೃಷ್ಣಮೂರ್ತಿ ಅವರು ಕ್ವಾಂಟಮ್ ಕಂಪ್ಯೂಟೇಶನ್ ಕ್ಷೇತ್ರದ ಪ್ರಾಮುಖ್ಯತೆಯನ್ನು ತಿಳಿಸಿ ಪ್ರಸಕ್ತ ಅನ್ವೇಷಣಾ ವಲಯದಲ್ಲಿ ಇದರ ಕ್ರಾಂತಿಯ ಬಗ್ಗೆ ಹೇಳಿದರು.
ಮೂಡ್ಲಕಟ್ಟೆಯಲ್ಲಿ ಈ ಸಂಶೋಧನಾ ಕ್ಷೇತ್ರ ಸ್ಥಾಪಿಸಿರುವುದು ನಿಜವಾಗಿಯೂ ಶ್ಲಾಘನೀಯ ಎಂದು ಶ್ಲಾಘಿಸಿದರು.
ದಿಕ್ಸೂಚಿ ಭಾಷಣಕಾರರಾಗಿ ಆಗಮಿಸಿದ ಪ್ರೊ. ಸಪ್ತರ್ಷಿ ಚೌಧರಿ, ನ್ಯಾಷನಲ್ ಕ್ವಾಂಟಮ್ ಮಿಶನ್ ಬಗ್ಗೆ ವಿವರಿಸಿ ಭಾರತದಲ್ಲಿ ಪ್ರಸ್ತುತ ಕ್ವಾಂಟಮ್ ಕಂಪ್ಯೂಟ್ ಇಕೋ ಸಿಸ್ಟಮ್ ಇದರ ಸಮಗ್ರ ಪರಿಚಯ ನೀಡಿದರು.
ಗೌರವ ಅತಿಥಿಯಾಗಿದ್ದ ಕುವೆಂಪು ವಿವಿ ಉಪಕುಲಪತಿ ಪ್ರೊ.ಶರತ್ ಅನಂತಮೂರ್ತಿ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯ ಅಗತ್ಯವನ್ನು ಪ್ರತಿಪಾದಿಸಿದರು. ಪ್ರತಿಭಾವಂತ ಆದರೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಸಂಶೋಧನೆಯ ಬಗ್ಗೆ ಸಮಾಜ ಹಾಗೂ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಜವಾಬ್ದಾರಿ ವಹಿಸಬೇಕಾದ ಅಗತ್ಯತೆಯ ಕುರಿತು ಅವರು ಕಳಕಳಿ ವ್ಯಕ್ತಪಡಿಸಿದರು.
ಸಂಸ್ಥೆಯ ಅಧ್ಯಕ್ಷ ಸಿದ್ಧಾರ್ಥ ಜೆ. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಖ್ಯಾತ ಪರಮಾಣು ಭೌತ ಶಾಸ್ತ್ರಜ್ಞೆ ಡಾ. ಪುಷ್ಪಾ ಎಂ.ರಾವ್ ಅವರನ್ನು ಸನ್ಮಾನಿಸಲಾಯಿತು. ಈ ರಾಷ್ಟ್ರೀಯ ಶೃಂಗಸಭೆಯಲ್ಲಿ ದೇಶದ ವಿವಿಧ ಭಾಗಗಳಿಂದ ವಿಜ್ಞಾನಿಗಳು ಮತ್ತು ತಾಂತ್ರಿಕ ತಜ್ಞರು ಭಾಗವಹಿಸಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ.
ಸಂಸ್ಥೆಯ ಅಕಾಡೆಮಿಕ್ ನಿರ್ದೇಶಕ ಡಾ. ಎಸ್.ಎನ್. ಭಟ್ ಸ್ವಾಗತಿಸಿದರು. ಐ.ಎಂ.ಜೆ.ಐ.ಆರ್. ನಿರ್ದೇಶಕ ಡಾ. ಸತ್ಯಜಿತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಬ್ರ್ಯಾಂಡ್ ಬಿಲ್ಡಿಂಗ್ ಡೈರೆಕ್ಟರ್ ಡಾ. ರಾಮಕೃಷ್ಣ ಹೆಗಡೆ ವಂದಿಸಿದರು. ಪ್ರಾಧ್ಯಾಪಕಿ ಡಾ. ನಿಖಿಲ ನಿರೂಪಿಸಿದರು.

> **ಅನ್ವಯಿಕ ಜ್ಞಾನ ಅಳೆಯುವಂತಾಗಲಿ**
> ಪರೀಕ್ಷೆಗಳು ಕೇವಲ ನೆನಪಿನ ಶಕ್ತಿಯನ್ನು ಪರೀಕ್ಷಿಸುವ ವೇದಿಕೆಯಾಗದೆ, ವಿದ್ಯಾರ್ಥಿಗಳ ಅನ್ವಯಿಕ ಜ್ಞಾನವನ್ನು ಅಳೆಯುವಂತಾಗಬೇಕು.
> ● ಪ್ರೊ. ಶರತ್ ಅನಂತಮೂರ್ತಿ, ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿ

ಜೈ ಕುಂದಾಪ್ರ ದಶಮಾನೋತ್ಸವ, ಪಂಚವರ್ಣಕ್ಕೆ ಸೇವಾ ಪುರಸ್ಕಾರ ಪ್ರದಾನ



ಕೋಟ: ಸಮಾಜದ ಋಣ ತೀರಿಸಲು ಜೈ ಕುಂದಾಪ್ರ ಎಂಬ ಸಂಘಟನೆಗಳು ರಕ್ತದಾನದಂತಹ ಕಾರ್ಯಕ್ರಮಗಳ ಮೂಲಕ ಮನೆ ಮಾತಾಗಿ ಬೆಳೆದು ನಿಂತಿವೆ ಎಂದು ಕೋಟದ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ ಕುಂದರ್ ಅಭಿಪ್ರಾಯಪಟ್ಟರು.
ಭಾನುವಾರ ಕೋಟದಲ್ಲಿ ಕುಂದಾಪುರದ ಜೈ ಕುಂದಾಪ್ರ ಸೇವಾ ಟ್ರಸ್ಟ್ ದಶಮಾನೋತ್ಸವ ಕಾರ್ಯಕ್ರಮ 'ಜೈ ಕುಂದಾಪ್ರ ಸಂಭ್ರಮ-2026' ಎಂಬ ಶೀರ್ಷಿಕೆಯಡಿ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು. ಇದೇ ವೇಳೆ ಕೋಟದ ಪಂಚವರ್ಣ ಸಂಘಟನೆಗೆ ಜೈ ಕುಂದಾಪ್ರ ಸೇವಾ ಪುರಸ್ಕಾರ ನೀಡಿ ಗೌರವಿಸಲಾಯಿತು.
ವೇದಿಕೆಯಲ್ಲಿದ್ದ ಸಂಸದ ಕೋಟ ಶ್ರೀನಿವಾಸ ಪೂಜಾರಿಯವರು ಸಾಮಾಜಿಕ ಕಾರ್ಯಕರ್ತ ಕೋಟ ಶ್ರೀಕಾಂತ್ ಶೆಣೈ, ಪ್ರಗತಿಪರ ಕೃಷಿಕ ರವೀಂದ್ರ ಐತಾಳ್ ,ಧಾರ್ಮಿಕ ಕ್ಷೇತ್ರದ ಭಾಸ್ಕರ ಸ್ವಾಮೀ ಇವರಿಗೆ ವಿಶೇಷ ಅಭಿನಂದನೆ ಸಲ್ಲಿಸಿದರು. ಅಶಕ್ತರಿಗೆ ನೆರವು,ವಿಲ್ ಚೇರ್ ಹಸ್ತಾಂತರ, ಪ್ರತಿಭಾ ಪುರಸ್ಕಾರ ಸೇರಿದಂತೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳು ಜರಗಿದವು. ಸಭಾಧ್ಯಕ್ಷತೆಯನ್ನು ವರಲಕ್ಷ್ಮೀ ಚಾರಿಟೇಬಲ್ ಟ್ರಸ್ಟ್ ಮುಖ್ಯಸ್ಥ ಗೋವಿಂದಬಾಬು ಪೂಜಾರಿ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಬೆಂಗಳೂರಿನ ಉದ್ಯಮಿ ಪ್ರಕಾಶ್ ಶೆಟ್ಟಿ ಸತೀಶ್ ಶೆಟ್ಟಿ,ಜೈರಾಮ್ ಕುಲಾಲ್ ಜನ್ನಾಡಿ,ಪ್ರಕಾಶ್ ಸಿ ಶೆಟ್ಟಿ ಜೈ ಕುಂದಾಪ್ರ ಸೇವಾ ಟ್ರಸ್ಟ್ ನ ಆದಿತ್ಯ ಕೋಟ, ರಾಷ್ಟ್ರೀಯ ಮಾನವಹಕ್ಕು ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕೋಟ ದಿನೇಶ್ ಗಾಣಿಗ, ಕೋಟ ಪಂಚಾಯತ್ ಮಾಜಿ ಉಪಾಧ್ಯಕ್ಷ ಪಾಂಡು ಪೂಜಾರಿ, ನ್ಯಾಯವಾದಿ ನೀಲ್ ಫೆರೆರಾ, ಕಾಂಗ್ರೆಸ್ ಯುವ ಮುಖಂಡ ಅಜಿತ್ ಶೆಟ್ಟಿ ಕೃಷಿಕರಾದ ಅವಿನಾಶ್ ಬಳ್ಕನೆ, ವಿದ್ಯುತ್ ಗುತ್ತಿಗೆದಾರ ಕೆ.ಆರ್. ನಾಯಕ್, ವಿಕ್ಕಿ ಮೊಬೈಲ್ಸ್ ಮಾಲಿಕ ವಿವೇಕ್ ಸುವರ್ಣ , ಪ್ರಮುಖರಾದ ಪುಂಡಲಿಕ ಮೊಗವೀರ, ಜಯರಾಜ್ ಸಾಲಿಯಾನ್ ಇದ್ದರು. ಮಂಜುನಾಥ್ ಹಿಲಿಯಾಣ ಕಾರ್ಯಕ್ರಮ ನಿರೂಪಿಸಿದರು.

ಉಡುಪಿ ಜಿಲ್ಲಾ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಮತ್ತು ಆರ್ಕಿಟೆಕ್ಟ್ ಅಸೋಸಿಯೇಷನ್

ಅಧ್ಯಕ್ಷರಾಗಿ ಭಗವಾನ್‌ದಾಸ್ ಆಯ್ಕೆ

ಉಡುಪಿ: ಉಡುಪಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಮತ್ತು ಆರ್ಕಿಟೆಕ್ಟ್ ಅಸೋಸಿಯೇಷನ್ ಅಧ್ಯಕ್ಷರಾಗಿ ಸರ್ವಾನುಮತದಿಂದ ಎಂ. ಭಗವಾನ್ ದಾಸ್ ಕೆ. ಆಯ್ಕೆಯಾದರು. ಕಾರ್ಯದರ್ಶಿಯಾಗಿ ಕೆ. ಮಹೇಶ್ ಕಾಮತ್, ಖಜಾಂಚಿಯಾಗಿ ಅಮಿತ್ ಅರವಿಂದ್ ನಾಯಕ್ ಆಯ್ಕೆಯಾಗಿದ್ದಾರೆ. ಆಯ್ಕೆ ಪ್ರಕ್ರಿಯೆ ವೇಳೆ ಗೌರವಾಧ್ಯಕ್ಷ ಎಂ. ಶ್ರೀ ನಾಗೇಶ್ ಹೆಗ್ಡೆ ಉಪಸ್ಥಿತರಿದ್ದರು.
ಅಧ್ಯಕ್ಷರಾಗಿ ಆಯ್ಕೆ ಆದ ಬಳಿಕ ಮಾತನಾಡಿದ ಭಗವಾನ್ ದಾಸ್, ಸಂಘದ ಸ್ಥಾಪಕ ಸದಸ್ಯರಲ್ಲಿ ತಾನು ಒಬ್ಬ 14 ವರ್ಷಗಳ ಕಾಲ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದೇನೆ. 25 ವರ್ಷಗಳ ಹಿಂದೆ ಜಿಲ್ಲೆಯ ಆಗಿನ ಜಿಲ್ಲಾಧಿಕಾ ಮಾರ್ಗದರ್ಶನದಲ್ಲಿ ಸಂಘವು ರಚನೆಯಾಗಿತ್ತು ಎಂದರು. ಸದಸ್ಯರು, ವಿಶೇಷವಾಗಿ ಯುವ ಇಂಜಿನಿಯರ್‌ಗಳು, ವಲಯ ನಿಯಮ ಗಳು, ಕಟ್ಟಡ ಮಾರ್ಗಸೂಚಿ ಒಳಗೊಂಡಂತೆ ಉಡುಪಿ ಪಟ್ಟಣ ಯೋಜನಾ ನಿಯಮಗಳನ್ನು ಚೆನ್ನಾಗಿ ಅರಿಯಬೇಕು. ಸಹ ಇಂಜಿನಿಯರ್‌ಗಳನ್ನು ಉತ್ತಮವಾಗಿ ಬೆಂಬಲಿಸಲು, ಯೋಜನೆ, ನಿರ್ಮಾಣದಲ್ಲಿ ಗ್ರಾಹಕರಿಗೆ ಮಾರ್ಗದರ್ಶನ ನೀಡಬೇಕು ಎಂದರು.



ಭಗವಾನ್‌ದಾಸ್

ಇಂದು ಪದಗ್ರಹಣ

ಉಡುಪಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಮತ್ತು ಆರ್ಕಿಟೆಕ್ಟ್ ಅಸೋಸಿಯೇಷನ್‌ನ ಬೆಳ್ಳಿಹಬ್ಬದ ಸನ್ಮಾನ ಹಾಗೂ 2026-28ರ ಬ್ಲಾಕ್ ವರ್ಷದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು (ಏ.14) ಸಂಜೆ 6:30ಕ್ಕೆ ಉಡುಪಿಯ ಕರಾವಳಿ ಬೈಪಾಸ್ ಬಳಿಯ ಮಣಿಪಾಲ್ ಇನ್‌ನ ರಂಜಿತಾ ಪ್ಯಾಲೇಸ್‌ನ ಗ್ರಾಂಡ್ ಮಿಲೇನಿಯಂ ಹಾಲ್ ನಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಐಎಎಸ್ ಭಾಗವಹಿಸಲಿದ್ದು, ಅವರಿಗೆ ಬೆಳ್ಳಿಹಬ್ಬದ ಗೌರವ ಸನ್ಮಾನ ನಡೆಯಲಿದೆ. ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಗೌರವ ಅತಿಥಿಗಳಾಗಿರುವರು. ಮಣಿಪಾಲ ಎಂಐಟಿ ನಿರ್ದೇಶಕ ಡಾ. ಅನಿಲ್ ರಾಣಾ ಪದಗ್ರಹಣ ಅಧಿ ಕಾರಿಯಾಗಿ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರಿಸಲಿದ್ದಾರೆ ಎಂದು ಎಂ ಶ್ರೀ ನಾಗೇಶ್ ಹೆಗ್ಡೆ ಅವರು ತಿಳಿಸಿದ್ದಾರೆ.



ಗೌರವ್ ಗುಪ್ತ

ನಿಟ್ಟೆ ಮಹಾಲಿಂಗ ಅಡ್ಯಂತಾಯ ತಾಂತ್ರಿಕ ಕಾಲೇಜು ವಾರ್ಷಿಕೋತ್ಸವ



ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯವು ವಾರ್ಷಿಕೋತ್ಸವವನ್ನು ನಿಟ್ಟೆಯ ಬಿಸಿ ಆಳ್ವಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಸಭಾಂಗಣದಲ್ಲಿ ಬಹಳ ಉತ್ಸಾಹದಿಂದ ಆಚರಿಸಿತು.
ಟೊಯೊಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮಾನವ ಸಂಪನ್ಮೂಲ ಉಪಾಧ್ಯಕ್ಷ ಸಂತೋಷ್ ರಾವ್ ಕೆ. ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕಾರ್ಪೊರೇಟ್ ಪ್ರಪಂಚದಲ್ಲಿ ಉದಯಿಸುತ್ತಿರುವ ಬೇಡಿಕೆಗಳನ್ನು ಪೂರೈಸಲು ವಿದ್ಯಾರ್ಥಿಗಳಲ್ಲಿ ಉದ್ಯಮದ ಸಿದ್ಧತೆ, ಕೌಶಲ್ಯ ಅಭಿವೃದ್ಧಿಯ ಮಹತ್ವವನ್ನು ತಿಳಿ ಹೇಳಿದರು.
ಅತ್ಯುತ್ತಮ ಶೈಕ್ಷಣಿಕ ಸಾಧನೆಯನ್ನು ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಲಾಯಿತು. ವಿದ್ಯಾರ್ಥಿ ಪಟ್ಟಿಯನ್ನು ಡೆಪ್ಯೂಟಿ ಡೀನ್ ಎಕಾಡೆಮಿಕ್ಸ್ ಡಾ. ಶ್ರೀನಿವಾಸ ಪೈ ಪಿ. ವಾಚಿಸಿದರು. ಪ್ರತಿಷ್ಠಿತ ಶ್ರೀ ಸಂಜೀತ್ ಶೆಟ್ಟಿ ಪ್ರಶಸ್ತಿ ವಿಜೇತರ ಪಟ್ಟಿಯನ್ನು ವಿವೇಕ್ ವಿಶ್ವನಾಥನ್ ವಾಚಿಸಿದರು.
ಗೌರವ ಅತಿಥಿ ಡಾ. ಗೋಪಾಲ್ ಮುಗೇರಾಯ ಮಾತನಾಡಿ, ಶೈಕ್ಷಣಿಕ ಬೆಳವಣಿಗೆ ಮತ್ತು ವೃತ್ತಿಪರ ಅಭಿವೃದ್ಧಿಯ ಒಳನೋಟ ಹಂಚಿಕೊಂಡರು. ಅಧ್ಯಕ್ಷತೆ ವಹಿಸಿದ್ದ ನಿಟ್ಟೆ ವಿವಿ ಕುಲಪತಿ ಡಾ.ಎಂ.ಎಸ್. ಮೂಡಿತ್ತಾಯ ಸಂಸ್ಥೆಯ ಪ್ರಗತಿಯನ್ನು ಶ್ಲಾಘಿಸಿದರು . ಸಂಸ್ಥೆಯ ಪ್ರಾಂಶುಪಾಲ ಡಾ.ನಿರಂಜನ್ ಎನ್. ಚಿಪ್ಳುಂಕರ್ ಸ್ವಾಗತಿಸಿದರು. ಡಾ. ನರಸಿಂಹ ಕೆ. ಬೈಲ್ಕೇರಿ ವಂದಿಸಿದರು.

ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಹಿ.ಪ್ರಾ. ಶಾಲಾ ಶತಮಾನೋತ್ಸವ ಸಮಾರೋಪ | ದಾಮೋದರ ಶರ್ಮಾ ಬಣ್ಣನೆ

ಶಿಕ್ಷಣ ಸಂಸ್ಥೆ ನೂರು ವರ್ಷ ಜ್ಞಾನದೀವಿಗೆ ಬೆಳಗಿಸುವುದು ಸಾಮಾನ್ಯ ಸಾಧನೆಯಲ್ಲ



ಶಿರ್ವ: ಒಂದು ಸಂಸ್ಥೆ ನೂರು ವರ್ಷಗಳ ಕಾಲ ನಿರಂತರವಾಗಿ ಜ್ಞಾನದೀವಿಗೆಯನ್ನು ಬೆಳಗಿಸುವುದು ಸಾಮಾನ್ಯ ಸಾಧನೆಯಲ್ಲ. ಈ ಶಾಲೆಯು ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದೆ. ಶಾಲೆಯು ಕೇವಲ ಅಕ್ಷರ ಜ್ಞಾನವನ್ನು ಮಾತ್ರ ನೀಡದೆ ಉತ್ತಮ ಸಂಸ್ಕಾರ ಮತ್ತು ಮೌಲ್ಯಗಳನ್ನು ಬಿತ್ತಿದೆ ಎಂದು ವಾಗ್ಮಿ ಎನ್.ಆರ್.ದಾಮೋದರ ಶರ್ಮಾ ಬಾರ್ಕೂರು ನುಡಿದರು.
ಅವರು ಭಾನುವಾರ ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಆಡಳಿತಕ್ಕೆ ಒಳಪಟ್ಟ ಶ್ರೀದುರ್ಗಾಪರಮೇಶ್ವರೀ ಹಿರಿಯ ಪ್ರಾಥಮಿಕ ಶಾಲಾ ಶತಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ 'ವಿದ್ಯಾನಿಧಿ'ಗೆ ಚಾಲನೆ ನೀಡಿ ಮಾತನಾಡಿದರು.
ಪಾಂಬೂರು ಪವಿತ್ರ ಶಿಲುಬೆಯ ದೇವಾಲಯದ ಪ್ರಧಾನ ಧರ್ಮಗುರು ವಂ. ರೋಶನ್ ಡಿಸೋಜ ಮಾತನಾಡಿ, ನಾವು ಶಿಕ್ಷಣವನ್ನು ಪಡೆಯುವುದು ನಮ್ಮ ಜೀವನ. ನಮ್ಮ ಕುಟುಂಬ ಹಾಗೂ ನಮ್ಮ ದೇಶವನ್ನು ಕಟ್ಟಲು ಎಂಬುವುದನ್ನು ಎಂದೂ ಮರೆಯಬಾರದು ಎಂದರು.
ಶಾಲೆಯಲ್ಲಿ ಸುದೀರ್ಘ ಸೇವೆಸಲ್ಲಿಸಿ ವಯೋನಿವೃತ್ತಿ ಹೊಂದಿದ ಹಿರಿಯ ಗುರುಗಳಿಗೆ ಗುರುವಂದನೆ ಸಲ್ಲಿಸಲಾಯಿತು. ಶಾಲೆಯಲ್ಲಿ ಸೇವೆ ನೀಡುತ್ತಿರುವ ಗೌರವ ಶಿಕ್ಷಕಿಯರನ್ನು ಸನ್ಮಾನಿಸಲಾಯಿತು. ಅಡುಗೆ ಸಿಬ್ಬಂದಿ, ಸಹಾಯಕಿ ಸಹಿತ ಅಂಗನವಾಡಿ ಶಿಕ್ಷಕಿಯವರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ನಿವೃತ್ತ ಮುಖ್ಯ ಶಿಕ್ಷಕ ಎನ್. ರಾಧಾಕೃಷ್ಣ ಪ್ರಭು, ಗೌರವ ಶಿಕ್ಷಕಿಯರ ವತಿಯಿಂದ ಸಂಗೀತಾ ಆರ್. ಪಾಟ್ಕರ್ ಮಾತನಾಡಿದರು. ದಾನಿಗಳನ್ನು ಸನ್ಮಾನಿಸಲಾಯಿತು. ಕೋಶಾಧಿಕಾರಿ ವಿಶ್ವನಾಥ್ ಬಾಂದೇಲ್ಕರ್ ದಾನಿಗಳನ್ನು ಪರಿಚಯಿಸಿದರು. ಶಾಲಾ ಸ್ಮರಣ ಸಂಚಿಕೆ 'ವಿದ್ಯಾ ಶತಕ'ವನ್ನು ಹಳೆವಿದ್ಯಾರ್ಥಿ ಶಂಕರ ಶೆಟ್ಟಿ ಮಾನಿಪಾಡಿ ಬಿಡುಗಡೆಗೊಳಿಸಿದರು. ಸಂಪಾದಕ ಮಂಡಳಿ ಅಧ್ಯಕ್ಷ ಬಂಟಕಲ್ಲು ರಾಮಕೃಷ್ಣ ಶರ್ಮಾ, ಪ್ರಧಾನ ಸಂಪಾದಕ ನಿವೃತ್ತ ಶಿಕ್ಷಕ ಬಿ. ಪುಂಡಲೀಕ ಮರಾಠೆ ಸಹಕರಿಸಿದರು. ಶಾಲಾ ಆಡಳಿತ ಮಂಡಳಿ ಹಾಗೂ ಶ್ರೀದೇವಳದ ವತಿಯಿಂದ ಶತಮಾನೋತ್ಸವ ಸಮಿತಿ ಅಧ್ಯಕ್ಷ ಮಾಧವ ಕಾಮತ್, ಪ್ರಧಾನ ಕಾರ್ಯದರ್ಶಿ ಕೆ.ಆರ್. ಪಾಟ್ಕರ್ ಅವರನ್ನು ಶ್ರೀಕ್ಷೇತ್ರದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಸನ್ಮಾನಿಸಿದರು. ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ, ಶಾಲಾ ಸಂಚಾಲಕ ರಾಮದಾಸ್ ಪ್ರಭು, ಶ್ರೀದೇವಳದ ಆಡಳಿತ ಮಂಡಳಿ ಅಧ್ಯಕ್ಷ ಉಮೇಶ ಪ್ರಭು ಪಾಲಮೆ ಇದ್ದರು. ಶತಮಾನೋತ್ಸವ ಸಮಿತಿ ಅಧ್ಯಕ್ಷ ಮಾಧವ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕೆ.ಆರ್.ಪಾಟ್ಕರ್ ಸ್ವಾಗತಿಸಿದರು. ದಿನೇಶ್ ದೇವಾಡಿಗ ವರದಿ ಓದಿದರು. ದೇವದಾಸ್ ಪಾಟ್ಕರ್, ಅರುಂಧತಿ ಪ್ರಭು ನಿರೂಪಿಸಿದರು. ವಿಶ್ವನಾಥ ಬಾಂದೇಲ್ಕರ್ ವಂದಿಸಿರ್ದರು. ಅದಾನಿ ಸಮೂಹದ ಅಧ್ಯಕ್ಷ, ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್ ಆಳ್ವ ಶಾಲೆಗೆ ಭೇಟಿ ನೀಡಿ ಶುಭ ಹಾರೈಸಿದರು. ಶಾಲಾ ಅಭಿವೃದ್ಧಿ ಕಾರ್ಯಗಳಿಗೆ ಸಹಾಯ ನೀಡುವುದಾಗಿ ಭರವಸೆ ನೀಡಿದರು.